ಬಿಸಿಲ

ಮೇ 2000

ರೂ. 10




◆ಕಾಶ್ಮೀರ :
ನ್ಯಾಯ ಎಲ್ಲಿದೆ?


◆ಬಿಹಾರದ
ಕಿಲಾಡಿ ಜೋಡಿ



ಡಾಟ್
ಕಾಮ್
ಇದೇನಿದು !



◆ನಿದ್ದೆ
ಏಕೆ ಬೇಕು?
ಎಷ್ಟು ಬೇಕು?



◆ಇನ್ನು ಕ್ರಿಕೆಟ್
ಮೊದಲಿನಂತಿರುವುದಿಲ್ಲ

ಬದುಕು

ಮೇ 2000 ಸಂಪುಟ 3 ಸಂಚಿಕೆ 11

ಸಂಪಾದಕ : ಚಂದ್ರಕಾಂತ ವಡ್ಡು

ಮುಖಪುಟ ವಿನ್ಯಾಸ : ಚಂದ್ರಶೇಖರ ಗುಬ್ಬಿ

■ ಕನಸುಗಳು ವಾಸ್ತವವಾಗಬಹುದು. ನಮ್ಮನ್ನು ಕೈಹಿಡಿದು ನಡೆಸುತ್ತಾ ಸುಖದೆಡೆಗೆ ಕೊಂಡೊಯ್ಯುವ ಸಾಧನ ಅವನವನ ಕನಸು.

ಡೆಬೋರಾ ನಾರ್ವೆಲ್

■ ಸ್ನೇಹದ ಜೀವಂತಿಕೆ ಇರುವುದು ಭಿನ್ನವಾದ ಅಭಿಪ್ರಾಯಗಳನ್ನು ಗೌರವಿಸುವುದರಲ್ಲಿ, ಇಬ್ಬರ ನಡುವಿನ ಸಮಾನ ಅಂಶಗಳನ್ನು ಮುಚ್ಚಿಕೊಂಡು ಇರುವುದರಿಂದ ಅಲ್ಲ.

ಜೇಂಸ್ ಎಲ್ ಫ್ರೆಡ್ರಿಕ್

■ ನಮಗೇನು ಜೋರು ಎಂಬುದು ನಮಗೇ ಸ್ಪಷ್ಟ ಇರದಿದ್ದಾಗ, ನಾವು ಇರಬಾರದ ಜಾಗಗಳಲ್ಲಿ ಹೋಗಿ ಸೇರಿ ಬಿಡುತ್ತೇವೆ.

ಬಾಬ್‌ಗ್ರೀನ್

■ ಅಳುವ ಕಡಲೊಳು ತೇಲಿ ಬರುತಿದೆ
ನೆಗೆಯ ಹಾಯಿ ದೋಣಿ.

ಗೋಪಾಲಕೃಷ್ಣ ಅಡಿಗ

■ ಮಾಳಿಗೆಯ ಸಡಲಿದರೆ, ಸೂಳೆ ಹಲ್ಲುದುರಿದರೆ
ಆಳುವಾ ದೊರೆಯು ಹುರುಪಿರದಿದ್ದಲಿಂದ
ಹೇಳದಲೆ ತೊಲಗು.

ಸರ್ವಜ್ಞ

■ ಕುಲಂ ಕುಲಮಲ್ತು, ಚಲಂ ಕುಲಂ.

ರನ್ನ

■ ನೆಲನೋಡಿ ನೂರು ಮಾರು ನಡೆಯಬಹುದು
ಮುಗಿಲು ನೋಡಿ ಮೂರು ಮಾರು ನಡೆಯಲಾಗದು.

ಗಾದೆ

■ ಒಳ್ಳೆಯ ಕೆಲಸಕ್ಕೆಂದು ಹೋದರೆ,
ದೊಡ್ಡ ಜವಾಬ್ದಾರಿಯೇ ಕೊರಳಿಗೆ ಬೀಳುವುದು.

ಗಾದೆ

Printed, Published and Owned by Chandrakanta Vaddu, 552 15th Main, 3rd Stage, 4th Block, Water Tank Road, Basaveshwaranagar, Bangalore-560 079. Tel : 080 3227810 Email :Ankura@rediffmail.com Mobile:98440 87433 Editor : Chandrakanta Vaddu

ಜೀವನ ಕಲೆ

ಜೀವನ ಹಸನಾಗಿಸಬೇಕು. ಅತ್ಯುತ್ತಮ ಎನಿಸಿದ್ದು ಮಾಡಬೇಕು. ಇದು ಎಲ್ಲರ ಆಸೆ. ಒಂದು ವಿಚಾರ ಕೇವಲ ಆಸೆ ಆದರೆ ಏನಾಗಬಹುದೋ ಅದೆಲ್ಲ ಆಗುತ್ತಿದೆ.

ಜೀವನ ಎಂದರೆ ಇದು ಎಂಬ ಕಲ್ಪನೆಗಳಿವೆ. ಯುವಕ, ಯುವತಿಯರಿಗೆ ಡಾಕ್ಟರಾಗಬೇಕು. ಎಂಜಿನಿಯರ್ ಆಗಬೇಕು. ಚಲನಚಿತ್ರ ನಟ ಆಗಬೇಕು ಎಂದೆಲ್ಲ ಕಲ್ಪನೆ, ಕನಸುಗಳು. ಇದರ ಉದ್ದೇಶ ಇಷ್ಟೇ. ಇಂಥ ವೃತ್ತಿಗಳಿಂದ ಚೆನ್ನಾಗಿ ಹಣ ಮಾಡಬಹುದು. ಅದರಿಂದ ತಾನಾಗಿಯೇ ಸುಖ, ಸಾಮಾಜಿಕ ಅಂತಸ್ತು ಎಲ್ಲ ದೊರೆಯುತ್ತದೆ ಎಂಬ ಭ್ರಮೆ. ಇನ್ನೂ ಕೆಲವರಿಗೆ ಸಂಸಾರ. ಈ ನಿತ್ಯದ ಜೀವನ ನೀರಸ ಎನಿಸುತ್ತದೆ. ಇದೆಲ್ಲ ಬಿಟ್ಟು ಸನ್ಯಾಸಿ ಆಗಿಬಿಡಬೇಕು. ಆಗ ಮುಕ್ತಿ ದೊರೆಯುತ್ತದೆ ಎಂದೂ ಅನಿಸುತ್ತದೆ.

ನಾವೆಲ್ಲ ಮರೆಯುವ ಸಂಗತಿ ಏನೆಂದರೆ ಅಧಿಕಾರ, ಹಣ, ಅಂತಸ್ತುಗಳು ಮನುಷ್ಯನನ್ನು ಏಕಾಏಕಿ ಬದಲಿಸಿ ಬಿಡುವುದಿಲ್ಲ. ನಾವು ಏನಾಗಿರುತ್ತೇವೆಯೋ ಅದು ನಮ್ಮ ಅಂತಸ್ತು, ಅಧಿಕಾರ ಏರಿದಾಗ ಇನ್ನಷ್ಟು ವಿಸ್ತೃತವಾಗಿ ಕಾಣಿಸಿಕೊಳ್ಳುತ್ತದೆ, ಅಷ್ಟೇ. ದುಷ್ಟನೊಬ್ಬ ಮಂತ್ರಿ ಆದರೆ, ಪ್ರಧಾನಿ ಆದರೆ, ಸ್ಥಾನದ ಮಹಿಮೆಯಿಂದ ಒಳ್ಳೆಯವನಾಗಿ ಬಿಡುವುದಿಲ್ಲ. ಆತ ಅತಿ ದುಷ್ಟ ಎಂಬುದು ಇನ್ನಷ್ಟು ಜನಕ್ಕೆ ಸಾಬೀತಾಗುತ್ತದೆ ಅಷ್ಟೇ.

ನಾವು ಸಾಮಾಜಿಕ ಸ್ತರದಲ್ಲಿ ಬೆಳೆದು ನಿಂತಾಗ ನಮ್ಮೊಳಗಿನ ಎಲ್ಲವೂ ಬೇರೆಯವರಿಗೆ ಕಾಣಲು ತೊಡಗುತ್ತದೆ. ಹೀಗಾಗಿ ಬದಲಾಗಬೇಕಿರುವುದು ನಮ್ಮ ಹೊರಗಿನ ವೇಷಗಳು. ಅಧಿಕಾರದ ಹುದ್ದೆ, ಅಂತಸ್ತಿನ ಪ್ರತಿಷ್ಠೆಗಳಲ್ಲ. ನಮ್ಮೊಳಗಿನದು ಆಮೂಲಾಗ್ರವಾಗಿ ಬದಲಾಗಬೇಕು.

ಒಂದು ಕೆಲಸ ಕೈಗೆತ್ತಿಕೊಂಡರೆ ಅದರಿಂದ ಬರುವ ಲಾಭ, ಕೀರ್ತಿಯ ಆಸೆಗೆ ಅದನ್ನು ಮಾಡುವುದಿಲ್ಲ. ಆ ಕೆಲಸ ಮಾಡುವಾಗಲೇ ಒಂದು ಬಗೆಯ ತೃಪ್ತಿ, ಸಮಾಧಾನ ದೊರೆಯದೇ ಇದ್ದಲ್ಲಿ, ಆ ಕೆಲಸದಿಂದ ಬರುವ ಲಾಭದಿಂದ ನಮ್ಮ ಅಹಂ ತಣಿಯಬಹುದು ಅಷ್ಟೇ.

ನಮ್ಮಲ್ಲಿ ಕೆಲಸದ ಹೆಂಗಸಿದ್ದಾಳೆ. ಮನೆ ಗುಡಿಸಿ, ಸಾರಿಸುವುದು, ರಂಗವಲ್ಲಿ ಇಡುವುದು ಅವಳ ಕಾಯಕ. ಅವಳೊಬ್ಬ ಸಾಮಾನ್ಯ ಹೆಂಗಸು. ಓದು ಬರಹ ಏನಿಲ್ಲ, ಆದರೆ ತಾನು ಮಾಡುವ ಕೆಲಸದಲ್ಲಿ ಆಕೆಗೆಷ್ಟು ತನ್ಮಯತೆ, ಶ್ರದ್ಧೆ ಇದೆ ಎಂದರೆ, ಅವಳ ಮಾಮೂಲು ದೈನಂದಿನ ಕಾಯಕ ನಿಜವಾದ ತಪಸ್ಸಿನ ಹಾಗೆ ಕಾಣುತ್ತದೆ. ಅವಳಿಡುವ ರಂಗವಲ್ಲಿಯ ಎಳೆಗಳಲ್ಲಿ ಅದೇನೋ ಮೋಡಿ, ಮನಸ್ಸೆಲ್ಲ ತಿಳಿಗೊಳಿಸಿಬಿಡುವ ಮೋಹಕತೆ ತುಂಬಿಕೊಂಡಿರುತ್ತದೆ. ಆಕೆ ಅದನ್ನು ಕಾಟಾಚಾರಕ್ಕೆ ಮಾಡಿ ಮುಗಿಸಿಬಹುದಾಗಿತ್ತು. ಆದರೆ ಆಕೆಗೆ ಆಸೆಗಳಿಲ್ಲ. ಹೆಚ್ಚು ಗಳಿಸಬೇಕು, ಯಾರದೋ ಮೆಚ್ಚುಗೆ ಪಡೆಯಬೇಕೆಂಬ ಆಸೆಗಳೇನೂ ಇಲ್ಲ. ತಾನು ಮಾಡುವ ಕೆಲಸದಿಂದ ತನಗೇ ತೃಪ್ತಿ ದೊರೆಯುವಂತೆ ಮಾತ್ರ ಅವಳು ದುಡಿಯುತ್ತಾಳೆ. ಅಂಥ ತನ್ಮಯತೆ, ಶ್ರದ್ಧೆಗಳನ್ನು ನಾವು ಜೀವನದ ನಿತ್ಯದ ಸಂಗತಿಗಳಲ್ಲಿ ತರದೇ ಹೋದರೆ ಬೇರೆಯಲ್ಲಿಂದಲೋ, ಯಾವುದೋ ರೀತಿಯಿಂದಲೋ ಜೀವನದ ಸಾರ್ಥಕತೆ ಬರುತ್ತಿದೆ ಎಂದು ತಿಳಿಯುವುದು ಅಪ್ಪಟ ಮೂರ್ಖತನ ಮಾತ್ರ.

ಮಾಡುವ ಪ್ರತಿ ಕೆಲಸವೂ ಇದೇ ತನ್ನ ಜೀವನದ ಮರಣದ ಪ್ರಶ್ನೆ ಎಂಬಂತೆ, ಇದು ತನಗೆ ಖುಷಿಯ ಸಂಗತಿ ಆಗಬೇಕು ಎಂಬ ತನ್ಮಯತೆ ಸಾಧ್ಯವಾದಾಗ ಮಾತ್ರ ಜೀವನದ ಕಲೆ ತಾನೇ ಸಹಜವಾಗಿ ಅರಳಿಕೊಳ್ಳುತ್ತದೆ.

■ ಆಚಾರ್ಯ ರಜನೀಶ್

ಟಪಾಲು

ಮೂಢನಂಬಿಕೆ

ಕ್ರಿಕೆಟ್ ಕಲಿಗಳ ಅಂಧ ಶ್ರದ್ಧೆಯ ಬಗೆಗಿನ ಲೇಖನವನ್ನು ಏಪ್ರಿಲ್ ತಿಂಗಳ ಬದುಕುದಲ್ಲಿ ಓದಿ ಅವರ ಮೂಢನಂಬಿಕೆಯ ಬಗ್ಗೆ ತಿಳಿದು ಅವರ ಪರಿಸ್ಥಿತಿಗೆ ಅಯ್ಯೋ ಎನಿಸಿತು. ಎಷ್ಟೇ ಬುದ್ಧಿವಂತನಾಗಿದ್ದರೂ, ಎಷ್ಟೇ ಜನಪ್ರಿಯ ವ್ಯಕ್ತಿಯಾಗಿದ್ದರೂ, ಮೂಢನಂಬಿಕೆ ಎಂಬುದು ಯಾರನ್ನೂ ಬಿಡದೇ ಇರುವುದು ತುಂಬಾ ವಿಷಾದಕರ.

-ಎಸ್. ವೀರಯ್ಯ, ಯಲಬುರ್ಗಾ

ಜೇಮ್ಸ್ ಬಾಂಡ್ ಬದಲಾಗಲಿ

ಏಪ್ರಿಲ್ ಸಂಚಿಕೆಯಲ್ಲಿ 'ಜೇಮ್ಸ್ ಬಾಂಡ್ ಬದಲಾಗಬೇಕೆ?' ಎಂಬ ಲೇಖನ ಚೆನ್ನಾಗಿ ಮೂಡಿ ಬಂದಿದೆ. ಕಳೆದ ಹಲವು ವರ್ಷಗಳಿಂದಲೂ ಜೇಮ್ಸ್ ಬಾಂಡ್ ಚಿತ್ರಗಳು ತನ್ನ ಹಳೆಯ ಶೈಲಿಯನ್ನೇ ಮುಂದುವರಿಸಿಕೊಂಡು ಬಂದಿರುವುದು ಕೆಲವರಿಗೆ ಇಷ್ಟವಾದರೆ, ಕೆಲವರು ಬದಲಾವಣೆಯನ್ನು ಬಯಸುತ್ತಿರುವುದು ಸಹಜವೇ ಆಗಿದೆ. ಆದರೆ ಬದಲಾಗಿರುವ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಇಂದಿನ ಸಿನಿಮಾಗಳು ಮಾರ್ಪಾಡಾಗಬೇಕಾಗಿರುವುದು ತುಂಬಾ ಅವಶ್ಯ. ಅಂತೆಯೇ ಜೇಮ್ಸ್‌ಬಾಂಡ್ ಬದಲಾವಣೆಗೆ ನಮ್ಮ ಒಮ್ಮತವೂ ಇದೆ.

- ಮಾಲಿನಿ, ಹಾಸನ.

ಆಧುನಿಕ ಭಗೀರಥ

ಎಪ್ರಿಲ್ ಸಂಚಿಕೆಯಲ್ಲಿ 'ಆಧುನಿಕ ಭಗೀರಥ ಅಣ್ಣಾ ಹಜಾರೆ' ಬಗೆಗಿನ ಲೇಖನ ಓದಿ ಹಜಾರೆಯವರ ಬಗೆಗೆ ಅಭಿಮಾನವುಕ್ಕಿ ಬಂತು ನೀರಿಲ್ಲದ ನಾಡಿನಲ್ಲಿ ನೀರಿನ ಹೊಳೆಯನ್ನೇ ಹರಿಸಿ, ಆ ನಾಡನ್ನು ನಂದನವನವನ್ನಾಗಿ ರೂಪಿಸಿದ ಅವರ ಈ ಸಾಧನೆ ನಿಜಕ್ಕೂ ಅವರ್ಣನೀಯವೇ ಸರಿ. ನಿಜಕ್ಕೂ ಅವರು ಆಧುನಿಕ ಭಗೀರಥ ಎನ್ನುವುದರಲ್ಲಿ ಎರಡು ಮಾತಿಲ್ಲ.

- ಸಂತೋಷ್ ಆಚಾರ್ಯ, ತುಮಕೂರು

ರಸವತ್ತಾಗಿದೆ

ಉದಯ ಟಿವಿಯ ಆದರ್ಶ ದಂಪತಿಗಳ ಬಗೆಗಿನ ಲೇಖನವನ್ನು ಹೊತ್ತು ತಂದ ಏಪ್ರಿಲ್ ಬದುಕು ತುಂಬಾ ರಸವತ್ತಾಗಿ ಮೂಡಿ ಬಂದಿದೆ. ಕರ್ನಾಟಕದ ಮನೆಯ ಮಾತಾಗಿರುವ ಈ ಕಾರ್ಯಕ್ರಮದ ಬಗ್ಗೆ ಅನೇಕ ತಿಳಿಯದ ವಿವರಗಳು ಈಗ ಈ ಲೇಖನದಿಂದ ತಿಳಿದವು. ಅಭಿನಂದನೆಗಳು.

- ವಿಜಯಕುಮಾರ್ ಎಸ್. ಅಂಟೀನ, ಧಾರವಾಡ



ಅಪಾಯಕಾರಿ ಪೋಲಿಯೊ ಡ್ರಾಪ್ಸ್

ಎಪ್ರಿಲ್ ಬದುಕುದಲ್ಲಿ ಸಾಮ್ರಾಜ್ಯಶಾಹಿ ಅಮೆರಿಕ ನಡೆಸಿರುವ ಅನಾಹುತಗಳ ಬಗ್ಗೆ ಪ್ರೊ.ಎಂ.ಡಿ.ನಂಜುಂಡ ಸ್ವಾಮಿ ಅವರೊಂದಿಗೆ ನಡೆಸಿದ ಸಂದರ್ಶನ ತುಂಬಾ ಉಪಯುಕ್ತವಾಗಿತ್ತು. ಭಾರತದ ಮೇಲೆ ಅಮೆರಿಕ ನಡೆಸಿರುವ ತೀವ್ರ ದಬ್ಬಾಳಿಕೆ ಹಾಗೂ ವಿದೇಶಿ ನೀತಿಯ ಹೇರಿಕೆಯನ್ನು ತಿಳಿದು ವಿಷಾದವಾಯ್ತು. ಇಂಥ ಅನಾಹುತಗಳಿಗೆ ಆದಷ್ಟು ಬೇಗ ಮಂಗಳ ಹಾಡಬೇಕಾದ್ದು ಅಗತ್ಯ. ಅಂತೆಯೇ 'ಪೋಲಿಯೋ ಡ್ರಾಪ್ಸ್‌ನಲ್ಲಿ ಏನಿದೆ?' ಎಂಬ ವಿವರ ಓದಿ ಆಘಾತವಾಯ್ತು. ಪ್ರತಿ ವರ್ಷವೂ ಪೋಲಿಯೋ ನಿರ್ಮೂಲನೆಗಾಗಿ ನಮ್ಮ ಸರಕಾರ ಒಂದು ಆಂದೋಲನವನ್ನೆ ನಡೆಸುತ್ತಿದೆ. ಈ ಆಂದೋಲನದ ಫಲಶ್ರುತಿ ಹೇಗಿರಬಹುದು ಎಂಬುದನ್ನು ನೆನೆದು ತುಂಬಾ ಅಚ್ಚರಿಯಾಯ್ತು.

- ಸರೋಜಾ ಎಂ., ಸಿರುಗುಪ್ಪ.

ಹಾಸ್ಯಾಸ್ಪದ ಕಾರ್ಯಕ್ರಮ

ಪ್ರಮುಖವಾಗಿ 'ಆದರ್ಶ ದಂಪತಿ' ಅನ್ನುವ ಸ್ಲೋಗನ್ನೇ ಹುಸಿ ಆದರ್ಶದ್ದು! ಈ ಮಾತು ಬುದ್ಧಿಜೀವಿಗಳ ಮಾತುಗಳ ನೆರಳಲ್ಲ; ಖಂಡಿತ ಅದು ಮಧ್ಯಮವರ್ಗದವರ 'ಮಧ್ಯಮ ಭಾವನೆ'ಗಳ ಮೇಲಿನ ಬಿಗಿ ಹಿಡಿತದ ಸವಾರಿ. ಇಡೀ ಬದುಕಿನುದ್ದಕ್ಕೂ ಬದುಕುವ 'ಹಟ' ತೊಟ್ಟ ದಂಪತಿಗಳ 'ಆದರ್ಶವನ್ನು' ಕೇವಲ ಅರ್ಧಗಂಟೆಯಲ್ಲಿ ನಿರ್ಧರಿಸುವುದು (ಅದೂ ಒಂದಷ್ಟು ಪ್ರಶ್ನೋತ್ತರ, ಸಾಮಾನ್ಯ ಜ್ಞಾನ, ಹಾಡು, ಜೋಕ್ಸ್ ಮೂಲಕ) ಎಂತಹ ಹಾಸ್ಯಾಸ್ಪದ? ಹಾಗಾಗಿ ಆ ಕಾರ್ಯಕ್ರಮದಿಂದ ಮಧ್ಯಮ ವರ್ಗದ ದಂಪತಿಗಳಿಗೆ ಅರ್ಧಗಂಟೆ ಟಿ.ವಿ.ಯಲ್ಲಿ 'ರೋಮಾಂಚನ' ದೊಂದಿಗೆ ಕಾಣಿಸಿಕೊಂಡದ್ದಷ್ಟೇ ಲಾಭವೇನೋ?.

ಮುಖ್ಯವಾಗಿ ಲೇಖನದಲ್ಲಿ ಕೊನೆಯವರೆಗೂ 'ಆದರ್ಶ ದಂಪತಿ'ಯ ಕುರಿತು 'ಬದುಕು' ಪತ್ರಿಕೆಯ ವೈಯಕ್ತಿಕ ಅಭಿಪ್ರಾಯ ಅನ್ನುವುದೇ ' ಇಲ್ಲ. ಒಂದೇ ಸಂಚಿಕೆಯಲ್ಲಿ ರೈತನಾಯಕ ಎಂ.ಡಿ.ಎನ್‌ರವರ ಅರ್ಥಪೂರ್ಣ ಸಂದರ್ಶನ 'ಆದರ್ಶ ದಂಪತಿ' ಕುರಿತಾದ ಲೇಖನ ನನ್ನಂತಹ ಓದುಗರಿಗೆ ವಿರೋಧಾಭಾಸ'ದ ಹಾಗೆ ತೋರಬಹುದು.

- ಮಂಜುನಾಥ್ ಗೀತಾ, ತಗಡೂರು.

ಸಂಗ್ರಾಹ್ಯ ಸಂಚಿಕೆ

'ಬದುಕು' ಪತ್ರಿಕೆ ಸಂಚಿಕೆಯಿಂದ ಸಂಚಿಕೆಗೆ ವಿಷಯ ವೈವಿಧ್ಯಗಳೊಂದಿಗೆ ಮೂಡಿ ಬರುತ್ತಿದ್ದು ಸಂಗ್ರಾಹ್ಯ ಸಂಚಿಕೆಯಾಗಿದೆ. ಆಕರ್ಷಕವಾದ ಮುಖಪುಟ, ಉಪಯುಕ್ತ ಲೇಖನಗಳು, ಕೈಗೆಟುಕುವ ಬೆಲೆ ಏನುಂಟು, ಏನಿಲ್ಲ? ಪ್ರತಿ ಸಂಚಿಕೆಯೂ ಮಾಹಿತಿಗಳ ಮಹಾಪೂರವನ್ನೇ ಹೊತ್ತು ತಂದು ಕನ್ನಡಿಗರ ಮನೆ-ಮನದಲ್ಲಿ ನೆಲೆಯೂರಲಿ ಎಂದು ಹಾರೈಕೆ.


- ರಾಮಕೃಷ್ಣ ಭಟ್, ಉಡುಪಿ

ಉತ್ತಮ ಲೇಖನ

ಏಪ್ರಿಲ್ ತಿಂಗಳ 'ಬದುಕು'ದಲ್ಲಿ ಉದಯ ಟಿವಿಯ ಆದರ್ಶ ದಂಪತಿಗಳು' ಎಂಬ ಲೇಖನ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಕರ್ನಾಟಕವಲ್ಲದೇ ಕನ್ನಡಿಗರಿರುವ ಎಲ್ಲಾ ರಾಜ್ಯ ಹಾಗೂ ವಿದೇಶದಲ್ಲಿ ಜನಪ್ರಿಯತೆಯನ್ನು ಪಡೆದಿರುವ ಉದಯ ಟಿವಿಯ ಈ ಆದರ್ಶ ದಂಪತಿಗಳು ಕಾರ್ಯಕ್ರಮ ನಿಜಕ್ಕೂ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಈ ಕಾರ್ಯಕ್ರಮದ ರೂವಾರಿಯಾದ ಶೈಲಜಾ ಅವರ ಸಂದರ್ಶನ ಕೂಡಾ ತುಂಬಾ ಅರ್ಥಪೂರ್ಣವಾಗಿ ಮೂಡಿ ಬಂದಿದೆ. ಇಂಥ ಉತ್ತಮ ಲೇಖನ ಪ್ರಕಟಿಸಿದ 'ಬದುಕು' ಬಳಗಕ್ಕೆ ಧನ್ಯವಾದಗಳು.

- ರಾಜಶೇಖರ ಎಂ.ಹಿರೇಮಠ, ಕುಕನೂರು.





ರಾಜಕೀಯ

ವಿಜ್ಞಾನ-ಆರೋಗ್ಯ



ಹಾಸ್ಯ / ಪ್ರಬಂಧ



ಕಥೆ



ಮುಂದಿನ ಸಂಚಿಕೆಯಲ್ಲಿ

ಟ್ರಾಫಿಕ್ ಜಾಮ್

ಪ್ರಚಲಿತ



ಲೇಖನಗಳು

ವಿಶೇಷ ಲೇಖನಗಳು

ಕ್ರೀಡೆ




ಸ್ಥಿರ ಶೀರ್ಷಿಕೆಗಳು

ಏಜೆಂಟರು ಬೇಕಾಗಿದ್ದಾರೆ

'ಬದುಕು' ಮಾಸ ಪತ್ರಿಕೆ ಹಾಗೂ 'ದಾರಿ' ವಾರಪತ್ರಿಕೆ ಮಾರಾಟ ಮಾಡಲು ಕರ್ನಾಟಕದ ಎಲ್ಲಾ ಊರುಗಳಿಂದ ಏಜೆಂಟರು ಬೇಕಾಗಿದ್ದಾರೆ. ಈಗ ಏಜೆಂಟರು ಇಲ್ಲದ ಊರುಗಳಿಗೆ ಹಾಗೂ ಬಾಕಿ ಉಳಿಸಿಕೊಂಡಿರುವ ಹಾಲಿ ಏಜೆಂಟರ ಜಾಗೆಗೆ ಕೂಡಲೇ ಏಜೆಂಟರನ್ನು ನೇಮಕ ಮಾಡುತ್ತಿದ್ದೇವೆ. ಸೂಕ್ತ ಠೇವಣಿ ಇಟ್ಟು ಪ್ರಾಮಾಣಿಕವಾಗಿ ಏಜೆನ್ಸಿ ನಿರ್ವಹಿಸುವವರು ಕೂಡಲೇ ಅರ್ಜಿ ನಮೂನೆಗಾಗಿ ರೂ.3 ಸ್ಟಾಂಪ್ ಹಚ್ಚಿದ ಲಕೋಟೆ ಕಳಿಸಿರಿ.

ಪ್ರಸಾರಣಾಧಿಕಾರಿ, ಅಂಕುರ ಪ್ರಕಾಶನ,
ಅಂಚೆ ಪೆಟ್ಟಿಗೆ 7951, ಬಸವೇಶ್ವರ ನಗರ, ಬೆಂಗಳೂರು - 560 079.
ದೂರವಾಣಿ : 3227810 ಮೊಬೈಲ್ : 9844087433



50%
ರಿಯಾಯಿತಿ

ಟಿ.ವಿ. ವೆಂಕಟರಮಣಯ್ಯನವರು ಬರೆದ ಜೋಕು ಪುಸ್ತಕಗಳು

- ಗೆಳೆಯ ಗೆಳತಿಯರಲ್ಲಿ ಜೋಕುಗಳು — ರೂ. 20
- ಶಾಲಾ ಕಾಲೇಜುಗಳಲ್ಲಿ ಜೋಕುಗಳು — ರೂ. 20
- ದಾಂಪತ್ಯದಲ್ಲಿ ಜೋಕುಗಳು — ರೂ. 20
- ಆಸ್ಪತ್ರೆಗಳಲ್ಲಿ ಜೋಕುಗಳು — ರೂ. 20
- ಕಛೇರಿಗಳಲ್ಲಿ ಜೋಕುಗಳು — ರೂ. 20
- ನ್ಯಾಯಾಲಯಗಳಲ್ಲಿ ಜೋಕುಗಳು — ರೂ. 20
- ಹೋಟೆಲುಗಳಲ್ಲಿ ಜೋಕುಗಳು — ರೂ. 20
- ಬಸ್ಸು, ರೈಲು, ವಿಮಾನಗಳಲ್ಲಿ ಜೋಕುಗಳು — ರೂ. 20
- ಅಂಗಡಿಗಳಲ್ಲಿ ಜೋಕುಗಳು — ರೂ. 20
- ಪ್ರೇಮಿಗಳ ಜೋಕುಗಳು — ರೂ. 20

ಎಂ.ಓ. ಕಳಿಸಿ. ಅಂಚೆ ಉಚಿತ

ಅಂಕುರ ಪ್ರಕಾಶನ, 552, 15ನೇ ಮುಖ್ಯರಸ್ತೆ,
3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್,
ಬಸವೇಶ್ವರನಗರ, ಬೆಂಗಳೂರು - 560 079.
ಫೋನ್ : 3227810 ಮೊಬೈಲ್ : 98440 87433

ತಲಾ 20 ರೂ. ಬೆಲೆಯ ಈ ಜೋಕು ಪುಸ್ತಕಗಳು ನಿಮಗೆ ಕೇವಲ 10 ರೂ.ಗೆ ಒಂದರಂತೆ ದೊರೆಯುತ್ತವೆ.

ಬಿಹಾರದ ಕಿಲಾಡಿ ಜೋಡಿ

ಈಗ ಬಿಹಾರ ರಾಜಕೀಯ ಬಿರುಗಾಳಿಯ ಕೇಂದ್ರ. ಅಧಿಕಾರಕ್ಕೆ ಬರಲಾಗದ ಬಿಜೆಪಿ, ಅಧಿಕಾರ ಹೇಗೋ ಗೆದ್ದುಕೊಂಡ ಲಾಲೂ ಇಲ್ಲಿ ಸೆಣಸುತ್ತಿದ್ದಾರೆ. ಕಳೆದ ಒಂದೂವರೆ ದಶಕದ ಹಿಂದೆ ಬಿಹಾರದ ರಾಜಕೀಯದಲ್ಲಿ ಧೂಮಕೇತುವಿನಂತೆ ಮೂಡಿದ ಲಾಲೂ. ಆಗ ಆತನ ಹೆಸರನ್ನು ಹೇಗೆ ಉಚ್ಚರಿಸುವುದು ಎಂದು ಹೊರಗಿನವರೆಗೆ ಗೊಂದಲ. ಆತನನ್ನೂ 'ಲಲ್ಲೂ' ಎಂದೇ ಕರೆಯುತ್ತಿದ್ದರು ಜನ. ಅದು ಸಿಟ್ಟಿಗೊಳಿಸುತ್ತಿತ್ತು. ಏಕೆಂದರೆ 'ಲಲ್ಲೂ' ಎಂದರೆ ಬಿಹಾರದಲ್ಲಿ ಹಳ್ಳಿಗ, ಗುಗ್ಗು ಎಂಬ ಅರ್ಥ ಬಳಕೆಯಲ್ಲಿ ಇದೆಯಂತೆ.





ಭಾರತದ ರಾಜಕೀಯ ಗತಿಗೆಟ್ಟು ಹೋಗಿದೆ. ಒಂದೆಡೆ ಮತೀಯವಾದಿಗಳ ಕೈಗೆ ಅಧಿಕಾರ. ಇನ್ನೊಂದೆಡೆ ಅಧಿಕಾರದ ಅಮಲು ತಲೆಗೇರಿಸಿಕೊಂಡವರ ದರ್ಬಾರು. ನೈತಿಕತೆ, ಜನಹಿತ ಗಾಳಿಗೆ ತೂರಲಾಗಿದೆ.

ದೇಶ, ರಾಜ್ಯಗಳನ್ನು ನಡೆಸುತ್ತಿರುವವರನ್ನು ನೋಡಿದರೆ ನಮಗೆಲ್ಲ ಭವಿಷ್ಯ ಇದೆಯೇ? ಎಂಬ ಆತಂಕವೇ ಶುರುವಾಗುತ್ತದೆ.

ಈಗ ಬಿಹಾರ ರಾಜಕೀಯ ಬಿರುಗಾಳಿಯ ಕೇಂದ್ರ. ಅಧಿಕಾರಕ್ಕೆ ಬರಲಾಗದ ಬಿಜೆಪಿ, ಅಧಿಕಾರ ಹೇಗೋ ಗೆದ್ದುಕೊಂಡ ಲಾಲೂ ಇಲ್ಲಿ ಸೆಣಸುತ್ತಿದ್ದಾರೆ. ಕಳೆದ ಒಂದೂವರೆ ದಶಕದ ಹಿಂದೆ ಬಿಹಾರದ ರಾಜಕೀಯದಲ್ಲಿ ಧೂಮಕೇತುವಿನಂತೆ ಮೂಡಿದ ಲಾಲೂ. ಆಗ ಆತನ ಹೆಸರನ್ನು ಹೇಗೆ ಉಚ್ಚರಿಸುವುದು ಎಂದು ಹೊರಗಿನವರೆಗೆ ಗೊಂದಲ. ಆತನನ್ನೂ 'ಲಲ್ಲೂ' ಎಂದೇ ಕರೆಯುತ್ತಿದ್ದರು ಜನ. ಅದು ಸಿಟ್ಟಿಗೊಳಿಸುತ್ತಿತ್ತು. ಏಕೆಂದರೆ 'ಲಲ್ಲೂ' ಎಂದರೆ ಬಿಹಾರದಲ್ಲಿ ಹಳ್ಳಿಗ, ಗುಗ್ಗು ಎಂಬ ಅರ್ಥ ಬಳಕೆಯಲ್ಲಿ ಇದೆಯಂತೆ.

ಜಯಪ್ರಕಾಶ್ ನಾರಾಯಣ್‌ರ 'ಸಂಪೂರ್ಣ ಕ್ರಾಂತಿ'ಯ ಹಿನ್ನೆಲೆ ಈತನದು. ಅಧಿಕಾರಕ್ಕೆ ಬರಬೇಕಾದರೆ ಈ ಕ್ರಾಂತಿ, ಭ್ರಾಂತಿ ಯಾವುದೂ ಕೆಲಸಕ್ಕೆ ಬರುವುದಿಲ್ಲ ಎಂದು ಅರಿತುಕೊಂಡ. ಅಲ್ಲಿಂದ ತಾನೊಬ್ಬ ಹಿಂದುಳಿದವರ ನೇತಾರ ಎಂದು ಕರೆದುಕೊಂಡ. ಹಳ್ಳಿಗರ ಮುಂದೆ ನಿಂತಾಗ 'ಯಾದವರೆಂದರೆ ಕೃಷ್ಣನ ಕುಲದವರು. ಅವರ ಉದ್ಧಾರಕ್ಕೆ ಅವತ್ತು ಕೃಷ್ಣ ಬಂದಿದ್ದ. ಇವತ್ತು ನಾನು' ಎಂದೆಲ್ಲ ಹೇಳುತ್ತಾ ಹೇಳುತ್ತಾ ಬಿಹಾರದ ಮುಖ್ಯಮಂತ್ರಿಯೂ ಆಗಿಬಿಟ್ಟ. ಅಲ್ಲಿಂದ ಇವನ ವರಸೆ, ಚಹರೆಗಳು ಬೇರೆಯೇ ಆದವು.

ಬಾಯಿ ತುಂಬಾ ತಾಂಬೂಲ, ಪೊದೆಯಂತೆ ಹರಡಿಕೊಂಡ ತಲೆಗೂದಲು. ಮಾತಾಡುವುದು ಭೋಜಪುರಿ ಹಿಂದಿಯಲ್ಲ. ಅವನ ಮಾತೆಂದರೆ ಬಿಹಾರದ ಹಳ್ಳಿಗರಿಗೆ ಇಷ್ಟ. ಅವರ ಲಾಜಿಕ್ಕೂ, ಸೆಂಟಿಮೆಂಟುಗಳನ್ನು ಅರ್ಥಮಾಡಿಕೊಂಡ ಚಾಣಾಕ್ಷ ಆತ. ಬಿಹಾರದಲ್ಲಿ ಸದಾ ವಿದ್ಯುತ್ ಕ್ಷಾಮ. ಅಲ್ಲಿ ಗಂಗೆ ಹರಿಯುತ್ತಾಳೆ. ಆದರಿಂದ ವಿದ್ಯುತ್ ಉತ್ಪಾದಿಸಲು ಬಾರದು ಎಂದೇ ಲಾಲೂ ವಾದ. ಅದನ್ನು ಹಳ್ಳಿಗರ ಮುಂದೆ ಆತ ಇಡುವ ರೀತಿ ಹೀಗೆ:

‘ಬಿಹಾರದಲ್ಲಿ ಗಂಗೆ ಹರಿಯುತ್ತಾಳೆ. ಅದರಿಂದ ವಿದ್ಯುತ್ ಉತ್ಪಾದನೆ ಸಾಧ್ಯವೇ ಇಲ್ಲ. ಯಾಕೆ ಗೊತ್ತಾ? ಗಂಗೆ ಹುಟ್ಟಿ ಬರುವುದು ಹಿಮಾಲಯದಿಂದ. ಅಲ್ಲಿ ಮೇಲಿರೋರೆಲ್ಲ ಗಂಗೆಯೊಳಗಿನ ವಿದ್ಯುತ್ ಸೆಳೆದುಕೊಂಡು ಬಿಟ್ಟಿರುತ್ತಾರೆ. ಇಲ್ಲಿ ಬರುವ ನೀರೊಳಗೆ ವಿದ್ಯುತ್ ಇರುವುದಿಲ್ಲ. ದಂ ಇರುವುದಿಲ್ಲ...’

ಕೇಳಿಸಿಕೊಂಡ ಹಳ್ಳಿಗರು ಚಪ್ಪಾಳೆ ತಟ್ಟಿ ತಮ್ಮ ನಾಯಕನನ್ನು ಮೆಚ್ಚಿಕೊಂಡು ಮನೆಗೆ ಹೋಗುತ್ತಾರೆ. ವೋಟು ಹಾಕುತ್ತಾರೆ. ಇವನ ದರ್ಬಾರು ನಿರಂತರ.

ಟೂರು ಹೋದರೆ ಬುಲೆಟ್‌ಪ್ರೂಫ್ ಕಾರು. ಅಲ್ಲಲ್ಲಿ ನಿಂತಾಗ ಬಾಯಾಡಿಸಲು ‘ಭುಜಿಯಾ’ ಎಂಬ ತಿಂಡಿ. ಮನೆಯ ಹಗ್ಗದ ಮಂಚದ ಮೇಲೆ ಕುಳಿತು ನಿತ್ಯ ಮಸಾಜು. ರಾತ್ರಿ ರಿಲ್ಯಾಕ್ಸ್ ಆಗಲು ನಾಚ್‌ವಾಲಿಗಳ ನರ್ತನ, ಗಾಯನ.

ಹಿಂದೊಮ್ಮೆ ಈತ ಹೇಳಿದ್ದ ‘ಬಿಹಾರದ ರಸ್ತೆಗಳನ್ನು ಹೇಮಮಾಲಿನಿಯ ಕೆನ್ನೆಯ ಹಾಗೆ ಮಾಡಿಬಿಡುತ್ತೇನೆ’ ಹಾಗೆ ಹೇಳಿ ಹತ್ತು ವರ್ಷದ ಮೇಲಾಗಿದೆ. ಆತನದೇ ಅಧಿಕಾರ. ಆದರೆ ಬಿಹಾರದ ರಸ್ತೆಗಳು ಮತ್ತಷ್ಟು ಗುಂಡಿ, ಗೊಟರುಗಳಿಂದ ತುಂಬಿ ಗಬ್ಬೆದ್ದು ಹೋಗಿವೆ ಅಷ್ಟೇ. ಅದಕ್ಕಾಗೇ ಈಗ ಬಿಹಾರದಲ್ಲಿ ಈಗೊಂದು ಜೋಕು ಪ್ರಚಲಿತ.

ಸಿಂಗಪುರದವರು ಬಿಹಾರಕ್ಕೆ ಬಂದರು. ಅಲ್ಲಿನ ಸ್ಥಿತಿಗತಿ ನೋಡಿ ಮರುಕ ಅನ್ನಿಸಿತು. ಮುಖ್ಯಮಂತ್ರಿ ಲಾಲೂನ ಕಂಡು ಭೇಟಿಯಾಗಿ ವಿನಂತಿಸಿಕೊಂಡರು. ಒಂದು ವರ್ಷ ಬಿಹಾರ ನಮಗೊಪ್ಪಿಸಿ, ಇಡೀ ರಾಜ್ಯ ಸಿಂಗಪುರ ಮಾಡಿಕೊಡುತ್ತೇವೆ. ಅವರ ಉದಾರತೆ ಕಂಡ ಲಾಲೂಗೆ ಅಷ್ಟೇ ಉದಾರ ಪ್ರತಿಕ್ರಿಯೆ ತೋರಬೇಕೆನ್ನಿಸಿತು. ನಿಮ್ಮದು ದೊಡ್ಡ ಗುಣ. ನೀವು ಬಿಹಾರವನ್ನು ಸಿಂಗಪುರ ಮಾಡಲು ಒಂದು ವರ್ಷ ಕೇಳುತ್ತಿದ್ದೀರ. ಇದು ತೀರಾ ಜಾಸ್ತಿ ಆಯಿತು. ನನಗೇ ಒಂದು ತಿಂಗಳು ನನಗೆ ಸಿಂಗಪುರ ಒಪ್ಪಿಸಿ, ಅದನ್ನು ಬಿಹಾರ ಮಾಡದೇ ಇದ್ದರೆ ಕೇಳಿ’.

ಇಂಥ ಗೇಲಿಗಳ ಹಿಂದೆ ಜನರ ತೀವ್ರ ವಿಷಾದವಿದೆ. ಕೈಲಾಗದ ಅಸಹಾಯಕತೆ ಇದೆ. 1975ರಲ್ಲಿ ಎಮರ್ಜೆನ್ಸಿ ವಿರೋಧಿಸಿ ಜೈಲು ಸೇರಿದ್ದ ಲಾಲೂ, ಮೊದಲು ಪಡೆದ ಮಗಳು ಭಾರತಿ. ಮೀಸಾದಲ್ಲಿ ಬಂಧಿತನಾಗಿ ಜೈಲಲ್ಲಿ ಹುಟ್ಟಿದಳೆಂಬ ಕಾರಣಕ್ಕೆ ಆಕೆ ಮೀಸಾ ಭಾರತಿ. ಆಮೇಲೆ ಮತ್ತೂ ಎಂಟು ಮಕ್ಕಳು. ಎಮರ್ಜೆನ್ಸಿಯಲ್ಲಿ ಜಾರಿಯಾದ ‘ನಸಬಂದಿ’ ವಿರೋಧಿಸಿದ ಆತ ಇಂದಿಗೂ ಫ್ಯಾಮಿಲಿ ಪ್ಲಾನಿಂಗ್‌ನ ಕಟ್ಟಾ ವಿರೋಧಿ.

ಗಂಡನಿಗಾಗಿ ಒಂಬತ್ತು ಮಕ್ಕಳು ಹೆತ್ತು, ಅಡುಗೆ ಮಾಡುತ್ತಾ ಇದ್ದ ಹೆಂಡತಿ, ಒಂದು ದಿನ ಧುತ್ತೆಂದು ರಾಜ್ಯ ರಾಜಕೀಯಕ್ಕೆ ಬರುತ್ತಾಳೆ, ಬಿಹಾರದ ಮುಖ್ಯಮಂತ್ರಿ ಆಗುತ್ತಾಳೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ.

ಮೂರು ವರ್ಷದ ಹಿಂದೆ ಲಾಲೂ ಜೈಲು ಸೇರಿದಾಗ ಮುಖ್ಯಮಂತ್ರಿ ಗದ್ದುಗೆಗೆ ಬಂದ ಹೆಣ್ಣು ಆಕೆ. ಹೆಸರು ರಾಬರಿ ದೇವಿ. ಅದು ಇಂಗ್ಲೀಷಿನ ‘ರಾಬರಿ’ ಅಲ್ಲ ಎಂದು ಸಾಬೀತು ಪಡಿಸಲು ಆಕೆಯನ್ನು ‘ರಾಬಡೀ’ ಎಂದು ಕರೆಯಲಾಗುತ್ತಿದೆ.

ಗಂಡನಿಗೆ ನಿಷ್ಠೆ. ಹೇಳಿದ್ದು ಚಾಚೂ ತಪ್ಪದೆ ಪಾಲಿಸುವ ಪತ್ನಿ. ಅಡುಗೆ ಮನೆಯಿಂದ ಅಧಿಕಾರದ ಗದ್ದುಗೆಗೆ. ಜೈಲಲ್ಲಿ ಕುಳಿತ ಗಂಡನದೇ ನಿಜವಾದ ರಾಜ್ಯಭಾರ. ಇವರಿಬ್ಬರ ಸಂಪರ್ಕಕ್ಕೆ ಸೇತುವೆಯಾಗಿ ಅತ್ತಿತ್ತ ಓಡಾಡುವವನು ರಾಬಡಿಯ ಸಹೋದರ ಸುಭಾಷ್ ಯಾದವ್.

ಅಂದಿನಿಂದಲೂ ಆಕೆ ರಾಜ್ಯದ ಮುಖ್ಯಮಂತ್ರಿ. ಮೊನ್ನೆ ನಡೆದ ಚುನಾವಣೆ ನಂತರ ಅವರ ರಾಷ್ಟ್ರೀಯ ಜನತಾದಳ ಅಲ್ಲಿನ ವಿಧಾನಸಭೆಯ ಬಹುದೊಡ್ಡ ಪಕ್ಷ - ಆದರೆ ಬಹುಮತವಿಲ್ಲ. ಇದರ ಉಪಯೋಗ ತೆಗೆದುಕೊಂಡ ಬಿಜೆಪಿ ಮೈತ್ರಿಕೂಟದ ನಿತೀಶ್ ಕುಮಾರ್‌ನನ್ನು ಮುಖ್ಯಮಂತ್ರಿ ಮಾಡಿತು. ಇದಕ್ಕೆ ಗೇಣು ಹಾಕಲು ರಾಜ್ಯಪಾಲ ವಿನೋದ್ ಚಂದ್ರ ಪಾಂಡೆ ಇದ್ದರು. ಆದರೆ ಸದನದಲ್ಲಿ ಬಹುಮತ ಸಾಬೀತುಗೊಳಿಸುವುದು ಅವರಿಂದಾಗಲಿಲ್ಲ. ಮತ್ತೆ

ಹಗರಣಗಳು

ಮೇವು ಹಗರಣದ ಜೊತೆಗೇ ಇನ್ನೂ ಮೂರು ಹಗರಣಗಳಲ್ಲಿ ಲಾಲೂ ಪ್ರಮುಖ ಪಾತ್ರಧಾರಿ.

★ ಛಾಯಾಬಾಸಾ ಖಜಾನೆಯಿಂದ ಅಕ್ರಮವಾಗಿ 38 ಕೋಟಿ ತೆಗೆದಿದ್ದು.

★ ದೇವಗಡ, ಪಾಟ್ನಾ, ಡಂಕಾ, ದೋರಾಂಡಾ ಖಜಾನೆಗಳಿಂದ ಅಕ್ರಮವಾಗಿ 184.64 ಕೋಟಿ ಹಣ ತೆಗೆದದ್ದು.

★ 1990ರಿಂದ 96ರವರೆಗೆ ಅಕ್ರಮವಾಗಿ, ಚರ, ಸ್ಥಿರಾಸ್ತಿ ಗಳಿಸಿದ್ದು.

ಮೀಸಾ ಭಾರತಿ ಮೀಸೆ ತಿರುವಿದ್ದು

ಲಾಲೂನ ಮಗಳು, ಮೀಸಾನ ಹೆಚ್ಚುಗಾರಿಕೆ ಹಲವು ಹುಟ್ಟುತ್ತಲೇ ವಿಚಿತ್ರ ಹೆಸರು. ಕಳೆದ ವರ್ಷ ಪಾಟ್ನಾ ಮೆಡಿಕಲ್ ಕಾಲೇಜಿಂದ ಎಂ.ಬಿ.ಬಿ.ಎಸ್. ಮಾಡಿದ್ದಾಳೆ. ಅದೂ ಅತಿ ಹೆಚ್ಚು ಅಂಕ ಪಡೆದು. ಅದಕ್ಕೆ ಆಕೆಗಿದ್ದ ಒಂದೇ ಅರ್ಹತೆ ಎಂದರೆ, ಅವಳು ರಾಬಡಿ-ಲಾಲೂನ ಮಗಳು ಎಂಬುದು.



ಮಾಮೂಲು ಬಿಹಾರಿ ಹೆಣ್ಣಂತೆ ಕಾಣುವ ಈಕೆ ಮಹಾ ಚಾಲಾಕು. ತಂದೆ ಜೈಲಲ್ಲಿ ಇದ್ದಾಗ ಊರಲ್ಲಿ ಇಲ್ಲದಾಗ ರಾಜ್ಯದ ಆಡಳಿತ ನಡೆಸಲು ಈಕೆ ಸಹಕಾರಿ.

ಕಳೆದ ವರ್ಷ ಮದುವೆ ಆಯಿತು. ಅದು ರಾಜ ಮಹಾರಾಜರೂ ನಾಚಿ ತಲೆ ತಗ್ಗಿಸಬೇಕಾದ ವೈಭವದ ಮದುವೆ. ಗಂಡ ಶೈಲೇಶ್ ಕುಮಾರ್ ಬೆಂಗಳೂರಿನ ಇನ್‌ಫೋಸಿಸ್‌ನಲ್ಲಿ ಕಂಪ್ಯೂಟರ್ ಎಂಜಿನಿಯರ್. ಆದರೇನು? ಪಾಪ ಗಂಡನ ಜೊತೆ ಇರಲು ಆಕೆಗೆ ಬಿಡುವೆಂಬುದೇ ಇಲ್ಲ.

ಮೊನ್ನೆ ಈಕೆಯ ಅಪ್ಪ ಅಮ್ಮ ಇಬ್ಬರೂ ಜೈಲು ಸೇರಬೇಕಾದ ಸ್ಥಿತಿ. ಏಪ್ರಿಲ್ ನಾಲ್ಕರ ರಾತ್ರಿ ಮಗಳಿಗೇ ಮರುದಿನ ಪಟ್ಟಕಟ್ಟಲು ತಯಾರಿ ನಡೆಯಿತು. ‘ನಾಳೆ ಹೆಚ್ಚು ಕಡಿಮೆ ಆದರೆ ಮೀಸಾ ಮುಂದಿನ ಮುಖ್ಯಮಂತ್ರಿ’ ಎಂದು ಅಬಕಾರಿ ಸಚಿವ ಶಿವಾನಂದ ತಿವಾರಿಗೆ ತಿಳಿಸಲಾಗಿತ್ತು.

ರಾಷ್ಟ್ರೀಯ ಜನತಾದಳದ ಕಾರ್ಯಾಧ್ಯಕ್ಷ ರಂಜನ್ ಪ್ರಸಾದ್ ಯಾದವದೇ ಕೊಂಚ ತಕರಾರು. ಆದರೆ ಆತ ಸಂಸತ್ ಸದಸ್ಯ. ಇರಲಿ ಎಂದು ಮಾಮ ಶಿವಪ್ರಸಾದ್ ಚೌಧುರಿಗೂ ಹೇಳಿ ಕಳುಹಿಸಿದ್ದ. ಗೋಪಾಲ್‌ಗಂಜ್ ಜಿಲ್ಲೆಯ ಸೋಲಾರ್ ಪಂಚಾಯಿತ್ತಿಯ ಮುಖ್ಯಸ್ಥ ಆತ. ರಾಜ್ಯಪಾಲ ವಿನೋದ್ ಚಂದ್ರ ಪಾಂಡೆ ಆರೋಪ ಪಟ್ಟಿ ಸಲ್ಲಿಸಲು ಅನುಮತಿ ನೀಡಿದಾಗಲೇ ಚೌಧುರಿಯನ್ನು ಮುಖ್ಯಮಂತ್ರಿ ಆಗಲು ವಿಶೇಷ ತರಬೇತಿ ನೀಡಲಾಯಿತು. ಮುಖ್ಯಮಂತ್ರಿ ಆದರೆ ಹೇಗೆ ನಡೆದುಕೊಳ್ಳಬೇಕು ಎಂದು ತಿಳಿಸಲಾಯಿತು.

ಆದರೆ ಕೊನೆಗೆ ನಿರ್ಧಾರವಾದದ್ದು ಮೀಸಾ ಕಡೆಗೆ. 1975ರ ಮಾರ್ಚ್ 23ರಂದು ಹುಟ್ಟಿದ ಆಕೆಗೆ 25 ದಾಟಿದೆ. ಮುಖ್ಯ ಮಂತ್ರಿ ಆಗಲು ವಯಸ್ಸಿನ ಅರ್ಹತೆಯಂತೂ ಇದೆ. ರಾಬರಿ ಏಪ್ರಿಲ್ ಐದರ ಮುಂಜಾನೆ ನ್ಯಾಯಾಲಯಕ್ಕೆ ಹೋಗುವಾಗ ರಾಜೀನಾಮೆ ಪತ್ರ ಹಿಡಿದು ಹೋಗಿದ್ದಳು. ಜಾಮೀನು ಸಿಗದೇ ಇದ್ದಿದ್ದರೆ ರಾಜೀನಾಮೆ, ಜೊತೆಗೆ ಮಗಳು ಮೀಸಾಗೆ ಪಟ್ಟ, ಆದರೆ ಜಾಮೀನು ದೊರೆಯಿತು. ತಾಯಿ-ಮಗಳು ಇಬ್ಬರೂ ಈಗ ಜಂಟಿಯಾಗೇ ದರ್ಬಾರು ಮಾಡುತ್ತಾ ಇದ್ದಾರೆ. ■

ರಾಬಡಿ ಸಿಂಹಾಸನ ಏರಲು ಅನುವಾದರು.

ಆಕೆಗೆ ಪ್ರಮಾಣವಚನ ಬೋಧಿಸುವ ಮಾರ್ಚ್ 11ರಂದು, ಕೆಲವೇ ತಾಸು ಮುಂಚೆ ರಾಬಡಿ ಮತ್ತು ಲಾಲೂ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲು ಹಾಗೂ ತನಿಖೆ ನಡೆಸಲು ಇದೇ ರಾಜ್ಯಪಾಲರು ಸಿಬಿಐಗೆ ಅನುಮತಿ ನೀಡಿದ್ದರು. ಕಾಂಗ್ರೆಸ್, ಬಹುಜನ ಸಮಾಜ ಪಕ್ಷ, ಜೆ.ಎಂ.ಎಂ ಮುಂತಾಗಿ ಹಲವು ಪಕ್ಷಗಳನ್ನು ಕಟ್ಟಿಕೊಂಡು ಅಧಿಕಾರಕ್ಕೆ ಬಂದ ಆಕೆ ರಚಿಸಿದ್ದು 84 ಸಚಿವರ ಬೃಹತ್ ಸಂಪುಟ. ಆದರೂ ಕೊಸರಾಟ ನಿಲ್ಲಲಿಲ್ಲ. ಆಗ ಬಂತು ಸಿಬಿಐ ಸಲ್ಲಿಸಿದ ಆರೋಪ ಪಟ್ಟಿಯ ಸಿಡಿಲು. ಏಪ್ರಿಲ್ 4 ರಂದು ನಿಯೋಜಿತ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ಕೆ. ಲಾಲ್ ಎದುರು ಅದೇ ಮೊದಲ ಬಾರಿಗೆ ಆರೋಪ ಪಟ್ಟಿ ಸಲ್ಲಿಸಲಾಯಿತು. ಇದರಲ್ಲಿ ಅಕ್ರಮ ಸಂಪತ್ತು ಗಳಿಸಿದ ಲಾಲೂ, ಆತನಿಗೆ ನೆರವಾದಳೆಂದು ಪತ್ನಿ; ಇಬ್ಬರೂ ಆರೋಪಿಗಳು. ಅವರ ಬಂಧನಕ್ಕೆ ಜಾಮೀನು ರಹಿತ ವಾರೆಂಟ್ ಹೊರಡಿತು. ಮರುದಿನದ ಮುಂಜಾನೆ ಅಪಾರ ಬೆಂಬಲಿಗರ ಘೋಷಣೆಗಳ ನಡುವೆ ಗಂಡ - ಹೆಂಡತಿ ನ್ಯಾಯಾಲಯಕ್ಕೆ ಹಾಜರು. ಜಾಮೀನಿಗಾಗಿ ಅರ್ಜಿ. ರಾಬಡಿಯ ಅರ್ಜಿ ಅಂಗೀಕಾರವಾಯಿತು. ಎರಡು ಲಕ್ಷ ಮೊತ್ತದ ಮುಚ್ಚಳಿಕೆ ಸಲ್ಲಿಸಿದ ಅನುಯಾಯಿ. ಮತ್ತೆ ಆಕೆ ನಿರಾಬಾಧಿತವಾಗಿ ಪಾಟ್ನಾದ ತನ್ನ ಅರಮನೆಗೆ. ಗಂಡ, ಊರ ಹೊರ ವಲಯದ ಬೇವೂರ್ ಸೆರೆಮನೆಗೆ.



ಬಂಧನಕ್ಕೆ ಮುಂಚೆ



ಬಂಧನದ ನಂತರ ಜೈಲಿನಲ್ಲೇ ದರ್ಬಾರು

ಈ ಸೆರೆಮನೆ ಲಾಲೂಗೆ ಹೊಸದಲ್ಲ. ಕಳೆದ ಮೂರು ವರ್ಷಗಳಲ್ಲಿ ಮೂರು ಬಾರಿ ಆತ ಇಲ್ಲಿಗೆ ಬಂದಿದ್ದಾನೆ. ಹಿಂದಿನ ಸಲ 1999ರಲ್ಲಿ ಸೆರೆಮನೆಗೆ ಹೋಗುವಾಗ ಜಟಕಾ ಗಾಡಿಯಲ್ಲಿ ಬಂದಿದ್ದ. ಬಿಡುಗಡೆ ಆಗಿ ಹೋಗುವಾಗ ಆನೆ ಹತ್ತಿ ಮೆರವಣಿಗೆಯಲ್ಲಿ ಹೋಗಿದ್ದ.

ಬೇವೂರ್ ಜೈಲಿನಲ್ಲಿ ಲಾಲೂ ಪ್ರತಿಷ್ಠಿತ ಕೈದಿ. ಆತನ ಕೋಣೆಗೆ ಏರ್‌ಕಂಡೀಷನ್ ಸೌಲಭ್ಯ ಇದೆ. ಟಿ.ವಿ, ರೆಫ್ರಿಜಿರೇಟರ್, ಎರಡೆರಡು ಮೊಬೈಲ್ ಫೋನು. ಬುಟ್ಟಿ ಬುಟ್ಟಿ ತಾಜಾ ಹಣ್ಣು. ಬೇಕೆಂದರೆ ಅಡುಗೆ ಮಾಡಿಕೊಳ್ಳಲು ವ್ಯವಸ್ಥಿತ ಕಿಚ್ಚನ್. ಇಷ್ಟಿದ್ದೂ ಆತ ಬಯಸಿ ಬಯಸಿ ತಿನ್ನುವುದು ಹೆಂಡತಿ ಮಾಡಿ ಕಳುಹಿಸಿದ ತಿಂಡಿ, ಊಟವನ್ನೆ.

ಆತನನ್ನು ನೋಡಲು ಸದಾ ಅಭಿಮಾನಿಗಳ ಹಿಂಡು. ಜೈಲಿನ ಕೋಣೆಯ ಕಿಟಕಿಯಿಂದ ಕೈ ಬೀಸಿ, ಕೈ ಕುಲುಕಿ ಮಾತಾಡಿಸಿ, ಅವರನ್ನೆಲ್ಲ ಬೀಳ್ಕೊಂಡ ಮೇಲೆ ಪ್ರತಿಷ್ಠಿತರಿಗಾಗಿ ಜೈಲಿನೊಳಗೆ ದರ್ಬಾರು. ಜೈಲಿನ ಸೂಪರಿಂಟೆಂಡೆಂಟರ ಕುರ್ಚಿಯಲ್ಲಿ ಕುಳಿತು ದರ್ಬಾರು ಮಾಡುವುದು ನಿತ್ಯದ ಸಂಗತಿ. ಅದೂ ಮೀರಿದರೆ ಜೈಲಿನ ಕೋಣೆ ಎದುರಿಗೆ ಇರುವ ಅಂಗಳದಲ್ಲಿ ಹಾಕಿದ ಬೇರುಗಳಲ್ಲಿ ಕುಳಿತು ಗೋಷ್ಠಿ.

ಪ್ರತಿಷ್ಠಿತರ ಸರದಿ ರಾತ್ರಿ ಒಂಬತ್ತಕ್ಕೆ ಮುಗಿಯುತ್ತದೆ. ಆಮೇಲೆ ಅತಿ ಪ್ರತಿಷ್ಠಿತರ ಸರದಿ. ಅವರು ರಾತ್ರಿ ಹತ್ತು ಗಂಟೆಯ ನಂತರವೂ ಲಾಲೂನ ಜೈಲಿನ ಕೋಣೆಯೊಳಗೇ ಕುಳಿತು ಆಪ್ತ ಸಮಾಲೋಚನೆ ನಡೆಸಬಹುದು. ಹಾಗೆ ಬರುವ ಇಬ್ಬರು ಪ್ರತಿಷ್ಠಿತರೆಂದರೆ, ಆತನ ಭಾವ ಸುಭಾಷ್ ಯಾದವ್ ಹಾಗೂ ಶಾಸಕ ಅನ್ವರ್ ಅಹ್ಮದ್.

ಸಾಕ್ಷ್ಯ ನಾಶ ಆದೀತೆಂದು ಆತನನ್ನು ಜೈಲಿಗೆ ಕಳುಹಿಸಲಾಗಿದೆ. ಆದರೆ ಈಗ ಸಾಕ್ಷ್ಯ ನಾಶ ಇನ್ನೂ ಸಲೀಸು. ಏಕೆಂದರೆ ಹೆಂಡತಿಯೇ ಮುಖ್ಯಮಂತ್ರಿ. ಭಾವ ಸುಭಾಷ್ ಯಾದವ್‌ದೇ ಕಾರುಬಾರು.

ಬಹಳ ಹಿಂದಿನಿಂದಲೂ, ಲಾಲೂ ಮೇಲೆ ಅಕ್ರಮಗಳ ದೂರಿದೆ. , 1996-97ರಲ್ಲಿ ರಾಜ್ಯದ ಮಹಾಲೇಖಪಾಲರು 7.38ಲಕ್ಷ ರೂಪಾಯಿ ಅಕ್ರಮ ವೆಚ್ಚ ಆಗಿದೆ ಎಂದು ವರದಿಯಲ್ಲಿ ಹೇಳಿದ್ದರು. ಇದು ಚರ್ಚಾಗಿದ್ದು ಲಾಲೂ ಇದ್ದ ನಿವಾಸದ ಬಂಗಲೆಯಲ್ಲಿ ದನಗಳ ಕೊಟ್ಟಿಗೆ, ಕೋಳಿ ಗೂಡು ಕಟ್ಟಲು. ಇಂಥ ವರದಿಗಳು ಬರುತ್ತವೆ ಹೋಗುತ್ತವೆ. ಆದರೆ ಅಷ್ಟು ಹೊತ್ತಿಗೆ ಮೇವು ಹಗರಣ ದೊಡ್ಡ ರಾದ್ಧಾಂತ ಆಗಿತ್ತು. ಸಿಬಿಐ ತನಿಖೆ ಕೈಗೆತ್ತಿಕೊಂಡಿತ್ತು. 1998ರ ಆಗಸ್ಟ್ 19ಕ್ಕೆ ಪ್ರಥಮ ಮಾಹಿತಿ ವರದಿ ಸಿದ್ಧವಾಗಿ ದಾಖಲಾಯಿತು.

ವರದಿ ಸಿದ್ಧಪಡಿಸುವಾಗ ನಾನಾ ದಾಖಲೆಗಳನ್ನು ಸಿಬಿಐ ಪರಿಶೀಲಿಸಿತು. ಲಾಲೂನ ಹತ್ತಿರವಿದ್ದ ಹಣ. ಅಕ್ರಮವಾಗಿ ಕಟ್ಟಿಸಿದ ದನದ ಕೊಟ್ಟಿಗೆ, ಕೌಟಿಲ್ಯ ನಗರದಲ್ಲಿ ಕಟ್ಟಿಸಿದ ಮನೆ ಎಲ್ಲ ಜಾಲಾಡಿತು. ಲಾಲೂವನ್ನು ಎರಡು ಬಾರಿ ವಿಚಾರಣೆ ಮಾಡಿತು. ಹೆಂಡತಿ ರಾಬಡಿಯನ್ನೂ ವಿಚಾರಿಸಿತು. ಈ ಸಂಪತ್ತು ಎಲ್ಲಿಂದ ಬಂತು? ಎಂದರೆ ಆಕೆ ಹೇಳಿದ್ದು 'ಹಸು ಸಾಕಿ ಹಾಲು ಮಾರಿ ಕಾಸಿಗೆ ಕಾಸು ಗಂಟು ಹಾಕಿ ಎತ್ತಿದ್ದುದು.'

ಅಧಿಕಾರಿಗಳ ಪ್ರಕಾರ ಕೌಟಿಲ್ಯನಗರದ ಲಾಲೂನ ಮನೆಯ ಮೌಲ್ಯವೇ 19.40 ಲಕ್ಷ. ಆದರೆ ತನಗೆ ಮನೆ ಕಟ್ಟಿಸಲು ಕೇವಲ ಎರಡೂ ಕಾಲು ಲಕ್ಷ ಸಾಕಾಯಿತು ಎಂದು ಆದಾಯ ತೆರಿಗೆ ಅಧಿಕಾರಿಗಳಿಗೆ ಆತ ಹೇಳಿಕೆ ನೀಡಿದ್ದಾನೆ. ಒಟ್ಟಾರೆ ಮೂವತ್ತು ಲಕ್ಷ ರೂಪಾಯಿಗೂ ಹೆಚ್ಚು ಅಕ್ರಮ ಸಂಪತ್ತು ಲೆಕ್ಕಕ್ಕೆ ಸಿಕ್ಕಿದೆ. ಅದಕ್ಕಾಗಿ ಸಿಬಿಐ ಕೇಸು ದಾಖಲಿಸಿದೆ.

ಅರಮನೆಯಲ್ಲಿ ರಾಬಡಿ, ಸೆರೆಮನೆಯಲ್ಲಿ ಲಾಲೂ. ರಾಜಕೀಯದ ಆಟ ನಿರಂತರ ಸಾಗಿದೆ. ಪೆದ್ದನ ಹಾಗೆ, ಹುಂಬನಂತೆ ಕಾಣುವ ಈ ಮನುಷ್ಯ ಹಳ್ಳಿಗನ ಸಹಜ ಕುಟಿಲತೆ ಮತ್ತು ನಯ ವಂಚಕತನ ರೂಪಿಸಿಕೊಂಡವನು. ಕಂತೆಗೆ ತಕ್ಕ ಬೊಂತೆ ಎಂಬಂತೆ ಆತನ ಹೆಂಡತಿ.

■

ಪಕ್ಷಾಂತರಕ್ಕೂ ಕಾರಣವುಂಟೇ ?

ರಾಮಾಯಣದ ವಿಭೀಷಣ ಮೊದಲ ಪಕ್ಷಾಂತರಿ. ಅಂದಿನಿಂದ ರಾಜಕೀಯದಲ್ಲಿ ಪಕ್ಷಾಂತರ ಒಂದು ಅವಿಭಾಜ್ಯ ಅಂಗ. ಭಾರತದಂಥ ದೇಶದಲ್ಲಿ ಪಕ್ಷಾಂತರ ನಡೆಯಲು ಹಲವಾರು ಕಾರಣಗಳಿರುತ್ತವೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ ಪಟುಗಳ ವ್ಯಕ್ತಿತ್ವವೇ ಇಲ್ಲವಾಗಿರುವಾಗ, ತಾವು ಯಾವುದೋ ಘನ ಉದ್ದೇಶದಿಂದ, ನಂಬಿಕೊಂಡ ತತ್ವ ಪಾಲಿಸಲು ಒಂದು ಪಕ್ಷ ಬಿಟ್ಟು ಇನ್ನೊಂದು ಪಕ್ಷಕ್ಕೆ ಹೋಗುತ್ತೇವೆ ಎಂದು ಹೇಳುವುದು ಹಸಿ ಸುಳ್ಳು ಎಂದು ಎಲ್ಲರಿಗೂ ಗೊತ್ತು. ಬಹಳಷ್ಟು ಸಂದರ್ಭಗಳಲ್ಲಿ ಅಧಿಕಾರದ ಆಸೆಗೆ ಇಂಥ ಪಕ್ಷಾಂತರಗಳು ನಡೆಯುತ್ತವೆ. ಇದಕ್ಕೂ ಮೀರಿ ಹಲವಾರು ವೈಯಕ್ತಿಕ ಕಾರಣಗಳೂ ಪಕ್ಷಾಂತರಕ್ಕೆ ಪ್ರಚೋದನಕಾರಿ. ಅಂಥ ಕೆಲವು ಸಂಗತಿಗಳನ್ನು ಇಲ್ಲಿ ಓದಿ ಸವಿಯಬಹುದು.

ಈಚೆಗೆ ನಾನಾ ಬಗೆಯ ಶಾಸಕರು ಕಾಂಗ್ರೆಸ್‌ಗೆ ಸೇರಿದ್ದಾರೆ. ಅದರಲ್ಲಿ ಒಬ್ಬನ ಕತೆ ಕೇಳಿ. ಆತ ಈಗ ದೊಡ್ಡ ಮನುಷ್ಯ. ದುಡ್ಡಿದೆ. ಹಲವು ಸಂಸ್ಥೆ, ಸಂಘಗಳ ಅಧ್ಯಕ್ಷ. ಊರಲ್ಲಿ ಅಪ್ಪನಿಂದ ಬಂದ ಆಸ್ತಿ ಸಾಕಷ್ಟು ಇತ್ತು. ಅದು ಸಾಲದು ಎನ್ನಿಸಿತು. ದುಡ್ಡು ಮಾಡಲು ಹಾದಿ ಹುಡುಕಿದ. ತನ್ನ ತೋಟ, ಹೊಲಗಳಲ್ಲಿ ಗಾಂಜಾ ಬೆಳೆದ. ಸಣ್ಣದಾಗಿ ಮಾಡಿಕೊಂಡು ಹೋಗಿದ್ದರೆ, ಬಂದ ದುಡ್ಡು ಇಟ್ಟುಕೊಂಡು ಮೆರೆದಾಟ ಮಾಡದೇ ಇದ್ದಿದ್ದರೆ ಎಲ್ಲ ಸರಿಯಾಗಿ ಇರುತ್ತಿತ್ತು. ಹಾಗಾಗಲಿಲ್ಲ.

ದುಡ್ಡು ಬಂದರೆ ಸಾಕೆ? ಅದು ನಾಲ್ಕು ಜನಕ್ಕೆ ತಿಳಿಯಬೇಕು. ಊರಲ್ಲಿ, ಜನರಲ್ಲಿ ತನ್ನ ಗೌರವ ಹೆಚ್ಚಬೇಕು ಎನಿಸಿತು. ಆಗ ನೋಡಿ ಶುರುವಾಯಿತು ತಕರಾರು. ಆಗದವರು ಹುಟ್ಟಿಕೊಂಡರು. ಇವನು ಬೆಳೆಯುತ್ತಿದ್ದ ಗಾಂಜಾ ವಿಷಯ ಪೊಲೀಸರಿಗೂ ಹೋಯಿತು. ಇವನಿಗಾಗದವರು ಆಳುವ ಪಕ್ಷದಲ್ಲಿ ಇದ್ದುದರಿಂದ ಗಾಂಜಾ ಬೆಳೆಯ ಮೇಲೆ ದಾಳಿ ಆಯಿತು. ಕೇಸು ದಾಖಲಿಸಿದರು.

ಊರಲ್ಲಿ ತಾನು ದೊಡ್ಡವನು ಅನಿಸಿಕೊಂಡಿದ್ದ. ಪೊಲೀಸರು ಬಂದು ಬೇಡಿ ಹಾಕಿ ಕರೆದೊಯ್ದರೆ ಮಾನ ಉಳಿಯುತ್ತೆಯೇ? ಹೇಗೋ ತಪ್ಪಿಸಿಕೊಂಡ. ಜಿಲ್ಲೆಯ ರಾಜಕೀಯ ಪುಢಾರಿ ಒಬ್ಬನ ಬಳಿಗೆ ಓಡಿದ. ಆಗ ಅವನೂ ದೊಡ್ಡಸ್ಥಾನದಲ್ಲಿ ಇದ್ದ. ಆಳುವ ಪಕ್ಷದವರೇ ಹೇಳಿ ಕೇಸು ಮಾಡಿಸಿದ್ದರಿಂದ ವಿರೋಧ ಪಕ್ಷದಲ್ಲಿದ್ದ ಈ ಪುಢಾರಿಯನ್ನು ಹಿಡಿದುಕೊಂಡ.

ಅವನು ಮೊದಲೇ ಪುಢಾರಿ. ರಕ್ಷಣೆ ಕೇಳಿ ಬಂದವನ ಅಳತೆ, ತೂಕ ಲೆಕ್ಕ ಹಾಕಿದ. ಇದು ಸರಿಯಾದ ಆಕಳು. ಹಿಂಡಿದರೆ ಚೆನ್ನಾಗಿ ಹಾಲು ಬರುತ್ತದೆ ಎಂದು ತಿಳಿಯಿತು.'ಆಗಲಿ ಬಿಡು. ಅದೆಲ್ಲ ಸರಿ ಮಾಡೋಣ' ಎಂದ. ಬಂದವನ ಬಂಧನದ ಬವಣೆ ತಪ್ಪಿಸಿದ. ಜೊತೆಗೆ ಒಂದು ಹುಷಾರು ಕೆಲಸ ಕೂಡ ಮಾಡಿದ. ಕೇಸು ಹಾಗೇ ಉಳಿದುಕೊಂಡಿತು. 'ಸದ್ಯಕ್ಕೆ ನೀನು ಕೈಕೊಳ ಹಾಕಿಸಿಕೊಳ್ಳುವುದು ತಪ್ಪಿತಪ್ಪ, ಕೇಸು ಆಮೇಲೆ ನೋಡಿಕೊಳ್ಳೋಣ. ಇಷ್ಟು ಮಾಡಿದವನಿಗೆ ಅಷ್ಟು ಸಾಧ್ಯವಿಲ್ಲವೆ?'' ಎಂದು ಸಮಾಧಾನಿಸಿದ. ಇವನು ಸ್ವಲ್ಪ ದಡ್ಡ. ವ್ಯವಹಾರದಲ್ಲೆ ಮೇಲೆ ಬರಲು ಏನೆಲ್ಲ ಮಾಡಬಹುದು ಎಂದು ತಿಳಿದಿದ್ದ. ಆದರೆ ರಾಜಕೀಯದ ಒಳ ಹುನ್ನಾರಗಳು ತಿಳಿದಿರಲಿಲ್ಲ. ಅಲ್ಲದೇ, ಬಂಧನ ತಪ್ಪಿಸಿಕೊಂಡವನಿಗೆ, ಕೇಸು ಮುಚ್ಚಿಸಿ ಹಾಕೋದು ಕಷ್ಟವೇ? ಅಂದುಕೊಂಡ. ಅಷ್ಟು ಹೊತ್ತಿಗೆ ಗಾಂಜಾದಿಂದ ಬಂದ ದುಡ್ಡು ಹೂಡಿ ಶ್ರೀಮಂತ ವ್ಯಾಪಾರಿ ಎನಿಸಿಕೊಂಡಿದ್ದ. ಹಣ ಕೈಯಲ್ಲಿ ಓಡಾಡುವಾಗ, ಸದ್ಯದ ಗಂಡಾಂತರ ತಪ್ಪಿದಾಗ ನಿಸೂರಾಗಿಬಿಟ್ಟ. ಮುಂದಿನ ಗಂಡಾಂತರ ಏನು ಎಂದು ಯೋಚಿಸಲು ಹೋಗಲಿಲ್ಲ.

ಪುಢಾರಿ ಒಂದು ಸಲ ಹೇಳಿ ಕಳಿಸಿದ. ಇವನು ಹೋದ, ''ನೋಡಿ ಚುನಾವಣೆ ಬಂತು. ನಿಮ್ಮ ಕಾಣಿಕೆ ಅಂತ ಕೊಡಿ'' ಎಂದು ಪೀಠಿಕೆ ಹಾಕಿದ. ಹಲವು ಲಕ್ಷ ಇಟ್ಟು ಬಂದ. ಆಮೇಲಾಮೇಲೆ ಈ ಕಾಣಿಕೆ ವ್ಯವಹಾರ ಎಲ್ಲಿಯವರೆಗೆ ಬೆಳೆಯಿತು ಎಂದರೆ ''ನೋಡಿ, ನಾನು ಒಂದು ಟೂರ್ ಹೋಗ ಬೇಕು ಅಂತಿದೀನಿ. ಅದರ ಖರ್ಚು ನೀವು ನೋಡಿಕೋಬೇಕು'' ಎಂದು ಪುಢಾರಿ ಅಪ್ಪಣೆ ಕೊಡಿಸುವ ಮಟ್ಟಕ್ಕೆ ಹೋಯಿತು. ಇದೊಂದು ಸಾಲದು ಎಂಬಂತೆ, ಪುಢಾರಿಯ ಪರವಾದ ಮರಿ, ಕಿರಿ ಪುಢಾರಿಗಳೂ ವಸೂಲಿಗೆ ನಿಂತರು.

ಪಾರ್ಟಿ ಫಂಕ್ಷನ್ನು, ನ್ಯಾಷನಲ್ ಲೀಡರ್ ಬರ್‍ತಾ ಇದಾರೆ, ಇಂಥವರಿಗೆ ಸನ್ಮಾನ ಮಾಡಬೇಕು ಎಂಬ ನೆವಗಳಿಂದ ಹಿಡಿದು ಮಗಳ ಮದುವೆ, ದುಡ್ಡು ಸಾಲದೆ ಬಂದಿದೆ ಎಂಬಲ್ಲಿನವರೆಗೆ ನೆವಗಳನ್ನು ಮುಂದೆ ಮಾಡಿ ಇವನಿಂದ ದುಡ್ಡು ಸುಲಿದರು. ಕೊಟ್ಟೂ ಕೊಟ್ಟೂ ಇವನೂ ಸುಸ್ತಾದ. ಪ್ರತಿಸಲ ಇವನು ಕಾಣಿಕೆ ಒಪ್ಪಿಸುವಾಗ 'ಆ ಕೇಸು ಒಂದು ತೆಗೆಸಿ ಹಾಕಿಬಿಡಿ ಸಾರ್' ಎಂದು ಗೋಗರೆಯುತ್ತಿದ್ದ. 'ಆಗಲಿ, ಆಗಲಿ' ಎಂಬ ಆಶ್ವಾಸನೆ ಬರುತ್ತಿತ್ತು. ಆದರೆ ಪುಢಾರಿಗೆ ಗೊತ್ತಿಲ್ಲವೇ! ಕೇಸು ತೆಗಿಸಿ ಹಾಕಿದರೆ ಹಿಂಡುವ ಆಕಳೆ 'ಕಣ್ಣುಬಿಚ್ಚಿಕೊಂಡು ಓಡಿ ಹೋರಿ ಆಗುತ್ತದೆ' ಎಂದು.

ಈ ನಡುವೆ ನಮ್ಮ ಮಹಾನ್ ವ್ಯಕ್ತಿಗೆ ಒಂದು ಜ್ಞಾನೋದಯ ಆಯಿತು. ಈ ರಾಜಕಾರಣಿಗಳ ಕಾಲು ಹಿಡಿದು ಕೊಸರುವುದಕ್ಕಿಂತ, , ತಾನೇ ರಾಜಕಾರಣಿ ಆದರೆ ಅದರ ಖದರೇ ಬೇರೆ... ಮುಂದೆ ಇವರ್‍ಯಾರಿಗೂ ಕೇರ್ ಮಾಡದಂತೆ ಬದುಕಬಹುದು.

ಕಳೆದ ಚುನಾವಣೇಲಿ ಒಳ್ಳೇ ಅವಕಾಶ. ಪುಢಾರಿ ಬಳಿಗೆ ಹೋಗಿ ಟಿಕೆಟ್ ಬೇಡಿದ. 'ಅಸ್ತು' ಅಂದ ಪುಢಾರಿ. ಅಷ್ಟರಲ್ಲಿ ಪುಢಾರಿಯ ಪಕ್ಷ ಇನ್ನೊಂದು ಪಕ್ಷದೊಡನೆ ಸ್ನೇಹ ಬೆಳೆಸಿತು. ಆ ಇನ್ನೊಂದು ಪಕ್ಷದ ಹಿರಿಯ ಹುದ್ದರಿಗೇ ಇಂಥ ಕಡೆ ಸ್ಪರ್ಧೆಗೆ ಅವಕಾಶ ಮಾಡಿಕೊಡಬೇಕು ಎಂಬ ಒಪ್ಪಂದ ಆಯಿತು. ಅದು ನಮ್ಮ ವ್ಯಕ್ತಿ ಆಗಲೇ ಪುಢಾರಿಯ ಪಕ್ಷದಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದ ಕ್ಷೇತ್ರ. ಹಿರಿಯ ಹುದ್ದರಿ ಅಲ್ಲಿಂದಲೇ ನಿಲ್ಲಬೇಕು ಎಂದಾದಾಗ ಫಜೀತಿಗೆ ಇಟ್ಟುಕೊಂಡಿತು. ಪುಢಾರಿ ಹೇಳಿದ 'ನಮ್ಮ ಪಕ್ಷದ ಅಧಿಕೃತ ಅಭ್ಯರ್ಥಿ ಅಂತ ಮಾಡೋದು ಕಷ್ಟ. ಈಗೇನಾಯಿತು? ನೀನು ಹ್ಯಾಗೂ ನಿಂತಿದೀಯ. ಸ್ವಲ್ಪ ಗಟ್ಟಿಯಾಗಿ ಕಾಲೂರಿ ನಿಂತುಬಿಡು. ನನ್ನ ಪಾರ್ಟಿಯವರು ನಿನಗೇ ಕೆಲಸ

ಮಾಡ್ತಾರೆ. ನಾನೇ ಅವರಿಗೆಲ್ಲ ಹೇಳ್ತೀನಿ'.

ಆಯಿತು. ಪುಢಾರಿಯ ಪಕ್ಷ ಇವನನ್ನು ಸ್ಪರ್ಧೆಯಿಂದ ನಿವೃತ್ತರಾಗಲು ತಿಳಿಸಿತು. ಇವನು ಮಾತು ಕೇಳದೇ ಸೆಟೆದು ನಿಂತ. ಹಿರಿಯ ಹುದ್ದರಿ ಸ್ಪರ್ಧಿಸಿದ. ಹೇಗೂ ತಾನು ಹಿರಿಯ ಹುದ್ದರಿ. ಇವನೋ ಬಚ್ಚಾ. ಇವನೇನು ಮಾಡಬಹುದು? ಎಂಬ ಉಡಾಫೆ.

ಸ್ವಲ್ಪ ದಿನಕ್ಕೆ ಹಿರಿಯ ಹುದ್ದರಿಗೆ ಎಡವಟ್ಟಾಗಿದೆ ಎಂಬುದು ತಿಳಿಯಿತು. ಮಿತ್ರ ಪಕ್ಷದ ಪುಢಾರಿ ಮೇಲು ಮೇಲೆ ತನ್ನ ಪರ ಅಂತ ತೋರಿಸಿಕೊಂಡರೂ ಒಳಗೊಳಗೇ ತನ್ನ ಎದುರಾಳಿಗೇ ಸಪೋರ್ಟು ಎಂಬುದು ಗೊತ್ತಾಯಿತು. ಆದರೆ ಅಷ್ಟರಲ್ಲಿ ಕಾಲ ಮಿಂಚಿತ್ತು. ಹಿರಿಯ ಹುದ್ದರಿಯ ಮಕ್ಕಳು, ಮರಿ ಸೇರಿಕೊಂಡು ಜನಕ್ಕೆ ಸೈಕಲ್ ಕೊಟ್ಟರು. ಇವನು ಹೀರೋ ಹೋಂಡಾ ಕೊಡಿಸಿದ. ಹೀಗೆ ಚುನಾವಣೆ ಕಾವೇರಿತು.

ಫಲಿತಾಂಶ ಬಂದಾಗ ಪುಢಾರಿಯೂ ಸೋತಿದ್ದ, ಹಿರಿಯ ಹುದ್ದರಿಯೂ ಸೋತಿದ್ದರು. ನಮ್ಮ ವ್ಯಕ್ತಿ ಗೆದ್ದಿದ್ದ. ಹಾಗೆ ನೋಡಿದರೆ ಅವನು ಪುಢಾರಿಯ ಪಾರ್ಟಿಯವನು. ಆದರೆ ಆ ಪಕ್ಷ ಟಿಕೆಟ್ ನೀಡಿರಲಿಲ್ಲ. ಹೀಗಾಗಿ ಸ್ವತಂತ್ರ. ಪುಢಾರಿಯ ಪಕ್ಷವಾಗಲೀ, ಹಿರಿಯ ಹುದ್ದರಿಯ ಪಕ್ಷವಾಗಲೀ ಅಧಿಕಾರಕ್ಕೆ ಬರಲಿಲ್ಲ. ಆ ಪಕ್ಷಗಳಿಂದ ಅನುಕೂಲವೂ ಇರಲಿಲ್ಲ.

ಆಡಳಿತಕ್ಕೆ ಬಂದಿದ್ದು ಕಾಂಗ್ರೆಸ್ಸು. ಆ ಪಕ್ಷ ಸೇರಿಕೊಂಡರೆ ಲಾಭ. ಮುಖ್ಯ, ತಾನು ಇಷ್ಟೆಲ್ಲ ಖರ್ಚು ಮಾಡಲು, ರಾಜಕೀಯಕ್ಕೆ ಬಂದು ಶಾಸಕನಾಗಲು ಕಾರಣವಾದ ಗಾಂಜಾ ಕೇಸು ಹಾಗೆಯೇ ಉಳಿದಿತ್ತು. ಅದೊಂದು ತೆಗೆಸಿ ಹಾಕಿಕೊಂಡರೆ ಮುಗಿಯಿತು. ಎಲ್ಲ ಸರಿ ಆಗುತ್ತದೆ ಅನ್ನಿಸಿತು. ಅದಕ್ಕೆ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ಸೇ ಸರಿ ಎಂದು ನಿರ್ಧರಿಸಿದ. ದೆಹಲಿಗೆ ಹೋಗಿ, ಹತ್ತು ಜನ ಇತರರ ಜೊತೆ ಇವನೂ ಪಾರ್ಟಿ ಸೇರಿದ.


ವಿಚಿತ್ರ ಏನು ಗೊತ್ತೇ! ಗಾಂಜಾ ಕೇಸು ಇನ್ನೂ ಹಾಗೇ ಇದೆ. ಇದುವರೆಗೂ 'ಬಿ' ರಿಪೋರ್ಟು ಹಾಕಿಲ್ಲ.

ಇಲ್ಲಿ ಬರುವ ವ್ಯಕ್ತಿ ಯಾರೆಂಬುದು ರಾಜಕೀಯದ ಚಕ್ರ ಸುಳಿಯ ಅರಿವಿರುವ ಜನಕ್ಕೆ ಚೆನ್ನಾಗಿ ತಿಳಿಯುತ್ತದೆ. ಅಷ್ಟು ರಾಜಕೀಯ ಒಳಸುಳಿಗಳನ್ನು ಅರಿಯದೇ ಇದ್ದವರು ಕೊಂಚ ಯೋಚಿಸಿದರೆ ಈತ ಯಾರು ಎಂಬುದು ತಿಳಿಯುತ್ತದೆ. ಆದ್ದರಿಂದ ಇಲ್ಲಿ ನಾನು ಹೆಸರು ಹೇಳಲು ಹೋಗುವುದಿಲ್ಲ. ಮುಖ್ಯ, ಒಂದು ಪಕ್ಷಾಂತರದ ಹಿಂದೆ ಏನೇನೆಲ್ಲಾ ಕತೆಗಳಿರುತ್ತವೆ ಎನ್ನುವುದಕ್ಕೆ ಇದೊಂದು ಸಣ್ಣ ಸ್ಯಾಂಪಲ್ ಅಷ್ಟೇ.

ನಿಮಗೆಲ್ಲಾ ಚೆನ್ನಾಗಿ ಗೊತ್ತಿರುವ ಇನ್ನೊಬ್ಬ ಪಕ್ಷಾಂತರಿ ಮಾಲೀಕಯ್ಯ ಗುತ್ತೇದಾರ್ ಅಥವಾ ಸಿ.ಎಂ. ಇಬ್ರಾಹಿಂ ಕೆ.ಎನ್.ನಾಗೇಗೌಡ. ಹೀಗೆ ಯಾರೂ ಆಗಬಹುದು.

ಬಹಳಷ್ಟು ಜನ ಅಧಿಕಾರಕ್ಕಾಗಿ ಪಕ್ಷಾಂತರ ಮಾಡುತ್ತಾರೆ ಎಂಬ ಅಭಿಪ್ರಾಯ ಇದೆ. ಮೇಲುನೋಟಕ್ಕೆ ಇದು ಸರಿ. ಆದರೆ ಅಧಿಕಾರಕ್ಕೆ ಬರಲೇ ಬೇಕಾದ ತುರ್ತುಗಳೂ ಅವರಿಗೆ ಇರುತ್ತವೆ. ಮಾಲೀಕಯ್ಯ ಎಷ್ಟು ಸಭ್ಯ ಎಂಬುದು ನಿಮಗೇ ಗೊತ್ತಿದೆ. ಅವನು ಅಧಿಕಾರದಲ್ಲಿ ಇರಲು ಸಾಧ್ಯ ಆಗದೇ ಹೋದ ದಿನ ಜೈಲು ಕಂಬಿಯ ಹಿಂದೆ ಇರಬೇಕಾಗುತ್ತದೆ. ಇದು ನಮ್ಮೆಲ್ಲರಿಗಿಂತ

ಎಲ್ಲಿ ಹೋಯಿತು ಜನತಾ ಪಕ್ಷ?




1977ರಲ್ಲಿ ಅಸ್ತಿತ್ವಕ್ಕೆ ಬಂದ ಜನತಾ ಪಕ್ಷ ಈಗ ಏನಾಗಿದೆ ಎಂದು ಹೇಳುವುದು ಕಷ್ಟ, ಜನತಾ ಪಕ್ಷವನ್ನು ಆ ನಂತರ ಜನತಾ ದಳ ಎಂದು ಪರಿವರ್ತಿಸಲಾಯಿತು. ಆದರೂ ಸುಬ್ರಹ್ಮಣ್ಯ ಸ್ವಾಮಿ ತಮ್ಮದೇ ಮೂಲ ಜನತಾ ಪಕ್ಷ ಎಂದು ಈಗಲೂ ಆ ಪಕ್ಷವನ್ನು ಒಂಟಿಯಾಗಿ ನಿರ್ವಹಿಸುತ್ತಿದ್ದಾರೆ.

ದಕ್ಷಿಣದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರಗಳಲ್ಲಿ ಕೊಂಚ ಅಸ್ತಿತ್ವ ಪಡೆದಿದ್ದ ಜನತಾದಳ ಈಗ ಮತ್ತೆ ಹೋಳಾಗಿದೆ. ಜಾತ್ಯತೀತ ಜನತಾದಳ ಹಾಗೂ ಸಂಯುಕ್ತ ಜನತಾದಳ ಅಸ್ತಿತ್ವಕ್ಕೆ ಬಂದಿವೆ.

ಉತ್ತರದಲ್ಲಿ ಜನತಾದಳದಲ್ಲಿದ್ದವರು ಒಬ್ಬೊಬ್ಬರು ಒಂದೊಂದು ಪಕ್ಷ ಕಟ್ಟಿಕೊಂಡಿದ್ದಾರೆ. ಚಂದ್ರಶೇಖರ್ ಯಾವ ಪಕ್ಷದವರೆಂದು ಈಗಲೂ ಸರಿಯಾಗಿ ಹೇಳಲು ಬರುವಂತಿಲ್ಲ. ದೇವಿಲಾಲರದು ಒಂದು ಕಥೆಯಾದರೆ ಅವರ ಮಗ ಚೌತಾಲಾದು ಇನ್ನೊಂದು ಕಥೆ. ಬಿಹಾರದಲ್ಲೇ ಜನತಾದಳ ಮೂರು ಹೋಳಾಗಿದೆ. ಲಾಲೂ ನೇತೃತ್ವದ ರಾಷ್ಟ್ರೀಯ ಜನತಾದಳ, ಶರದ್‌ಯಾದವ್ ನೇತೃತ್ವದ ಸಂಯುಕ್ತ ಜನತಾದಳ ಅಲ್ಲದೇ ಜಾರ್ಜ್‌ಫರ್ನಾಂಡಿಸ್ ಅವರ ಸಮತಾಪಕ್ಷ ಕೂಡ ಸಾಕಷ್ಟು ಜನಪ್ರಿಯವಾಗಿದೆ.

1977ರಲ್ಲಿ ಜನತಾಪಕ್ಷದ ಅಂಗವಾಗಿದ್ದ ಜನಸಂಘ ಆನಂತರ ಸಿಡಿದು ಭಾರತೀಯ ಜನತಾಪಕ್ಷವಾಗಿದೆ. ಅದೇ ಈಗ ಕೇಂದ್ರದಲ್ಲಿ ಹಲವು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದೆ. ಇನ್ನೂ ಸಣ್ಣ ಪುಟ್ಟ ಪಕ್ಷಗಳ ಕತೆ ಹೇಳುವಂತೆಯೇ ಇಲ್ಲ. ಒಂದು ಪಕ್ಷದಲ್ಲಿ ಈದಿನ ಇದ್ದವರು ನಾಳೆ ಇನ್ನೊಂದು ಪಕ್ಷಕ್ಕೆ ಜಿಗಿದಿರುತ್ತಾರೆ. ನಾಳಿದ್ದು ಮತ್ತೊಂದು ಪಕ್ಷದ ಸದಸ್ಯರಾದರೆ ಆಶ್ಚರ್ಯವೇನಿಲ್ಲ. ■

ಅತಿ ಹೆಚ್ಚು ಪಕ್ಷ ಕಟ್ಟಿದವರು



ಮೂಲತಃ ಸಮಾಜವಾದಿಯಾಗಿದ್ದ ಬಂಗಾರಪ್ಪ ಕಟ್ಟಿದಷ್ಟು ಪಕ್ಷಗಳನ್ನು ರಾಜ್ಯದಲ್ಲಿ ಬೇರೆ ಯಾರೂ ಕಟ್ಟಿರಲಿಕ್ಕಿಲ್ಲ. ಸಮಾಜವಾದಿ ಪಕ್ಷದಿಂದ ಹೊರಬಂದು ತಮ್ಮದೇ ಮತ್ತೊಂದು ಪಕ್ಷ ಕಟ್ಟಿದರಾದರೂ ಅದು ಊರ್ಜಿತವಾಗಲಿಲ್ಲ. ಕೊನೆಗೆ ಕಾಂಗ್ರೆಸ್ ಸೇರಿದ ಬಂಗಾರಪ್ಪ ಅವರ ಮುಂದಿನ ಗುರಿ ಮುಖ್ಯಮಂತ್ರಿಯಾಗುವುದು. ಅದು ಕೈಗೂಡದೇ ಇದ್ದಾಗ ಕಾಂಗ್ರೆಸ್ ಪಕ್ಷ ಬಿಟ್ಟು ಹೊರನಡೆದರು.

ದೇವರಾಜ ಅರಸು ಜೊತೆ ಕೈಗೂಡಿಸಿ ಕರ್ನಾಟಕ ಕ್ರಾಂತಿರಂಗ ಕಟ್ಟಿದರು. ಅರಸು ಅಕಾಲಿಕ ನಿಧನದಿಂದ ಆ ಪಕ್ಷದಲ್ಲಿ ತಾವೇ ಪ್ರಮುಖರಾದರು. 1983ರಲ್ಲಿ ಜನತಾ ಪಕ್ಷದ ಜೊತೆ ಕೈಗೂಡಿಸಿ ಚುನಾವಣೆಯಲ್ಲಿ ಗೆದ್ದರು. ಮುಂದಿನ ಮುಖ್ಯಮಂತ್ರಿ ತಾವೇ ಎಂದು ನಂಬಿಕೊಂಡರು. ಅದು ಕೈಗೂಡದೇ ಹೆಗಡೆ ಮುಖ್ಯಮಂತ್ರಿಯಾದಾಗ ಪಕ್ಷ ಬಿಟ್ಟರು. ಕಾಂಗ್ರೆಸ್ ಸೇರಿದರು. 1990ರಲ್ಲಿ ಮುಖ್ಯಮಂತ್ರಿಯೂ ಆದರು. ಅದಕ್ಕೆ ಚ್ಯುತಿ ಬಂದಾಗ ಮತ್ತೆ ಹೊರಹೋಗಿ ತಮ್ಮದೇ ಕರ್ನಾಟಕ ಕಾಂಗ್ರೆಸ್ ಕಟ್ಟಿದರು. ನರಸಿಂಹರಾವ್ ಹೋಗಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸೀತಾರಾಮ ಕೇಸರಿ ಬಂದಾಗ ತಮ್ಮ ಪಕ್ಷವನ್ನು ಕಾಂಗ್ರೆಸ್‌ನ ಜೊತೆ ಲೀನಗೊಳಿಸಿದರು. ಆದರೆ ನಿರೀಕ್ಷಿಸಿದ ಫಲ ನೀಡದ ಕಾರಣ ಕೇಸರಿಯವರನ್ನು ಎದುರು ಹಾಕಿಕೊಂಡು ಮತ್ತೆ ಪ್ರಾಂತೀಯ ಪಕ್ಷ ಕಟ್ಟಿದರು. ಚುನಾವಣೆಯಲ್ಲಿ ಸೋತರು. ಕೊನೆಗೆ ಕಾಂಗ್ರೆಸ್ ಬಿಟ್ಟವರು ಬೇರೆ ಪಕ್ಷ ಕಟ್ಟಿ ಬಾಳುವುದು ಸಾಧ್ಯವಿಲ್ಲ ಎಂಬ ಅರಿವಾಗಿ ಕಾಂಗ್ರೆಸ್ಸಿಗೆ ಮರಳಿದರು. ಈಗ ಗೆದ್ದು ಒಂಟಿಯಾಗಿದ್ದಾರೆ.

ಆತನಿಗೆ ಚೆನ್ನಾಗಿ ಗೊತ್ತಿದೆ.

ನಾವು ರಾಜಕೀಯದ ಅಪರಾಧೀಕರಣ ಎಂಬುದು ದೊಡ್ಡ ದನಿಯಲ್ಲಿ ಮಾತಾಡುತ್ತೇವೆ. ಅಪರಾಧಿಗಳು ಎನಿಸಿಕೊಂಡಾಗ ಚುನಾವಣೆಗೆ ನಿಂತು ಗೆಲ್ಲುವ ಬಗ್ಗೆ, ರಾಜಕಾರಣಿಗಳು ಅಪರಾಧಿಗಳನ್ನು ತಮ್ಮ ಹಿತಕ್ಕಾಗಿ ಬಳಸಿಕೊಳ್ಳುವ ಬಗ್ಗೆ ಆಗಾಗ ಬೊಬ್ಬೆ ಕೇಳಿ ಬರುತ್ತದೆ. ಆದರೆ ರಾಜಕಾರಣ ಮತ್ತು ಅಪರಾಧ ಇವತ್ತು ಒಂದೇ ನಾಣ್ಯದ ಎರಡು ಮುಖಗಳಂತೆ. ಇಲ್ಲಿ ನಿಷ್ಠೆ, ಪಕ್ಷ, ಆದರ್ಶ,ತತ್ವ ಎಂಬುವೆಲ್ಲ ಕೇವಲ ವೇದಿಕೆ ಮೇಲಿಂದ ಬಾಗುವ ಮಾತುಗಳು. ಆದರೆ ನಿಜದಲ್ಲಿ ಸಂಗತಿ ಬೇರೆಯೇ ಇರುತ್ತದೆ. 'ಹಾಗಿದ್ದರೆ ಮೊನ್ನೆ ಪಕ್ಷಾಂತರ ಮಾಡಿದವರೆಲ್ಲ ಪಾಪಿಷ್ಠರು. ಉಳಿದವರೆಲ್ಲಾ ಪುಣ್ಯಾತ್ಮರೋ!' ಎಂದೂ ನೀವು ಕೇಳಬಹುದು.

ಈ ಪಕ್ಷಾಂತರಗಳೆಲ್ಲ ನಡೆದಿದ್ದು ರಾಜ್ಯಸಭೆ ಚುನಾವಣೆಗೆ ಸ್ವಲ್ಪ ಮುಂಚೆ. ಕಾಂಗ್ರೆಸ್ ಗೆಲ್ಲಲು ಕಷ್ಟವೇನೂ ಇರಲಿಲ್ಲ. ಆದರೆ ಕೃಷ್ಣ ಹಣದ ಥೈಲಿ ಬಿಚ್ಚಿಯೇ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕಾಗುತ್ತಿತ್ತು. ಪಕ್ಷ ಸೋಲುಂಡರೆ ಕೃಷ್ಣರ ಅಲುಗುತ್ತಿರುವ ಕುರ್ಚಿ ಬಿದ್ದೇ ಹೋಗಿಬಿಡುತ್ತಿತ್ತು.

ಅಂಥ ಸಮಯದಲ್ಲಿ 'ನೀವು ನಮಗೊಂದಿಷ್ಟು ಹೆಲ್ಪ್ ಮಾಡಿ, ನಾವು ನಿಮಗೆ ಹೆಲ್ಪ್ ಮಾಡುತ್ತೇವೆ' ಎಂಬ ರೀತಿಯ ಸಣ್ಣ ವ್ಯಾಪಾರ ನಡೆದಿದೆ. ಕೃಷ್ಣರ ಕುರ್ಚಿ ಬೀಳುವುದು ತಪ್ಪಿದೆ. ನಾವು ನೀವಾದರೆ ಹುಂಬತನದಿಂದ ಏನೋ ತಪ್ಪು ಮಾಡಿ, ಸಿಕ್ಕಿಕೊಂಡು ಬಿಡುತ್ತೇವೆ. ಅಸಲಿಗೆ ಅದು ತಪ್ಪು ಎಂಬುದೇ ತಿಳಿದಿರುವುದಿಲ್ಲ. ಆದರೆ ಓದಿದ, ಬುದ್ಧಿವಂತ ವೈಟ್‌ಕಾಲರ್ ಕ್ರಿಮಿನಲ್‌ಗಳು ಏನೇ ಮಾಡಿದರೂ ಜಾಣತನದಿಂದ ಮಾಡುತ್ತಾರೆ. ಕಾನೂನಿನ ಚೌಕಟ್ಟಿನೊಳಗೇ ಅಲ್ಲಿರುವ ಲೋಪ ಬಳಸಿಕೊಂಡೇ ಲಾಭ ಮಾಡುತ್ತಾರೆ. ಅಂಥ ಒಂದು ವ್ಯವಹಾರ ಪಕ್ಷಾಂತರ.

ಕ್ರಿಮಿನಾಲಜಿ ವಿದ್ಯಾರ್ಥಿಗಳ ಹಾಗೆ ರಾಜಕೀಯರ ಜನ ಕೂಡ ರಾಸ್ಕೋವೆಸ್ಕಿಯ 'ಕ್ರೈಂ ಅಂಡ್ ಪನಿಷ್‌ಮೆಂಟ್' ಓದಬೇಕು. ಅಪರಾಧಕ್ಕಾಗಿ ಒಬ್ಬನನ್ನು ಕಾಡುವ ಪಾಪ ಪ್ರಜ್ಞೆಗಿಂತ ಬಹುದೊಡ್ಡ ಶಿಕ್ಷೆ ಯಾವುದೂ ಇರುವುದಿಲ್ಲ. ಹಾಗೂ ಮನುಷ್ಯರಾಗಿ ಎಲ್ಲರಿಗೂ ತಪ್ಪು ಮಾಡಿದ ಮೇಲೆ ಪಾಪ ಪ್ರಜ್ಞೆ ಕಾಡುತ್ತದೆ.

ಇನ್ನು ರಾಜಕಾರಣಿಗಳಾದ ಮನುಷ್ಯರೇ ಅಲ್ಲವಾದರೆ ಯಾರೂ ಏನೂ ಮಾಡುವಂತಿಲ್ಲ. ಏಸು ಹೇಳಿದ ಹಾಗೆ ''ದೇವರೇ ಇವರೇನು ಮಾಡುತ್ತಿದ್ದಾರೆ ಎಂದು ಅರಿಯರು. ದಯವಿಟ್ಟು ಇವರನ್ನು ಕ್ಷಮಿಸಿ'' ಎಂದು ಹೇಳಬೇಕಾಗುತ್ತದೆ. ಆದರೆ ಇಲ್ಲಿ ಏಸು ಶಿಲುಬೆಗೇರಿದ ಹಾಗೆ ಜನತಂತ್ರ ಶಿಲುಬೆ ಹತ್ತಿರುತ್ತದೆ. ಮತ್ತು ನಾವು ಜನತಂತ್ರ ಎಂದು ಕರೆಯುವುದು ಜನತಂತ್ರದ ಹೆಣ ಆಗಿರುತ್ತದೆ.

■ ರಾಜು

ಮೊದಲ ಅಡುಗೆ ಪುಸ್ತಕ

ಮೊದಲ ಅಡುಗೆ ಪುಸ್ತಕ ಕ್ರಿಸ್ತಪೂರ್ವ ನಾಲ್ಕನೇ ಶತಮಾನದಲ್ಲಿ ಸಿದ್ಧವಾಯಿತು. ಗ್ರೀಕರ ಆರ್ಕೆಸ್ಟೈಟಸ್ ಎಂಬಾತ ಇದರ ಲೇಖಕ. ಪುಸ್ತಕದ ಹೆಸರು 'ಹೆಡಿಪಥಿಯಾ'. ಅದರ ಅರ್ಥ 'ಸುಖಕರ ಜೀವನ' ಎಂದು.

ತಪ್ಪಿದ ಲೆಕ್ಕ

ಸೆನ್ಸಸ್‌ಗಾಗಿ ಬಂದ ಅಧಿಕಾರಿ 'ನಿಮ್ಮ ಕುಟುಂಬದಲ್ಲಿ ಎಷ್ಟು ಜನ ಇದ್ದೀರಿ' ಕೇಳಿದ.

'ನಾಲ್ಕು ಜನ' ಎಂದ ಮನೆಯ ಯಜಮಾನ.

'ಅಂದರೆ ನೀವು ನಿಮ್ಮ ಶ್ರೀಮತಿ ನಿಮ್ಮ ಇಬ್ಬರು ಮಕ್ಕಳು ಅಷ್ಟೆ ತಾನೆ?'

'ನೋ – ನೋ – ನೋ ನಾನು, ನನ್ನ ಮೂವರು ಪತ್ನಿಯರು'.

ಸಂಗ್ರಹ : ಶಾರದಾತನಯ

ಪರ್ಯಾಯ ಸಾಹಿತ್ಯ ಸಮ್ಮೇಳನ ಬೇಕೆ?



ಕೊನೆಗೂ ಬಾಗಲಕೋಟೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಮೇ ಕೊನೆಯಲ್ಲಿ ನಡೆಯುವ ಈ ಜಾತ್ರೆ, ಅದೇ ಮಾಮೂಲು ಮುಖ, ಮಾತುಗಳ ಪುನರಾವರ್ತನೆ. ಇದಕ್ಕಾಗಿ ಏನೆಲ್ಲ ಸರ್ಕಸ್ ಸರ್ಕಾರದೆದುರು ಸಾಹಿತ್ಯ ಪರಿಷತ್ತು ಜೋಳಿಗೆ ಒಡ್ಡಿ ನಿಲ್ಲಬೇಕಾದ ಪರಿಸ್ಥಿತಿ. ಇದೆಲ್ಲ ಮೀರಿ ಇಂಥ ಸಾಹಿತ್ಯ ಸಮ್ಮೇಳನಗಳಲ್ಲಿ ಮಹತ್ವದ್ದು ಏನಾದರೂ ನಡೆಯುತ್ತದೆಂದು ನಿರೀಕ್ಷಿಸುವುದು ತಪ್ಪೇನೋ! ಎಂಬಂಥ ಸ್ಥಿತಿ. ಈ ಕಾಲಘಟ್ಟದಲ್ಲಿ ನಿಂತು ನೋಡಿದಾಗ, ಹತ್ತು ವರ್ಷದ ಹಿಂದೆ ನಡೆದ ಪರ್ಯಾಯ ಸಾಹಿತ್ಯ ಸಮ್ಮೇಳನದ ಬುಹುದೊಡ್ಡ ಮಜಲು. ಅದು ಮುಂಧೆಯೂ ನಡೆಯಬೇಕಿತ್ತೇ?

ಇಂಥ ಹಲವು ಪ್ರಶ್ನೆಗಳನ್ನು ನಾಡಿನ ಸಾಹಿತ್ಯಾಸಕ್ತರ ಮುಂದೆ 'ಬದುಕು' ಇರಿಸಿದಾಗ ಬಂದ ಉತ್ತರಗಳು ಇಲ್ಲಿವೆ. ಪತ್ರಿಕೆಗಳು ಪ್ರಮುಖ ವಿಷಯಗಳನ್ನಾಧರಿಸಿ ಪ್ರಶ್ನೆಗಳನ್ನು ನಾಡಿನ ಹೆಸರಾಂತ ವ್ಯಕ್ತಿಗಳ ಮುಂದಿರಿಸಿ ಉತ್ತರ ಬಯಸಿತು. ಅವರಿಂದ ಬಂದ ಉತ್ತರಗಳನ್ನು ನಮ್ಮ ಓದುಗರ ಮುಂದಿರಿಸುತ್ತಾ ಇದ್ದೇವೆ.

ಮಂಡಿಸಲಾಗಿದ್ದ ಪ್ರಶ್ನೆಗಳು

- 'ಸಾಹಿತ್ಯದಲ್ಲಿ ಶ್ರೇಷ್ಠತೆ' ಮುಖ್ಯ ಎಂಬ ಘೋಷಣೆಯೊಂದಿಗ 1989ರಲ್ಲಿ ಬೆಂಗಳೂರಲ್ಲಿ ಪ್ರಾರಂಭವಾದ ಪರ್ಯಾಯ ಸಾಹಿತ್ಯ ಸಮ್ಮೇಳ ಆರಂಭದೊಂದಿಗೇ ಅಂತ್ಯಗೊಂಡಿತು. ಏಕೆ?
- ಹಣದ, ಪ್ರಾಯೋಜಕರ ಕೊರತೆಯೇ ಇದಕ್ಕೆ ಕಾರಣ ಎನಿಸುತ್ತಿದೆಯೇ?
- ಇಂಥದೊಂದು ಸಮ್ಮೇಳನ ಅಗತ್ಯವೇ? ಏಕೆ?
- ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಆರ್.ಸಿ. ಹಿರೇಮಠರನ್ನು ಅಧ್ಯಕ್ಷರಾಗಿ ಆರಿಸಲಾಯಿತೆಂಬ ಕಾರಣಕ್ಕೆ 'ಪರ್ಯಾಯ'ದ ದಂಗೆ ಪ್ರೇರಣೆ ಪಡೆಯಿತು. ಅನಂತರ ಅಂಥ ಪ್ರತಿಕ್ರಿಯೆ ಕಾಣದಿರಲು ಇತ್ತೀಚೆಗೆ ನಡೆದ ಕನಕಪುರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಎಸ್.ಎಲ್.ಭೈರಪ್ಪ ಆಯ್ಕೆಯೂ ಸೇರಿದಂತೆ, ಎಲ್ಲ ಸಮ್ಮೇಳನಾಧ್ಯಕ್ಷರ ಆಯ್ಕೆ ಸರಿಯಿತ್ತು ಎಂದೇ?
- 'ಸಾಹಿತ್ಯದಲ್ಲಿ ಶ್ರೇಷ್ಠತೆ' ಈಗಾಗಲೇ ಬಂದು ಬಿಟ್ಟಿದೆಯೇ? ಅಥವಾ ಅದರ ಅಗತ್ಯ ಈಗಿಲ್ಲವೇ?
- ಪರ್ಯಾಯ ಸಮ್ಮೇಳನ ನಡೆದಿದ್ದೇ ತಪ್ಪು ಎನ್ನುವಿರಾ?
- ಈ ಹೊತ್ತು ಮತ್ತೆ ಪರ್ಯಾಯ ಸಮ್ಮೇಳನ ಆರಂಭಗೊಂಡರೆ ಅದರ ಸ್ವರೂಪ ಹೇಗಿರಬೇಕು? ಯಾರು ಸಂಘಟಿಸಬೇಕು?

ತಾತ್ಕಾಲಿಕ ಜಾಗೃತಿ ಮುಖ್ಯವಾದಾಗ ಆರಂಭವೇ ಅಂತ್ಯ



1. 'ಸಾಹಿತ್ಯದಲ್ಲಿ ಶ್ರೇಷ್ಠತೆ' ಯನ್ನು ಪ್ರತಿಪಾದಿಸಿದ ಆ ಸಮ್ಮೇಳನವು ಒಂದು ನಿರಂತರ ಪ್ರಕ್ರಿಯೆಯಾಗುವ ಆಶಯವನ್ನು ಹೊಂದಿರಲಿಲ್ಲವೆಂದು ಊಹಿಸಬಹುದಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠತೆಯ ಕಲ್ಪನೆ ತಳ ಸೇರುತ್ತಿದೆಯೆಂಬ ಭಾವನೆಯಲ್ಲಿ ಆ ಸಮ್ಮೇಳನ ಸಂಘಟಿತವಾದಂತೆ ಕಾಣುತ್ತದೆ. ತಾತ್ಕಾಲಿಕ ಜಾಗೃತಿಯಷ್ಟೇ ಮುಖ್ಯವಾದಾಗ ಆರಂಭವೇ ಅಂತ್ಯವಾಗುವುದು ಸಹಜ. ಸಂಘಟಕರ ಕಾಳಜಿಯ ಬಗ್ಗೆ ಗೌರವ ತೋರುತ್ತಲೇ ಆ ಸಮ್ಮೇಳನಕ್ಕೆ ನಿರಂತರ ಪ್ರಕ್ರಿಯೆಯ ಹಂಬಲ ಹಾಗೂ ಸಂಕಲ್ಪಗಳು ಸೇರಲಿಲ್ಲ ಎಂದು ಹೇಳ ಬಯಸುತ್ತೇನೆ. ಜೊತೆಗೆ 'ಶ್ರೇಷ್ಠತೆ' ಯ ಪ್ರತಿಪಾದನೆಗಾಗಿಯೇ ಒಂದು ಸಮ್ಮೇಳನ ಬೇಕೆ ಎಂಬ ಪ್ರಶ್ನೆಯೂ ಇದೆ. ಈ ಪ್ರಶ್ನೆಗೆ ಸಂಬಂಧಪಟ್ಟವರಿಗೆ ಕೂಡಲೇ ಉತ್ತರ ಸಿಕ್ಕಿರಬೇಕು.

2. ಹಣದ, ಪ್ರಾಯೋಜಕರ ಕೊರತೆ ಎಂದು ನನಗೆ ಅನ್ನಿಸುವುದಿಲ್ಲ. ಸೀಮಿತ ಉದ್ದೇಶಗಳು ಯಾವಾಗಲೂ ತಾತ್ಕಾಲಿಕ ಹಾಗೂ ತಾಕ್ಷಣಿಕ ಪ್ರತಿಕ್ರಿಯೆಯಾಗಿ ಕೊನೆಗೊಳ್ಳುತ್ತವೆ; ಅಷ್ಟೆ.

3. ಒಂದು ನಿರ್ದಿಷ್ಟ ಮೌಲ್ಯ ಪ್ರತಿಪಾದನೆಗಾಗಿ ಸಮ್ಮೇಳನವನ್ನು ವ್ಯವಸ್ಥೆಗೊಳಿಸುವುದು ತಪ್ಪೇನೂ ಅಲ್ಲ. ಆದರೆ ಅದು ವೈಯಕ್ತಿಕ ನೆಲೆಯ ಪ್ರತಿಕ್ರಿಯೆಗಳ ಸಮೂಹವಾಗುವ ಬದಲು ದೂರಗಾಮಿ ಸಂಘಟಿತ ಶಕ್ತಿಯಾದಾಗ ಸಾರ್ಥಕವಾಗುತ್ತದೆ.

4. ಹಾಗೇನೂ ಅಲ್ಲ. ಕೆಲವೊಮ್ಮೆ ನಿರ್ದಿಷ್ಟ ಸನ್ನಿವೇಶವೂ ತೀವ್ರ ಪ್ರೇರಣೆಯನ್ನು ಒದಗಿಸುತ್ತದೆ; ತೀವ್ರ ಪ್ರತಿಕ್ರಿಯೆಯಾಗಿ ಹೊರ ಹೊಮ್ಮುತ್ತದೆ. ಇಂಥ ಪ್ರತಿಕ್ರಿಯೆಗಳ ಪ್ರಭಾವಕ್ಕೆ ಒಳಗಾಗುವಷ್ಟು ಜಡತೆ ಆವರಿಸಿದ್ದಾಗ ಏನಾದರೂ ಆಗಲಿ ಎಂಬ ನಿರಾಸಕ್ತಿ, ವಿಷಾದ ಬೆಳೆಯುತ್ತದೆ. ಈಗ ಸಮ್ಮೇಳನಾಧ್ಯಕ್ಷರ ಆಯ್ಕೆಯ ಬಗೆಗಿನ ಗಂಭೀರ ಚರ್ಚೆ ಅಪ್ರಸ್ತುತವಾಗುತ್ತಿದೆಯೆಂಬ ಭಾವನೆಯೂ ಬಲವಾಗುತ್ತಿದೆ.

5. 'ಸಾಹಿತ್ಯದಲ್ಲಿ ಶ್ರೇಷ್ಠತೆ' ಇದ್ದಕ್ಕಿದ್ದಂತೆ ಬಂದು ಬಿಡಲು ಹೇಗೆ ಸಾಧ್ಯ? ನಮ್ಮ ಸಾಹಿತ್ಯದಲ್ಲಿ 'ಶ್ರೇಷ್ಠ' ಎನ್ನಿಸುವ ಕೃತಿಗಳೂ ಬಂದಿವೆ; ಶ್ರೇಷ್ಠ ಎನಿಸುವ ಸನ್ನಿವೇಶಗಳೂ ಸೃಷ್ಟಿಯಾಗಿವೆ. ಶ್ರೇಷ್ಠತೆ ಒಂದು ಶೋಧವಾಗಬೇಕೇ ಹೊರತು ಸಾಹಿತ್ಯದ ಸುಪ್ರೀಂಕೋರ್ಟ್ ಆಗಬಾರದು. ಅದೊಂದು ಆಶಯವಾಗಿಯಷ್ಟೇ ಕೆಲಸ ಮಾಡಿದರೆ ಸಾಹಿತ್ಯಕ್ಕೂ ಆರೋಗ್ಯ; ನಮಗೂ ಆರೋಗ್ಯ.


6. ತಪ್ಪು ಎಂದೇಕೆ ಕರೆಯಲಿ? ದೂರಗಾಮಿ ಫಲಶ್ರುತಿ ಇಲ್ಲ ಎನ್ನುತ್ತೇನೆ.

7. ಇಂಥ ಭವಿಷ್ಯ ನುಡಿಯುವುದರಲ್ಲಿ ನನಗೆ ಆಸಕ್ತಿಯಿಲ್ಲ. 'ಪರ್ಯಾಯ' ಯಾರು ಯಾರಿಗೆ 'ಪ್ರೇರಣೆ' ನೀಡುತ್ತದೆಯೊ ಯಾರು ಹೇಳಬಲ್ಲರು? ಬಹುಶಃ ಈಗ ಯಾರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲಾ ಅನ್ನಿಸುತ್ತೆ. ನನಗಂತೂ ಸಾಮಾಜಿಕ ಕಾಳಜಿಯ ಸಾಹಿತ್ಯದಲ್ಲಿ ನಿರಂತರ ನಂಬಿಕೆ.

■ ಬರಗೂರು ರಾಮಚಂದ್ರಪ್ಪ

ಸಂವಾದಕ್ಕೆ ಆಹ್ವಾನಿಸಲಾಗಿದ್ದ ವ್ಯಕ್ತಿಗಳು

- ಪಿ. ಲಂಕೇಶ್
- ಬಿ.ಸಿ. ರಾಮಚಂದ್ರಶರ್ಮ
- ಸಿದ್ಧಲಿಂಗ ಪಟ್ಟಣಶೆಟ್ಟಿ
- ಪೂರ್ಣಚಂದ್ರ ತೇಜಸ್ವಿ
- ಆರ್ಯ
- ಬರಗೂರು ರಾಮಚಂದ್ರಪ್ಪ
- ಕೆ.ವಿ. ಸುಬ್ಬಣ್ಣ
- ಯಶವಂತ ಚಿತ್ತಾಲ
- ಯು.ಆರ್. ಅನಂತಮೂರ್ತಿ
- ಕೆ.ವಿ. ತಿರುಮಲೇಶ್
- ಚ. ಸರ್ವಮಂಗಳ
- ಶೂದ್ರ ಶ್ರೀನಿವಾಸ್
- ಕಿ.ರಂ. ನಾಗರಾಜ್
- ಪ್ರತಿಭಾ ನಂದಕುಮಾರ್
- ಕುಂ. ವೀರಭದ್ರಪ್ಪ
- ಎಲ್.ಹನುಮಂತಯ್ಯ
- ಹರಿಕೃಷ್ಣ ಪುನರೂರು
- ಎಲ್.ಎಸ್. ಶೇಷಗಿರಿರಾವ್



ಪ್ರಿಯ ದೇಶಿಕರ್,
ಯಾವುದೇ
ಸಾಹಿತ್ಯ
ಸಮ್ಮೇಳನಗಳ
ಬಗ್ಗೆ ನನಗೆ
ಆಸಕ್ತಿ ಇಲ್ಲ.
ಆದ್ದರಿಂದ
ನೋ
ಕಾಮೆಂಟ್ಸ್.

ನಿಮ್ಮ
ಕುಂವೀ

ಮಾಸ್ತರೆ,

ನಿಮ್ಮ ಪತ್ರಕರ್ತ ತಲುಪಿತು. ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲು ನಾನು ತಕ್ಕ ವ್ಯಕ್ತಿಯಲ್ಲ. ಯಾಕೆಂದರೆ ಸಾಹಿತ್ಯ ಪರಿಷತ್ತಿನ ವ್ಯವಹಾರಗಳ ಬಗ್ಗೆಯಾಗಲೀ, ಅದಕ್ಕೆ ಸಂಬಂಧಿಸಿದ ವಿವಾದಗಳ ಬಗ್ಗೆಯಾಗಲೀ ನಾನು ಆಸಕ್ತಿ ವಹಿಸಿದವನೇ ಅಲ್ಲ. ಆದ್ದರಿಂದ ನಿಮ್ಮ ಪ್ರಶ್ನೆಗಳಿಗೆ ನಾನು ಉತ್ತರಿಸಲಾರೆ.

ನಿಮ್ಮ
ಜಿ. ರಾಜಶೇಖರ

ಪುಢಾರಿಗಳು ಸೃಷ್ಟಿಸಿದ ಸಾಂಸ್ಕೃತಿಕ ಸನ್ನಿ

■ ಕೆ. ರಾಮದಾಸ್

★ ಪ್ರಶ್ನೆ: 1 'ಸಾಹಿತ್ಯದಲ್ಲಿ ಶ್ರೇಷ್ಠತೆ ಮುಖ್ಯ' ಎನ್ನುವುದರಲ್ಲಿ ಎರಡನೇ ಮಾತಿಲ್ಲ. 1989ರಲ್ಲಿ ಬೆಂಗಳೂರಿನಲ್ಲಿ ನಡೆದ ಜಾಗೃತ ಸಾಹಿತ್ಯ ಸಮ್ಮೇಳನ, ಪರ್ಯಾಯ ಸಾಹಿತ್ಯ ಸಮ್ಮೇಳನವಲ್ಲ. ಅದೊಂದು ಆಗಿನ ಸಾಹಿತ್ಯದ ವಿದ್ಯಮಾನಗಳ ಆ ಕ್ಷಣದ ಪ್ರತಿಕ್ರಿಯೆ ಅಥವಾ ಪ್ರತಿಭಟನೆ. ಅದಕ್ಕೆ ಸ್ಥಿರವಾಗಿ ನಿಲ್ಲುವ ಪರಿಕಲ್ಪನೆಯೇ ಇರಲಿಲ್ಲ.

★ ಪ್ರಶ್ನೆ2 : ಹಣದ ಕೊರತೆ ಕಾರಣವಲ್ಲ. ಸಾಹಿತಿಗಳ ಸಮ್ಮೇಳನ ಮಾಡುವುದಕ್ಕೆ ಪ್ರಾಯೋಜಕರ ಅಗತ್ಯವಿಲ್ಲ. ಪ್ರಾಮಾಣಿಕವಾದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾಳಜಿಯ ಸರಳವಾದ ಸಮ್ಮೇಳನ ಮಾಡಲು ಹೆಚ್ಚು ಹಣದ ಅಗತ್ಯವಿಲ್ಲ. ಸಾಹಿತಿಗಳೆಲ್ಲ ಮನಸ್ಸು ಮಾಡಿದರೆ ಸಾಹಿತ್ಯಾಸಕ್ತರಿಂದ ಇದರ ಸಂಪನ್ಮೂಲವನ್ನು ಸಂಗ್ರಹಿಸಬಹುದು.

★ ಪ್ರಶ್ನೆ 3: ಪ್ರತಿ ವರ್ಷ ಇಂಥ ಸಮ್ಮೇಳನಗಳನ್ನು ಮಾಡುವ ಅಗತ್ಯವಿಲ್ಲ. 5 ವರ್ಷಗಳಿಗೊಮ್ಮೆ ಸಾಹಿತಿಗಳೇ ಸೇರಿ ಇಂಥದೊಂದು ಸಮ್ಮೇಳನ ಮಾಡಬಹುದು. ಅದಕ್ಕೊಂದು ಸಾಹಿತ್ಯ ಪ್ರತಿಷ್ಠಾನ ರೂಪಿಸಬೇಕಾಗುತ್ತದೆ.

ಇಂಥ ಸಮ್ಮೇಳನ ನಡೆಸುವುದರಿಂದ ಸಾಹಿತ್ಯ ಮತ್ತು ಸಂಸ್ಕೃತಿಯ ಗಂಭೀರ ಸಂವಾದಕ್ಕೆ ಅವಕಾಶವಾಗುತ್ತದೆ. ಸೃಜನಶೀಲತೆಗೊಂದು ಪರಿಸರ ಮತ್ತು ಪ್ರಚೋದನೆ ನಿರ್ಮಾಣವಾಗುತ್ತದೆ. ಕನ್ನಡ ಭಾಷೆ-ಸಂಸ್ಕೃತಿ ಮತ್ತು ನಾಡಿನ ಅಭಿವೃದ್ಧಿಯ ಗಂಭೀರವಾದ ಜನಪರ ಕಾಳಜಿಗಳನ್ನು ಈ ವೇದಿಕೆಯಲ್ಲಿ ಪರಿಶೀಲಿಸಲು ಅವಕಾಶವಾಗುತ್ತದೆ.

ಸಾಹಿತಿಗಳು ಸ್ವತಂತ್ರವಾಗಿ ನಡೆಸುವ ಇಂಥ ಸಮ್ಮೇಳನಗಳಲ್ಲಿ ಸರ್ಕಾರದ ಅಥವಾ ಮಠ-ಮಾನ್ಯಗಳ ಮರ್ಜಿ ಅನುಸರಿಸದೆ ಮುಕ್ತವಾಗಿ ಚರ್ಚಿಸಲು ಅವಕಾಶವಾಗುತ್ತದೆ.

★ ಪ್ರಶ್ನೆ 4 : ಸಾಹಿತ್ಯ ಪರಿಷತ್ತು ತನ್ನ ಬೆಳವಣಿಗೆಯ ಹಂತದಲ್ಲಿ ರೂಪಾಂತರವಾಗಿ ಸಾಹಿತ್ಯೇತರ ಆಸಕ್ತಿಯ ಪುಢಾರಿಗಳಿಗೆ ಹಸ್ತಾಂತರವಾಗಿರುವುದರಿಂದ ಅದು ಸರ್ಕಾರದ ಮರ್ಜಿ ಮತ್ತು ಜಾತಿ-ಮತಗಳ ಮಠ-ಮಾನ್ಯಗಳ ಮರ್ಜಿಯನ್ನು ಅನುಸರಿಸುತ್ತಾ ಇರುವುದರಿಂದ ಸಾಮಾನ್ಯ ಸಾಹಿತಿಯೊಬ್ಬ ಜಾತಿ-ಮತಗಳ ಬೆಂಬಲವಿಲ್ಲದೆ ಅಥವಾ ಮಠ-ಮಾನ್ಯ, ಸರ್ಕಾರಗಳನ್ನು ವಿರೋಧಿಸಿಕೊಂಡು ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಆಯ್ಕೆಯಾಗುವುದು ಈಗಿನ ಪರಿಸ್ಥಿಯಲ್ಲಿ ಅಸಂಭವ.

> ಸಮ್ಮೇಳನ ನಡೆಸುವುದರಿಂದ ಸಾಹಿತ್ಯ ಮತ್ತು ಸಂಸ್ಕೃತಿಯ ಗಂಭೀರ ಸಂವಾದಕ್ಕೆ ಅವಕಾಶವಾಗುತ್ತದೆ. ಸೃಜನಶೀಲತೆಗೊಂದು ಪರಿಸರ ಮತ್ತು ಪ್ರಚೋದನೆ ನಿರ್ಮಾಣವಾಗುತ್ತದೆ. ■

ಆದ್ದರಿಂದ ಸಾಹಿತ್ಯ ಸಮ್ಮೇಳನ ಇದನ್ನೆಲ್ಲ ಪ್ರತಿಬಿಂಬಿಸುತ್ತದೆ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯು ಇದೇ ಲಾಬಿಯನ್ನು ಅವಲಂಬಿಸಿದೆ. ಕಳೆದ ಕೆಲವು ದಶಕಗಳಿಂದ ಈ ವಿದ್ಯಮಾನಗಳು ನಡೆಯುತ್ತಿವೆ.

ಕನಕಪುರದ ಸಾಹಿತ್ಯ ಸಮ್ಮೇಳನದ ವೈಭವದ ಓಂದೆ ಹೆಂಡದ ಲಾಬಿಯ ಕಪ್ಪುಹಣ ಮತ್ತು ಗ್ರ್ಯಾನೈಟ್ ಲೂಟಿಯ ಕಪ್ಪು ಹಣದ ಹೊಳೆ ಹರಿದಿದೆ. ನಮ್ಮ ದೇಶ ಪ್ರೇಮಿಗಳಾದ ಸಾಹಿತಿಗಳು ಮಾನ-ಮರ್ಯಾದೆ ಇಲ್ಲದೆ ಈ ಹೇಸಿಗೆ ಹಣದಲ್ಲಿ ಮೋಜು ಮಾಡುವುದು ನಮ್ಮ ಸಾಂಸ್ಕೃತಿಕ ಲಜ್ಜೆಗೇಡಿತನಕ್ಕೆ ಸಾಕ್ಷಿಯಾಗಿದೆ.

ಕನಕಪುರದ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾದ ಎಸ್.ಎಲ್.ಭೈರಪ್ಪ ಜೀವ ವಿರೋಧಿಯಾದ ನಿಲುವಿನಿಂದ ಆಧುನಿಕ ಮನುವಿನ ಪರಿಭಾಷೆಯಲ್ಲಿ ಮಾತನಾಡಿರುವುದು ಮತ್ತು ಕೆಲವು ಸಾಹಿತಿಗಳು ಸಮ್ಮೇಳನಾಧ್ಯಕ್ಷರ ಭಾಷಣವನ್ನು ಖಂಡಿಸಿ, ಭಾಷಣದ ಪ್ರತಿಗಳನ್ನು ಸುಟ್ಟುಹಾಕಿರುವ ಘಟನೆ ಯಾವ ರೀತಿಯಲ್ಲೂ ಸಾಹಿತ್ಯದ-ಸಂಸ್ಕೃತಿಯ ಸಂವಾದವನ್ನು ಅರ್ಥಪೂರ್ಣವಾಗಿ ಪ್ರಚೋದಿಸಲಿಲ್ಲ. ಒಂದು ದೊಡ್ಡ ಜಾತ್ರೆಯಂತೆ ಎಲ್ಲಾ ಮುಕ್ತಾಯವಾಯಿತು. ಸಾಹಿತ್ಯ ಸಮ್ಮೇಳನದ ವಿದ್ಯಮಾನಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾಳಜಿಯನ್ನು ವ್ಯಕ್ತಪಡಿಸುವ ಗಾಂಭೀರ್ಯತೆ ಮತ್ತು ಪ್ರಾಮಾಣಿಕತೆಯನ್ನು ಕಳೆದುಕೊಂಡು ಪುಢಾರಿಗಳ ವೈಭವೀಕರಣವಾಗಿ ಪರಿವರ್ತನೆಯಾಗಿದೆ.

★ ಪ್ರಶ್ನೆ 5 : ಸಾಹಿತ್ಯ ಸಮ್ಮೇಳನದಲ್ಲಿ 'ಶ್ರೇಷ್ಠತೆ' ಅಪ್ರಸ್ತುತವಾಗಿದೆ. ಆ ಮಾನದಂಡಗಳಿಂದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತಿಲ್ಲ. ಜಾತಿಯ ಲಾಬಿ ಮುಖ್ಯವಾದ ಮಾನದಂಡವಾಗಿದೆ. ಇದರ ಜೊತೆಗೆ ಪ್ರಾದೇಶಿಕ ಒತ್ತಡಗಳು ಕೆಲಸಮಾಡುತ್ತಿವೆ.

ಒಟ್ಟಾರೆಯಾಗಿ ಸಾಹಿತ್ಯದ ವಿದ್ಯಮಾನಗಳಲ್ಲಿ ಶ್ರೇಷ್ಠವಾದುದನ್ನು ಗುರುತಿಸುವ ಸಂವೇದನೆಯೇ ನಾಶವಾಗಿದೆ. ಸಾಹಿತ್ಯದ ಪ್ರಶಸ್ತಿಗಳು-ಪುರಸ್ಕಾರಗಳನ್ನು ಪಡೆಯುವ ಅಸಂಖ್ಯಾತ ಅವಕಾಶಗಳು ಈಗ ಲಭ್ಯವಾಗುವುದರಿಂದ, ಸಾಹಿತ್ಯದ ಚಟುವಟಿಕೆಗಳಲ್ಲಿ ಸನ್ಮಾನ ಸಂಸ್ಕೃತಿ ವಿಜೃಂಭಿಸುತ್ತಿದೆ. ಇದೊಂದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆಯಾಗಿದೆ. ಸಾಹಿತಿಗಳು ಪ್ರಶಸ್ತಿಗಳನ್ನು ಪಡೆಯಲು, ಪುರಸ್ಕಾರಗಳನ್ನು ಸ್ವೀಕರಿಸಲು ಮತ್ತು ಸರ್ಕಾರಿ ಸವಲತ್ತುಗಳನ್ನು ಪಡೆಯಲು ಪರಸ್ಪರ ಪೈಪೋಟಿ ನಡೆಸುತ್ತಿರುವುದು ಸಾಹಿತಿಗಳ ನಿರ್ಲಜ್ಜೆತೆಗೆ ಸಾಕ್ಷಿಯಾಗಿದೆ. ಇದರಿಂದ ಸೃಜನಶೀಲತೆಯ ಪರಿಸರ ನಾಶವಾಗಿದೆ. ನವೋದಯ ಅಥವಾ ನವ್ಯ ಸಾಹಿತ್ಯ ಚಳವಳಿಕಾಲದ ಶ್ರೇಷ್ಠವಾದ ಸಾಹಿತ್ಯ ಸೃಷ್ಟಿಯಾಗುತ್ತಿಲ್ಲ. ಇದು A State of Cultural decayingಗೆ ಕಾರಣವಾಗಿದೆ. ಇದನ್ನು ಅತ್ಯಂತ ಹೀನವಾದ ಸಾಂಸ್ಕೃತಿಕ ಅವನತಿಯ ಸ್ಥಿತಿ ಎಂದು ಕರೆಯಬಹುದು.

ಆದ್ದರಿಂದಲೇ ಕುವೆಂಪು, ಬೇಂದ್ರೆ ಕಾರಂತ, ಮಾಸ್ತಿ, ಪು.ತಿ.ನ. ಮತ್ತು ಅಡಿಗರಂತಹ ವ್ಯಕ್ತಿ ಮತ್ತು ಅಭಿವ್ಯಕ್ತಿಯಲ್ಲಿ ಶ್ರೇಷ್ಠರಾದ ಸಾಹಿತಿಗಳು ಅದೃಶ್ಯರಾಗುತ್ತಿದ್ದಾರೆ. ವರ್ತಮಾನದಲ್ಲಿ ಶ್ರೇಷ್ಠತೆಯ ಕಾಳಜಿ ಹೊಂದಿರುವ ಕೆಲವೇ ಕೆಲವು ಸಾಹಿತಿಗಳಲ್ಲಿ ಲಂಕೇಶ್ ತೇಜಸ್ವಿ ಮತ್ತು ದೇವನೂರು ಮಹಾದೇವ ಅವರನ್ನು ಮಾತ್ರ ಹೆಸರಿಸಬಹುದು. ಈಗ ಲಂಕೇಶರೂ ಕಣ್ಮರೆಯಾಗಿರುವುದು ಪರಿಸ್ಥಿತಿಯನ್ನು ಇನ್ನೂ ಆತಂಕಕ್ಕೆ ಎಡೆಮಾಡಿ ಕೊಟ್ಟಿದೆ.

★ ಪ್ರಶ್ನೆ 6 ; ನಾನು ಈ ಮೊದಲೇ ಪ್ರಸ್ತಾಪಿಸಿರುವಂತೆ ಅದೊಂದು ಆ ಸಂದರ್ಭದ ಪರಿಸ್ಥಿತಿಯ ಪ್ರತಿಕ್ರಿಯಾತ್ಮಕ ಸಮ್ಮೇಳನ. ಪರ್ಯಾಯ ಸಮ್ಮೇಳನವಲ್ಲ. ಆ ಸಂದರ್ಭಕ್ಕೆ ಅದು ಸರಿಯಾಗಿತ್ತು. ಪರ್ಯಾಯ

ಸಮ್ಮೇಳನದ ಸ್ವರೂಪ ಅದಕ್ಕೆ ಇರಲಿಲ್ಲ. ಅದು ನಡೆದದ್ದು ತಪ್ಪು ಎಂದು ಕರೆಯಬೇಕಾಗುವುದಿಲ್ಲ. ಆ ಸಂದರ್ಭಕ್ಕೆ ಅದು ಔಚಿತ್ಯಪೂರ್ಣವಾಗಿತ್ತು.

★ ಪ್ರಶ್ನೆ 7 : ಕೊನೆಯ ಪ್ರಶ್ನೆ ಜಟಿಲವಾದದ್ದು. ಈಗ ಸಾಹಿತಿಗಳಲ್ಲಿ ಅಪ್ರಾಮಾಣಿಕತೆ ತಾಂಡವವಾಡುತ್ತಿದೆ. ಸ್ವಹಿತಾಸಕ್ತಿಯ ಸಾಹಿತ್ಯದ ವಠಾರಗಳು ಹೇರಳವಾಗಿವೆ. ಸಾಹಿತಿಗಳಲ್ಲಿ ಸಾಹಿತ್ಯಾಸಕ್ತಿಯ ಮತ್ತು ಸಾಂಸ್ಕೃತಿಕ ಕಾಳಜಿಯ ಅಪ್ರಾಮಾಣಿಕತೆಯನ್ನು ಗುರುತಿಸುವುದು ಸುಲಭದ ಕೆಲಸವಲ್ಲ. ಹೆಚ್ಚು ಕಡಿಮೆ ಎಲ್ಲರೂ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದ್ದಾರೆ. ಸಾಹಿತ್ಯ ಕ್ಷೇತ್ರ ನೈತಿಕವಾಗಿ ದಿವಾಳಿಯಾಗಿದೆ.

ಸಾಹಿತ್ಯ ಪರಿಷತ್ತಿಗೆ ಹಂಪ ನಾಗರಾಜಯ್ಯನವರು ಅಧ್ಯಕ್ಷರಾಗಿದ್ದ ಸಮಯದಲ್ಲಿ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ 'ದಲಿತ-ಬಲಿತ' ಅಪಮಾನದಿಂದ ಉದ್ಭವಿಸಿದ ಬಂಡಾಯ ಸಾಹಿತ್ಯ ಸಂಘಟನೆ ಮತ್ತು ಸಮ್ಮೇಳನ ಸಂಕ್ರಮೇಣ ಹುಸಿ ಘೋಷಣೆಯಾಗಿ, ಸಮಯ ಸಾಧಕ ಸಾಹಿತಿಗಳ ಒಂದು ದೊಡ್ಡ ಗುಂಪನ್ನೆ ಸೃಷ್ಟಿಮಾಡಿ ನಿಷ್ಕ್ರಿಯವಾಗಿದೆ.

'ಖಡ್ಗವಾಗಲಿ ಕಾವ್ಯ; ಬಂಡೆಗಳ ಮೇಲೆ ಚಿಗುರೊಡೆಯಲಿ' ಜನರ ಕೋಪಿಗೆ ಬಂಡಾಯ ಸಾಹಿತ್ಯ ಚಳವಳಿ ದಲಿತ ಸಾಹಿತ್ಯ ಚಳಿವಳಿಯ ಒಳಸುಳಿಗೆ ಪ್ರಚೋದನೆಕೊಟ್ಟರೂ ಶ್ರೇಷ್ಠವಾದದ್ದನ್ನು ಅನ್ವೇಷಿಸಲು ಸಾಧ್ಯವಾಗದೆ ಹುಸಿ ಘೋಷಣೆಯಾಗಿ ಪರಿವರ್ತನೆಯಾಗಿದೆ. ಸಾಹಿತ್ಯ ಪರಿಷತ್ತು ಸಾಹಿತ್ಯ ಅಕಾಡೆಮಿಗಳ ಸ್ಥಾನಮಾನಗಳನ್ನು ತಿರಸ್ಕರಿಸಲಾಗದೆ ತಮ್ಮ ಘೋಷಣೆಗಳನ್ನು ತಾವೇ ನುಂಗುತ್ತಾ ವಿಧಾನಸೌಧಕ್ಕೆ ಲಗ್ಗೆ ಹಾಕಿದ ಬಂಡಾಯ ಸಾಹಿತಿಗಳು ಆತ್ಮವಂಚನೆಯಲ್ಲಿ ನಿರತರಾಗಿರುವುದು ಸಾಂಸ್ಕೃತಿಕ ದುರಂತ.

ಇನ್ನೊಂದು ಅಂಥ ಪ್ರಯೋಗ ನಡೆಸುವುದನ್ನು ಯಾರೂ ನಂಬುವುದಿಲ್ಲ. ಪ್ರಶಸ್ತಿ-ಪುರಸ್ಕಾರ ಮತ್ತು ಸರ್ಕಾರ, ಮಠ-ಮಾನ್ಯಗಳ ಮರ್ಜಿಯನ್ನು ಯಾವ ಹಂತದಲ್ಲೂ ಬಯಸದ 10 ಜನ ಉತ್ತಮ ಸಾಹಿತಿಗಳು ಕ್ರಿಯಾಶೀಲವಾಗಿ ಕೆಲಸ ಮಾಡುವ ಸಾಹಿತ್ಯ ಪ್ರತಿಷ್ಠಾನ ಸ್ಥಾಪಿಸಿಕೊಂಡು, ಸಾಹಿತಿಗಳು ಮತ್ತು ಸಾಹಿತ್ಯಾಸಕ್ತರಿಂದ ಸಂಪನ್ಮೂಲಗಳನ್ನು ಒದಗಿಸಿಕೊಂಡು 5 ವರ್ಷಗಳಿಗೊಮ್ಮೆ 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಂವಾದ' ಏರ್ಪಡಿಸಬಹುದು. ಸಮ್ಮೇಳನಾಧ್ಯಕ್ಷ ಇದಕ್ಕೆ ಅಗತ್ಯವಿಲ್ಲ. ಒಂದೊಂದು ಗೋಷ್ಠಿಗೆ ಒಬ್ಬೊಬ್ಬ ಅಧ್ಯಕ್ಷರನ್ನು ಗುರುತಿಸಿ, ಆರು ವಿಭಿನ್ನ ಗೋಷ್ಠಿಗಳನ್ನು ನಡೆಸಬಹುದು. ಇಲ್ಲಿಯ ಪ್ರಬಂಧಗಳನ್ನು ಮತ್ತು ಸಂವಾದಗಳನ್ನು ವಿಶೇಷ ಸಂಚಿಕೆಯಾಗಿ ಪ್ರಕಟಿಸಬಹುದು. ಸಾಹಿತಿಗಳು ಮತ್ತು ಸಾಹಿತ್ಯ ಮತ್ತು ಸಂಸ್ಕೃತಿಯ ಅರ್ಥಪೂರ್ಣ ಗಂಭೀರ ಸಂವಾದದ ವೇದಿಕೆಯನ್ನು ರೂಪಿಸಬಹುದು.

ಈ ಕಳ್ಳಬೆಕ್ಕುಗಳ ಕೊರಳಿಗೆ ಘಂಟೆ ಕಟ್ಟುವ ಸಾಮರ್ಥ್ಯ ಹೊಂದಿರುವ ಕ್ರಿಯಾಶೀಲ ಸಾಹಿತಿ ಯಾರು?

ಕೊನೆಪಕ್ಷ ಹಂಪೆಯ ಕನ್ನಡ ವಿಶ್ವವಿದ್ಯಾನಿಲಯ ಈ ಜವಾಬ್ದಾರಿ ನಿರ್ವಹಿಸಿದರೆ ಅದಕ್ಕೊಂದು ಹೊಸ ಆಯಾಮ ಕೊಟ್ಟಂತಾಗುತ್ತದೆ.

ಜಾಗೃತ ಸಾಹಿತ್ಯ ಸಮಾವೇಶ : ಒಂದು ಸಾಂಸ್ಕೃತಿಕ ನೆನಪು

ಸಾಹಿತ್ಯ, ಕಲೆ ಮತ್ತು ನಮ್ಮ ಇತರೆ ಸಾಮಾಜಿಕ ಚಟುವಟಿಕೆಗಳು ಸಾಧ್ಯವಾದ ಮಟ್ಟಿಗೆ 'ಶ್ರೇಷ್ಠತೆ'ಯಿಂದ ಕೂಡಿರಬೇಕೆಂಬುದು ನಮ್ಮ ಆಶಯವಾಗಿತ್ತು. ಇಲ್ಲಿ 'ನಮ್ಮ' ಎಂದು ಬರೆಯುತ್ತಿರುವುದು 'ಸಾಹಿತ್ಯದಲ್ಲಿ ಶ್ರೇಷ್ಠತೆ' ಎಂಬ ಘೋಷಣೆಯ ಮೂಲಕ ಹುಟ್ಟಿದ 'ಜಾಗೃತ ಸಾಮಾವೇಶ' ದ ನಾಲ್ಕು ಜನ ಸಂಚಾಲಕರಲ್ಲಿ ನಾನೂ ಒಬ್ಬನಾಗಿದ್ದೆ. ಉಳಿತ ಮೂರು ಮಂದಿಯೆಂದರೆ ಕಿ.ರಂ.ನಾಗರಾಜ್, ಡಿ.ಆರ್.ನಾಗರಾಜ್ ಮತ್ತು ಜಿ.ಕೆ. ಗೋವಿಂದರಾವ್.


ಶೂದ್ರ ಶ್ರೀನಿವಾಸ್

ನಾವು ಕೆಲವು ಗೆಳೆಯರು ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡ ಕಾವ್ಯ ಸಂದರ್ಭದ ಹಿರಿಯ ಕವಿಗಳಾದ ಕೆ.ಎಸ್. ನರಸಿಂಹಸ್ವಾಮಿಯವರಾಗಲಿ ಎಂದು ಬಯಸಿದ್ದೆವು. ಆದರೆ ಅವರು ಆಗಲಿಲ್ಲ. ಆರ್.ಸಿ. ಹಿರೇಮಠರವರು ಆದರು. ಸಾಹಿತ್ಯ ಪರಿಷತ್ತಿನ ಒಂದು ಕೆಟ್ಟ ಪರಂಪರೆಯೆಂದರೆ ಬಹಳಷ್ಟು ಬಾರಿ ಆ ಪ್ರದೇಶದವರನ್ನೇ ಆರಿಸುವುದು. ಕೆಲವು ಬಾರಿ ಅಲ್ಲಿಯ ಪ್ರಧಾನ ಜಾತಿಯೂ ಕೆಲಸ ಮಾಡುತ್ತದೆ. ಈ ಎಲ್ಲ ಕಾರಣಗಳಿಗಾಗಿ ನಾವು ಪ್ರತಿಭಟನೆಗೆ ಒಂದು ವೇದಿಕೆಯನ್ನು ಮಾಡಿಕೊಂಡೆವು. 'ಸಾಹಿತ್ಯದಲ್ಲಿ ಶ್ರೇಷ್ಠತೆ' ಎಂಬ ಘೋಷಣೆಯನ್ನು ಮುಂದಿಟ್ಟುಕೊಂಡೆವು. ಹೀಗೆ ನಾವು ಯೋಚಿಸುವ ಸಮಯಕ್ಕೆ ಹಿರಿಯ ಲೇಖಕರಾದ ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ, ರಾಮಚಂದ್ರಶರ್ಮ ಮತ್ತು ಶಾಂತಿನಾಥ ದೇಸಾಯಿಯವರು ಜೊತೆ ಸಮಾಲೋಚಿಸಿದ್ದೆವು. ಇಲ್ಲಿ ಗೆಳೆಯ ಡಿ.ಆರ್. ನಾಗರಾಜ್‌ನ ಪಾತ್ರವನ್ನು ಮರೆಯುವಂತಿಲ್ಲ.

ಒಂದು ದೃಷ್ಟಿಯಿಂದ ನಾವು ಮೊದಲಿನಿಂದಲೂ 'ಸಾಹಿತ್ಯ ಸಮ್ಮೇಳನ' ಎಂಬ ಜಾತ್ರೆಗೆ ವಿರೋಧಿಗಳಾಗಿಯೇ ಕೆಲಸ ಮಾಡುತ್ತ ಬಂದಿದ್ದೇವೆ. ಮಂಡ್ಯದ ಸಾಹಿತ್ಯ ಸಮ್ಮೇಳನಕ್ಕೆ ಜಯದೇವ ತಾಯಿ ಲಿಗಾಡೆಯವರು ಸಮ್ಮೇಳನಾಧ್ಯಕ್ಷೆಯಾದಾಗ ಪ್ರತಿಭಟಿಸಿ ಬಂಧನಕ್ಕೆ ಒಳಗಾಗಿದ್ದೆವು. ಬೆಂಗಳೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಪ್ರೊ. ಜಿ.ಜವರೇಗೌಡರು ಅಧ್ಯಕ್ಷರಾದಾಗ ಪ್ರತಿಭಟಿಸಿದ್ದೆವು. ಈ ಪ್ರತಿಭಟನೆಗಾಗಿಯೇ 'ಸಮಕಾಲೀನ ವಿಚಾರ ವೇದಿಕೆ' ಎಂಬ ಸಂಘಟನೆಯನ್ನು ರೂಪಿಸಿದ್ದೆವು. ಸಮ್ಮೇಳನ ನಡೆಯುವಾಗ ಮೂರು ದಿವಸವೂ ಬೆಂಗಳೂರಿನ ಸಮ್ಮೇಳನದ ಮಂಟಪದ ಮುಂದೆಯೇ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ಆಗಲೂ ಕೆಲವು ಹಿರಿಯ ಲೇಖಕರು ಸಮ್ಮೇಳನದಲ್ಲಿ ಭಾಗವಹಿಸದೆ ನಮ್ಮೊಡನೆ ಕೂಡಿಕೊಂಡಿದ್ದರು. ಇದಾದ ಮೇಲೆ 'ಸಮ ಕಾಲೀನ ವಿಚಾರ ವೇದಿಕೆ' ಯನ್ನು ನಾನಾ ರೀತಿಯ ಆರೋಗ್ಯ ಪೂರ್ಣ ಪ್ರತಿಭಟನೆಗಳಿಗೆ ಬಳಸಿಕೊಂಡೆವು.

'ಜಾಗೃತ ಸಾಹಿತ್ಯ ಸಮಾವೇಶ' ನಮ್ಮ ಬದುಕಿನ ಸ್ಮರಣೀಯ ಕಾರ್ಯಕ್ರಮವಾಗಿತ್ತು. ಯಾಕೆಂದರೆ ನಾನಾ ರೀತಿಯ ಪ್ರತಿಭಟನೆಗಳ ಮಧ್ಯೆ ತಾನು ಸಂಘಟಿಸಬೇಕಾಯಿತು. ಸಮಾವೇಶ ಮುಗಿಯುವವರೆವಿಗೂ ಪ್ರತಿದಿವಸ ಪತ್ರಿಕೆಗಳಲ್ಲಿ ಸಭೆ ಸಮಾರಂಭಗಳಲ್ಲಿ ವಿವಿಧ ರೀತಿಯ ವಾಗ್ವಾದಗಳಿಗೆ ಎಡೆಮಾಡಿಕೊಟ್ಟಿತ್ತು. ಹಾಗೆ ನೋಡಿದರೆ ನಾವು ನಿಜವಾದ ಪ್ರತಿಭಟನೆಯನ್ನು ಎದುರಿಸಿದ್ದು ಬಂಡಾಯ ಸಾಹಿತ್ಯ ಸಂಘಟನೆಯಿಂದ.

ಬಹಳ ಮಾರ್ಮಿಕ ಸಂಗತಿಯೆಂದರೆ ಧಾರವಾಡ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿದ್ದ ಬಹುಪಾಲು ಮಂದಿ ತಮ್ಮ ಸ್ವಂತ ವೆಚ್ಚದಿಂದ 'ಜಾಗೃತ ಸಮಾವೇಶ' ದಲ್ಲಿ ಭಾಗವಹಿಸಿದ್ದರು. ರಾಜ್ಯದ ಹೊರಗಿನಿಂದಲೂ ಕಳಕಳಿ ಇರುವ ಲೇಖಕರೆಲ್ಲ ಬಂದಿದ್ದರು.

ಇದು ನಿಜವಾಗಿಯೂ ಚಾರಿತ್ರಿಕ ವಿಷಯ. ಇದನ್ನು ಕನ್ನಡ ಕಾವ್ಯಸಂದರ್ಭದ ಅರ್ಥ ಪೂರ್ಣ ಕವಿಯಾದ ಗೋಪಾಲಕೃಷ್ಣ ಅಡಿಗರವರು ಉದ್ಘಾಟಿಸಿದ್ದು. ಆ ಸಂದರ್ಭದಲ್ಲಿ ನಾವು ರವೀಂದ್ರ ಕಲಾಕ್ಷೇತ್ರದ ಒಟ್ಟು ಪರಿಸರವನ್ನು ಬಳಸಿಕೊಂಡಿದ್ದೆವು. ಪೂರ್ಣಚಂದ್ರ ತೇಜಸ್ವಿಯವರು ಬರುವೆನೆಂದು ತಿಳಿಸಿ ನಂತರ ಬರುವುದಿಲ್ಲವೆಂದರು. ಆದರೆ ಮೂರು ದಿನವು ಸಭಿಕರ ಮಧ್ಯೆ ಕೂತು ಅನಾಥ ಪ್ರಜ್ಞೆಯನ್ನು ಎದುರಿಸುತ್ತಿದ್ದರು.

ಇಂಥ ಸಮಾವೇಶ ಮಾಡುವಾಗ ಅಭಿರುಚಿಯ ದೃಷ್ಟಿಯಿಂದ ಭಾಗವಹಿಸಿದ ನಮ್ಮ ಜನ ತಮ್ಮ ಕೈಲಾದ ಮಟ್ಟಿಗೆ ಧನ ಸಹಾಯ ಮಾಡಿ ಹೋದರು. ನಿಜವಾಗಿಯೂ ಹಣದ ಸಮಸ್ಯೆ ಎದುರಾಗಲಿಲ್ಲ. ಸಮ್ಮೇಳನ ಮುಗಿದ ನಂತರವೂ ಎಂಟು ಸಾವಿರ ರೂಪಾಯಿ ಬೆಂಗಳೂರಿನ ವಿಜಯಾಬ್ಯಾಂಕಿನ ಖಾತೆಯಲ್ಲಿತ್ತು. ಇದನ್ನು ಖಜಾಂಚಿಯಾದ ಚಿ.ಶ್ರೀನಿವಾಸರಾಜುರವರು ಅಡಿಗೆ ಸಿದ್ಧಪಡಿಸಿದವರಿಗೆ ಮತ್ತು ಇತರೆ ಮಂದಿಗೆ

ಸಂತೋಷವಾಗಿ ವಿತರಿಸಿದರು. ನಾವು ಗೆಳೆಯರು ಲಂಕೇಶ್‌ರವರ ಹತ್ತಿರ ಕೊನೆಯವರೆವಿಗೂ ಹಣ ಕೇಳಬಾರದೆಂದು ತೀರ್ಮಾನಿಸಿದ್ದೆವು. ಸಮಾವೇಶ ಚೆನ್ನಾಗಿ ಆಗಿದ್ದರ ಸಂತೋಷಕ್ಕೆ ಲಂಕೇಶರವರು ಗೆಳೆಯರಿಗೆಲ್ಲ ಸಂತೋಷ ಕೂಟ ಏರ್ಪಡಿಸಿದ್ದರು.

ಇಂಥದೊಂದು ಸಮಾವೇಶ ಯಾವಾಗಲೂ ಅಗತ್ಯವಿರುತ್ತದೆ. ಇದು ಅಭಿರುಚಿಯನ್ನು ನಿರ್ಮಾಣ ಮಾಡುವುದರ ಜೊತೆಗೆ ಆರೋಗ್ಯಪೂರ್ಣ ಚಳುವಳಿ ಮತ್ತು ಪ್ರತಿಭಟನೆಗಳಲ್ಲಿ ಜನ ಭಾಗವಹಿಸುವುದ ಮುಖ್ಯವಾಗಿರುತ್ತದೆ. ಹೀಗೆ ಭಾಗವಹಿಸತಕ್ಕಂಥವರು ಸಾಹಿತಿಗಳೇ ಆಗಬೇಕಾಗಿಲ್ಲ. ಬೇರೆ ಜನಾನು ಸಹ ಯಾವಾಗಲೂ ತಮ್ಮ ಕಾಲಘಟ್ಟದಲ್ಲಿ ಉತ್ತಮವಾದ ಚಟುವಟಿಕೆಗಳು ನಡೆಯಲಿ ಎಂದು ತಹತಹಿಸುತ್ತಿರುತ್ತಾರೆ. ಸೃಜನಶೀಲತೆ ಮತ್ತು ರಚನಾತ್ಮಕತೆ ಅರ್ಥಪೂರ್ಣ ದಿಕ್ಕಿನಲ್ಲಿ ಸಾಗಬೇಕಾದರೆ ಇಂಥ ಸಮಾವೇಶಗಳು ಆಗಾಗ ನಡೆಯುತ್ತಿರಬೇಕು.

ಹೌದು, ಧಾರವಾಡದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ವಿರೋಧಿಸುತ್ತಲೇ 'ಜಾಗೃತ ಸಾಹಿತ್ಯ ಸಂಘಟನೆ' ಹುಟ್ಟಿಕೊಂಡಿತು. ಇದನ್ನು ಮುಂದುವರಿಸಿಕೊಂಡು ಹೋಗಲು ಅನಂತಮೂರ್ತಿಯವರ ಮತ್ತು ಲಂಕೇಶರವರ ನೇತೃತ್ವದಲ್ಲಿ ಒಂದು ಪುಟ್ಟ ಸಮಿತಿಯನ್ನು ರಚಿಸಲಾಯಿತು. ಆದರೆ ಮುಂದೆ ಸಂಘಟಿಸುವ ಉತ್ಸಾಹವಿದ್ದರೂ ನಮ್ಮಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರಿಗಿರುವ ಶಿಸ್ತು ನಮ್ಮಲ್ಲಿರಲಿಲ್ಲ. ಒಂದು ದೃಷ್ಟಿಯಿಂದ ಕನಕಪುರದಲ್ಲಿ ಎಸ್.ಎಲ್.ಭೈರಪ್ಪನವರು ಸಮ್ಮೇಳನಾಧ್ಯಕ್ಷರಾದಾಗ 'ಜಾಗೃತ ಸಂಘಟನೆ'ಗೆ ಜೀವಕೊಡಲು ಪ್ರಯತ್ನಿಸಿದೆವು. ಆದರೆ ನಾವು ಸ್ವಲ್ಪ ಮುಂಚಿತವಾಗಿ ಕಾರ್ಯಕ್ರಮ ರೂಪಿಸಲು ಯೋಚಿಸಲಿಲ್ಲ. ಕೇವಲ ಸಾಂಕೇತಿಕ ಪ್ರತಿಭಟನೆಯಲ್ಲಿ ಅರ್ಥವಿಲ್ಲವೆಂದು ಕೈಬಿಟ್ಟೆವು. ಇದಕ್ಕೆ ಭೈರಪ್ಪನವರ ಆಯ್ಕೆ ಸರಿಯಾಗಿತ್ತು ಎಂದು ನಾವು ತಿಳಿಯಲಿಲ್ಲ. ಸಾಹಿತ್ಯ ಮತ್ತು ಸಂಸ್ಕೃತಿಯ ಒಲವುಗಳ ವಿಷಯಕ್ಕೆ ಬಂದಾಗ ಹಿರೇಮಠರಿಗಿಂತ ಎಸ್.ಎಲ್. ಭೈರಪ್ಪನವರು ಹೆಚ್ಚು ಅಪಾಯಕಾರಿ ಎಂಬುದು ನಮಗೆ ಗೊತ್ತಿತ್ತು.

ನಿಮ್ಮ ಐದನೆಯ ಪ್ರಶ್ನೆಗೆ ಉತ್ತರಿಸುವುದಾದರೆ, ಸಾಹಿತ್ಯದಲ್ಲಿ ಶ್ರೇಷ್ಠತೆ ಬಂದು ಬಿಟ್ಟಿದೆ ಎಂದು ನಾವು ಕೂರಲಾಗುವುದಿಲ್ಲ. 'ಶ್ರೇಷ್ಠತೆ' ಯೆನ್ನುವುದು ಎಲ್ಲ ರಂಗಗಳಲ್ಲೂ ಎಲ್ಲಾ ಕಾಲದಲ್ಲೂ ಇರಬೇಕಾಗುತ್ತದೆ ಎಂದು ಯೋಚಿಸುವ ಮನಸ್ಸುಗಳಿಗಾದರೂ ಈ ರೀತಿಯ ಚಟುವಟಿಕೆ ಅಗತ್ಯವಿರುತ್ತದೆ. ಹಾಗೆ ನೋಡಿದರೆ ಈಗ ನಿಜವಾಗಿಯೂ ಅದರ ಅಗತ್ಯವಿದೆ. ಈ ಪ್ರಶ್ನೆಯ ಬೆನ್ನಲ್ಲಿಯೇ ಇರುವ 'ಪರ್ಯಾಯ ಸಮ್ಮೇಳನ'ದ ವಿಷಯಕ್ಕೆ ಸಂಬಂಧಿಸಿದಂತೆ 'ಪರ್ಯಾಯ ಸಮ್ಮೇಳನ' ನಡೆದಿದ್ದು ತಪ್ಪು ಎಂದು ಭಾವಿಸಬೇಕಾಗಿಲ್ಲ. ಇವೆಲ್ಲ ಚಾರಿತ್ರಿಕವಾಗಿ ಉಳಿಯುವಂಥದ್ದು. ಇಂಥ ಸಮಾವೇಶದಲ್ಲಿ ನಾನು ಭಾಗಿಯಾಗಿದ್ದೆ ಎನ್ನುವುದೇ ನನ್ನ ನೆನಪಿನ ಶ್ರೀಮಂತಿಕೆಗೆ ಸಂಬಂಧಿಸಿದ್ದು, ಈಗಲೂ ಆ ಸಂದರ್ಭದ ಭಾವಚಿತ್ರಗಳನ್ನು ನೋಡುವಾಗ ಪುಳಕಿತನಾಗುತ್ತೇನೆ.

ಈಗ ಪರ್ಯಾಯ ಸಮ್ಮೇಳನ ಮತ್ತೆ ರೂಪುಗೊಂಡರೆ ಅದರ ಸ್ವರೂಪವನ್ನು ಈಗಲೇ ನಿರ್ಧರಿಸಲು ಆಗುವುದಿಲ್ಲ. ಆದರೆ ಸಂಘಟನೆಗೆ ತೊಡಗಿದಾಗ ಅದರ ಒಟ್ಟು ರೂಪ ಸಿದ್ಧವಾಗುತ್ತ ಹೋಗುತ್ತದೆ. ಇನ್ನು ಯಾರು ಸಂಘಟಿಸಬೇಕು ಎನ್ನುವುದಕ್ಕೆ 'ಆ ರೀತಿಯ ಸಂಘಟನೆ ಅಗತ್ಯವಿದೆ' ಎಂದು ಯೋಚಿಸುವ ಮಂದಿ ಕರ್ನಾಟಕದ ಉದ್ದಗಲಕ್ಕೂ ಬೇಕಾದಷ್ಟು ಮಂದಿ ಇದ್ದಾರೆ. ಅವರನ್ನೆಲ್ಲ ಒಂದೆಡೆ ಸೇರಿಸುವಲ್ಲಿ ಇಬ್ಬರು ಮೂವರು ಸಂಚಾಲಕರು ಬೇಕಾಗುತ್ತದೆ. ಇದಕ್ಕೆ ಹೆಚ್ಚು ಶ್ರಮ ವಹಿಸಬೇಕಾಗಿಲ್ಲ. ನಾವು ಮಾಡುವ ಕಾರ್ಯವನ್ನು ಎಂಜಾಯ್ ಮಾಡುತ್ತಲೇ ಕಾರ್ಯ ಪ್ರವೃತ್ತರಾಗುವ ಮನಸ್ಥಿತಿ ಬೇಕಾಗುತ್ತದೆ.

ಹಾಲಿವುಡ್ ನಟಿ ಡ್ರ್ಯೂ ಬ್ಯಾರಿಮೋರ್ ಹನ್ನೊಂದು ತಿಂಗಳ ಮಗು ಆಗಿದ್ದಾಗಲೇ ಟಿವಿ ತಾರೆ ಎನಿಸಿಕೊಂಡಳು. ಅವಳಿಗೆ ಹದಿನಾಲ್ಕು ವರ್ಷ ತುಂಬುವಾಗ 'ಲಿಟಲ್ ಗರ್ಲ್ ಲಾಸ್ಟ್' ಎಂಬ ಆತ್ಮಕತೆ ಬರೆದಳು. ಆಕೆ ಆತ್ಮಕತೆ ಬರೆದ ಅತಿ ಕಿರಿಯ ವ್ಯಕ್ತಿ.

★

ಆಧುನಿಕ ಸವಲತ್ತುಗಳಿಂದ ಮನುಷ್ಯ ಆರಾಮಾಗಿ ಇದ್ದಾನೆ ನಿಜ. ಆದರೆ ಇಂಥ ಆರಾಮದಾಯಕ ಜೀವನ ಹಲವು ತೊಂದರೆಗಳಿಗೂ ಕಾರಣ. ಇದು ನಂಬಲು ಕಷ್ಟ ಅಲ್ಲವೇ? ಹಾಗಿದ್ದರೆ ಗಮನಿಸಿ. ಆಧುನಿಕ ಸಲಕರಣೆಗಳಿಂದಾಗಿ ಮನುಷ್ಯ ವಾರಕ್ಕೆ ಎಷ್ಟೆಲ್ಲ ಕ್ಯಾಲೋರಿಯಷ್ಟು ಶಕ್ತಿ ಉಳಿಸಬಲ್ಲ ನೋಡಿ. ಕಾರು ಬಳಸುವವರು 200 ಕ್ಯಾಲೋರಿ. ಟಿ.ವಿ, ವಿಡಿಯೋ ಉಪಯೋಗಿಸುವವರು ನೂರು ಕ್ಯಾಲೋರಿ, ಕಾರ್ಡ್‌ಲೆಸ್ ಫೋನ್ ಇಟ್ಟುಕೊಂಡವರು 50 ಕ್ಯಾಲೋರಿ, ವಾಷಿಂಗ್ ಮೆಷೀನ್ ಬಳಸುವವರು 30 ಕ್ಯಾಲೋರಿ... ಹೀಗೆ ವಾರಕ್ಕೆ ಸುಮಾರು 500 ಕಿಲೋ ಕ್ಯಾಲೋರಿಗಳಷ್ಟು ಶಕ್ತಿ ಉಳಿಸುತ್ತಾರೆ. ಇದು ಒಳ್ಳೆಯದೇ ಆಯಿತು ಅನ್ನುತ್ತೀರಾ ? ಅಲ್ಲೇ ನೀವು ತಪ್ಪಿದ್ದು. ಇದರಿಂದಾಗಿ ಮನುಷ್ಯ ದೇಹದಲ್ಲಿ ವರ್ಷಕ್ಕೆ 3-4 ಕೆ.ಜಿ. ಕೊಬ್ಬು ಸಂಗ್ರಹವಾಗುತ್ತದೆ. ಬೊಜ್ಜಿನ ಕಾರಣ ಗೊತ್ತಾಯಿತೇ !



ಮೇಕಪ್ ಹಾಳಾದ್ದಕ್ಕೆ ಚಿಂತಿಸಬೇಡ ಕಣೇ... ಹ್ಯಾಗೂ ನಾವು ಹೋಗ್ತಾ ಇರೋ ಬಸ್ ಲೇಡಿ ಕಂಡಕ್ಟರದಲ್ವಾ? ಫಸ್ಟ್ ಏಡ್ ಬಾಕ್ಸ್‌ನಲ್ಲಿ ಪೌಡರು, ಲಿಪ್‌ಸ್ಟಿಕ್ ಎಲ್ಲಾ ಇರುತ್ತೇ ಬಿಡೆ.....





ಸ್ನೇಹಿತ

ಕತೆ

'ಅತ್ತಿಗೆ ಇವತ್ತು ನೀವು ಮಾಡಿರುವ ವೆಜಿಟಬಲ್ ಭಾತ್ ತುಂಬಾ ಚೆನ್ನಾಗಿದೆ. ನನ್ನ ಕ್ಯಾರಿಯರ್‌ನ ಎರಡು ಬಟ್ಟಲಿಗೂ ಅದನ್ನೇ ಹಾಕಿ ಬಿಡಿ. ಭಾತ್ ಬಹಳ ರುಚಿಯಾಗಿದೆ' ಎಂದು ಶೃತಿ ಅತ್ತಿಗೆಗೆ ಅಪ್ಪಣೆ ಮಾಡಿದಳು.

'ಹಾಗೇ ಆಗಲಿ. ಎರಡು ಬಟ್ಟಲಿಗೂ ಹಾಕಿ ಕೊಡುತ್ತೇನೆ' ಅತ್ತಿಗೆ ಸುಮ ಹೇಳಿದಳು.

'ನನಗೊಂದು, ನನ್ನ ಸ್ನೇಹಿತ ಜಗದೀಶನಿಗೊಂದು. ಇಬ್ಬರಿಗೂ ಒಂದೊಂದು ಬಟ್ಟಲು ಸಾಕಾಗುತ್ತದೆ. ಅಲ್ಲವೇ?'

'ಇಬ್ಬರಿಗಾದರೆ ಇನ್ನು ಸ್ವಲ್ಪ ಜಾಸ್ತಿ ಹಾಕಿಕೊಡುತ್ತೇನೆ. ಅದಕ್ಕೇನು!' ಎಂದು ಹೇಳಿ ಸುಮ ಎರಡು ಬಟ್ಟಲಿಗೂ ಹಾಕಿ ಕೊಟ್ಟಳು.

ಎಲ್ಲರೂ ಹೊರಟು ಹೋದ ಮೇಲೆ ಸುಮನಿಗೆ ಸ್ವಲ್ಪ ಬಿಡುವು. ಪತಿ ರವಿ ಫ್ಯಾಕ್ಟರಿಗೆ ಬೆಳಿಗ್ಗೆ ಎಂಟು ಗಂಟೆಗೆ ಹೋಗುತ್ತಿದ್ದನು. ಮಗಳು ರಮ್ಯಳ ಸ್ಕೂಲ್ ವ್ಯಾನ್ ಒಂಭತ್ತಕ್ಕೆ ಬರುತ್ತಿತ್ತು. ಅವಳ ಟಿಫಿನ್ ಬಾಕ್ಸ್, ನೀರಿನ ಬಾಟಲ್, ಹೋಂವರ್ಕ್ ಯೂನಿಫಾರಂ ಇವನ್ನೆಲ್ಲಾ ಸಿದ್ಧಪಡಿಸಿ ಸ್ಕೂಲಿಗೆ ಕಳುಹಿಸುವ ಹೊತ್ತಿಗೆ ನಾದಿನಿಯ ಕ್ಯಾರಿಯರ್‌ಗೆ ರೆಡಿ ಮಾಡಬೇಕಾಗಿತ್ತು. ಒಬ್ಬೊಬ್ಬರಿಗೆ ಒಂದೊಂದು ತರಹ ಊಟ ತಿಂಡಿಗಳು. ಇವುಗಳನ್ನೆಲ್ಲಾ ಮಾಡಿ ಮುಗಿಸುವ ಹೊತ್ತಿಗೆ ಸುಮನಿಗೆ ಸಾಕು ಸಾಕಾಗಿ ಹೋಗುತ್ತಿತ್ತು.

ಎಲ್ಲಾ ಕೆಲಸಗಳನ್ನು ಮುಗಿಸಿ ತಾನೂ ಊಟ ಮಾಡಿ ಪಾತ್ರೆಗಳನ್ನೆಲ್ಲಾ ತೊಳೆಯಲು ಹಾಕಿ ಅಡುಗೆ ಮನೆಯನ್ನು ಸ್ವಚ್ಛಗೊಳಿಸಿದಳು. ಇನ್ನು ನಾಲ್ಕು ಗಂಟೆಯವರೆಗೂ ಬಿಡುವು. ಸುಮ ಮಲಗಿಕೊಂಡು ಹಾಗೆಯೇ ಯೋಚಿಸ ತೊಡಗಿದಳು.

ಇವತ್ತು ಶೃತಿ ತನ್ನ ಸ್ನೇಹಿತ ಜಗದೀಶನಿಗೊಂದು ಬಟ್ಟಲು ಭಾತ್ ಹಾಕಿ ಕೊಡಿ ಎಂದು ಕೇಳಿದಳಲ್ಲಾ, ಮೊನ್ನೆ ಮೈಸೂರು ಪಾಕ್ ಮಾಡಿದಾಗ, ನಾಲ್ಕು ಪೀಸು ಜಾಸ್ತಿ ಹಾಕಿ ಅತ್ತಿಗೆ ನನ್ನ ಫ್ರೆಂಡ್‌ಗೆ ಕೊಡಬೇಕು ಎಂದು ಕೇಳಿದಳು. ಅವತ್ತು ದೀಪಾವಳಿ ಹಬ್ಬಕ್ಕೆ ಅವನಿಗೊಂದು ಗಿಫ್ಟ್ ಕೊಡಬೇಕೆಂದು ಒಂದು ಗಡಿಯಾರ ತೆಗೆದುಕೊಂಡಳು. ಇನ್ನೊಂದು ದಿನ ಮಾರ್ಕೆಟ್‌ಗೆ ಹೋದಾಗ ಅವನಿಗೆ ಕೊಡುವುದಕ್ಕೆಂದು 300 ರೂ. ಕೊಟ್ಟು ಒಂದು ಪೆನ್ ತೆಗೆದುಕೊಂಡಳು. ಅಂಗಡಿಗೆ ಹೋದಾಗಲೆಲ್ಲಾ ಬಿಸ್ಕತ್, ಕೇಕ್, ಹಣ್ಣುಗಳು, ಸ್ವೀಟ್ಸ್ ಇವುಗಳನ್ನೆಲ್ಲಾ ತೆಗೆದುಕೊಳ್ಳುತ್ತಲೇ ಇರುತ್ತಾಳೆ. ಇಷ್ಟೆಲ್ಲಾ ಕೊಡುತ್ತಿರಬೇಕಾದರೆ ಅವನ ವಿಷಯದಲ್ಲಿ ಏನಾದರೂ ಸ್ಪೆಷಲ್ ಇರಲೇ ಬೇಕು. ಹಾಗೇನಾದರೂ ಇದ್ದರೆ......

ಅವಳ ಹೃದಯ ಒಂದು ನಿಮಿಷ ಮಿಡುಕಿತು. ಅವನು ಯಾರೋ ಏನೋ, ಯಾವ ಜಾತಿಯವನೋ, ಅವನ ವಿಚಾರವೇನೋ ! ಒಂದು ತಿಳಿಯದಲ್ಲಾ. ರವಿಗೋ ತಂಗಿಯ ಮೇಲೆ ವಿಪರೀತ ಪ್ರೀತಿ. ಅವಳು ಮಾಡಿದ್ದೆಲ್ಲಾ ಸರಿ. ಅವಳಿಗೆ ಪ್ರತಿಯಾಗಿ ಒಂದು ಮಾತೂ ಹೇಳುವ ಹಾಗಿಲ್ಲ. ಹಾಗೆಂದು ಶೃತಿ

ಏನೂ ಕೆಟ್ಟ ಹುಡುಗಿಯಲ್ಲ. ಸ್ವಲ್ಪ ಮುದ್ದು ಜಾಸ್ತಿಯಾಗಿದೆ ಅಷ್ಟೆ. ಅತ್ತಿಗೆಯನ್ನು ಕಂಡರೆ ಸ್ವಂತ ಅಕ್ಕನಿಗಿಂತಲೂ ಹೆಚ್ಚು ಪ್ರೀತಿ, ವಿಶ್ವಾಸ, ವಾತ್ಸಲ್ಯ. ಜೊತೆಗೆ ಸ್ವಲ್ಪ ಸದರ. ಆದರೂ ಅತ್ತಿಗೆ, ಅಣ್ಣನಿಗೆ ವಿಧೇಯಳಾಗಿ ನಡೆದುಕೊಳ್ಳುವಳು. ಅತ್ತಿಗೆಯ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಅವಳ ಮನಸ್ಸನ್ನು ಗೆದ್ದುಕೊಂಡಿದ್ದಳು.

ಶೃತಿಗೂ ತನ್ನನ್ನು ಪ್ರೀತಿಸುವ ಅಣ್ಣ, ಅತ್ತಿಗೆಯರು ಅವರ ಮುದ್ದಿನ ಮಗಳು ರಮ್ಯ ಇವರುಗಳ ಮಧ್ಯದಲ್ಲಿರುವಾಗ ಅವಳ ಮನಸ್ಸು ಹಿಗ್ಗಿ ಹಾರಾಡುತ್ತಿತ್ತು.

ಹೀಗಿರುವಾಗ ಆ ಜಗದೀಶ್ ಯಾರು? ತನ್ನಲ್ಲಿ ಯಾವುದೇ ವಿಷಯವನ್ನು ಬಚ್ಚಿಡದೇ ಎಲ್ಲವನ್ನು ತೆರೆದಿಡುತ್ತಿದ್ದವಳು ಇವನ ವಿಷಯದಲ್ಲಿ ಏಕೆ ಏನನ್ನು ಹೇಳುವುದಿಲ್ಲ?

ಸುಮಳ ಮನಸ್ಸು ಎಲ್ಲಿಂದೆಲ್ಲಿಗೋ ಹಾರಿತು. ಅವಳ ಅತ್ತೆ ಭಾಗೀರಥಮ್ಮನವರು ಸಾಯುವಾಗ ಸೊಸೆಯ ಕೈ ಹಿಡಿದುಕೊಂಡು 'ನಾನು ಶೃತಿಯನ್ನು ನಿನ್ನ ಕೈಲಿಟ್ಟು ಹೋಗುತ್ತಿದ್ದೇನೆ. ಅವಳನ್ನು ಕಾಪಾಡುವ ಭಾರ ನಿನ್ನದು. ಅವಳನ್ನು ಸಾಕಿ, ಸಲಹಿ, ಓದಿಸಿ, ಒಬ್ಬ ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡುವ ಜವಾಬ್ದಾರಿ ನಿನ್ನದಮ್ಮ, ರವಿಯೂ, ನೀನೂ ಅವಳನ್ನು ಚೆನ್ನಾಗಿ ನೋಡಿಕೊಳ್ಳಬೇಕು' ಎಂದು ಹೇಳಿ ಕಣ್ಮುಚ್ಚಿದ್ದರು.

ಅಸ್ಥಿರತೆ



ಇದ್ದುದರ ಬಗ್ಗೆಯೇ
ನಾಳೆಗೆ ಖಚಿತವಿಲ್ಲ
ಇನ್ನು ಭವಿಷ್ಯದ ಬಗ್ಗೆ
ಕನಸು ಕಾಣುವುದು
ಉಚಿತವಲ್ಲ!

■ ಶ್ರೀರೇಖಾ ಎ. ಕುಲಕರ್ಣಿ

ಸುಮಾ ಕೂಡ ಅತ್ತೆಯವರ ಮಾತನ್ನು ಅಕ್ಷರಶಃ ಪಾಲಿಸುತ್ತಿದ್ದಳು. ನಾದಿನಿಯನ್ನು ಸ್ವಂತ ತಂಗಿಯಂತೆ ಅಕ್ಕರೆಯಿಂದ ನೋಡಿಕೊಳ್ಳುತ್ತಾ ಅವಳ ಆಸೆ ಆಕಾಂಕ್ಷೆಗಳನ್ನು ಪೂರೈಸುತ್ತಿದ್ದಳು. ನಾದಿನಿಯನ್ನು ಚೆನ್ನಾಗಿ ನೋಡಿಕೊಂಡು ಅವಳಿಗೊಬ್ಬ ಒಳ್ಳೆಯ ವರನನ್ನು ನೋಡಿ ಮದುವೆ ಮಾಡಿ ಒಳ್ಳೆಯ ಹೆಸರನ್ನು ಪಡೆಯಬೇಕೆಂದು ಯತ್ನಿಸುತ್ತಿದ್ದಳು. ಗಂಡನಿಗೆ ಹೇಳಿ ಅವನ ಸಂಪಾದನೆಯಲ್ಲಿ ಸ್ವಲ್ಪ ಹಣವನ್ನು ಶೃತಿಯ ಮದುವೆಗಾಗಿ ಕೂಡಿಡುವಂತೆ ಏರ್ಪಾಡು ಮಾಡಿದ್ದಳು. ಚಿನ್ನ ಬೆಳ್ಳಿಗೆಂದೇನು ಖರ್ಚು ಮಾಡಬೇಕಾಗಿರಲಿಲ್ಲ. ಅತ್ತೆಯವರದೇ ಚಿನ್ನದ ಒಡವೆಗಳು, ಬೆಳ್ಳಿಯ ಸಾಮಾನುಗಳು ಇದ್ದವು. ಇವೆಲ್ಲವುಗಳನ್ನು ಜೋಪಾನವಾಗಿ ತೆಗೆದಿರಿಸಿ, ಒಂದೆರಡು ಕಡೆ ವರಗಳ ಪ್ರಸ್ತಾಪವನ್ನು ಮಾಡುತ್ತಿದ್ದಳು.

ರವಿಯೂ ಸುಮ್ಮನೆ ಕುಳಿತಿರಲಿಲ್ಲ. ತನ್ನ ಆಪ್ತ ಗೆಳೆಯರಲ್ಲಿ, ನೆಂಟರಿಷ್ಟರಲ್ಲಿ ಯೋಗ್ಯ ವರನನ್ನು ಹುಡುಕುತ್ತಾ ತಂಗಿಯ ಮದುವೆಗೆ ಪ್ರಯತ್ನ ನಡೆಸುತ್ತಿದ್ದನು.

ಆದರೆ ಈವರೆಗೂ ಅವನ ಮನಸ್ಸಿಗೊಪ್ಪುವ ವರ ಕಣ್ಣಿಗೆ ಬಿದ್ದಿರಲಿಲ್ಲ. ಆದರೂ ವರಾನ್ವೇಷಣೆಯಂತೂ ನಡೆಯುತ್ತಲೇ ಇತ್ತು.

ಶೃತಿ ಎಂ.ಕಾಂ. ಪಾಸ್ ಮಾಡಿದ ಮೇಲೆ ಅವಳಿಗೆ ಖಾಸಗೀ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿತ್ತು.

ವಿದ್ಯಾವಂತೆಯಾಗಿ ಮನೆಯಲ್ಲಿ ಕುಳಿತು ಸುಮ್ಮನೆ ಕಾಲ ಕಳೆಯುವುದಕ್ಕಿಂತ ಎಲ್ಲಿಯಾದರೂ ಕೆಲಸ ಮಾಡುತ್ತಿರುವುದು ಒಳ್ಳೆಯದೆಂದು ನಾಲ್ಕಾರು ಕಡೆಗಳಿಗೆ ಅರ್ಜಿ ಹಾಕಿದ್ದಳು. ಅದಕ್ಕೆ ಸರಿಯಾಗಿ ಈ ಕಂಪೆನಿಯಲ್ಲಿ ಕೆಲಸ ಸಿಕ್ಕಿದ್ದರಿಂದ ಸಮಯವೂ ಕಳೆಯುತ್ತಿತ್ತು.



ಇದು ನಮ್ಮಜ್ಜನ ಚಿತಾಭಸ್ಮವಲ್ಲಯ್ಯಾ.
ಅವರು ಸೇದಿ ಹಾಕಿದ ಸಿಗರೇಟಿನ ಬೂದಿ!

ಒಳ್ಳೆಯ ಸಂಬಳವೂ ಬರುತ್ತಿತ್ತು.

ಆ ದಿನ ಶೃತಿ ಇವತ್ತು ನಮ್ಮ ಆಫೀಸಿನಲ್ಲಿ ಆಡಿಟ್ ಇರುವುದರಿಂದ, ರಿಕಾರ್ಡ್ಸ್‌ಗಳನ್ನು ತೆಗೆದಿಡಬೇಕೆಂದು ಸ್ವಲ್ಪ ಮುಂಚಿತವಾಗಿಯೇ ಹೊರಟು ಹೋಗಿದ್ದಳು.

ಇದೇ ಸಮಯವೆಂದು ರವಿ ಊಟಕ್ಕೆ ಕುಳಿತಿರುವಾಗ ಸುಮ ಮೆಲ್ಲನೆ 'ನೋಡಿ ನಾನು ಹೀಗೆ ಹೇಳುತ್ತಿದ್ದೀನಿ ಎಂದು ತಪ್ಪು ತಿಳಿಯಬೇಡಿ. ಈಗೀಗ ಶೃತಿಯ ನಡವಳಿಕೆ ಒಂದು ತರಹ ಆಗುತ್ತಿದೆ. ಅವಳ ಆಫೀಸಿನಲ್ಲಿ ಒಬ್ಬ ಸ್ನೇಹಿತ ಇದ್ದಾನಂತೆ. ಯಾವಾಗಲೂ ಅವನಿಗೇ ಅಂತ ಮನೆಯಲ್ಲಿ ಏನು ಮಾಡಿದರೂ ತೆಗೆದುಕೊಂಡು ಹೋಗುತ್ತಾಳೆ. ಅವತ್ತು ಯುಗಾದಿಗೆಂದು ಒಂದು ಷರ್ಟ್ ತೆಗೆದುಕೊಂಡು ಹೋದಳು. ಇನ್ನೊಂದು ದಿನ ಎಗ್ಸಿಬಿಷನ್‌ನಲ್ಲಿ ಒಂದು ಪೆನ್ ತೆಗೆದುಕೊಂಡಳು. ಸ್ನೇಹಿತನೆಂದು ಏನು ಬೇಕಾದರೂ ಕೊಡಲಿ. ನಾನು ಬೇಡ ಅನ್ನುವುದಿಲ್ಲ. ಆದರೆ ಸ್ನೇಹ ಎಂದರೆ ಎಂತಹ ಸ್ನೇಹವೋ, ಮುಂದೆ ಈ ಸ್ನೇಹವೇ ಬೇರೆ ಯಾವ ರೀತಿಗಾದರೂ ತಿರುಗಿ ಕೊಂಡರೆ ಕಷ್ಟವೆಂದು ನನಗೆ ಅನ್ನಿಸುತ್ತೆ. ನೋಡಿ ನಿಮಗೆ ಅವಳ ಆಫೀಸಿನಲ್ಲಿ ಯಾರಾದರೂ ಪರಿಚಯದವರಿದ್ದರೆ ಅವನ ವಿಷಯವಾಗಿ ವಿಚಾರಿಸಿ ನೋಡಿ. ನಾನು ಹೀಗೆ ಹೇಳುತ್ತಿದ್ದೀನಿ ಎಂದು ಬೇಜಾರು ಮಾಡಿಕೊಳ್ಳಬೇಡಿ' ಎಂದು ತನ್ನ ಮನಸ್ಸಿನಲ್ಲಿ ಇದ್ದುದನ್ನು ಗಂಡನ ಮುಂದೆ ಹೇಳಿಕೊಂಡಳು.

ರವಿಗೆ ಈಗ ಪೇಚಾಟಕ್ಕಿಟ್ಟುಕೊಂಡಿತು. ಯಾರನ್ನು ವಿಚಾರಿಸುವುದು? ಏನು ಮಾಡುವುದು? ವಿಷಯ ಎಷ್ಟು ಮುಂದುವರಿದಿದೆಯೋ ಏನೋ. ಯೋಚಿಸಿ ಅವನಿಗೆ ದಿಗಿಲಾಯಿತು. ತನ್ನ ಮುದ್ದಿನ ತಂಗಿಯ ಮೇಲೆ ಇಷ್ಟೊಂದು ನಂಬಿಕೆ ಇಡಬಾರದಾಗಿತ್ತೇನೋ ಎಂದು ಪಶ್ಚಾತ್ತಾಪ ಪಡತೊಡಗಿದನು. ದಿನ ಕಳೆದಷ್ಟೂ ಸುಮ, ರವಿಯರ ಆತಂಕ ಜಾಸ್ತಿಯಾಗತೊಡಗಿತು.

ಶೃತಿಗೆ ಆ ದಿನ ಮಧ್ಯಾಹ್ನ ತನ್ನ ಅಣ್ಣ ಆಫೀಸಿಗೆ ಬಂದಿರುವುದನ್ನು ಕಂಡು ಆಶ್ಚರ್ಯ ಮತ್ತು ಗಾಬರಿ ಎರಡೂ ಏಕಕಾಲದಲ್ಲಿ ಉಂಟಾದವು. ರವಿ ಎಂದೂ ಆಫೀಸಿಗೆ ಬಂದವನಲ್ಲ. ಇಂದೇಕೆ ಬಂದ? ಮನೆಯಲ್ಲಿ ಏನೂ ಹೇಳಿರಲಿಲ್ಲ. ಇರಲಿ ವಿಚಾರಿಸೋಣ. ಸುಮ್ಮನೆ ಬಂದಿರಬಹುದು. ಅಷ್ಟಕ್ಕೆ ತಾನು ಏಕೆ ಗಾಬರಿಯಾಗಬೇಕು' ಎಂದು ತನಗೆ ತಾನೇ ಸಮಾಧಾನ ಮಾಡಿಕೊಂಡಳು.

ಅಷ್ಟರಲ್ಲಿ ರವಿಯೇ ಇವಳ ಹತ್ತಿರ ಬಂದು 'ಇವತ್ತು ಎಗ್ಸಿಬಿಷನ್‌ನಲ್ಲಿ ಒಳ್ಳೊಳ್ಳೆ ಸೀರೆಗಳು, ಚೂಡಿದಾರ್‌ಗಳು ಸೇಲ್‌ನಲ್ಲಿ ಇವೆಯಂತೆ. ನನ್ನ ಫ್ರೆಂಡ್ ಮತ್ತು ಅವನ ಹೆಂಡತಿ ಬರುತ್ತಾರಂತೆ. ಅದಕ್ಕೇ ನಿನ್ನನ್ನೂ ಕರೆದುಕೊಂಡು ಹೋಗೋಣವೆಂದು ಬಂದೆ. ನೀನು ನಿಧಾನವಾಗಿ ನಿನ್ನ ಕೆಲಸಗಳನ್ನು ಮುಗಿಸಿಕೊಂಡು ಬಾ. ಆಮೇಲೆ ಇಬ್ಬರೂ ಎಕ್ಸಿಬಿಷನ್‌ಗೆ ಹೋಗೋಣ. ನಾನು ಇಲ್ಲೇ ಕುಳಿತಿರುತ್ತೇನೆ' ಎಂದು ಹೇಳಿದನು.

'ಶೃತಿ, ನಿನ್ನ ಫ್ರೆಂಡ್ ಜಗದೀಶನನ್ನು ಭೇಟಿ ಮಾಡಿಸಲೇ ಇಲ್ಲವಲ್ಲ. ಇವತ್ತು ಬಂದಿಲ್ಲವೇನು? ಅವನು ಎಲ್ಲಿದ್ದಾನೆ?'

'ಅದಕ್ಕೇನು ಬಾ. ಭೇಟಿ ಮಾಡಿಸುತ್ತೇನೆ' ಎಂದು ಹೇಳಿ ಅವಳ ಆಫೀಸಿನ ಮುಂದೆ ಇರುವ ಪಬ್ಲಿಕ್ ಟೆಲಿಫೋನ್ ಬೂತ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಕುಳಿತಿದ್ದ ಆಪರೇಟರ್‌ನನ್ನು ತೋರಿಸಿ 'ಇವರೇ ನಮ್ಮ ಫ್ರೆಂಡ್ ಜಗದೀಶ್. ಇವರು ನಮ್ಮ ಅಣ್ಣ ರವಿ' ಎಂದು ಪರಸ್ಪರ ಭೇಟಿ ಮಾಡಿಸಿದಳು.

ನಮಸ್ಕಾರಗಳ ವಿನಿಮಯವಾಯಿತು.

ಗೋಡೆಗೆ ಒರಗಿಸಿದ್ದ ಕ್ಲಚಸ್ ಯಾರದಿರಬಹುದೆಂದು ಜಗದೀಶನನ್ನು ನೋಡಿದ ರವಿ ಬೆಚ್ಚಿ ಬಿದ್ದನು. ಜಗದೀಶ್ ಒಬ್ಬ ಅಂಗವಿಕಲ. ಪೋಲಿಯೋದಿಂದ ಪೀಡಿತನಾಗಿ ಅವನು ಕ್ಲಚಸ್‌ಗಳ ಆಧಾರವಿಲ್ಲದೆ ನಡೆಯುವಂತಿಲ್ಲ.

ತಕ್ಷಣ ಸಾವರಿಸಿಕೊಂಡು 'ನಾನು ಶ್ರುತಿಯನ್ನು ಕರೆದುಕೊಂಡು ಹೋಗಲು ಬಂದಿದ್ದೆ. ಹಾಗೆ ನಿಮ್ಮನ್ನು ನೋಡಿದ ಹಾಗಾಯಿತು' ಎಂದು ರವಿ ಹೇಳಿದನು.

ಅವನು ತನ್ನ ಮನಸ್ಸಿನಲ್ಲಿ ಜಗದೀಶನ ಚಿತ್ರವನ್ನು ಬೇರೆ ತರಹ ಕಲ್ಪಿಸಿಕೊಂಡಿದ್ದನು.

ಸುಂದರನಾದ ಯುವಕ, ಪದವೀಧರ, ಒಳ್ಳೆಯ ಉದ್ಯೋಗದಲ್ಲಿರುವವನು. ಆದರೆ ಇಲ್ಲಿ ನೋಡಿದರೆ ಅವನ ಕಲ್ಪನೆಗೆ ವ್ಯತಿರಿಕ್ತ ಜಗದೀಶ್ ಸುಂದರನಾಗಿಯೂ ಇಲ್ಲ. ಪದವೀಧರನೂ ಅಲ್ಲ. ಕೇವಲ ಪಿಯುಸಿ ತನಕ ವಿದ್ಯಾಭ್ಯಾಸ ಮಾಡಿದ ಇವನಿಗೆ ಅಂಗವಿಕಲನೆಂಬ ಕಾರಣಕ್ಕಾಗಿ ಟೆಲಿಫೋನ್ ಆಪರೇಟರ್ ಕೆಲಸ ಸಿಕ್ಕಿದೆ.

'ನಮಸ್ಕಾರ ಬರುತ್ತೇವೆ' ಎಂದು ಹೇಳಿ ರವಿ ಶ್ರುತಿ ಹೊರಟರು.

'ಅಣ್ಣಾ ನಿನಗೆ ಜಗದೀಶನನ್ನು ನೋಡಿ ಏನನ್ನಿಸಿತು?' ನಮ್ಮ ಆಫೀಸಿನಲ್ಲಿ ಇವನನ್ನು ಕಂಡರೆ ಎಲ್ಲರಿಗೂ ಬಹಳ ಪ್ರೀತಿ. ಅವನು ಬಹಳ ಒಳ್ಳೆಯ ಹುಡುಗ ಇಲ್ಲಿ ಇವನಿಗೆ ಯಾರೂ ಬಂಧುಗಳಿಲ್ಲ. ಚಿಕ್ಕ ವಯಸ್ಸಿನಲ್ಲಿಯೇ ಇವನ ತಂದೆ ತಾಯಿಗಳು ನಿಧನರಾದರಂತೆ. ಆಮೇಲೆ ದೂರದ ಬಂಧುಗಳೊಬ್ಬರ ಮನೆಯಲ್ಲಿ ವಿದ್ಯಾಭ್ಯಾಸ ಮಾಡಿಕೊಂಡು ಪಿಯುಸಿ ಮಾಡಿದನಂತೆ. ಯಾರೋ ಒಬ್ಬರು ಸಜ್ಜನರ ಸಹಾಯದಿಂದ ಈ ಕೆಲಸ ಸಿಕ್ಕಿತಂತೆ. ಈಗ ಇವನು ಹಾಸ್ಟೆಲ್‌ನಲ್ಲಿ ಇದ್ದಾನೆ. ತನ್ನ ಕರ್ತವ್ಯವನ್ನು ಇವನು ಶ್ರದ್ಧೆಯಿಂದ ನಿರ್ವಹಿಸುತ್ತಾನೆ. ಯಾರ ಸಹಾನುಭೂತಿ, ಅನುಕಂಪಗಳು ಇವನಿಗೆ ಬೇಕಿಲ್ಲ. ತಾನು ಕಷ್ಟಪಟ್ಟು ದುಡಿದು ತನ್ನ ಜೀವನ ಮಾಡಿಕೊಳ್ಳಬೇಕೆಂಬುದೇ ಇವನ ಉದ್ದೇಶ. ಯಾರಿಗೂ ಹೊರೆಯಾಗದೇ ತಾನು ಸ್ವತಂತ್ರನಾಗಿ ಬದುಕಬಲ್ಲೆನೆಂಬ ಆತ್ಮವಿಶ್ವಾಸ ಇವನಿಗೆ, ಇಷ್ಟೇ ಅಲ್ಲದೆ ಇವನು ತನ್ನ ಸಂಪಾದನೆಯ ನಾಲ್ಕನೇ ಒಂದು ಭಾಗವನ್ನು ತನ್ನಂತಹ ಅಂಗವಿಕಲರ ಕ್ಷೇಮಾಭಿವೃದ್ಧಿಗಾಗಿ ಸಹಾಯ ಮಾಡುತ್ತಿದ್ದಾನೆ' ಎಂದು ಶ್ರುತಿ ಜಗದೀಶನ ವಿಷಯದಲ್ಲಿ ಒಂದು ಭಾಷಣವನ್ನೇ ಮಾಡಿದಳು. ತಂಗಿಯ ಮಾತನ್ನು ಕೇಳಿ ರವಿಗೆ ಮನಸ್ಸು ಹಗುರವಾಯಿತು.

ಇಂತಹ ತಂಗಿಯ ವಿಷಯದಲ್ಲಿ ಏನೇನೊ ಯೋಚನೆಗಳನ್ನು ಮಾಡಿದೆನಲ್ಲಾ ಎಂದು ಪಶ್ಚಾತ್ತಾಪ ಪಡತೊಡಗಿದನು.

'ಶ್ರುತಿ ಜಗದೀಶನನ್ನು ನೋಡಿದ ಮೇಲೆ ನನಗೇಕೋ ಎಕ್ಸಿಬಿಷನ್‌ಗೆ ಹೋಗುವುದಕ್ಕೆ ಮನಸ್ಸಿಲ್ಲ. ನೀನೇನನ್ನುತ್ತೀಯಾ?'

'ನನಗೂ ಅಷ್ಟೆ. ಇನ್ನೆಂದಾದರೂ ಹೋಗೋಣ' ಎಂದು ಶ್ರುತಿಯೂ ದನಿಗೂಡಿಸಿದಳು.

■ ಎಸ್. ನಾಡಿಗ್

ನೀರಿಗೂ ಒಂದು ಸಂಸ್ಕೃತಿ

ನೀರನ್ನು ಗೌರವಿಸುವ, ಅದನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡುವುದಕ್ಕೂ ಒಂದು ಒಳ್ಳೆಯ ಸಂಸ್ಕೃತಿ ಇರಬೇಕು. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಅತ್ಯಂತ ಪ್ರಾಚೀನ ಎನಿಸಿದ ರೋಮ್ ಸಾಮ್ರಾಜ್ಯ. ಹಾಗೇ ನಿನ್ನೆ ಮೊನ್ನೆ ಹುಟ್ಟಿ ಬೆಳೆದ ಟೋಕಿಯೋ ನಗರದ ಸಂಸ್ಕೃತಿ.

ರೋಮನ್ನರದು ಮಹಾನ್ ಸಾಮ್ರಾಜ್ಯ. ರೋಮ್ ನಗರದಲ್ಲಿ ಕುಡಿಯುವ ನೀರು ಸಾಗಾಣಿಕೆಗೆ ಎಂದೇ ಮೇಲುಗಾಲುವೆ (ಆಕ್ವಾಡಕ್ಟ್) ನಿರ್ಮಿಸಿದ್ದು ನಮಗೆ ಗೊತ್ತು. ಟೈಬರ್ ನದಿಯ ದಂಡೆಯ ಮೇಲೆ ನಗರ ಇದೆ. ಅಲ್ಲಿ ಏಕೆ ಇಂಥ ಮೇಲುಗಾಲುವೆ?

ಕಾರಣ ಇಷ್ಟೇ, ಶ್ರೀಮಂತಿಕೆಯ ಅಹಂಕಾರದ ರೋಮನ್ನರು ಗುಲಾಮರನ್ನು ಇಟ್ಟುಕೊಂಡು ನೀರು ತುಂಬಿಸಿಕೊಂಡು ಬೇಕಾಬಿಟ್ಟಿಯಾಗಿ ಖರ್ಚು ಮಾಡಿದರು. ಅವರ ಕಸ, ದೇಹದ ವಿಸರ್ಜನೆಗಳಿಂದ ತುಂಬಿದ ನದಿ ಕಲುಷಿತವಾಯಿತು. ಕೊನೆಗೆ ಅವರು ಟೈಬರ್ ನದಿಯ ಕಲುಷಿತ ನೀರು ಬಳಸಲಾಗದೇ, ದೂರದ ಊರುಗಳಿಂದ ಗುಲಾಮರಿಂದ ನೀರು ತರಿಸಬೇಕಾಯಿತು. ಹಾಗೇ ಮೇಲುಗಾಲುವೆ ಮೂಲಕ ನಗರಕ್ಕೆ ನೀರು ತರಬೇಕಾಯಿತು.

ಅದೇ ಜಪಾನಿನ ಇಡಾ ನಗರದ್ದು ಬೇರೆ ಮಾದರಿ. ಇದೇ ಮುಂದೆ ಟೋಕಿಯೋ ನಗರವಾಗಿ ಬೆಳೆಯಿತು. ಇಲ್ಲಿಯೂ ನದಿಯಿಂದಲೇ ನೀರು ಬರುತ್ತದಾದರೂ, ನೀರೊದಗಿಸುವ ನದಿಯನ್ನು ಕುಲಗೆಡಿಸಲು ಅವರೆಂದೂ ಯತ್ನಿಸಲಿಲ್ಲ. ಏಕೆಂದರೆ ಜಪಾನೀಯರಿಗೆ ನೀರು ಅತ್ಯಂತ ಪವಿತ್ರ. ಅಷ್ಟೇ ಗೌರವ ನೀಡಬೇಕಾದ ವಸ್ತು.

ನಿತ್ಯ ವಿಸರ್ಜನೆಯಾಗುವ ಮಲವನ್ನು ಹೊತ್ತೊಯ್ದು ಜಮೀನಿಗೆ ಸುರಿದು ಫಲವತ್ತುಗೊಳಿಸುತ್ತಿದ್ದರು. ನದಿಗೆ ಬಿಟ್ಟು ಅದನ್ನು ಕಲುಷಿತಗೊಳಿಸುತ್ತಾ ಇರಲಿಲ್ಲ.

ನದಿಯ ದಂಡೆಗಳಲ್ಲಿ ಪ್ರಾಚೀನ ಸಂಸ್ಕೃತಿಗಳು ಅರಳಿವೆ. ಆದರೆ ಅದೇ ನದಿಗಳ ದಂಡೆಯಲ್ಲಿ ಇಂದು ಆಧುನಿಕ ನಾಗರೀಕತೆಗಳು ವಿನಾಶಕ್ಕೆ ದಾರಿ ಮಾಡುತ್ತಿವೆ.

ನೀರು! ನೀರು !

ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳೇ ನಮಗೆ ಮಾದರಿ. ನೀರಿನ ವಿಚಾರಕ್ಕೂ ಇದು ನಿಜ. ನೀರಿನ ನಿರ್ವಹಣೆ ಕುರಿತು ಚಿಂತಿಸುವ ಎರಡು ಮಹಾ ಸಂಸ್ಥೆಗಳು ನಮ್ಮಲ್ಲಿವೆ. ಒಂದು ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್. ಇನ್ನೊಂದು ರೂರ್ಕಿ ವಿಶ್ವವಿದ್ಯಾಲಯ. ಇಲ್ಲಿ ಕಲಿಸುವುದು, ಚಿಂತಿಸುವುದು ಪಾಶ್ಚಿಮಾತ್ಯ ಚಿಂತನೆಗಳನ್ನು.

ಹೀಗಾಗಿಯೇ ನಮ್ಮ ನದಿಗಳಿಂದು ಅತ್ಯಂತ ಕಲುಷಿತ,. ಕುಡಿಯಲು ಜನಕ್ಕೆ ನೀರಿಲ್ಲ. ಇರುವ ನೀರಿನ ನಿರ್ವಹಣೆಯ ಬಗ್ಗೆ ಯಾರೂ ಚಿಂತಿಸುತ್ತಿಲ್ಲ. ಇದೇ ರೀತಿ ಮುಂದುವರೆದರೆ ಈ ಶತಮಾನದ ಅತ್ಯಂತ ದೊಡ್ಡ ಸವಾಲು 'ನೀರಿನ ಬರ' ಆಗಿರುತ್ತದೆ.

ನಗರಗಳಿಗೆ ಇಲ್ಲಿ ದಂಡಿಯಾಗಿ ನೀರು. ಒಮ್ಮೆ ಟಾಯಿಲೆಟ್‌ನಲ್ಲಿ ನೀರು ಫ್ಲಷ್ ಮಾಡಿದರೆ ಹದಿನಾರು ಲೀಟರ್ ನೀರು ಕಲುಷಿತಗೊಂಡು ಹೊರ ಹರಿಯುತ್ತದೆ. ಇದು ಕೊನೆಗೆ ಸೇರುವುದು ಹತ್ತಿರದ ನದಿಯನ್ನು.

ಸೋರುವ ನಲ್ಲಿ ಇನ್ನೊಂದು ಸಮಸ್ಯೆ. ತೊಟ್ಟಿಕ್ಕುವ ನಲ್ಲಿಯಿಂದ ಒಂದು ದಿನಕ್ಕೆ ಮೂರು ಬಕೆಟ್ ನೀರು ಸೋರಿ ಹೋಗುತ್ತದೆ. ಅಂದರೆ ಸುಮಾರು ಅರವತ್ತು ಲೀಟರ್. ಇಡೀ ದೇಶದಲ್ಲಿ ದಿನಕ್ಕೆ ಕನಿಷ್ಠ ಐವತ್ತೈದು ಲೀಟರ್ ಶುದ್ಧ ಕುಡಿಯುವ ನೀರು ಪ್ರತಿಯೊಬ್ಬ ವ್ಯಕ್ತಿಗೂ ಒದಗಿಸುವ ಗುರಿ ಇದೆ. ದೆಹಲಿಯ ಏರ್ ಕಂಡೀಷನ್ಡ್ ರೂಮಿನ ಕುರ್ಚಿಗಳಲ್ಲಿ ಕುಳಿತು ಅಂಕಿ, ಸಂಖ್ಯೆ ಎದುರಿಟ್ಟುಕೊಂಡು ಲೆಕ್ಕ ಹಾಕುವ ಜನಕ್ಕೆ ಸರಾಸರಿ ಸಿಗುತ್ತದೆ. ಆದರೆ ವಾಸ್ತವವಾಗಿ, ಹಳ್ಳಿಯ ಸಾಮಾನ್ಯನೊಬ್ಬನ ಪಾಲಿನ ಕುಡಿಯುವ ನೀರು ನಗರದ ಶ್ರೀಮಂತನ ಮನೆಯ ಟಾಯಿಲೆಟ್‌ನಲ್ಲಿ ಹರಿದು ಹೋಗಿರುತ್ತದೆ.

■

ಮೊದ್ದು

ಸೌಂದರ್ಯ
ನೋಡುವ
ಕಣ್ಣುಗಳಲ್ಲಿ
ಇರುತ್ತದಂತೆ.
ಜೀವಂತ ಗೊಂಬೆ,
ಹೊಸ ಹೆಂಡತಿ
ಎದುರಿಗೇ
ಇರುವಾಗ,
ಜೀವವಿಲ್ಲದ
ಗೊಂಬೆಗಳನ್ನು
ನೋಡುತ್ತಾ
ನಿಂತರೆ ಸಿಟ್ಟು
ಬರುವುದಿಲ್ಲವೇ?

ರಂಗಸ್ವಾಮಿಗೆ ಮದುವೆಯಾಗಿ ಮೂರು ದಿನಗಳಾಗಿದ್ದವು. ಮದುವೆಯಾದ ಮೇಲೆ ಮಧುಚಂದ್ರಕ್ಕೆ ಹೋಗದಿದ್ದ ಮೇಲೆ ಮದುವೆಯಾದದ್ದು ಸಾರ್ಥಕವಿಲ್ಲ ಎಂದು ನಂಬಿದ್ದ. ಅದಕ್ಕೆಂದೇ ದೂರದ ಊಟಿಗೋ ಖಜಾರಾಹೋಗೋ ಹೋಗುವಷ್ಟು ಆರ್ಥಿಕ ಶಕ್ತಿ ಇಲ್ಲದ ಬಡಪಾಯಿ. ಏನು ಮಾಡಿಯಾನು? ಕೊನೆಗೂ ಅವನು ಆರಿಸಿಕೊಂಡದ್ದು ನಮ್ಮ ಚೆಲುವ ಕನ್ನಡ ನಾಡಿನ ಹೆಮ್ಮೆಯ ಪ್ರೇಕ್ಷಣೀಯ ಸ್ಥಳಗಳಾದ ಬೇಲೂರು, ಹಳೆಬೀಡು ಮತ್ತು ಶ್ರವಣಬೆಳಗೊಳವನ್ನು. ವಿಷಯವನ್ನು ನವ ವಧು ಪದ್ಮಳಿಗೆ ತಿಳಿಸಿದಾಕ್ಷಣ ಹುರುಪಿನಿಂದ ಹೊರಟು ಬಿಟ್ಟಳು. ಅದನ್ನು ಕಂಡು.... ಕೆ.ಎಸ್.ನ. ಅವರ 'ಮದುವೆಯಾಗಿ ತಿಂಗಳಿಲ್ಲ ನೋಡಿರಣ್ಣ ಹೇಗಿದೆ ನಾನು ಕೂಗಿದಾಗಲೆಲ್ಲ ಬರುವಳೆನ್ನ ಶಾರದೆ....' ಎನ್ನುವುದನ್ನು ಸೂಕ್ತ ಬದಲಾವಣೆಗಳೊಂದಿಗೆ 'ಮದುವೆಯಾಗಿ ತಿಂಗಳಿಲ್ಲ ಬರುವಳೆನ್ನ ಪದ್ದುಮಾ....' ಎಂದು ಗುನುಗಿಕೊಂಡು ಪ್ರವಾಸಕ್ಕೆ ಹೊರಟು ನಿಂತ.

ಅಷ್ಟೇನೂ ಕಲಿಯದ ಅಕ್ಕನ ಮಗಳು ಪದ್ಮಳನ್ನು ಮದುವೆಯಾಗಿದ್ದ ರಂಗಸ್ವಾಮಿ, ಬೇಲೂರಲ್ಲಿ ದೇವಸ್ಥಾನದ ಬೀದಿಯಲ್ಲಿ ಅಲೆದಾಡುತ್ತಿದ್ದ ಪದ್ಮಳನ್ನು ಕಂಡು ಚಕಿತನಾಗಿ.... 'ಎಲ್ಲಿಗೆ....?' ಎಂದನು. 'ಇರ್ರೀ.... ಪೂಜೆ ಸಾಮಾನು ತಗೊಳ್ಳೋದು ಬೇಡ್ವಾ.... ಒಂಥರಾ ಕಂಜ್ಯೂಸೂ ನೀವು....' ಎಂದು ಆಕ್ಷೇಪಿಸುತ್ತ ತನ್ನ ಪಾಕೀಟಿನಿಂದ... ಮಡಿಕೆಗಳ ಮೇಲೆ ಮಡಿಕೆಗಳಾಕಿರಿಸಿದ್ದ ಹಳೆಯ ಐವತ್ತು ರೂಪಾಯಿ ನೋಟು ಹೆಕ್ಕಿ ತೆಗೆದು ಪೂಜಾ ಸಾಮಗ್ರಿಗಳನ್ನು ಕೊಂಡಳು. ರಂಗಸ್ವಾಮಿ ವಿಧಿ ಇಲ್ಲದೆ ಅವಳ ಹಿಂದೆ ಹೋದನು. ನಂತರ ಅವರ ಸವಾರಿ ದೇವಸ್ಥಾನದ ಒಳಗಡೆ ಹೋಯಿತು.

ದೇವಸ್ಥಾನದ ಪ್ರಾಂಗಣ ಪ್ರವೇಶಿಸಿ ಸೀದಾ ಗರ್ಭಗುಡಿ ತಲುಪಿ ಅಡ್ಡ ನಮಸ್ಕಾರ ಹಾಕಿಯೇ ಬಿಟ್ಟಳು ಪದ್ಮ. ರಂಗಸ್ವಾಮಿಗೆ ದೇವಸ್ಥಾನದ ಕಲಾ ಸೌಂದರ್ಯ ಕಾಣುವ ತವಕದಿಂದ, ಇತ್ತ ಹೊರಗಡೆ ಸರಿದು ಅಂದ ಚೆಂದದ ಶಿಲ್ಪಗಳನ್ನು ಕಣ್ಣಾರೆ ಕಂಡು ಅವುಗಳ ಸೌಂದರ್ಯ ಸವಿಯುತ್ತ ನಿಂತಿದ್ದನು. ಸ್ವಲ್ಪ ಹೊತ್ತಿನ ನಂತರ... ಚೆನ್ನಕೇಶವನಿಗೆ ಪೂಜೆ ಸಲ್ಲಿಸಿದ ಪದ್ಮಳಿಗೆ ಪತಿರಾಯರೆಲ್ಲಿ ಎನ್ನುವ ಆತಂಕ ಮೂಡಿತು. ಅತ್ತಿತ್ತ ನೋಡಿ. ಅಲ್ಲೆಲ್ಲೂ ಕಾಣದೆ ಹೋದಾಗ. ಹೊರಗಡೆ ಬಂದು ಸುತ್ತಲೂ ನೋಡಿದಳು. ಅಲ್ಲೇ ಅಷ್ಟು ದೂರದಲ್ಲಿ ರಂಗಸ್ವಾಮಿ ನಿಂತು ಕಣ್ಣನ್ನು ಮುಚ್ಚದೆ ನೋಡಿದ್ದೇ ನೋಡುತ್ತಿದ್ದುದ್ದು ಕಂಡು ಅಚ್ಚರಿಯಿಂದ ಹತ್ತಿರ ಬಂದಳು. ಒಂದು ಕ್ಷಣ ರಂಗಸ್ವಾಮಿ ಈ ರೀತಿ ಎವೆಯಿಕ್ಕದೆ ನೋಡುತ್ತಿರುವುದ್ಯಾದರೂ ಏನು ಎಂದು ಗಮನಿಸಿದಳು. ಹೌಹಾರಿದಳು. ಅಲ್ಲಿ ಒಂದು ಕ್ಷಣವೂ ನಿಲ್ಲದೆ ಅಳುತ್ತ ದೇವಸ್ಥಾನದ ಹೊರಗಡೆ ಬಂದು ನಿಂತು ಬಿಟ್ಟಳು.



ರಂಗಸ್ವಾಮಿಗೆ ಪದ್ಮ ಬಂದದ್ದಾಗಲಿ ಹೋದದ್ದಾಗಲೀ ಇದ್ಯಾವುದರ ಪರಿವೆಯೇ ಇಲ್ಲದೆ ಬೇಲೂರಿನ ದೇವಸ್ಥಾನದ ಕಲಾ ಸೌಂದರ್ಯವನ್ನು ಸವಿದು ಸಂತೃಪ್ತಿ ಮನದಿಂದ ಹೊರಟಾಗ ಪದ್ಮಳ ನೆನಪಾಯ್ತು! ಹೌದು.... ನಾನು ಬರುವಾಗ ಪದ್ಮಳೊಟ್ಟಿಗಲ್ಲವೆ ಬಂದಿದ್ದು... ಎಲ್ಲಿ ಹೊರಟು ಹೋದಳು ಎನ್ನುತ್ತ ಗಾಬರಿಯಿಂದ ಸುತ್ತಲು ಕಣ್ಣಾಯಿಸಿದನು. 'ಎಲ್ಲಿ ಹೋದಳು..... ಹಾಳಾದೋಳು?' ಎಂದು ಗೊಣಗಿಕೊಳ್ಳುತ್ತಲೇ ದೃಷ್ಟಿ ಹಾಯಿಸುತ್ತಿರುವಾಗ ದೇವಸ್ಥಾನದ ಮಹಾದ್ವಾರದ ಬಳಿ ಪದ್ಮ ನಿಂತಿರುವುದು ಕಂಡು ಸಮಾಧಾನಗೊಂಡು ಹತ್ತಿರ ಹೋದನು. 'ಇಲ್ಲೀ ಹೀಗೇಕೆ ನಿಂತ್ಯೇ ಪದ್ಮಾ ದೇವಸ್ಥಾನದ ಸುಂದರ ಕೆತ್ತನೆಯನ್ನು ನೋಡದೆಯೇ....?' ಎಂದಾಗ ಅವಳು ಏನೂ ಮಾತನಾಡದೆಯೆ ಮುಸಿ ಮುಸಿ ಅಳುತ್ತಿದ್ದಳು. ಅವಳು ಅಳುತ್ತಿರುವುದನ್ನು ಕಂಡು ಗಾಬರಿಯಾದ ರಂಗಸ್ವಾಮಿ... 'ಏನಾಯ್ತೆ?' ಎನ್ನುತ್ತ ಮೊದಲು ಪದ್ಮಳ ಕುತ್ತಿಗೆಯನ್ನು ಪರಿಶೀಲಿಸಿ.... ಅವ್ವ ಹಾಕಿದ ಮೂರೆಳೆ ಚಿನ್ನದ ಸರ ಇದೆಯೋ ಹೇಗೆ? ಎಂದು ಖಚಿತಪಡಿಸಿಕೊಂಡನು. ನಂತರ ಪದ್ಮಳನ್ನು ನೋಡುತ್ತ ಅರ್ಥವಾಗದೆ 'ನೀನು ಅಳುತ್ತಿರುವುದು ಕಂಡು ಯಾರೋ ನಿನ್ನ ಚಿನ್ನದ ಸರ ಕಿತ್ಕೊಂಡು ಓಡಿದರೇನೋ ಅಂತ ಗಾಬರಿಯಾಯ್ತು. ಹೀಗ್ಯಾಕೆ ಅಳ್ತಿದ್ದೀಯಾ? '

ಮತ್ತೆ ಕೇಳಿದ, ಆದರೆ ಪದ್ಮಳು ಮಾತ್ರ ಮೌನ ತಾಳಿದ್ದಳು. ಯಾವುದಕ್ಕೂ ಅವಳಿಂದ ಉತ್ತರವೇ ಬರಲಿಲ್ಲ. 'ಯಾಕೇ.... ಇಂಥ ಸಮಯದಲ್ಲಿ.... ಸಮ್ಮಕ್ಕ.... ಅದೇ ನಿನ್ನ ಅಮ್ಮಾ ಬದುಕಿಲ್ಲವಲ್ಲ ಅಂತಾನಾ? ಅಕ್ಕನ ನೆನಪಾಯ್ತಾ?' ಎಂದನು... ಅದಕ್ಕೂ ಉತ್ತರವಿಲ್ಲ. 'ಹಾಳಾಗಿ ಹೋಗ್ಲಿ' ಎಂದು ಅವನಷ್ಟಕ್ಕೆ ಅವನೇ ಗೊಣಗುತ್ತ ಹಳೇಬೀಡಿನತ್ತ ಪ್ರಯಾಣ ಬೆಳೆಸಲು ಸಿದ್ಧನಾಗಿ ಬಸ್ ಸ್ಟಾಪಿನತ್ತ ಹೆಜ್ಜೆ ಇಟ್ಟನು.

ಪದ್ಮ ಹಿಂಬಾಲಿಸಿದಳು.

ಹಳೆಬೀಡು ಅರ್ಧ ಗಂಟೆಯಲ್ಲಿ ಬಂದೇ ಬಿಟ್ಟಿತು. ರಂಗಸ್ವಾಮಿ ಬಸ್ಸಿನಿಂದಿಳಿದು ಸುಂದರ ಶಿಲ್ಪಗಳ ವೀಕ್ಷಣೆಯಲ್ಲಿ ತೊಡಗಿದ. ಪದ್ಮ ಬಸ್ಸಿನಿಂದ ಕೆಳಗಿಳಿದು ನೋಡುತ್ತಾಳೆ. ಆ ದೇವಸ್ಥಾನದಲ್ಲಿ ಪೂಜೆಯೂ ಇಲ್ಲ ಪೂಜಾರಿಯೂ ಇಲ್ಲ, ಎಲ್ಲಾ ಪಾಳು ಪಾಳು! ರಂಗಸ್ವಾಮಿ ಹತ್ತಿರ ಬಂದು 'ಇಲ್ಲಿಗ್ಯಾಕ್ರೀ ಬಂದದ್ದು. ಇಲ್ಲಿ ಏನ್ ನೋಡೋದಿದೆ?' ಎನ್ನುತ್ತ ಮುಖವನ್ನು ಸಿಂಡರಿಸಿದಳು. ಆಗ ರಂಗಸ್ವಾಮಿ ಬೇಸತ್ತು.... ಸಿಟ್ಟಿನಿಂದ.... 'ನೀನು.... ಅಲ್ಲಿ ಒಂದು ಕಡೆ ನಿಂತುಕೊಂಡಿರು.... ನಾನು ಸ್ವಲ್ಪ ಹೊತ್ತು ಬಿಟ್ಟು ಬರ್ತೀನಿ' ಎಂದು ಉತ್ತರಿಸಿದ. ಪದ್ಮ ಸೂಕ್ಷ್ಮವಾಗಿ ರಂಗಸ್ವಾಮಿಯ ಚಲನವಲನ ಗಮನಿಸುತ್ತ ಒಂದೆಡೆ ನಿಂತುಕೊಂಡಳು. ಮನದಲ್ಲಿಯೇ ಗೊಣಗುತ್ತಿದ್ದಳು. 'ಥೂ ಅದು ಎಷ್ಟು ಹೊತ್ತು ನೋಡಿದ್ದೇ ನೋಡ್ತಾರೋ ಅಲ್ಲಿ ಬೇಲೂರಿನಲ್ಲಿ ನೋಡಿದ್ದು ಸಾಕಾಗಲಿಲ್ವಾ?' ಎನ್ನುತ್ತಿದ್ದಳು.

ಕಾರ್ಯನಿಷ್ಠೆ



ಅರಳುವ ಹೂವಿಗೆ
ಬಾಡುವುದು
ಅನಿವಾರ್ಯ
ಆದರೂ
ಅರಳುವುದು
ಅದರ ನಿತ್ಯಕಾರ್ಯ!

■ ಶ್ರೀರೇಖಾ ವಿ. ಕುಲಕರ್ಣಿ

ಬೇಲೂರು ಹಳೇಬೀಡಿನ ಯಾತ್ರೆ ಮುಗಿಸಿ ಇವರ ಪ್ರಯಾಣ ಶ್ರವಣಬೆಳಗೊಳಕ್ಕೆ ಹೊರಟಿತು. ರಂಗಸ್ವಾಮಿ.... ಪದ್ಮ ಶ್ರವಣ ಬೆಳಗೊಳದಲ್ಲಿ ಏದುತ್ತ ಮೆಟ್ಟಿಲು ಹತ್ತಿ ಗಿರಿಯ ಮೇಲೆ ಏರಿ ಹೋದರು. ಬೆಟ್ಟದ ತುದಿಯಲ್ಲಿರುವ ಸುಂದರ ಬಾಹುಬಲಿ ವಿಗ್ರಹ ಸಮೀಪಿಸುತ್ತಿದ್ದಂತೆಯೇ... ಸ್ವಲ್ಪ ಸಮಯ ಶಾಂತ ಚಿತ್ತನಾಗಿ ದೃಢ ಸಂಕಲ್ಪದಿಂದ ನಿಂತಿರುವ ಬಾಹುಬಲಿ ಏಕಶಿಲಾ ವಿಗ್ರಹ ನೋಡಿ ಮೈ ಮರೆತು ಬಿಟ್ಟ ರಂಗಸ್ವಾಮಿ. ನಂತರ ಪದ್ಮಳನ್ನು ಕುರಿತು... 'ನೋಡಿದೆಯಾ ಪದ್ಮ, ಮೂರ್ತಿಯನ್ನು ಆ ಶಿಲ್ಪಿ ಎಷ್ಟು ಸೊಗಸಾಗಿ ಕೆತ್ತಿದ್ದಾನೆ. ಒಂದು ಕಗ್ಗಲ್ಲನ್ನು ಇಂತಹ ಸುಂದರ ಮೂರ್ತಿಯನ್ನಾಗಿಸಲು ಅವನಲ್ಲಿ ಆಗ ಅದೆಂತಹ ದೃಢ ಸಂಕಲ್ಪ ಇದ್ದಿರಬೇಕು. ಸಹನೆ ಸಂಯಮ ಇದ್ದಿರಬಹುದು?' ಎಂದು ಇನ್ನೂ ಏನೆಲ್ಲಾ ಹೇಳುತ್ತ ಪದ್ಮಳತ್ತ ತಿರುಗಿ ನೋಡುತ್ತಾನೆ..... ಪದ್ಮಳಿಲ್ಲ! ಗೊಮ್ಮಟಗಿರಿಯ ಮೇಲೆಲ್ಲ ಪದ್ಮಳಿಗೆ ಹುಡುಕಾಟ ನಡೆಸಿದ ಅಲ್ಲೆಲ್ಲಿಯೂ ಅವಳ ಸುಳಿವೇ ಇಲ್ಲ! ಬೇಸತ್ತ ರಂಗು ಗೊಮ್ಮಟಗಿರಿಯನ್ನು ಸರಸರನೆ ಗಾಬರಿಯಿಂದ ಕೆಳಗೆ ಇಳಿದನು. ಪದ್ಮ ಅಲ್ಲಿ ಬಂದು ನಿಂತಿದ್ದಾಳೆ....! ಬಿಮ್ಮನೆ ಬಿಗಿದುಕೊಂಡು ನಿಂತಿದ್ದಳು. ರಂಗು ಸಿಟ್ಟಿನಿಂದ 'ಎಲ್ಲೆಲ್ಲಿ ಹುಡುಕೋದು ಪದ್ಮ ನಿನ್ನನ್ನ? ನನಗೆ ಒಂದು ಮಾತು ತಿಳಿಸದೇ ಹಾಗೇಕೆ ಓಡಿ ಬಂದ್ಯೆ...?' ಎಂದು ಸಿಟ್ಟುಗೊಂಡ. ಪದ್ಮ ಯಾವುದಕ್ಕೂ ಮೌನ. ಯಾವುದರಲ್ಲೂ ಆಸಕ್ತಿ ಇಲ್ಲದೆ ಸಂಜೆ ಊರು ತಲುಪಿದರು. ಅವರ ಮಧು ಚಂದ್ರ ಮುಗಿದು ಹೋಯ್ತು.

ಅಂದು ರಾತ್ರಿ ಪದ್ಮ ಹಾಲಿನ ಬಟ್ಟಲನ್ನು ರಂಗಸ್ವಾಮಿಯ ಬಳಿ ಕುಕ್ಕಿ ಕೋಪ ಕಾರುತ್ತ ಅತ್ತ ತಿರುಗಿ ಮಲಗಿದಳು. ಅರ್ಥವಾಗದೆ ಅವಳ ಕೋಪಕ್ಕೆ ಕಾರಣ ತಿಳಿಯಲು ರಂಗು ಪದ್ಮಳನ್ನು ರಮಿಸುತ್ತ... 'ಏಕೆ ಇವತ್ತು ಬೆಳಗ್ಗೆಯಿಂದಲೂ ಹೀಗೇ ವರ್ತಿಸುತ್ತಿದ್ದೀಯಾ...? ಏನಾಯ್ತೆ ನಿನಗೆ....? ನಿನ್ನ ಸಮಸ್ಯೆಯನ್ನಾದರು ಹೇಳು. ನೀನು ಮೌನವಾಗಿದ್ದರೆ ನನಗೆ ತಿಳಿಯುವುದಾದರು ಹೇಗೆ ನೀನೇ ಹೇಳು?' ಎಂದನು. ನಂತರವೂ ಮೌನವೇ ಉತ್ತರವಾಯ್ತು. ಬಹಳಷ್ಟು ರಂಗು ಅವಳನ್ನು ಪೀಡಿಸಿದ ಮೇಲೆ ಮೆಲ್ಲನೆ ಬಾಯ್ತೆರೆದಳು. 'ಮತ್ತೆ.... ಮತ್ತೆ.... ನೀವು ಬೇಲೂರು... ಹಳೆ ಬೀಡಿನಲ್ಲಿ, ಆ ಕೊಳಕು ಕಲ್ಲಿನ ಗೊಂಬೆಗಳನ್ನು ನೋಡ್ತಾ ನಿಂತಿದ್ರಲ್ಲಾ, ನಿಮಗೆ ನಾಚಿಗೆ ಆಗಲಿಲ್ವೆ ಥೂ... ಎಂಥೆಂಥ ಗೊಂಬೆ ಕೆತ್ತಿದ್ದಾರೆ, ಅದೂ ದೇವಸ್ಥಾನದಲ್ಲಿ! ಯಾರೋ ಪೋಕರಿ ಹುಡುಗ್ರು. ಮತ್ತೆ ಆ ಶ್ರವಣಬೆಳಗೊಳಕ್ಕೆ ಕರ್ಕೊಂಡು ಹೋದ್ರೀ.... ಅಲ್ಲಿಯೋ ಈ ಬೇಲೂರು, ಹಳೇಬೀಡೇ ಎಷ್ಟೋ ವಾಸಿ ಅನ್ನಿಸ್ತು. ದೇವರಂತೆ ದೇವರು ಆ ವಯ್ಯನಿಗೆ ಒಂದು ನಿಕ್ಕರ್ ಹೊಲಿಸಿ ಹಾಕೋದಿಕ್ಕೆ ಅದೇನು ದಾಡಿ ಅಲ್ಲೀ ಜನಕ್ಕೇ!' ಅಂದಳು ಪದ್ಮ. ರಂಗಸ್ವಾಮಿ ಪದ್ಮಳ ಮಾತು ಕೇಳಿ ನಿದ್ರೆ ಹೋದನೋ ಪ್ರಜ್ಞಾಶೂನ್ಯನಾದನೋ ತಿಳಿಯಲಿಲ್ಲ!

■ ಕ.ಬ.ವೀರಣ್ಣ, ಕಣ್ಣಾಗಲ

ಏಷಿಯಾದ ಸಮಸ್ಯೆ

ಇಡೀ ಏಷಿಯಾದಲ್ಲಿ ಜಲ ಸಂಪತ್ತಿನ ಪ್ರದೇಶವೆಂದರೆ ಆಗ್ನೇಯ ಏಷಿಯಾ. ಅಲ್ಲಿನ ಭೂ ಪ್ರದೇಶದ ವಿಸ್ತಾರ 435 ದಶಲಕ್ಷ ಹೆಕ್ಟೇರ್. ಮಳೆಯ ಸರಾಸರಿ ಪ್ರಮಾಣ 1600 ಮಿಮೀ ನಿಂದ 3000 ಮಿ.ಮೀ. ಅದೇ ದಕ್ಷಿಣ ಏಷಿಯಾದ ಭೂ ಪ್ರದೇಶದ ಪ್ರಮಾಣ 650 ದಶಲಕ್ಷ ಹೆಕ್ಟೇರ್. ಇದರಲ್ಲಿ ಭಾರತದ ಭೂ ಪ್ರದೇಶದ ವ್ಯಾಪ್ತಿ 325 ಮಿಲಿಯನ್ ಹೆಕ್ಟೇರ್. ಆದರೆ ಸರಾಸರಿ ಮಳೆ ಕೇವಲ 1100 ಮಿ.ಮೀ. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಆಗ್ನೇಯ ಏಷಿಯಾದ ಎರಡರಷ್ಟು ಜನಸಂಖ್ಯೆ ಇಲ್ಲಿದೆ. ಇಲ್ಲಿನ ಜನಸಂಖ್ಯೆ ಅರ್ಧದಷ್ಟು ಕಡಿಮೆಯಾಗಿ ಮಳೆಯ ಸರಾಸರಿ ಈಗಿನ ಎರಡರಷ್ಟಾದರೆ ಮಾತ್ರ ನೀರಿನ ಬರದಿಂದ ಮುಕ್ತಿ ಕಾಣಬಹುದು. ■



ನಿದ್ದೆ ಏಕೆ ಬೇಕು? ಎಷ್ಟು ಬೇಕು?

ನಿದ್ದೆಯ ಬಗ್ಗೆ ತಿಳಿಯಬೇಕಾದ್ದು ಬೇಕಾದಷ್ಟಿದೆ. ಕಡಿಮೆ ನಿದ್ದೆ ಮಾಡುವವರು ಪಡಬಾರದ ಪಾಡು ಪಡುತ್ತಾರೆ. ಜಾಸ್ತಿ ನಿದ್ದೆ ಮಾಡಿ ಸೋಮಾರಿಗಳಾಗುತ್ತಾರೆ. ಮೈಯಿಡೀ, ಮನಸ್ಸಿಡೀ ಜಡತ್ವ ತುಂಬಿಕೊಳ್ಳುತ್ತದೆ. ಹಾಗಾದರೆ ನಮಗೆಷ್ಟು ನಿದ್ದೆ ಬೇಕು? ■

ಎಲ್ಲ ಜೀವಿಗಳು ನಿದ್ರಿಸುತ್ತವೆ. ನಿದ್ರೆಯ ಅವಧಿ ಆಯಾ ಜೀವಿಯ ಸ್ವರೂಪ ಮತ್ತು ಚಟುವಟಿಕೆ ಅವಲಂಬಿಸಿರುತ್ತದೆ. ನಿದ್ರೆಯಿಂದ ದಣಿದವನ ದೇಹಕ್ಕೆ ಹುರುಪು, ಮರಳಿ ಕಸುವು. ಮರುದಿನ ಚಟುವಟಿಕೆಗೆ ಸ್ಫೂರ್ತಿ.

ಚಿಂತೆ ಇಲ್ಲದವನಿಗೆ ಸಂತೆಯಲ್ಲಿ ನಿದ್ದೆ.

ಒಂದು ಹೆಜ್ಜೆ ಮುಂದೆ ಹೋದ ವರಕವಿ ಬೇಂದ್ರೆ

'ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೋ!'

ಎಂದು ಪರಿತಪಿಸಿದ್ದಾರೆ.

'ನಿದ್ದೆಗೇಡಾದರೆ ಬುದ್ಧಿಗೇಡು' ಎಂಬ ಗಾದೆಯೂ ಇದೆ.

ನಿದ್ರೆ ಸಹಜ. ಆದರೆ ಎಲ್ಲ ಸಹಜ ಸಂಗತಿಗಳಿಂದ ದೂರವಾಗಲು ಮನುಷ್ಯ ಯತ್ನಿಸುವಂತೆ ಕಾಣುತ್ತದೆ. ಆ ದೃಷ್ಟಿಯಿಂದ ಆಧುನಿಕತೆ ಒಂದು ಶಾಪ. ರಾತ್ರಿಯನ್ನು ಹಗಲು ಮಾಡುವ ವಿದ್ಯುತ್ ದೀಪಗಳು, ರಾತ್ರಿ ಕಾಲಿರಿಸುವ ಹೊತ್ತಲ್ಲಿ ಚುರುಕಾಗುವ ಸೈಬರ್ ಕೆಫೆಗಳು. ತಡವಾಗಿ ಸಂಸಾರ ಸಮೇತ ಹೊರಟು ನಿರಾಳವಾಗಿ ರೆಸ್ಟೋರೆಂಟ್‌ಗಳಲ್ಲಿ ತಿಂದು, ಕುಡಿದು ಶ್ರೀಮಂತಿಕೆ ಮೆರೆಸುವ ಫ್ಯಾಷನ್ನು. ರಾತ್ರಿ ಪಾಳಿಯಲ್ಲಿ ದುಡಿಯಬೇಕಾದ ಕಾರ್ಮಿಕ. ರಾತ್ರಿ ಬೆಳಗಾಗುವುದರೊಳಗೆ ಪ್ರಯಾಣಿಕರನ್ನು ದೂರದೂರಿಗೆ ಒಯ್ದು ಮುಟ್ಟಿಸಬೇಕಾದ ವಿಮಾನ ಚಾಲಕ, ವಾಹನಗಳ ಚಾಲಕರು. ರಾತ್ರಿ ತೀರಾ ತಡವಾಗಿ ಬಿತ್ತರಗೊಳ್ಳುವ ಬಿಸಿಬಿಸಿ ಕಾರ್ಯಕ್ರಮಕ್ಕಾಗಿ ಟಿವಿ ಮುಂದೆ ಕಾಯುತ್ತಾ ಕೂರುವ ಯುವಕ. ಮುಂಜಾನೆಯ ನಸುಕಿಗೇ ಮನೆಯ ಹೊಸ್ತಿಲಿಗೆ ಬಂದು ಬೀಳುವ ಪೇಪರ್‌ನ ಒಡಲಿಗೆ ಸುದ್ದಿ ಬಸಿಯುವ ಪತ್ರಕರ್ತ.... ಎಲ್ಲ ರಾತ್ರಿಯ ನಿದ್ರೆಗೆ ಎರವಾಗುತ್ತಾರೆ.


ನಿದ್ದೆಗೇಡಾದರೆ..

ಇದರಿಂದ ಏನು ಮಹಾ ದುರಂತ ಆದೀತು? ಎನ್ನಬಹುದು. ಆಗುತ್ತದೆ ಎನ್ನುತ್ತದೆ ಅಮೇರಿಕಾದ ರಾಷ್ಟ್ರೀಯ ನಿದ್ರಾ ಪ್ರತಿಷ್ಠಾನ. ದಿನಕ್ಕೆ ಆರೂವರೆ ತಾಸಿಗಿಂತ ಕಡಿಮೆ ನಿದ್ರಿಸುವುದು ಮಾರಕ ಆಗಬಲ್ಲದ್ಧು ಎಂದು ಪ್ರತಿಷ್ಠಾನ ಎಚ್ಚರಿಕೆ ನೀಡಿದೆ. ಹಗಲಲ್ಲಿ ಎಷ್ಟೇ ನಿದ್ದೆ ಮಾಡಿರಲಿ, ರಸ್ತೆ ಅಪಘಾತಗಳು ನಡುರಾತ್ರಿಯಿಂದ ಬೆಳಗಿನ ಆರು ಗಂಟೆಯೊಳಗೆ ಹೆಚ್ಚಾಗಿ ನಡೆಯುತ್ತವೆ ಎಂದು ಅಧ್ಯಯನ ಹೇಳುತ್ತದೆ. ಕೈಗಾರಿಕಾ ದುರ್ಘಟನೆಗಳೂ ಈ ಅವಧಿಯಲ್ಲೇ ಹೆಚ್ಚು. ಚೆರ್ನೋಬೈಲ್‌ನಂಥ ಅಣುಸ್ಥಾವರದ ಮಾರಕ ದುರಂತ ನಡೆದದ್ದೂ ನಿದ್ದೆಗೇಡಾದವರಿಂದಾಗಿ ಎಂದಾಗ ನಿದ್ದೆಯ ಮಹತ್ವ ಅರಿವಾದೀತು.

ಚೆನ್ನಾಗಿ ನಿದ್ದೆ ಮಾಡುವವರಿಗಿಂತ ನಿದ್ದೆ ಬಿಡುವವರ ಸಾವಿನ ಸಾಧ್ಯತೆ ಎರಡೂವರೆ ಪಟ್ಟು ಹೆಚ್ಚು ಎಂದು ತಿಳಿದು ಬಂದಿದೆ. ಪ್ರಯೋಗಾಲಯದಲ್ಲಿ ಇಪ್ಪತ್ತು ದಿನ ನಿದ್ದೆಗೆಟ್ಟ ಬೆಕ್ಕುಗಳು ಸಾವಿನ ದವಡೆಯಿಂದ ಪಾರಾದಂತೆ ಕಂಡೆ, ಮುಂದೆ ಕೆಲವೇ ತಾಸಿನಲ್ಲಿ ಸತ್ತ ಉದಾಹರಣೆ ಇದೆ. ಇಲಿಗಳು ನಿದ್ದೆಗೇಡಾದರೆ ಒತ್ತಡಕ್ಕೆ ಸಿಕ್ಕಂತೆ ಚಡಪಡಿಸುತ್ತವೆ.

ಕೆಲ ಸಮಯದ ಹಿಂದೆ ಮನುಷ್ಯನ ಉಳಿವಿಗೆ ನಿದ್ದೆ ಅಗತ್ಯವಿಲ್ಲ ಎಂದು ಸಾಬೀತು ಮಾಡಲು ಒಬ್ಬ ಯತ್ನಿಸಿದ. ನ್ಯೂಯಾರ್ಕ್ ನಗರದ ಆ ಮನುಷ್ಯನ ಹೆಸರು ಪೀಟರ್ ಟ್ರಿಪ್. ಒಂದು ವಾರ ನಿದ್ದೆ ಇಲ್ಲದೆ ಕಳೆದ ಆತ, ಎಂಟನೆಯ ದಿನ ಬುದ್ಧಿ ಭ್ರಮಣೆಗೆ ಈಡಾದವನಂತೆ ವರ್ತಿಸತೊಡಗಿದ. ಅವನನ್ನು ಕಾಡಿದ

ಖಿನ್ನತೆ, ಹತಾಶೆ ಸುಸ್ತಿನಿಂದ ಪಾರಾಗಿ ಮತ್ತೆ ಸಾಮಾನ್ಯ ಜೀವನ ಕ್ರಮಕ್ಕೆ ಬರಬೇಕಾದರೆ ಮೂರು ತಿಂಗಳೇ ಬೇಕಾಯಿತು.



ನಮಗೆಷ್ಟು ನಿದ್ದೆ?

ಆದಿಮಾನವ ದಿನದ ಮೂರನೇ ಒಂದು ಭಾಗದಷ್ಟು ಸಮಯ ನಿದ್ದೆ ಮಾಡುತ್ತಿದ್ದ. ಇದು ಸುಮಾರು ಎಂಟು ತಾಸು. ಇತ್ತೀಚೆಗೆ ವಿದ್ಯುತ್ ದೀಪ ಬಂದ ಮೇಲೆ ಮಲಗುವುದು ತಡವಾಗಿದೆ. ಇಪ್ಪತ್ನಾಲ್ಕು ತಾಸಿನ ಚಾನೆಲ್‌ಗಳ ದಾಳಿಯಿಂದ ನಿದ್ದೆ ಇನ್ನಷ್ಟು ಮೊಟಕಾಗಿದೆ.

ನಮಗೆ ನಿದ್ದೆ ಎಷ್ಟು ಬೇಕೆಂಬುದು ದೈನಂದಿನ ಬದುಕಿನ ರೀತಿ ಅವಲಂಬಿಸಿರುತ್ತದೆ. ಒಬ್ಬೊಬ್ಬರಿಗೆ ಒಂದೊಂದು ರೀತಿ. ಆದರೆ ಕನಿಷ್ಠ ಎಂಟು ತಾಸು ನಿತ್ಯ ನಿದ್ದೆ ಉತ್ತಮ ಆರೋಗ್ಯಕ್ಕೆ ಅಗತ್ಯ ಎಂಬುದರ ಬಗ್ಗೆ ಎರಡು ಮಾತಿಲ್ಲ. ಕೆಲವರು ಎಂಟು ತಾಸಿಗೂ ಕಡಿಮೆ ನಿದ್ದೆ ಮಾಡಿದರೂ ಗೆಲುವಾಗೇ ಇರಬಲ್ಲರು. ಇನ್ನು ಕೆಲವರು ಎಂಟು ತಾಸಿಗೂ ಮೀರಿ ನಿದ್ದೆ ಮಾಡಿದರೆ ಮಾತ್ರ ಹುರುಪು ಪಡೆಯಬಲ್ಲರು.

ಮನುಷ್ಯನಿಗೆ ವಯಸ್ಸಾದಂತೆ ನಿದ್ದೆ ಕಡಿಮೆ. ಶಿಶುಗಳಿಗೆ ಹದಿನಾರರಿಂದ ಇಪ್ಪತ್ತು ತಾಸು ನಿದ್ದೆ ಬೇಕು. ಹತ್ತು ವರ್ಷದ ವ್ಯಕ್ತಿಗೆ ಹತ್ತರಿಂದ ಹನ್ನೆರಡು ತಾಸು ನಿದ್ದೆ ಸಾಕು. ಹದಿಹರೆಯದವರಿಗೆ ಒಂಬತ್ತು ತಾಸು ನಿದ್ರೆ ಸಾಕು. ಅದೇ ಯುವಾವಸ್ಥೆಯಲ್ಲಿ ಏಳೂವರೆಯಿಂದ ಎಂಟು ತಾಸು ನಿದ್ರೆ ಸಾಕಾಗುತ್ತದೆ. ಮೂವತ್ತೈದು ದಾಟಿದ ಮೇಲೆ ಆರು ತಾಸಾದರೆ ಸಾಕು. ಅದೇ ಅರವತ್ತು ದಾಟಿದ ವ್ಯಕ್ತಿಗೆ ಮೂರು, ನಾಲ್ಕು ತಾಸು ನಿದ್ದೆ ಸಾಕಾಗುತ್ತದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರ ಇದೆ. ನಾವು ನಿದ್ರಿಸುವ ಅವಧಿಗಿಂತ, ನಿದ್ರಿಸುವ ರೀತಿಯೂ ಮುಖ್ಯ. ಐದಾರು ತಾಸು ಕೊಂಚವೂ ತೊಂದರೆ ಇಲ್ಲದೆ ನಿದ್ದೆ ಮಾಡಿದರೆ, ಏಳೆಂಟು ತಾಸು ಆಗಾಗ ಎಚ್ಚರಾಗಿ ನಡೆಸುವ ನಿದ್ದೆ ಮಾಡಿದರೆ, ಏಳೆಂಟು ತಾಸು ಆಗಾಗ ಎಚ್ಚರವಾಗಿ ನಡೆಸುವ ನಿದ್ದೆಗಿಂತ ಹೆಚ್ಚು ಪ್ರಯೋಜನಕಾರಿ.

ನಿದ್ರೆ ಸರಿಯಾಗಿ ಆಗಿದೆಯೋ ಇಲ್ಲವೋ? ತಿಳಿಯುವುದು ಸರಳ. ಬೆಳಿಗ್ಗೆ ಏಳಲು ಸಲೀಸಾಗಿದ್ದರೆ, ಇಡೀ ದಿನ ಗೆಲುವಾಗಿ ಇರುವುದು ಸಾಧ್ಯವಾದರೆ ದೇಹಕ್ಕೆ ಸಾಕಷ್ಟು ನಿದ್ದೆ ದೊರಕಿದೆ ಎಂದರ್ಥ. ಇಲ್ಲವಾದಲ್ಲಿ ನಿದ್ದೆ ಕೆಟ್ಟಿರುತ್ತದೆ. ಅದನ್ನು ಕೂಡಲೇ ಸರಿಗೊಳಿಸುವುದು ಒಳ್ಳೆಯದು.

ನಿದ್ದೆಯ ರೀತಿ

ನಿದ್ದೆಯಲ್ಲಿ ಎರಡು ಬಗೆ. ಒಂದು ಲಘು ನಿದ್ದೆ. ಇನ್ನೊಂದು ಗಾಢನಿದ್ದೆ. ಮಲಗಿದ ಮೊದಲ ಹಂತ ಲಘುನಿದ್ದೆ. ಆನಂತರ ಗಾಢನಿದ್ದೆ. ಈ ಅವಧಿಯಲ್ಲಿ ಕಣ್ಣುಗುಡ್ಡೆ ಕ್ಷಿಪ್ರವಾಗಿ ಚಲಿಸುತ್ತಿರುತ್ತದೆ. ಇದಕ್ಕೆ ಇಂಗ್ಲೀಷಿನಲ್ಲಿ ರ್‍ಯಾಪಿಡ್ ಐ ಮೂವ್‌ಮೆಂಟ್ (REM) ಎಂದೂ ಹೇಳುತ್ತಾರೆ. ಕನಸುಗಳು ಬೀಳುವುದೂ ಈ ಅವಧಿಯಲ್ಲಿ.

ಜೀವಿಯೊಂದು ನಿದ್ದೆ ಆರಂಭಿಸಿದ ನಂತರ ತೊಂಬತ್ತು ನಿಮಿಷದ ಐದು ಘಟ್ಟದಲ್ಲಿ ನಿದ್ದೆ ನಡೆಯುತ್ತದೆ. ಒಮ್ಮೆ ಲಘು ನಿದ್ದೆ, ಆನಂತರ ಗಾಢ ನಿದ್ದೆ, ಹೀಗೆ ಐದು ಹಂತ. ಇದನ್ನೇ ನಿದ್ರಾ ಚಕ್ರ ಎನ್ನುತ್ತಾರೆ.

ನಿದ್ದೆಯಲ್ಲಿ ನಡೆಯುವುದೇನು?

ಯಾರೇ ಆಗಲಿ ನಿದ್ದೆ ಮಾಡುವುದು ದೇಹದ ದಣಿವು ನಿವಾರಣೆಗೆ. ಜೈವಿಕ ಕ್ರಿಯೆಯಲ್ಲಿ ನಿದ್ದೆಗೆ ದೊಡ್ಡ ಪಾತ್ರ. ಹಗಲಿಡೀ ದುಡಿಮೆಯಿಂದ ದಣಿದ ದೇಹಕ್ಕೆ ವಿಶ್ರಾಂತಿ ಬೇಕು. ಹಾಗೆ ಕಳೆದುಕೊಂಡ ಹುರುಪು ಮರಳಿ ಪಡೆಯಬೇಕು. ನಾವು ಲಘು ನಿದ್ರಾವಸ್ಥೆಯಿಂದ ಗಾಢ ನಿದ್ರೆಗೆ ಜಾರಿದಾಗ ಮೈಯ ಅಂಗಾಂಗಗಳೆಲ್ಲ ಸಡಿಲಾಗುತ್ತವೆ. ರಕ್ತದ ಪರಿಚಲನೆ, ಒತ್ತಡ ಕಡಿಮೆಯಾಗುತ್ತದೆ. ದೇಹದಲ್ಲಾಗುವ ರೂಪಾಂತರದ ಪ್ರಕ್ರಿಯೆ ಶೇಕಡಾ 20ರಷ್ಟಕ್ಕೆ ತಗ್ಗುತ್ತದೆ. ರಾತ್ರಿಯ ಮೊದಲ ಹಂತದಲ್ಲಿ ದೇಹ ಬಳಸುವ ಆಮ್ಲಜನಕದ ಪ್ರಮಾಣ ಕಡಿಮೆ ಆಗುತ್ತದೆ. ದೇಹದ ಉಷ್ಣತೆ ಕೂಡ ತಗ್ಗುತ್ತದೆ. ಉಸಿರಾಟ ದೀರ್ಘ ಹಾಗೂ ಗಾಢವಾಗುತ್ತದೆ. ಹೃದಯದ ಬಡಿತ ಕೂಡ ಕಡಿಮೆಯಾಗುತ್ತದೆ.

ದಿನದ ದುಡಿಮೆಯಿಂದ ದಣಿದ ಜೀವಕೋಶಗಳು ದಣಿವಾರಿಸಿಕೊಳ್ಳುತ್ತವೆ. ಮರುದಿನದ ಚಟುವಟಿಕೆಗಾಗಿ ಚೈತನ್ಯ ತುಂಬಿಕೊಳ್ಳುತ್ತವೆ. ನಿದ್ದೆಯ ಸಮಯದಲ್ಲಿ ಸುಗಮವಾಗಿ ನಡೆಯುವ ರಕ್ತ ಪರಿಚಲನೆಯಲ್ಲಿ ಹೆಚ್ಚು ಹಾರ್ಮೋನುಗಳು ಪೂರೈಕೆಯಾಗುತ್ತವೆ. ಇದರಿಂದ ಅಗತ್ಯ ಪೋಷಕಾಂಶಗಳು ಒದಗುತ್ತವೆ. ಹಾನಿಗೀಡಾದ ಜೀವಕೋಶಗಳು ಬೇಗ ದುರಸ್ತಿಗೊಳ್ಳುತ್ತವೆ. ರಾತ್ರಿಯ ಮಲಗಿದ ಭಂಗಿಯಿಂದ ಇಡೀ ದೇಹಕ್ಕೆ ಒಂದು ಸರಿಯಾದ ನಿಲುವು ಕೂಡ ಒದಗುತ್ತದೆ. 'ಬಾಗಿದ ಬೆನ್ನು, ವಕ್ರವಾದ ಕಾಲುಗಳನ್ನು ನಿದ್ದೆ ನೇರ್ಪುಗೊಳಿಸುತ್ತದೆ.

ಅಷ್ಟೇಕೆ, ಜೀವಿಗಳ ದೇಹ ಮತ್ತು ಬುದ್ಧಿಗಳ ಬೆಳವಣಿಗೆ ಆಗುವುದು ನಿದ್ದೆಯಲ್ಲೇ. ಗಾಢ ಚಿಂತನೆ ನಡೆಸುವ, ತಾರ್ಕಿಕ ಯೋಜನೆಯ ಶಕ್ತಿ ಮೂಡುವುದು ನಿದ್ದೆಯಲ್ಲೇ. ಆದಕ್ಕೆ ಮಕ್ಕಳು ಹಾಗೂ ಕುಂಠಿತ ಬೆಳವಣಿಗೆಯ ಮಕ್ಕಳು ಹೆಚ್ಚು ನಿದ್ದೆ ಮಾಡಬೇಕು ಎಂದು ಸಲಹೆ ಮಾಡುವುದು.

ನಿದ್ರಾಹೀನತೆ

ಜಗತ್ತಿನ ಎಲ್ಲೆಡೆ, ಎಲ್ಲ ವಯಸ್ಸಿನ ಜನ ನಿದ್ರಾಹೀನತೆಯಿಂದ ಬಳಲುತ್ತಾರೆ. ಇದಕ್ಕೆ ಇಂಗ್ಲೀಷ್‌ನಲ್ಲಿ ಇನ್‌ಸೋಮ್ನಿಯಾ (Insomnia) ಎನ್ನುತ್ತಾರೆ. ಕೆಲವು ತಾಸು ನಿದ್ದೆಗೆಡುವುದು ದೊಡ್ಡ ಸಮಸ್ಯೆ ಏನಲ್ಲ ಅನ್ನಿಸುತ್ತದೆ. ಆದರೆ ನಿತ್ಯ ಸುಮಾರು ಮೂರು, ನಾಲ್ಕು ತಾಸು ನಿದ್ದೆಗೆಟ್ಟರೆ ಅದು ದೇಹದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಪ್ರತಿಸ್ಪಂದನ ಶೇಕಡಾ 45ರಷ್ಟು ಕಡಿಮೆಯಾಗುತ್ತದೆ. ಬದುಕಿನ ಕ್ರಿಯೆಗಳಲ್ಲಿ ಅಂಥ ವ್ಯಕ್ತಿಗಳು ಸಂತೋಷ ಕಾಣಲಾರರು.

ಮೂರು ದಿನ ನಿದ್ದೆ ಸರಿಯಾಗಿ ಆಗದಿದ್ದರೆ ದೃಷ್ಟಿಸಿ ನೋಡುವುದು ಕಷ್ಟವಾಗುತ್ತದೆ. ಜಡತ್ವ, ಸುಮ್ಮನೆ ರೇಗುವಂತಾಗುವುದು. ನೆನಪು ಮಾಸುವುದು. ಜೊತೆಗೇ ಭ್ರಮಾಧೀನತೆ ಉಂಟಾಗುತ್ತದೆ. ಚಿಕ್ಕವರಲ್ಲಿ ನಿದ್ದೆಗೇಡಿಂದ ಸೋಂಕು ಬೇಗ ತಗಲುತ್ತದೆ. ಮೈಮೇಲೆ ಗುಳ್ಳೆಗಳೇಳುವುದು, ಬಹುಬೇಗ ನೆಗಡಿ ಕಾಡುವುದೂ ನಿದ್ದೆಗೇಡಾಗುವುದರ ಪರಿಣಾಮವೇ.

ನಿದ್ರಾಹೀನತೆ ಹೆಚ್ಚಾದರೆ ದೇಹ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತದೆ. ಅಜೀರ್ಣ, ಭೇದಿ, ಹೊಟ್ಟೆ ಕಟ್ಟುವುದರ ಜೊತೆಗೆ ಮನಸ್ಸು ಆತಂಕಿತಗೊಳ್ಳುತ್ತದೆ. ಇದರ ಪರಿಣಾಮವೆಂದರೆ ಕಣ್ಣ ಕೆಳಗೆ ಕಪ್ಪು ಉಂಗುರ ಮೂಡುತ್ತದೆ. ಕೂದಲು ಉದುರಬಹುದು. ಚರ್ಮದ ಬಣ್ಣ ಕೂಡ ಪೇಲವವಾಗಬಹುದು. ದೇಹ ಮತ್ತು ಮನಸ್ಸು ಬಹು ಬೇಗ ದಣಿಯುತ್ತವೆ.

ಕೆಲವು ದಿನ ನಿದ್ದೆಗೇಡಾದರೆ ಚಿಂತೆಯಿಲ್ಲ, ನಿದ್ರಾಹೀನತೆ ಹದಿನೈದು ದಿನಕ್ಕಿಂತ ಹೆಚ್ಚು ಮುಂದುವರಿದರೆ ತಕ್ಷಣ ವೈದ್ಯರಲ್ಲಿಗೆ ಹೋಗಬೇಕು. ಹಲವು ಬಗೆಯ ದೋಷ, ತೊಂದರೆಗಳಿಂದ ನಿದ್ರಾಹೀನತೆ ಮುಂದುವರಿಯಬಹುದು. ಅದನ್ನು ವೈದ್ಯರು ಪತ್ತೆ ಹಚ್ಚಬಲ್ಲರು. ಹೆಂಗಸರಲ್ಲಿ ಮೂತ್ರ ಕೋಶದ ಊತ ಇದಕ್ಕೆ ಕಾರಣ ಇರಬಹುದು. ಪುರುಷರಲ್ಲಿ ಪ್ರಾಸ್ಟೇಟ್ ಗ್ರಂಥಿಯ ಊತ ನಿದ್ರಾಹೀನತೆಗೆ ಕಾರಣ. ಕೆಲವು ಸಂದರ್ಭಗಳಲ್ಲಿ ಸಂಧಿವಾತ, ಹೃದಯಾಘಾತ, ಶ್ವಾಸಕೋಶದ ಕಾಯಿಲೆಗಳು ಕರುಳಿನ ಹುಣ್ಣು ಕೂಡ ನಿದ್ರಾಹೀನತೆಗೆ ಕಾರಣ ಇರಬಹುದು.

ನಿದ್ರಾಹೀನತೆಗೆ ಕಾರಣ

ನಾನಾ ಕಾರಣಕ್ಕೆ ಸ್ತ್ರೀ, ಪುರುಷ ಇಬ್ಬರಲ್ಲೂ ನಿದ್ರಾಹೀನತೆ ಉಂಟಾಗುತ್ತದೆ. ಗದ್ದಲ, ಬೆಳಕು, ಏರಿದ ತಾಪ, ಶೀತ, ಆತಂಕ, ಭಾವನಾತ್ಮಕ ಏರುಪೇರು ನಿದ್ರಾಹೀನತೆಗೆ ಕಾರಣವಾಗಬಲ್ಲವು.

ಡಯಟ್ ಮಾಡುವ ಗೀಳಿನವರದು ವಿಚಿತ್ರ ನಿದ್ರಾಹೀನತೆ. ಅವರು ಮೈ

ತೂಕ ಕರಗಿಸಲು ಊಟವಿಲ್ಲದೆ ಹಾಸಿಗೆ ಸೇರುತ್ತಾರೆ. ಖಾಲಿ ಹೊಟ್ಟೆಯ ಮೊರೆ ಕೇಳುತ್ತಾ ರಾತ್ರಿಯಿಡೀ ನಿದ್ದೆ ಇಲ್ಲದೆ ಕಳೆಯುತ್ತಾರೆ.

ರಾತ್ರಿ ಮಲಗುವ ಮುನ್ನ ತುಂಬಾ ನೀರು ಕುಡಿದರೂ, ಆಗಾಗ ಮೂತ್ರ ವಿಸರ್ಜನೆಗೆ ಏಳಬೇಕಾಗುತ್ತದೆ. ಇದರಿಂದಲೂ ನಿದ್ದೆ ಸರಿಯಾಗಿ ಆಗುವುದಿಲ್ಲ. ಹಾಗೆ ರಾತ್ರಿ ತಡವಾಗಿ ಊಟ ಮಾಡಿದರೂ, ಆಹಾರ ಜೀರ್ಣಗೊಳ್ಳಲು ಎಚ್ಚರವಾಗಿ ಇರಬೇಕಾಗುತ್ತದೆ. ಮದ್ಯ ಸೇವನೆಯಿಂದ ತಕ್ಷಣ ನಿದ್ದೆ ಬಂದರೂ, ಕೆಲವೇ ತಾಸಲ್ಲಿ ಎಚ್ಚರವಾಗುತ್ತದೆ.

ಪರಿಹಾರ

ಮೇಲಿನ ಅಂಶಗಳಲ್ಲಿ ನಿದ್ರಾಹೀನತೆಗೆ ಪರಿಹಾರ ಸುಲಭ. ಕೆಲವನ್ನು ವೈದ್ಯರಿಂದ ಪಡೆಯಬಹುದು. ಕೆಲವನ್ನು ಅಭ್ಯಾಸ ಬದಲಿಸುವುದರಿಂದ ಪಡೆಯಲು ಸಾಧ್ಯ. ಭಾವನಾತ್ಮಕವಾಗಿ ಏರುಪೇರಾದವರು, ಅದನ್ನು ಒಳಗೇ ಇಟ್ಟುಕೊಂಡು ಕೊರಗುತ್ತಾರೆ. ನಿದ್ದೆ ಇಲ್ಲದೆ ಬಳಲುತ್ತಾರೆ. ಇಂಥವರು ತಮ್ಮ ಸಮಸ್ಯೆ ಆಪ್ತರಲ್ಲಿ ಹೇಳಿಕೊಂಡು, ಚರ್ಚಿಸಿ ಪರಿಹಾರ ಪಡೆಯಲು ಬೇಗ ಮುಂದಾಗಬೇಕು. ಯೋಗ ಮತ್ತು ಧ್ಯಾನ ಸರಿಯಾದ ವ್ಯಾಯಾಮ ನಿದ್ರಾಹೀನತೆಗೆ ಒಳ್ಳೆಯ ಮದ್ದು ಎಂದು ಸಾಬೀತಾಗಿದೆ.

ಮಲಗುವ ಪರಿಸರ

ನಾವು ಮಲಗುವ ಕೋಣೆ, ಹಾಸಿಗೆ ಮನಸ್ಸಿಗೆ, ದೇಹಕ್ಕೆ ಹಿತ ನೀಡುವಂತೆ ಇರಬೇಕು. ಇಲ್ಲವಾದಲ್ಲಿ ನಿದ್ದೆ ಬರುವುದಿಲ್ಲ. ಇವೆರಡಕ್ಕೂ ಆದ್ಯ ಗಮನ ನೀಡಬೇಕು. ಸ್ವಲ್ಪ ದುಬಾರಿ ಎನಿಸಿದರೂ ಒಳ್ಳೆಯ ಹಾಸಿಗೆ ಖರೀದಿಸಬೇಕು. ಮಲಗುವ ಮುನ್ನ ಹಿತವೆನಿಸುವ ಓದು, ಮೆಲುದನಿಯ ಸಂಗೀತ ಇದ್ದರೆ ತುಂಬಾ ಒಳ್ಳೆಯದು. ಒಂದು ಲೋಟಾ ಬೆಚ್ಚಗಿನ ಹಾಲು ಸೇವಿಸುವುದೂ ಒಳ್ಳೆ ನಿದ್ದೆಗೆ ರಹದಾರಿ. ಮಲಗುವ ಕೋಣೆಯಲ್ಲಿ ಗಾಳಿ ಚೆನ್ನಾಗಿ ಆಡುವಂತಿರಬೇಕು. ಸೊಳ್ಳೆಗಳಿಗೆ ಪ್ರವೇಶ ಇಲ್ಲದಂತೆ ವ್ಯವಸ್ಥೆ ಮಾಡಿಕೊಳ್ಳಬೇಕು.

ಮಲಗುವ ಮುನ್ನ ಒಳ್ಳೆಯ ಸ್ನಾನ ಮಾಡುವುದಾದರೆ ಇನ್ನೂ ಒಳ್ಳೆಯದು.

ಮುಖ್ಯ ನಿದ್ದೆ ಬರುತ್ತದೋ ಇಲ್ಲವೋ ಎಂಬ ಚಿಂತೆ ಬೇಡ. ಚಿಂತೆ ಹೆಚ್ಚಾದಷ್ಟು ನಿದ್ದೆ ದೂರ.

■ (ವಿವಿಧ ಮೂಲಗಳಿಂದ)

ನಿದ್ದೆ ಬರುತ್ತಿಲ್ಲವೇ?



■ ಹಲವರು ನಿದ್ದೆ ಮಾಡಲು ಒದ್ದಾಡುತ್ತಾರೆ. ಅವರು ಪ್ರಯತ್ನಿಸಿದಷ್ಟೂ ನಿದ್ದೆ ದೂರ. ಅಂಥವರು ಏನು ಮಾಡಬೇಕು? ಇಲ್ಲಿವೆ ಕೆಲವು ಗಮನಾರ್ಹ ಸಂಗತಿಗಳು.

■ ಮಲಗುವ ಪ್ರಯತ್ನ ಯಾವತ್ತೂ ಒಳ್ಳೆಯದಲ್ಲ. ಹಾಸಿಗೆಯಲ್ಲಿ ಬಿದ್ದುಕೊಂಡು ಹೊರಳಾಡಬೇಡಿ. ಅದರ ಬದಲು ಯಾವುದಾದರೂ ಪುಸ್ತಕ ಮಲಗಿಕೊಂಡೇ ಓದಿ ಅಥವಾ ಹಾಗೇ ಟಿವಿ ನೋಡುತ್ತಾ ದಿಂಬಿಗೆ ಒರಗಿ ಕೂರಬಹುದು. ನಿದ್ದೆ ಬಂದಾಗ ಹಾಗೇ ನಿದ್ದೆಗೆ ಜಾರಬಹುದು.

■ ಎಷ್ಟು ಸಮಯ ಮಲಗಿದರೆ ಆರಾಮೆನಿಸುತ್ತದೆ. ಅಷ್ಟು ಕಾಲ ಮಲಗಿರಿ. ಹಾಸಿಗೆ ಸೇರುವ ಮುನ್ನ ಅಥವಾ ಹಾಸಿಗೆ ಸೇರಿದ ಮೇಲೆ ಚಿಂತೆ ಮಾಡಲು ತೊಡಗಬೇಡಿ.

■ ರಾತ್ರಿ ತಡವಾದ ಮೇಲೂ ಕಾಫೀ, ಟೀ ಕೋಲಾ ಸೇವಿಸುವುದು ಅಥವಾ ಸಿಗರೇಟ್ ಸೇವಿಸುವುದು ಮಾಡಬೇಡಿ. ಇದರಿಂದ ನಿದ್ದೆ ದೂರವಾಗುತ್ತದೆ. ಮದ್ಯಪಾನದಿಂದ ಜಡತ್ವ ಮೂಡುತ್ತದೆ. ಮೊದಲ ತಾಸಿನಲ್ಲಿ ನಿದ್ದೆ ಗಾಢವಾಗಿದೆ ಎನ್ನಿಸಿದರೂ, ನಂತರ ಹೊರಳಾಟ ಶುರುವಾಗುತ್ತದೆ. ಬೆಳಿಗ್ಗೆ ಎದ್ದರೆ ಹ್ಯಾಂಗ್ ಓವರ್.

■ ರಾತ್ರಿ ನಿದ್ದೆ ಸರಿಯಾಗಿ ಆಗದಿದ್ದರೆ ತೂಕಡಿಸಬೇಡಿ. ಕೊರತೆಯಾದ ನಿದ್ದೆಯನ್ನು ಮರುದಿನ ರಾತ್ರಿ ತುಂಬಿಕೊಳ್ಳಿ. ತೀರಾ ಅಗತ್ಯ ಎನಿಸಿದರೆ ಅರ್ಧಗಂಟೆ ಹಗಲಲ್ಲಿ ಮಲಗಿ.

■ ಮಲಗುವ ಮುಂಚೆ ಭಾರೀ ಊಟ ಬೇಡ. ಮಲಗಲು ಒಂದು ತಾಸು ಇರುವಾಗಲೇ ಲಘುವಾದ ಊಟ ಮಾಡಿ. ಹೊಟ್ಟೆಯಲ್ಲಿ ಏನೂ ಇಲ್ಲದೇ, ಗುಡುಗುತ್ತಾ, ಇರುವಾಗಲೂ ನಿದ್ದೆಗೆ ಹೋಗಬೇಡಿ.

■ ನಿದ್ದೆಗೆ ಹೋಗುವ, ಏಳುವ ಸಮಯದ ಬಗ್ಗೆ ನಿಶ್ಚಿತ ಕ್ರಮ ಅನುಸರಿಸಿ. ರಜೆಯ ದಿನ ಕೂಡ ಈ ಕ್ರಮ ಪಾಲಿಸಿ.

■ ಮಲಗುವ ಕೋಣೆ ಆರಾಮದಾಯಕವಾಗಿರಲಿ. ಅಲ್ಲಿ ಶಾಂತತೆ ಇರಬೇಕು ಹಾಗೂ ಕೋಣೆಯ ತಾಪಮಾನ ಸರಿಯಾಗಿ ಇರಲಿ. ಗಲಾಟೆ ಇದ್ದಲ್ಲಿ ಬೇರೊಂದು ರೂಮಲ್ಲಿ ಮಲಗಿ. ಇಲ್ಲವಾದಲ್ಲಿ ಕಿವಿಗೆ ಹತ್ತಿ ಇಟ್ಟುಕೊಂಡು ಮಲಗಿ.


■ ಆಫೀಸು ಕೆಲಸ ಹಾಸಿಗೆಯಲ್ಲಿ ಕೂತು ಮಾಡಬೇಡಿ. ಹಾಸಿಗೆ ನಿದ್ದೆಗೆ ಮಾತ್ರ ಮೀಸಲಾಗಿರಲಿ. ತೀರಾ ಮಲಗಲು ಹೊರಡುವವರೆಗೂ ಆಫೀಸು ಅಥವಾ ಮನೆಗೆಲಸದಲ್ಲಿ ತೊಡಗಬೇಡಿ. ಮಲಗುವ ಒಂದು ಅಥವಾ ಎರಡು ತಾಸಿಗೆ ಮುನ್ನ ಕೆಲಸಗಳನ್ನು ಮುಗಿಸಿಕೊಂಡು ಆರಾಮಾಗಿರಿ.

■ ತಲೆನೋವು, ಜ್ವರ ಬೇರೆ ಯಾವುದೋ ಕಾಯಿಲೆಯ ಸೂಚನೆ. ಹಾಗೇ ನಿದ್ದೆಗೇಡಾಗುವುದು ಕೂಡ ಇನ್ಯಾವುದೋ ಕಾಯಿಲೆಯ ಸೂಚನೆ ಇರಬಹುದು. ದೀರ್ಘಕಾಲ ನಿದ್ದೆಗೇಡಾಗುವ ಸಮಸ್ಯೆ ಮುಂದುವರಿದರೆ ವೈದ್ಯರನ್ನು ಕಾಣುವುದು ಒಳ್ಳೆಯದು.

■ ಮಲಗುವ ಮುನ್ನ ಆರಾಮವಾಗಲು ವ್ಯವಸ್ಥೆ ಮಾಡಿಕೊಳ್ಳಿ. ಅದು ಬೆಚ್ಚನೆಯ ನೀರಿನಲ್ಲಿ ಸ್ನಾನ ಮಾಡುವುದಿರಬಹುದು. ಓದುವುದಿರಬಹುದು ಅಥವಾ ಸಂಗೀತ ಆಲಿಸುವಂಥದ್ದಿರಬಹುದು. ಅದನ್ನು ರೂಢಿಸಿಕೊಳ್ಳಿ.

■ ಸರಿಯಾದ ನಿದ್ದೆ ಮಾಡಲು ಇಂಥದ್ದೇ ಕ್ರಮ ಎಂಬುದಿಲ್ಲ. ನಾನಾ ಪ್ರಯೋಗಗಳ ನಂತರ ನಿಮಗೆ ಯಾವ ಕ್ರಮ ಅನುಕೂಲಕರವೋ ಅದನ್ನು ಆರಿಸಿಕೊಳ್ಳಿ.

■



ನಿದ್ದೆಗೆಟ್ಟವನ ಕಥೆ

ನಲವತ್ತು ತಾಸು ಅಷ್ಟೇ. ಅಂದರೆ ಒಂದು ರಾತ್ರಿ ನಿದ್ದೆಗೆಡಬೇಕು. ಅಷ್ಟಾದರೆ ದೇಹ, ಮನಸ್ಸಿನ ಮೇಲೆ ಏನು ಪರಿಣಾಮ ಆಗುತ್ತದೆಂಬ ಪ್ರಯೋಗಕ್ಕೆ ಆತ ಅಣಿಯಾಗಿದ್ದ. ಆತನ ಹೆಸರು ತಿಮೋತಿ ಗೋವರ್. ಗೋವರ್ ಕಂಡುಕೊಂಡ ಸತ್ಯದ ದಾಖಲೆ ಇದು.

ಎಚ್ಚರಿರಬೇಕು ನಿದ್ದೆಗೆ ಜಾರಬಾರದು
ಕಳೆದ ಸಲ ತೂಕಡಿಸಿದಾಗ ನೆಲ
ತಿರುಗಲಾರಂಭಿಸಿತ್ತು. ಎಚ್ಚರಾಗದಿದ್ದಿದ್ದರೆ
ನೀರೊಳಗೆ ಮುಳುಗಬೇಕಾಗುತ್ತಿತ್ತು
ಒದ್ದೆಯಾಗುವುದು, ನೆಗಡಿ ಎಂದರೇ ನನಗಾಗದು
ಏಕೆಂದರೆ ನಾನು ಇಲಿ.
ಏನಿದು!

ಥಟ್ಟಂತ ಎಚ್ಚರ. ಒಂದು, ಒಂದೇ ಕ್ಷಣದ ತೂಕಡಿಕೆ. ಆಗಲೇ ಎಂಥ ಕನಸು. 1980ರಲ್ಲಿ ನಡೆದ ಪ್ರಯೋಗದ ಸಂಶೋಧನಾ ತಂಡದಲ್ಲಿ ನಾನೊಬ್ಬ ಆಗಿದ್ದಂತೆ ಎಷ್ಟು ಬೇಗ ಕನಸು.

ಆಗ ಅಲ್ಲಿ ಇಲಿಗಳನ್ನು ದಿನಗಟ್ಟಲೇ ನಿದ್ದೆ ಮಾಡದಂತೆ ನೋಡಿಕೊಳ್ಳಲಾಗುತ್ತಿತ್ತು. ತೂಕಡಿಸಿದರೆ ನೀರೊಳಗೆ ಮುಳುಗಬೇಕಾಗುತ್ತಿತ್ತು. ಅವು ಎಷ್ಟು ದಿಕ್ಕುಗೇಡಾಗಿದ್ದುವೆಂದರೆ, ಸಂಶೋಧಕರೇ ಅದಕ್ಕೆ ತಡೆ ಒಡ್ಡಿ ಇಲಿಗಳನ್ನು ಬದುಕಿಸದೇ ಇದ್ದಿದ್ದರೆ, ನಿದ್ದೆ ಇಲ್ಲದೇ ಅವು ಸಾಯುತ್ತಿದ್ದವು.

ಈಗಷ್ಟೇ ನಾನು ನಲವತ್ತು ತಾಸು ನಿದ್ದೆಗೆಡುವ ಪ್ರಯೋಗಕ್ಕೆ ಸಜ್ಜಾಗುತ್ತಿದ್ದೇನೆ. ಒಂದು ರಾತ್ರಿ ನಿದ್ದೆಗೆಡಬೇಕು ಅಷ್ಟೇ.

ನಿದ್ದೆಗೇಡಾಗುವುದರ ಅರ್ಥ ಏನೆಂದು ಗೊತ್ತು. ಮಹಿಳೆಯರ ಇತ್ತೀಚಿನ ಬಹು ದೊಡ್ಡ ಗಂಡಾಂತರ ಎಂದರೆ ದಣಿವು. ಹೃದಯಾಘಾತ, ಸ್ತನಕ್ಯಾನ್ಸರ್‌ಗಳಿಗಿಂತ ನಿದ್ದೆ ಇಲ್ಲದೆ ಮೂಡುವ ದಣಿವು ಹೆಚ್ಚು ಕಳವಳಕಾರಿ ಎಂದು ಅಧ್ಯಯನ ತೋರಿಸಿದೆ. ಇದರಿಂದ ಮನೆಯ, ಹೊರಗಿನ ಕೆಲಸ ಕೂಡ ಸರಿಯಾಗಿ ಮಾಡುವುದು ಸಾಧ್ಯ ಆಗುತ್ತಿಲ್ಲ.

ನಾವ್ಯಾರೂ ನಿದ್ದೆಯ ಬಗ್ಗೆ ಗಂಭೀರವಾಗಿ ಯೋಚಿಸುವುದೇ ಇಲ್ಲ. ಪ್ರತಿರಾತ್ರಿ ವಯಸ್ಕ ವ್ಯಕ್ತಿ ಎಂಟೂವರೆ ತಾಸು ನಿದ್ದೆ ಮಾಡುವುದಗತ್ಯ ಎನ್ನುತ್ತಾರೆ ತಜ್ಞರು. ನಾವು ಸಾಮಾನ್ಯವಾಗಿ ಏಳು ತಾಸು ಅಥವಾ ಅದಕ್ಕೂ ಕಡಿಮೆ ನಿದ್ದೆಮಾಡುತ್ತೇವೆ. ನಮ್ಮ ರಿಪೋರ್ಟ್ ತಯಾರಿಸಬೇಕಾದಾಗ, ಮಗು ಕಾಯಿಲೆ ಮಲಗಿದಾಗ ಮತ್ತಷ್ಟು ನಿದ್ದೆಗೆಡುತ್ತೇವೆ. ಹೀಗಾಗಿ ನಿದ್ದೆಯ ಬಾಕಿ ಹೊರೆ ಏರುತ್ತದೆ. ಹಗಲಿನ ನಮ್ಮ ಕೆಲಸಗಳು ಜಡವಾಗುತ್ತವೆ. ಹಗಲಿನ ನಮ್ಮ ಕೆಲಸಗಳು ಜಡವಾಗುತ್ತವೆ. ಉತ್ಪನ್ನ ತಗ್ಗುತ್ತದೆ. ಅಪಘಾತಗಳು ನಡೆಯುತ್ತವೆ. ಮಿತಿಮೀರಿದಾಗ ಕಾಯಿಲೆ ಮಲಗುತ್ತೇವೆ.

ನಿದ್ದೆಯ ಬಾಕಿ ಹೊರೆ ನಿಮ್ಮ ಮೇಲೆ ಏನು ಪರಿಣಾಮ ಬೀರುತ್ತದೆ? ನ್ಯೂರೋಸೈಕಾಲಜಿಸ್ಟ್ ಸ್ಟ್ಯಾನ್ಲಿ ಕೋರೆನ್ ಮಾತಲ್ಲಿ ಹೇಳುವುದಾದರೆ 'ನಿಮ್ಮನ್ನು ಅದು ಮುದುಡಿಸುತ್ತದೆ, ಮೂರ್ಖರಾಗಿಸುತ್ತದೆ, ಅಸಂತೋಷಕ್ಕೆ ಕಾರಣ ಹಾಗೂ ಸಾವೂ ಒಂದೇ ಆ ಸ್ಥಿತಿಯೂ ಒಂದೆ' ಅಂಥ ಸ್ಥಿತಿಯ ಬಗ್ಗೆ ತಿಳಿಯಲು ನನಗೆ ಕುತೂಹಲ.

ರಾತ್ರಿ 11.30

ಬೆಳಿಗ್ಗೆ ಏಳುಗಂಟೆಗೆ ಎದ್ದಿದ್ದು, ನನ್ನ ನಿದ್ದೆ ಇಲ್ಲದ ರಾತ್ರಿ ಈಗಷ್ಟೇ ಆರಂಭವಾಗುತ್ತಿದೆ. ಮನಸ್ಸು ಉತ್ಸಾಹಿತವಾಗಿದೆ. ಒಳ್ಳೆಯದಾಗುತ್ತದೆ ಎಂಬ ಆಸೆ. ಆದರೂ ನಿದ್ದೆಗೆಡಲೆಂದು ಕೆಲವೇ ತಾಸಿಗೆ ಮುಂಚೆ ಎಸ್‌ಪ್ರೆಸ್ಸೋ ಕಾಫಿ ಸುರಿದುಕೊಂಡಿದ್ದೇನೆ. ನನ್ನ ಮೆದುಳಿನ ಕತ್ತಲ ಮೂಲೆಯಲ್ಲೊಂದು ದನಿ ಚೀರಿ ಹೇಳುತ್ತಿದೆ 'ಮೂರ್ಖ ಆಗಲೇ ತಡ ಆಗಿದೆ ಮಲಗು' ಎಂದು ಚೀರಿ ಹೇಳುತ್ತಿದೆ.

ತಜ್ಞ ಕೋರೆನ್ ಹೇಳುವಂತೆ ಕತ್ತಲ ಹಿತ ನಿರಾಕರಿಸುವ ನಮ್ಮ ಪ್ರವೃತ್ತಿ ಈಗಷ್ಟೇ ಆರಂಭವಾಗಿದೆ. ಹಿಂದೆಲ್ಲ ಮನುಷ್ಯ ಸೂರ್ಯನ ಗುಲಾಮ. ಥಾಮಸ್ ಆಲ್ವಾ ಎಡಿಸನ್ 1879ರಲ್ಲಿ ವಿದ್ಯುತ್ ದೀಪ ಆವಿಷ್ಕರಿಸಿದ. ಈಗ ಆಧುನಿಕ ಆವಿಷ್ಕಾರಗಳು ನಮ್ಮನ್ನು ರಾತ್ರಿ ಬಹಳ ಹೊತ್ತು ಎಚ್ಚರವಾಗಿ ಇಡುತ್ತವೆ. ಟೆಲಿಫೋನ್, ಟಿ.ವಿ. ಇಂಟರ್‌ನೆಟ್ ಇತ್ಯಾದಿ. ಈಗೀಗ ದಿನಕ್ಕೆ ಏಳು ತಾಸು ನಿದ್ದೆ ಆದರೆ ಸಾಕು ಅಂದುಕೊಳ್ಳುತ್ತೇವೆ. ಒಂದು ಶತಮಾನದ ಹಿಂದೆಯಷ್ಟೇ ಮನುಷ್ಯ ಸರಾಸರಿ ಒಂಬತ್ತು ತಾಸು ನಿದ್ದೆ ಮಾಡುತ್ತಿದ್ದ,

ಆಧುನಿಕತೆ ಈಗಷ್ಟೇ ಒಗ್ಗಿಕೊಳ್ಳುತ್ತಿರುವ ನಮ್ಮ ದೇಹಗಳು ಇನ್ನಷ್ಟು ನಿದ್ದೆ ಬೇಕೆಂದು ಚೀರಿ ಹೇಳುತ್ತವೆ.

ರಾತ್ರಿ 1.00

ನನ್ನ ಉತ್ಸಾಹ ಇಳಿಯುತ್ತಿದೆ. ನನ್ನ ಡೆಸ್ಕ್ ಮೇಲೆ ತಲೆ ಇಟ್ಟು ಮಲಗಬೇಕೆನ್ನಿಸುತ್ತದೆ. ನಿದ್ದೆಯ ಆಳಕ್ಕೆ ತಳ್ಳುವ ಸಿರ್ಕಾಡಿಯನ್ ಚಕ್ರದ ಸುಳಿಗೆ ಸಿಲುಕಿದ್ದೇನೆ.

ಸಿರ್ಕಾಡಿಯನ್ ಚಕ್ರ ದಿನಕ್ಕೆರಡು ಸಲ ನಮ್ಮನ್ನು ನಿದ್ದೆಗೆ ದೂಡುತ್ತದೆ. ಮಧ್ಯಾಹ್ನದ ಊಟವಾದ ಮೇಲೆ ಸಣ್ಣ ಸೋಮಾರಿತನ. ಒಂದು ಸಣ್ಣ ನಿದ್ದೆ, ತೂಕಡಿಕೆ ಆದರೆ ಒಳ್ಳೆಯದಾದೀತು ಎಂಬ ಅನಿಸಿಕೆ. ಅದಕ್ಕೇ ನಾವೆಲ್ಲ ಮಧ್ಯಾಹ್ನದ ಊಟವಾದ ಮೇಲೆ ಕಾಲೆಳೆಯುತ್ತ ನಡೆಯುವುದು. ಆ ನಂತರ ರಾತ್ರಿ ಮಲಗುವ ಹೊತ್ತಿಗೆ ಮತ್ತೆ ಈ ಚಕ್ರದ ಸುಳಿಗೆ ಸಿಲುಕುತ್ತೇವೆ.

ಬೆಳಗಿನ 4.00

ಹುಚ್ಚು ಹಿಡಿದಂತಾಗಿದ್ದೇನೆ. ಅದು ನಿರೀಕ್ಷಿತ. ನಿದ್ದೆಗೇಡಾದ ವ್ಯಕ್ತಿಗಳ ಮೂಡ್ ಸರಿಯಾಗಿರುವುದಿಲ್ಲ.

ಬದುಕಿನ ಅವರವರ ದೃಷ್ಟಿಯಂತೆ ನಿದ್ದೆಗೇಡಾದ ಜನ ನಾನಾ ರೀತಿ ಪ್ರತಿಕ್ರಿಯಿಸುತ್ತಾರೆ. ಎಲ್ಲವೂ ವಿಧಿ ಲಿಖಿತದಂತೆ ಎಂದು ನಂಬುವ ಜನರೇ ನಿದ್ದೆಗೇಡಾದಾಗ ತೀರಾ ಕಂಗೆಡುತ್ತಾರೆ. ಅಂಥವರು ನಿದ್ದೆಗೆಟ್ಟಾಗ ಉದ್ವಿಗ್ನರಾಗುತ್ತಾರೆ. ತಮ್ಮ ಬದುಕಿಗೆ ತಾವೇ ಜವಾಬ್ದಾರರು ಎಂದು ನಂಬುವವರಿಗಿಂತ ಬೇಗ ಸಿಟ್ಟಿಗೇಳುತ್ತಾರೆ.

ಮುಂದಿನ ಒಂದು ತಾಸು ಇ-ಮೇಲ್ ಕಳಿಸುತ್ತಾ ಕಳೆದ. ಯಾವುದಕ್ಕೂ ತಲೆ, ಬುಡ ಇರಲಿಲ್ಲ.

ಬೆಳಿಗ್ಗೆ 7.00

ನಿದ್ದೆ ಇಲ್ಲದೆ ಇಪ್ಪತ್ನಾಲ್ಕು ತಾಸು ಕಳೆದ ಗುರಿ ಮುಟ್ಟಿದ್ದೇನೆ. ಮತ್ತೊಂದು ಮುಂಜಾವು. ಪ್ರತಿ ಹೊಸ ಮುಂಜಾವೂ ತರುವ ಹುರುಪು ಉತ್ತೇಜನಕಾರಿಯಾದರೂ, ಎಲ್ಲೋ ಕೊಂಚ ಮಂಕು ಬಡಿದಂತಾಗಿರುವುದು ಗಮನಕ್ಕೆ ಬರುತ್ತದೆ. ದೇಹದ ತುಡಿತಕ್ಕೆ ಹೋಲಿಸಿದರೆ ಮೆದುಳು ಕೊಂಚ ಹಿಂದೆ ಇರುವಂತೆ ಭಾಸವಾಗುತ್ತದೆ.

ನಿದ್ದೆಗೇಡಾದವರಲ್ಲಿನ ಮೆದುಳ ಗ್ಲೂಕೋಸ್ ಮೆಟಬಾಲಿಸಂನ್ನು ಸಂಶೋಧಕ ಮಾರಿಯಾ ಥಾಮಸ್ ಲೆಕ್ಕ ಹಾಕಿದ್ದಾರೆ. ಮೆದುಳು ಚುರುಕಾಗಿರಲು ಗ್ಲೂಕೋಸ್ ಬೇಕು. ಕಡಿಮೆ ಗ್ಲೂಕೋಸ್ ಲಭ್ಯವಾದಾಗ ಯೋಚಿಸಲು ಮೆದುಳು ಕಷ್ಟಪಡಬೇಕಾಗುತ್ತದೆ. ಇಪ್ಪತ್ನಾಲ್ಕು ತಾಸು ನಿದ್ದೆಗೆಟ್ಟವರಲ್ಲಿ ಮೆದುಳು ಬಳಸುವ ಗ್ಲೂಕೋಸ್ ಪ್ರಮಾಣ ಶೇಕಡಾ 17ರಷ್ಟು ಕಳೆಗಿಳಿಯುತ್ತದೆ ಎಂದು ಥಾಮಸ್ ಕಂಡು ಹಿಡಿದಿದ್ದಾರೆ. ಇದರಿಂದಾಗಿ ಮೆದುಳು ಚುರುಕು ಕಳೆದುಕೊಳ್ಳುತ್ತದೆ. ನೆನಪಿನ ಶಕ್ತಿ ಕ್ಷೀಣಿಸುತ್ತದೆ. ಗಣಿತದ ಲೆಕ್ಕಾಚಾರದಲ್ಲಿನ ನಿಖರತೆ ಮತ್ತು ವೇಗ ನಿದ್ದೆಗೇಡಾದ ಕಾಲಕ್ಕೆ ಅನುಗುಣವಾಗಿ ಕಡಿಮೆಯಾಗುತ್ತಾ ಹೋಗುತ್ತದೆ.

ಹಾಗೆಂದರೆ ಜನ ಸರಿಯಾಗಿ ಕೆಲಸ ನಿರ್ವಹಿಸಲು, ಹೊಸ ಬಗೆಯ ಪರಿಸ್ಥಿತಿಗಳನ್ನು ಎದುರಿಸಲು ಸರಿಯಾದ ನಿದ್ದೆಯ ಅವಶ್ಯಕತೆ ಇದೆ. ಇನ್ನೊಂದು ಗಮನಾರ್ಹ ಸಂಗತಿ ಎಂದರೆ ಹೆಚ್ಚು ನಿದ್ದೆಗೇಡಾದಷ್ಟು ಕಲಿಯುವ ಸಾಮರ್ಥ್ಯ ಅದಕ್ಕೆ ತಕ್ಕಹಾಗೆ ಕುಗ್ಗುತ್ತದೆ ಎಂದೂ ಥಾಮಸ್ ಕಂಡುಹಿಡಿದಿದ್ದಾರೆ. ಇದು ಗಮನಿಸಿದಾಗ ರಾತ್ರಿ ಇಡೀ ನಿದ್ದೆಗೆಟ್ಟು ಓದುವ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸುವ ಸಾಧ್ಯತೆ ಕಡಿಮೆ ಎಂದು ತೋರುತ್ತದೆ.

ಮಧ್ಯಾಹ್ನ

ಎರಡನೇ ಸಿರ್ಕಾಡಿಯನ್ ಚಕ್ರದ ಸುಳಿಗೆ ಸಿಕ್ಕಿದ್ದೇನೆ. ಒಂದು ರೀತಿ ನಿದ್ದೆಯಲ್ಲೇ ಓಡಾಡಿದಂತೆ ಇದೆ. ತಲೆ ನೆಲಕ್ಕಿಟ್ಟರೆ ಸಾಕು ಎನಿಸುತ್ತದೆ. ನಿಂತಲ್ಲಿ ಕುಂತಲ್ಲಿ ತೂಕಡಿಕೆ. ಸಣ್ಣ ಜೊಂಪು. ಅದನ್ನು ನಿವಾರಿಸಲು ಏನೋ ಬರೆಯಲು ತೊಡಗಿದರೆ, ನಿದ್ದೆಯಲ್ಲೇ ಏನೋ ಬರೆದ ಹಾಗೆ.

ಇನ್ನೊಂದು ಕಪ್ ಕಾಫಿ ತಯಾರಿಸಿ ಕುಡಿದೆ. ಹಾಲು ಮುಗಿಯಲು ಬಂದಿತ್ತು. ಕಾರಲ್ಲಿ ಹೋಗಿ ತರಬೇಕು ಎಂದುಕೊಂಡೆ. ನಿದ್ದೆಗೇಡಾದ ಡ್ರೈವರ್‌ಗಳಿಂದಲೇ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತದೆ ಎಂಬುದು ನೆನಪಾಯಿತು. ಹಾಗಾಗಿ ನಡೆದೇ ಹೋಗಲು ನಿರ್ಧರಿಸಿದೆ.

ಮಧ್ಯಾಹ್ನ 1.00 ಗಂಟೆ

ಫುಟ್‌ಪಾತ್ ಮೇಲೆ ಬಿರುಸಾಗಿ ಹೆಜ್ಜೆ ಇಡುತ್ತಾ ನಡೆಯುವಾಗ, ದೇಹದ್ದೇನೂ ತಕರಾರಿಲ್ಲ. ನಿದ್ದೆಗೆಟ್ಟಿದ್ದೇನೆ ಎಂದು ನೆನಪಿಸುತ್ತಾ ಇರುವುದು ಮೆದುಳು. ಒಂದು ಅಥವಾ ಎರಡು ರಾತ್ರಿ ನಿದ್ದೆಗೆಡುವುದರಿಂದ ದೇಹದ ಚಟುವಟಿಕೆ ಮೇಲೆ ತೀವ್ರ ಪರಿಣಾಮ ಏನೂ ಆಗುವುದಿಲ್ಲ.

ಹಿಂದಿನ ದಿನ ನಿದ್ದೆ ಸರಿಯಾಗಿ ಮಾಡಿಲ್ಲ ಎಂದು ವ್ಯಾಯಾಮ ಕೈಬಿಡುವವರು ಕುಂಟುನೆಪ ಹೇಳುತ್ತಿದ್ದಾರೆ ಅಷ್ಟೆ. ಅಂಥ ದಿನಗಳಲ್ಲಿ ಎಂದಿನ ಹಾಗೆ ವ್ಯಾಯಾಮ ಮಾಡಿದರೆ ಕೊಂಚ ಬೇಗ ದಣಿವಾಗಬಹುದು ಅಷ್ಟೇ, ಜಾಗಿಂಗ್, ಈಸುವುದು ಎಂದಿನ ಹಾಗೆ ಮಾಡಲು ಅಡ್ಡಿಯೇನಿಲ್ಲ.

ಮಧ್ಯಾಹ್ನ 3.00

ಆಫೀಸಿಗೆ ಹಿಂದಿರುಗಿ ಬಂದು, ಬರೆದಿಟ್ಟಿದ್ದ ಕೆಲವು ಕಾಗದ ನೋಡಿದರೆ, ಇದು ನಾನು ಬರೆದಿದ್ದೇ ಎಂಬ ಅನುಮಾನ. ಸತ್ವವಿಲ್ಲದ, ನಿರ್ಜೀವ ಬರಹಗಳು

ಜಡವಾದ ಮನಸ್ಸಿನಿಂದ ಕ್ರಿಯಾಶೀಲತೆ ಸಾಧ್ಯವಿಲ್ಲ. ಬ್ರಿಟಿಷರು ನಡೆಸಿದ ಸಂಶೋಧನೆಯಿಂದ ಇದು ತಿಳಿದು ಬಂದಿದೆ.

ಸಂಜೆ 6.00

ಕೇವಲ ಪ್ರಯೋಗಕ್ಕಾಗಿ ಊಟದ ಜೊತೆ ವೈನ್ ಸೇವಿಸಿದೆ. ಡಾ. ಟಿಮೋಥಿ ರೋಯರ್ಸ್ ಎಂಬ ಬ್ರಿಟಿಷ್ ವಿಜ್ಞಾನಿ ನಿದ್ದೆಗೆಟ್ಟವರು ಕುಡಿದರೆ ಬೇಗ ಅಮಲೇರುತ್ತದೆ ಎಂದು ಪ್ರಯೋಗಗಳಿಂದ ಕಂಡು ಹಿಡಿದಿದ್ದಾನೆ. ಕೇವಲ ಒಂದೇ, ಎರಡೇ ಪೆಗ್ ಕುಡಿದರೆ ಸಾಕು ಸಂಪೂರ್ಣ ಅಮಲೇರುತ್ತದೆ. ವೈನ್ ಕುಡಿಯುತ್ತಿದ್ದ ಹಾಗೆ ಮಾತು ತೊದಲಾರಂಭಿಸಿತು ಏನೇನೋ ಅರ್ಥಹೀನ ವಿಚಾರ ಬಡಬಡಿಸಬೇಕು ಎಂದು ತೀವ್ರವಾಗಿ ಅನ್ನಿಸತೊಡಗಿತು.

ರಾತ್ರಿ 11.00

ಸಂಪೂರ್ಣ ದಣಿದು, ಹಾಸಿಗೆಯಲ್ಲಿ ಅಡ್ಡಾದೆ. ಮೊದಲು ಕೆಲವು ತಾಸಿನಲ್ಲಿ ಪಿಟ್ಯುಟರಿ ಗ್ರಂಥಿಗಳು ಸಾಕಷ್ಟು ಪ್ರಮಾಣದಲ್ಲಿ ಹಾರ್ಮೋನು ಬಿಡುಗಡೆ ಮಾಡುತ್ತವೆ. ನಿದ್ದೆಯ ಉದ್ದೇಶವೇ ಸವೆದ ದೇಹದ ಜೀವ ಕೋಶಗಳನ್ನು ದುರಸ್ತಿಗೊಳಿಸುವುದು ಹಾಗೂ ದೇಹಕ್ಕೆ ಪುನಶ್ಚೇತನ ತುಂಬುವುದು.

ದೇಹದೊಳಗಣ ರಾಸಾಯನಿಕ ಕ್ರಿಯೆ. ಹಗಲಿಗಿಂತ ತೀವ್ರ ತಗ್ಗುತ್ತದೆ. ದೇಹದ ತಾಪ ಹದಿನೈದು ಡಿಗ್ರಿಗಳಷ್ಟು ಕಡಿಮೆ ಆಗುತ್ತದೆ.

ಹನ್ನೆರಡು ತಾಸಿನ ಗಾಢ ನಿದ್ದೆಯ ನಂತರ ದೇಹವಿಡೀ ಮರಳಿ ಚೈತನ್ಯ ಪಡೆದುಕೊಂಡು ಉತ್ಸಾಹದಿಂದ ಪುಟಿಯುತ್ತಿದೆ.

ನಿದ್ದೆಗೆಡುವ ಪ್ರಯೋಗದ ಮೂರು ದಿನಗಳ ನಂತರ ಸೀನು ಆರಂಭವಾಯಿತು. ನೆಗಡಿ ಇರಬಹುದೇ? ನಿದ್ದೆಗೆಟ್ಟರೆ ರೋಗ ಬೇಗ ಬಾಧಿಸುತ್ತವೆಯೇ? ಎಂಬ ಬಗ್ಗೆ ಸಂಶೋಧನೆ ನಡೆಯುತ್ತಿದೆ. ನಿದ್ರಾಹೀನತೆಯ ಪ್ರಯೋಗದ ನಂತರ ನಿದ್ದೆಗೇಡಾಗುವುದರ ಪರಿಣಾಮ ಏನೆಂಬುದು ಅರಿವಾಗಿದೆ. ಈಗಂತೂ ನಾವು ಅಲಾರಂ ಇಟ್ಟುಕೊಂಡು ಗಂಟೆ ಬಡಿಯುತ್ತಿದ್ದ ಹಾಗೆ ಥಟ್ಟನೆ ಎಚ್ಚರಾಗಿ, ದೈನಂದಿನ ಕೆಲಸಕ್ಕೆ ಸಜ್ಜಾಗುತ್ತೇವೆ. ಇಂಥದಕ್ಕಿಂತ ಒಳಗಿನ ದನಿಯೊಂದು ಮಲಗಲು ಸೂಚನೆ ನೀಡುವಾಗ, ಬಾಯಿ ಮುಚ್ಚಿಕೊಂಡು ಹಾಸಿಗೇಲಿ ಕಾಲು ಚಾಚಿ ಮಲಗಿಬಿಡುವುದು ಒಳ್ಳೆಯದು.

(ರೀಡರ್ಸ್ ಡೈಜೆಸ್ಟ್‌ನಿಂದ)

ಜನಾರಣ್ಯ



ದಂಡಕಾರಣ್ಯದಲ್ಲಿ
ವನ್ಯ ಮೃಗಗಳ
ನಡುವೆ ಹೊಕ್ಕಾಗಲು
ಆಗದ ಹೆದರಿಕೆ
ಈ ಮನುಜರ
ಜನಾರಣ್ಯದಲಿ ನನಗೆ!

■ ಕ.ಬ.ವೀರಣ್ಣ ಕಣ್ಣಾಗಲ

ಶಯನೋತ್ಸವದ ಹಾದಿಯಲಿ.....!



ಲಲಿತ ಪ್ರಬಂಧ

> **ನಿದ್ದೆ ಅತ್ಯಂತ ಪ್ರಿಯ ಸಂಗತಿ. ಪ್ರತಿ ವ್ಯಕ್ತಿ ಪ್ರತಿ ರಾತ್ರಿಯ ನಿದ್ದೆಯಿಂದಲೇ ಬ್ಯಾಟರಿ ರೀಛಾರ್ಜ್ ಆದಂತೆ ಗೆಲುವಾಗುತ್ತಾನೆ. ಅದು ಇಲ್ಲದೇ ಹೋದಲ್ಲಿ ನಾನಾ ರೀತಿಯ ಕಷ್ಟ, ಕೋಟಲೆ, ನಿದ್ರಾ ಹೀನತೆಯ ಕಾರಣಗಳೂ ಮಹಾ ಸೊಗಸಾಗಿ ಇರುತ್ತವೆ.**

ಒಮ್ಮೆ ತವರು ಮನೆಗೆ ಹೋಗಿದ್ದಾಗ ನನ್ನಮ್ಮನನ್ನು ಕೇಳಿದೆ, 'ಅಮ್ಮಾ ನಿಮ್ಗೆ ಪ್ರಪಂಚದಲ್ಲಿ ಅತಿ ಪ್ರಿಯವಾಗಿರೋದು ಯಾವುದು....?' ಅಂತ.

'ನನ್ನ ಹಾಸಿಗೆ....!' ಅಮ್ಮ ತಣ್ಣಗೆ ಉತ್ತರಿಸಿದ್ದರು.

'ಅರೆ, ಗಂಡ-ಮನೆ-ಮಕ್ಳು, ಒಡಹುಟ್ಟುಗಳು, ಬಂಧುಗಳು, ಒಡವೆ, ವಸ್ತ್ರ, ಊಟ ಇವೆಲ್ಲಕ್ಕಿಂತಲೂ ಮಿಗಿಲಾದ್ದು ಹಾಸಿಗೇಲಿ ಏನಿದೇಮ್ಮಾ ಅಂತಾದ್ದು....!?' ನಾನವರನ್ನು ಚುಡಾಯಿಸಿದಾಗ ದಿವ್ಯ ನಿರ್ಲಿಪ್ತತೆಯಿಂದಲೋ ನಿರ್ವಿಕಾರ ಚಿತ್ತದಿಂದಲೋ ಅಮ್ಮ ನೀಡಿದ ಪ್ರತಿಕ್ರಿಯೆ ಮಾತ್ರ ವಿಶಿಷ್ಟವಾಗಿತ್ತು. ನನ್ನನ್ನು ಬಹಳಷ್ಟು ಚಿಂತನೆಗೆ ಗುರಿ ಮಾಡಿತ್ತು.

'ಯಾಕಿಲ್ಲ....? ಈ ಪರಿವಾರ ಸಾಗರದಲ್ಲಿ ಅನುಭವಿಸುವ ಸಕಲ ಕಷ್ಟ-ಸಂಕಷ್ಟಗಳನ್ನು ಮರೆಸಿ ತನ್ನ ಮಡಿಲು ಸೇರಿದಾಕ್ಷಣ ನಿದ್ದೆಯ ತೆಕ್ಕೆಗೆ ನನ್ನನ್ನು ಸೆಳೆಯುವ ಈ ನನ್ನ ಪಲ್ಲಂಗದಷ್ಟು ಆತ್ಮೀಯವಾದುದು ಈ ಬದುಕಲ್ಲಿ ನನ್ನ ಪಾಲಿಗೆ ಇನ್ನೇನಿರುವುದು ಸಾಧ್ಯ...!?'

ನನ್ನಮ್ಮನ ಹಾಸಿಗೆಯೆಂದರೆ ಅದೇನು ಈಗೀನ ನವ ನವೀನ ಕರ್ಲಾನ್, ಡನ್‌ಲಪ್, ಡಿಪ್ಲಿಯಂತಹಾ ಮೆತ್ತನೆಯ 'ಸ್ಪಂಜ್'ನ 'ಮ್ಯಾಟ್ರೆಸ್' ಅಲ್ಲ. ಹೋಗಲಿ ಮೃದು ಹತ್ತಿಯದೂ ಅಲ್ಲ! ಬರೇ ಹುಲ್ಲಿನ ಚಾಪೆ, ಒರಟು ಕಂಬಳಿ, ಅದರ ಮೇಲೆ ದಪ್ಪನೆಯದೊಂದು ಬಟ್ಟೆಯಿಂದ ಮಾಡಿದ ಹಚ್ಚಡ. ಮೇಲು ಹೊದಿಕೆಗಳು... ವಿಶಾಲ ಮಂಚದ ಮೇಲೆ ಮೈ ಚಾಚಿ ಸದಾ ಶೋಭಿಸುವ ಪುಣ್ಯವೂ ಅದಕ್ಕಿಲ್ಲ. ಸರಿ ರಾತ್ರಿಯ ಹೊತ್ತಿನಲ್ಲಷ್ಟೇ ಅದು ಬಿಚ್ಚಿಕೊಳ್ಳೋದು...!

ತುಂಬು ಕುಟುಂಬ, ಸದಾ ಆಗಮಿಸುವ ಒಬ್ಬರಲ್ಲಿ ಒಬ್ಬ ಬಂಧು-ಬಳಗ. ಹೊಟ್ಟೆಯನ್ನೋ ಕೈಯನ್ನೋ ಆಕ್ರಮಿಸಿದ ಹಸುಗೂಸು. ಮೂಗಿಗೆ ಕವಡೆ ಕಟ್ಟಿಕೊಂಡು 'ದುಡಿಮೆಯೇ ದೇವರು' ಎಂದು ನಂಬಿದ ಸಂಸಾರ ಗಾಣದ

ಮೂಕೆತ್ತು ಆಕೆ. ಇಡೀ ದಿನ ಚಕ್ರದಂತೆ ಕ್ಷಣ ಬಿಡುವಿಲ್ಲದೆ 'ಕೆಲಸ ಕೆಲಸ' ಎಂದು ತಿರು ತಿರುಗಿ ಬಸವಳಿಯುವ ನನ್ನ ಹೆತ್ತಬ್ಬೆಗೆ ತನ್ನದೇ ಆದ ಸ್ವ ಇಚ್ಛೆಯ ಸಮಯ ಇಲ್ಲಿ ಮಾತ್ರ ದೊರೆಯುವುದು ಸಾಧ್ಯವಾದುದರಿಂದ ಅವಳ ಅಭಿಪ್ರಾಯವನ್ನು ಕಡೆಗಣಿಸುವಂತಿಲ್ಲ!




ನೀರೆಷ್ಟು ಅವಶ್ಯಕವೆಂದು ಬಾಯಾರಿ ಗಂಟಲೊಣಗಿದವರಿಗೂ ಆಹಾರದ ಮಹತ್ವ ಹಸಿವೆಯಿಂದ ಕಂಗೆಟ್ಟವರಿಗೂ ಗೊತ್ತಿರಬಹುದಾದರೆ ನಿದ್ದೆ ಅದೆಷ್ಟು ಅಮೂಲ್ಯವೆಂದು ನಿದ್ರಾಹೀನರೇ ಹೇಳಲು ಸರಿಸೂಕ್ತರು....! ನಮ್ಮ ಚಿಂತೆ, ಅಸಹಾಯಕತೆಯ್ನನ್ನು ಮರೆಸುವ, ದುಡಿತದ ದಣಿವನ್ನು ನೀಗಿಸಿ ಸುಖ ಸುಂದರ ಸ್ವಪ್ನ ಲೋಕಕ್ಕೊಯ್ಯುವ ಸಂಗಾತಿಯಿದ್ದಾಳೆಯೆಂದರೆ ಈ ಪ್ರಪಂಚದಲ್ಲಿ ನಿದ್ರಾದೇವಿ ಮಾತ್ರ. ನಿದ್ದೆ ಸಕಲ ಜೀವಿಗಳನ್ನೂ ಮುತ್ತಿಕೊಳ್ಳುವ ತಾತ್ಕಾಲಿಕ ಮೃತ್ಯುವೂ ಹೌದು. ಆಲಸಿಗಳಿಗೆ, ಸೋಮಾರಿಗಳಿಗೆ ಎಲ್ಲೆಂದರಲ್ಲಿ ಕಾಣಿಸಿಕೊಳ್ಳುವ ಈಕೆ ದೈಹಿಕ ಯಾತನೆಪಡುವ ರೋಗಿಗಳಿಗೆ, ಮಾನಸಿಕ ಒತ್ತಡದಿಂದ ಒದ್ದಾಡುವವರಿಗೆ, ತಲೆ ತುಂಬಾ ಹಲವು ಯೋಜನೆಗಳನ್ನು ಹೇರಿಕೊಂಡವರಿಗೆ ಒಲಿಯುವುದು ವಿರಳ. ಸರ್ವರಿಗೂ ಪ್ರಿಯಳಾದ, ಸಕಲರಿಗೂ ಅತ್ಯಗತ್ಯವೆನಿಸಿರುವ ಜಗದಿರವನ್ನೇ ಮರೆಯಲು ಬಗೆ ಬಗೆಯ ಮಾನವರು ಅನುಸರಿಸುವ ಹಲವಾರು ವಿಧಿ-ವಿಧಾನಗಳಿರಬಹುದು. ಅದರಲ್ಲಿ ಕೆಲವುದರತ್ತವಾದರೂ ನೋಟ ಹರಿಸುವ, ಓದುಗರ ಮುಂದೆ ತೆರೆದಿಡುವ ಕಿರು ಪ್ರಯತ್ನ ನನ್ನದು....!



ಮನುಜ ಶೈಶವಾವಸ್ಥೆಯಲ್ಲಿ ತಾಯಿಯ ಸುಮಧುರ ಜೋಗುಳದ ಆಲಿಸುವಿಕೆಯಿಂದ ನಿದ್ರಾವಶನಾದರೆ ಮುಂದಿನ ಹಂತದಲ್ಲಿ ಸವಿಕಥೆಗಳು ನಿದ್ದೆ ಕಾತರೋ ಕಾರ್ಯವನ್ನು ನಿರ್ವಹಿಸುತ್ತದೆ. ಮನುಷ್ಯ ಜೀವಿ ಬೆಳೆದಂತೆಲ್ಲಾ ಅವನು ನಿದ್ದೆಗೆ ವಿನಿಯೋಗಿಸುವ ಹೊತ್ತು ಅನುಸರಿಸುವ ರೀತಿ ಬದಲಾಗುತ್ತಾ ಹೋಗುತ್ತದೆ. ಮೀನು ಮಾರುವಾಕೆಯನ್ನು ಸುಗಂಧಭರಿತ ಹೂಗಳ ರಾಶಿಯ ಸಮಿಪ ನಿದ್ರಿಸ ಹೇಳಿದರೆ ಅವಳು ನಿದ್ದೆ ಮಾಡಲಾರಳು. ತನ್ನ ಮೀನಿನ ಬುಟ್ಟಿ ಹೊರ ಹೊಮ್ಮಿಸುವ ವಿಶಿಷ್ಟ 'ಗಂಧ'ವೇ ಅವಳ ನಿದ್ದೆಗೆ ಪ್ರೇರಕ. ಚಿಕ್ಕ ಮಕ್ಕಳು ಬೊಂಬೆಯನ್ನೋ, ತಮ್ಮ ಆಟಿಕೆಗಳನ್ನೋ, ತಿಂಡಿ ಪೊಟ್ಟಣವನ್ನೋ ಎದೆಗಾನಿಸಿಕೊಂಡು ನಿದ್ದೆ ಮಾಡಿರುವುದನ್ನು ಕಂಡಿರುತ್ತೀರಿ... 'ನನ್ನದು' ಅನ್ನುವ ವಸ್ತುವಿನ ಸಾಮಿಪ್ಯದಲ್ಲಿ ಅದೆಷ್ಟು ಮೋಡಿಯಿದೆಯಲ್ಲವೇ...!?

ನಾನೂ ನಿದ್ದೆಯ ವಿಚಾರದಲ್ಲಿ ಬಹಳ ಸೂಕ್ಷ್ಮ. ಹೋದಲ್ಲಿ 'ಹಂಸ ತೂಲಿಕಾತಲ್ಪ' ಕೊಟ್ಟರೂ ನಾನು ಹೊತ್ತುಗಟ್ಟಲೆ ಹೊರಳಾಡದೇ ಪವಡಿಸಲಾರೆ. ನನ್ನದೇ ಹಾಸಿಗೆ, ದಿನಾ ಮಲಗುವ ನಿರ್ದಿಷ್ಟ ಜಾಗ, ನನ್ನದೇ ದಿಂಬು ಹೊದಿಕೆಗಳು ಹೀಗೆ ನಿದ್ರಿಸುವಾಗ ನಾನು ನನ್ನದು' ಎನ್ನುವ ಸ್ವಾರ್ಥ ನನ್ನಲ್ಲಿ ಅವತರಿಸುತ್ತದೆ...!

ನಮ್ಮ ಮನೆಯಲ್ಲೊಂದು ಹಳೇ ಟೇಬಲ್ ಫ್ಯಾನ್ ಇದೆ. 'ಕಟಕಟ-ಟಕಟಕ' ಸದ್ದುಗೈಯುತ್ತಾ ಆದರ ತಿರುಗುವಿಕೆಗೆ ನನ್ನ ಬಾಳಸಂಗಾತಿ ಅದೆಷ್ಟು ಅಧೀನರಾಗಿದ್ದಾರೆಯೆಂದರೆ ಆ ಶಬ್ದದ ಗುಂಗಿಗೇ ಅವರಿಗೆ ನಿದ್ರೆ ಬರೋದು.... ಸರ್ವ ಋತುಗಳಲ್ಲೂ ಆ ಪ್ಯಾನ್ ಚಿತ್ರ ವಿಚಿತ್ರ ದನಿಗೈಯುತ್ತಿರಲೇ ಬೇಕು...! ಎಲ್ಲಾದರೂ ನಾನು 'ಅದ್ನ ರಿಪೇರಿ ಮಾಡ್ಸಿ ತರ್ಬಾರ್ದಾ.. ಇಲ್ಲಾ ಹೊಸ್ದಾದ್ರೂ ತನ್ನಿ' ಅಂತ ಎಷ್ಟು ಕಿರಿ ಕಿರಿ ಮಾಡಿದ್ರೂ ಅವರದನ್ನ ಕಿವಿಗೇ ಹಾಕಿಕೊಳ್ಳುವುದಿಲ್ಲ. 'ಆ ಫ್ಯಾನ್ ಹಾಡುವ ರಾಗವೇ ನನ್ನ ಪಾಲಿಗೆ ಮುಕೇಶನ ಸುಮಧುರ ಗಾಯನ. ಅದಿಲ್ದೇ ನಂಗೆ ನಿದ್ದೆ ಬರಲ್ಲ...!' ಅಂತಾರೆ.



'ವಾಕ್‌ಮನ್'ನ ಹೊಟ್ಟೆಯೊಳಗೆ ಧ್ವನಿ ಸುರುಳಿಯನ್ನು ತಳ್ಳಿ ಹಾಡನ್ನಾಲಿಸುತ್ತಾ ಹಾಡು ಮುಗಿದಾಗ ಆರಿಸುವುದಕ್ಕೇ ಮರೆತ ಈ ಈಯರ್‌ಫೋನ್ ಕಿವಿಗೆ ತಗಲಿಸಿಕೊಂಡೇ ಸುಖನಿದ್ದೆಗಿಳಿಯುವವರಿದ್ದಾರೆ. ಓದುತ್ತಾ ಪುಸ್ತಕದ ಮೇಲೆಯೇ ಮಸ್ತಕವನ್ನೊದಗಿಸುವವರಿದ್ದಾರೆ. ಯುವ ಪ್ರೇಮಿ-ಪ್ರೇಮಿಕೆಯರು ಪರಸ್ಪರ ಸವಿ ನೆನಪು, ಸಿಹಿಕಲ್ಪನೆಗಳಮಲಿನಲ್ಲೇ ನಿದ್ದೆ ಮಾಡುವುದೋ ನಿದ್ದೆಗೆಡುವುದೋ ಮಾಡುತ್ತಾರೆ. ನವಜೋಡಿಗಳಿಗಂತೂ ಹಾಸಿಗೆ, ಹೊದಿಕೆ ದಿಂಬುಗಳೇ ಬೇಡ. ಒಲಿದಾ(ಕೆ)ತನ ತೋಳೇ ದಿಂಬಾಗಿ, ಬಿಸಿ ಅಪ್ಪುಗೆಯೇ ಬಿಗಿ ಹೊದಿಕೆಯಾಗಿ ಬುವಿಯಲ್ಲೇ ಸ್ವರ್ಗಕ್ಕೆ ಕಿಚ್ಚು ಹಚ್ಚುತ್ತಾರೆ....!

'ಅಯ್ಯೋ... ರಾತ್ರಿ ನಿದ್ದೇನೇ ಇಲ್ಲಾರೀ.... ಅದ್ಕೇ ಕಣ್ಣುರಿ... ತಲೆ ನೋವು.... ಯಜ್ಮಾನ್ರೂ ಊರಲ್ಲಿಲ್ಲ...!' ನನ್ನ ನೆರೆಮನೆಯಾಕೆಯ ಅಹವಾಲು... ಸ್ಪಷ್ಟವಾಗಿ ತಿಳಿದಿರುತ್ತೀರಿ ಆಕೆ ನವ ವಿವಾಹಿತೆಯೇನೋ ಅಂತ. ನಿಮ್ಮ ಊಹೆ ಸಂಪೂರ್ಣ ಸುಳ್ಳು! ನಡು ವಯಸ್ಸಿನ ಆಕೆಯ ನಿದ್ರಾಹೀನತೆಗೆ ಕಾರಣ ಮಾನಸಿಕ ಅಭದ್ರತೆ. ತಾನು 'ಏಕಾಂಗಿ'ಯೆನ್ನುವ ಹೃದಯದಲ್ಲಿನ ತಳಮಳ. 'ಅವರಿದ್ರೆ ನಿಶ್ಚಿಂತೇರಿ... ಹಾಯಾಗಿ ನಿದ್ದೆ ಬರುತ್ತೆ...!' ಆಕೆ ಸಮರ್ಥಿಸಿಕೊಳ್ಳುವಾಗ ಬಾಳ ಸಂಗಾತಿಗಳು ಒಬ್ಬರಿಗೊಬ್ಬರು ಎಷ್ಟೋ ಸಂದರ್ಭಗಳಲ್ಲಿ ಅಂಗರಕ್ಷಕರೂ ಹೌದೇನೋ ಅನಿಸುತ್ತದೆ.

ನನ್ನ ಗೆಳತಿಯೊಬ್ಬಳಿದ್ದಾಳೆ... ಅವಳಿಗೆ ನಿದ್ದೆ ಬರಬೇಕಾದರೆ ಸ್ವಲ್ಪ ಹೊತ್ತಾದರೂ ಟಿ.ವಿ. ಕಾರ್ಯಕ್ರಮಗಳನ್ನು ವೀಕ್ಷಿಸಲೇ ಬೇಕಂತೆ ! ನಮ್ಮ ದೂ(ದು)ರದರ್ಶನದವರ ಕಳಪೆ ಧಾರವಾಹಿಗಳ ಪ್ರಭಾವವೆಂದು ಅಪಾರ್ಥ ಮಾಡಿಕೊಂಡಿರಾ... ತಪ್ಪು! ಸೋಫಾದಲ್ಲಿ ಮೂಳೆ ಜಡಿಸಿಕೊಂಡವಳಂತೆ ಕೂತು ಕಣ್ಣು ಕೀಳಿಸದೆ ಮಾಯ ಪೆಟ್ಟಿಗೆಯನ್ನು ನೋಡುತ್ತಾ ತೂಕಡಿಸುವ ಸ್ಥಿತಿಗೆ ಬಂದು, ಕಣ್ಣೆ ತೆರೆಯಲಾದರದ, ಕಿವಿಯೇನೂ ಕೇಳಿಸಿಕೊಳ್ಳಲಾರೆಯೆಂಬ ಮುಷ್ಕರ ಹೂಡುವ ಹಂತ ತಲುಪಿದ ಮೇಲಷ್ಟೇ ದೇಹ ತೂರಾಡಿಸುತ್ತ ಮಲಗೋ ಕೋಣೆಗೆ ತೆರಳಿ ಮಂಚದಲ್ಲಿರುಳಿದರೆ ಮಾತ್ರ ಅವಳನ್ನು ಸುಖ ನಿದ್ದೆ ಕೈ ಚಾಚಿ ಕರೆಯೋದು....!

ನನ್ನ ಬಂಧುವೊಬ್ಬರು ತುಸು ಭಾವುಕರು... ಮಲಗುತ್ತಾ ಕೈಯಲ್ಲೊಂದು ಸೆಂಟ್ ಚಿಮುಕಿಸಿದ ಮೆತ್ತನೆಯ ಶಾಲು ಹಿಡಿದಿರುತ್ತಾರೆ. ಅದರ ಮೇಲೆ ಮುಖವೂರಿದಾಗ ನಾಸಿಕಕ್ಕೇರುವ ಹಿತವಾದ ನಸು ಸುಗಂಧ. ಆ ಬಟ್ಟೆ ನೀಡುವ ಮೃದು ಸ್ಪರ್ಶ ಅವರಿಗೆ ಅತೀವ ಸುಖ ಸಂವೇದನೆ ನೀಡಿ ನಿದ್ದೆಗಿಳಿಸುವ 'ಕ್ಲೋರೋಫಾರ್ಮ್'! ಯಾವತ್ತೂ ಅನಾಥಪ್ರಜ್ಞೆ ಕಾಡುವವರಿಗೆ ಸಂಗಾತಿಯಿಂದ ದೂರವಿರೋ ವಿರಹಿಗಳಿಗೆ ನಿದ್ದೆ ಬರೋದು ದಿಂಬನ್ನು ತಬ್ಬಿಕೊಂಡಾಗ ಮಾತ್ರ. ಆ ದಿಂಬು ಅಸಹಾಯಕತೆ, ನಿರಾಶೆಯ ಸಂಕೇತವೆಂದು ಬುದ್ಧಿಜೀವಿಗಳು ಪ್ರತಿಪಾದಿಸಿದರೂ ದಿಂಬು ಕೆಲವರಿಗೆ ಬೇಕೇ ಬೇಕೆನಿಸಿದುದ(ವ)ರ ಪ್ರತಿನಿಧಿಯನ್ನೋದೂ ನಿಜ....!

ಆಸಕ್ತಿಯಿಲ್ಲದ ವಸ್ತು, ವಿಚಾರಗಳೂ ನಿದ್ದೆಯಾಗಮನಕ್ಕೆ ಸಕಾರಾತ್ಮಕ ಉತ್ತೇಜನ ನೀಡುತ್ತದೆಯೆಂದು ನನ್ನ ಅಭಿಪ್ರಾಯ. ಇಲ್ಲವಾದರೆ ಸಂಗೀತ ಕೇಳುತ್ತಾ, ಭಾಷಣ ಆಲಿಸುತ್ತಾ ಪಕ್ಕದಲ್ಲಿ ಕುಳಿತವರ ನಿರರ್ಗಳ ವಾಕ್ ಝರಿಗೆ ಆಕಳಿಸುತ್ತಲೋ, ಕಣ್ಮುಚ್ಚಿ 'ಬೆಲ್ಲ ತೂಗುತ್ತಾ' ಇರುವವರನ್ನು ಸಮಾರಂಭಗಳಲ್ಲಿ ಹೇಗೆ ಕಾಣಲು ಸಾಧ್ಯ...!? ಇನ್ನೊಂದು ವರ್ಗದ ಜನರಿದ್ದಾರೆ..... ಪ್ರಯಾಣದ ಸಲುವಾಗಿ ಯಾವುದೇ ವಾಹನವನ್ನೇರಲಿ.... (ಸದ್ಯ... ದ್ವಿಚಕ್ರ ವಾಹನವಲ್ಲವಾದುದು. ದಾರಿ ಹೋಗುವವರ ಪುಣ್ಯ...!) ವೇಗದ ಚಲನೆ, ಬೀಸುವ ಗಾಳಿಯಿದ್ದರೆ, ಕಿಟಕಿಯ ಬದಿಯ ಆಸನವೇ ಆಗಬೇಕಿಲ್ಲ... ಸಹ ಪ್ರಯಾಣಿಕರ ಬೆನ್ನು, ಹೆಗಲು, ತೋಳೂ ಇವರನ್ನು ನಿದ್ರಾ ಲೋಕಕ್ಕೆಳೆಯುತ್ತದೆ. ಚಾಲಕ ದಡಕ್ಕನೆ

ಬ್ರೇಕ್ ಒತ್ತಿದಾಗಲೋ ಹೊಂಡಗಳಿಂದಾವೃತ್ತವಾದ ರಸ್ತೆಯಲ್ಲಿ ವಾಹನಗಳು ಕಪ್ಪೆಯಂತೆ ಕುಪ್ಪಳಿಸುವಾಗಲೋ ತಲೆ, ಮೂಗು, ಸೀಟಿನೆದುರಿನ ಕಬ್ಬಿಣದ ಸರಳಿಗೆ ಜಜ್ಜಿ ನೋವಾದರೂ ಈ ಚಟದಿಂದ ವಿಮುಕ್ತರಾಗುವುದಿಲ್ಲ. ಹೀಗೆ ಪ್ರಯಾಣದೊಳಗಿನ ನಿದ್ದೆ ಕೊಡುವ ಸುಖ-ಸಂತೃಪ್ತಿಯೆಷ್ಟೋ ನನಗೆ ತಿಳಿಯದು... ಆದರೆ ಜೇಬುಗಳ್ಳರಿಗೆ, ಛತ್ರಿ, ಕೈ ಚೀಲಗಳಿಗೆ ಕೈ ಕೊ(ನೀ)ಡುವವರಿಗಂತೂ ವಿಪುಲ ಅವಕಾಶ ಸಿಗುತ್ತದೆ....!

ಇನ್ನು ಕೆಲವರಿಗೆ ನಿದ್ದೆಗೆ ಬಹುಬೇಗನೇ ಅನುಮತಿ ದೊರೆತ 'ಸೌಂಡ್ ಸ್ಲೀಪ್' (ಗಾಢನಿದ್ರೆ) ಪ್ರಾಪ್ತಿಯಾಗುತ್ತದೆ. ಆದರೆ ಗ್ರಹಚಾರ ಪಕ್ಕದಲ್ಲಿ ಮಲಗಿದ್ದವರನ್ನು ಕಾಡುತ್ತದೆ. 'ಸೌಂಡಿಂಗ್ ಸ್ಲೀಪ್' ಪಕ್ಕದಲ್ಲಿ ಮಲಗಿದವರ ಶಯನೋತ್ಸವದ ಹಾದಿಗೆ ಅಡ್ಡಗಾಲಿಕ್ಕುವ ಪರಮಶತ್ರು....! ನಿದ್ರೆಗೈಯುವಾಗ 'ಗೊರಕೆ'ಯೆನ್ನೋ ಹೆಸರಿನಲ್ಲಿ ಬಾಯಲ್ಲಿ ಹೊರಡಿಸುವ ವಿವಿಧ ಶಬ್ದ, ನರಳಾಟ, ಕನವರಿಕೆಗಳಿಂದ ರಾತ್ರಿಯಿಡೀ ನಿದ್ರಾಹೀನರಾದವರ ಅಸಮಾಧಾನ ತಂದ ಜಗಳ, ಮೈ ಮನಸ್ಸುಗಳನ್ನು ಮೀರಿ ದಂಪತಿಗಳಲ್ಲಿ 'ವಿಚ್ಛೇದನೆ'ಯ ಗಂಭೀರ ಪರಿಸ್ಥಿತಿ ಉಂಟುಮಾಡಿ ಕೋರ್ಟಿನ ಕಟಕಟೆ' ಏರುವುದಕ್ಕೂ ಕಾರಣವಾಗಿದೆಯಂತೆ..!

ನಿದ್ದೆ ಮಾತ್ರೆ ತಿನ್ನುವುದು, ಮಾದಕ ದ್ರವ್ಯಗಳ ಚುಚ್ಚುಮದ್ದು, ಸುರಾದೇವಿಯ ಕೃಪೆ.... ಇತ್ಯಾದಿಗಳು ನಿದ್ರಾವಸ್ಥೆಗೊಯ್ಯುವ 'ಗಿಡ್ಡ ದಾರಿ'ಗಳಾದರೂ ಸಿಗುವ ಸುಖ-ಸಂತೃಪ್ತಿ ತಾತ್ಕಾಲಿಕ. ಇದರಿಂದ ಕೆಟ್ಟ ವ್ಯಸನಗಳಿಗೆ ದಾಸರಾಗುತ್ತೇವೆ. ದೈಹಿಕ ಶ್ರಮ ನಿರಾತಂಕ ನಿದ್ದೆಗೆ ಸುಲಭ ರಹದಾರಿ.... ಚಿಂತೆಗಳ ಬಳಲಾಟವಿಲ್ಲದ ಪರಿಶುದ್ಧ ಮನಸ್ಸು, ಪರಿಮಿತಿಯನ್ನು ಹೊಂದಿದ ಆಸೆ-ಆಕಾಂಕ್ಷೆಗಳು, ಭಗವಂತನ ಬಗೆಗಿನ ಧ್ಯಾನ-ಚಿಂತನೆಗಳು. ಹೃದಯವನ್ನು ನಿರಾಳವಾಗಿಸಿ ನಿರಾಯಾಸ ಶಯನಕ್ಕೆ ಆಹ್ವಾನ ನೀಡುತ್ತದೆ. ಆಪ್ತರೆನಿಸಿದವರ ಒಡನಾಟ, ಸವಿಮಾತು, ನಗೆ ಬುಗ್ಗೆಯುಕ್ಕಿಸುವ ಹಾಸ್ಯ ಚಟಾಕಿಗಳಿಗೂ ಮನದ ನಾನಾ ತಾಕಲಾಟಗಳನ್ನು ತೊಲಗಿಸಿ ನಿದ್ದೆಯ ತೋಳೊಳಗೆ ಹುದುಗಿಸುವ ಶಕ್ತಿಯಿದೆ. ರಾತ್ರಿ ಲಘುವಾದ ಆಹಾರ ಸೇವನೆ, ಆ ಬಳಿಕ ಸೇವಿಸುವ ಬಿಸಿಪೇಯ, ಹಗುರವಾದ ನಡಿಗೆಯೂ ನಿದ್ದೆಯ ತೆಕ್ಕೆಗೆ ಸುಲಭದಲ್ಲಿ ಕೆಡವುತ್ತದೆಯೆಂದು ವೈದ್ಯ ಮಹಾಶಯರುಗಳ ಆರೋಗ್ಯಕರ ಶಿಫಾರಸು...!


ಒಟ್ಟಿನಲ್ಲಿ ಸಹಜವಾಗಿ ಅವತರಿಸುವ ನಿದ್ದೆ ಅಪೇಕ್ಷಣೀಯ, ಉಲ್ಲಾಸಕರ. ಅದನ್ನು ಗಳಿಸುವ ಹಿಡಿಯುವ ಮಾರ್ಗ ಹೇಗಾದರೂ ಸಾಗುವ ಅಡ್ಡ ದಾರಿಯಾಗದೆ ಸ್ವಂತಕ್ಕೂ ಪರರಿಗೂ ಹಾನಿಯಾಗದ ರೀತಿಯಲ್ಲಿರುವುದೇ ಒಳಿತು....!

■ ಸರಸ ಬಿ. ಕೃಷ್ಣ, ಕಮ್ಮರಡಿ.

ಜಗತ್ತಿನ ಮೊದಲ ಮೋಟಾರು ಬೈಕು ತಯಾರಿಸಿದಾತ ಬ್ರಿಟನ್ನಿನ ಎಚ್. ಟೇಲರ್. ಅದನ್ನು ತಳ್ಳಿಯೇ ಸ್ಟಾರ್ಟ್ ಮಾಡಬೇಕಿತ್ತು. ಹೀಗೆ ಮೊದಲ ಬೈಕ್ ಜನಿಸಿದ್ದು 1892ರಲ್ಲಿ. ಕನಸು-ನನಸಾಗಲಿಲ್ಲ

★

'ರಸ್ನಾ' ಜಾಹೀರಾತಿನಲ್ಲಿ ಅಂಕಿತಾ ಝವೇರಿ ಕಾಣಿಸಿಕೊಂಡಾಗ ಜನ ಹುಚ್ಚೆದ್ದು ಹೋಗಿದ್ದರು. ಅವಳು ತನ್ನ ಆ ಎಳೆ ವಯಸ್ಸಿನಲ್ಲಿ ಟಿವಿ ಜಾಹೀರಾತು ಹಣದ ಮೇಲೆಯೇ ಆದಾಯ ತೆರಿಗೆ ನೀಡುತ್ತಾಳೆ ಎಂಬುದು ಬಹುದೊಡ್ಡ ಸುದ್ದಿಯಾಗಿತ್ತು. ■



ಹೆಬ್ಬಾವು ಮನುಷ್ಯನನ್ನು ನುಂಗಬಲ್ಲದೆ?

ಹಾವುಗಳ ಬಗ್ಗೆ ಇರುವಷ್ಟು ವ್ಯಾಪಕ ವದಂತಿ, ನಂಬಿಕೆಗಳು ಇನ್ಯಾವ ಪ್ರಾಣಿಯ ಬಗ್ಗೆಯೂ ಇಲ್ಲ. ಪ್ರಕೃತಿಯ ಸಮತೋಲನಕ್ಕೆ ಕೊಂಡಿಯಾದ ಹಾವು ಮನುಷ್ಯನ ತಪ್ಪು ಕಲ್ಪನೆಗಳಿಂದಾಗಿಯೇ ಹೆಚ್ಚು ಹಾನಿಗೀಡಾಗಿದೆ. ಇಂಥ ತಪ್ಪು ಕಲ್ಪನೆಗಳು ಅತ್ಯಂತ ಸಾಧು ಹಾಗೂ ಪುರಾತನ ವರ್ಗಕ್ಕೆ ಸೇರಿದ ಹೆಬ್ಬಾವಿನ ಬಗ್ಗೆಯೂ ಇದೆ. ಇದನ್ನು ಮನಗಂಡು ಕೆಲವರು ಹೆಬ್ಬಾವನ್ನು ಮನೆಗಳಲ್ಲಿ ಸಾಕುವುದು ಉಂಟು. ನಟಿ ಹಾಗೂ ವಿಶ್ವಸುಂದರಿ ಸುಷ್ಮಿತಾ ಸೇನ್ ಇತ್ತೀಚಿನ ಇಂಥ ಉದಾಹರಣೆ.

ಎದೆಯ ಮೇಲೆ ಹಾವು ತೆವಳುತ್ತವೆ. ಅದಕ್ಕೆ 'ಉರಗ' ಎಂದೂ ಹೆಸರು. ಈಚೆಗೆ 'ಅನಕೊಂಡ' ಎಂಬ ಸಿನಿಮಾ ಬಂದಿತ್ತು. ಆಫ್ರಿಕಾದ ಕಾಡುಗಳಲ್ಲಿ ಇರುವ ದೈತ್ಯ ಹೆಬ್ಬಾವು ಅದು. ಅಂಥ ಹಾವಿನ ಭೀಭತ್ಸ ಬೇಟೆಯನ್ನು ಚಿತ್ರದಲ್ಲಿ ಬಿಂಬಿಸಲಾಗಿತ್ತು. ಅದು ಇಡಿಯಾಗಿ ಮನುಷ್ಯನನ್ನೇ ನುಂಗುವಂಥ ದೃಶ್ಯಗಳೂ ಅಲ್ಲಿದ್ದವು. ಹಾಗೆ ನಿಜಕ್ಕೂ ಹೆಬ್ಬಾವು ಮನುಷ್ಯನನ್ನು ತಿನ್ನಬಲ್ಲದೇ? ಇದನ್ನು ತಿಳಿಯಬೇಕಾದರೆ ಹೆಬ್ಬಾವಿನ ಬಗ್ಗೆ ಉಳಿದ ವಿವರ ಮೊದಲು ತಿಳಿಯಬೇಕು.

ಹೆಬ್ಬಾವು ಹಾವುಗಳ ಜಾತಿಯಲ್ಲೇ ತೀರಾ ಪ್ರಾಚೀನವಾದದ್ದು. ಅದರಲ್ಲಿ ವಿಕಾಸದ ಪಳೆಯುಳಿಕೆಯಾಗಿ ಹಿಂಬದಿಯ ಕಾಲುಗಳ ಅವಶೇಷ ಇನ್ನೂ ಉಳಿದುಕೊಂಡಿದೆ. ಹೆಣ್ಣುಗಳಲ್ಲಿ ಇಂಥ ಅಂಗ ಇಲ್ಲ. ಗಂಡಿನಲ್ಲಿ ಮಾತ್ರ ಇರುವಂಥದ್ದು. ಹೆಣ್ಣಿನ ಜೊತೆ ಸಮಾಗಮಿಸಿದಾಗ, ಅದನ್ನು ತೀಡಿ ಉತ್ತೇಜಿಸಲು ಈ ಅಂಗದ ಪಳೆಯುಳಿಕೆ ಬಳಕೆಯಾಗುತ್ತದೆ.

ಅಷ್ಟೇ.

ಭಾರತದಲ್ಲಿ ಹೆಬ್ಬಾವಿನ ಎರಡು ಬಗೆ ಇವೆ. ಒಂದು ಅಜಗರ ಎನಿಸಿಕೊಂಡಿದೆ. ಇನ್ನೊಂದು ಬೆಟ್ಟದ ಹಾವು. ದಟ್ಟ ಕಾಡುಗಳಲ್ಲಿ, ನದಿಯ ಮಗ್ಗುಲ ಬಂಡೆಗಳ ಸಂದಿಯಲ್ಲಿ ಇವು ಇರುತ್ತವೆ. ಬೆಳೆದ ಹೆಬ್ಬಾವು ಎರಡೂವರೆಯಿಂದ ಐದು ಅಡಿಗಳಷ್ಟು ಇರುತ್ತದೆ. ಹೆಚ್ಚೆಂದರೆ ಕೆಲವು ಆರು ಮೀಟರ್ ಉದ್ದ ಬೆಳೆಯಬಹುದು. ಇದಕ್ಕೂ ದೊಡ್ಡ ಹೆಬ್ಬಾವು ಅಪರೂಪ. ಅಸ್ಸಾಂ ಬರ್ಮಾ, ಅಂಡಮಾನ್ ದ್ವೀಪ ಸಮೂಹದ ಅರಣ್ಯಗಳಲ್ಲಿ ವಾಸಿಸುವ ಅಪರೂಪದ ಹೆಬ್ಬಾವುಗಳು ಕೆಲವೊಮ್ಮೆ ಒಂಬತ್ತು ಮೀಟರ್ ಉದ್ದವಿದ್ದುದೂ ಪತ್ತೆಯಾಗಿವೆ.

ಮೈ ಬೂದು ಅಥವಾ ಕಪ್ಪು. ನಡುವೆ ದೊಡ್ಡ ಮಚ್ಚೆಯ ಹಾಗೆ ಕಲೆಗಳು. ಹಣೆ ಅಥವಾ ತಲೆ ಭಾಗದಲ್ಲಿ ನಾಮದ ಹಾಗೆ ಗುರುತೂ ಇರುತ್ತದೆ. ಇವು ತೀರಾ ಸೋಮಾರಿಗಳು. ರಾತ್ರಿ ಹೊತ್ತು ಆಹಾರಕ್ಕಾಗಿ ಕೊಂಚ ಚುರುಕಾಗುವುದು ಬಿಟ್ಟರೆ ಬಿದ್ದಲ್ಲೇ ಬಿದ್ದಿರುವುದು ಹೆಚ್ಚು. ಹಗಲಲ್ಲಿ ಆರಾಮ ನಿದ್ದೆ. ಯಾರಾದರೂ ತೊಂದರೆ ಕೊಟ್ಟು ಎಬ್ಬಿಸದೇ ಇದ್ದರೆ ತೀರಾ ಹಸಿವೆ ಆಗದೇ ಇದ್ದಲ್ಲಿ ಹಗಲು ಹೊತ್ತು ಜಪ್ಪಯ್ಯ ಅಂದರೂ ಅವು ಕದಲುವುದಿಲ್ಲ.

ಅವುಗಳ ಹಸಿವೆ, ಆಹಾರ ನುಂಗುವ ಪ್ರಮಾಣ ಅಗಾಧ. ದೊಡ್ಡ ಕಪ್ಪೆ, ಹಕ್ಕಿ ಮುಂತಾದವು ಸಾಮಾನ್ಯ ಆಹಾರ. ಬಂಧನದಲ್ಲಿದ್ದ ಹೆಬ್ಬಾವೊಂದು ವಾರವೊಂದರಲ್ಲಿ ನೂರು ಕೋಳಿ, ಒಂದು ನಾಯಿ, ನಾಲ್ಕು ಬೆಕ್ಕು ನುಂಗಿ ಕುಳಿತಿದ್ದು ದಾಖಲೆಯಾಗಿದೆ. ಹಾಗೆ ಎಂಥ ಹಸಿವಾದರೂ ತಡೆಯಬಲ್ಲ ಶಕ್ತಿಯೂ ಅದಕ್ಕಿದೆ. ಪ್ಯಾರಿಸ್‌ನ ಮೃಗಾಲಯ ಒಂದರಲ್ಲಿ ಎರಡು ವರ್ಷಕಾಲ ಒಂದಿಷ್ಟೂ ಅಹಾರ ಮುಟ್ಟದೇ ಹೆಬ್ಬಾವೊಂದು ಬದುಕಿ ಉಳಿದಿತ್ತು. ಹೆಬ್ಬಾವಿನ ಆಹಾರ ಕ್ರಮ ಸರಳ. ಅದು ತನ್ನ ಬೇಟೆಗಾಗಿ ಪೊದೆ, ಮರದ ಕೊಂಬೆ, ಮಿಕ ಅಡ್ಡಾಡುವ ಹಾದಿಯಲ್ಲಿ ಹೊಂಚಿ ಕುಳಿತಿರುತ್ತದೆ. ಮಿಕ ಬಂದೊಡನೆ ಮೊದಲು ತನ್ನ ಕೊಂಕು ಹಲ್ಲುಗಳಿಂದ ಕಚ್ಚಿ ಅದನ್ನು ಬೀಳಿಸುತ್ತದೆ. ತಕ್ಷಣ ಇಡೀ ಬೇಟೆಯನ್ನು ಮೈಯಿಂದ ಆವರಿಸಿಕೊಂಡು ಉಸಿರುಗಟ್ಟಿಸಿ ಸಾಯಿಸುತ್ತದೆ. ಆನಂತರ ತಲೆಯಿಂದ ಆರಂಭಿಸಿ ನುಂಗುತ್ತದೆ. ಹೆಬ್ಬಾವಿಗೆ ನಾನಾ ಪ್ರಾಣಿಗಳ ಭೋಜನ. ದೊಡ್ಡ ಹಂದಿ, ಸಣ್ಣ ಚಿರತೆ ಕೂಡ ಬೇಟೆ ಆಗಬಲ್ಲದು. ಚೀನಾ, ಮಲೇಷಿಯಾ, ಫಿಲಿಪೀನ್ಸ್, ಬರ್ಮಾಗಳಲ್ಲಿ ಮಕ್ಕಳನ್ನು ಸಣ್ಣ ಹುಡುಗರನ್ನು ಹೆಬ್ಬಾವು ನುಂಗಿದ ವರದಿಗಳಿವೆ. ಆದರೆ ಮನುಷ್ಯನನ್ನು ಬೇಟೆಯಾಡಿ ನುಂಗಿದ ಪ್ರಸಂಗ ಇಲ್ಲವೇ ಇಲ್ಲ ಎನ್ನಬೇಕು. ಹೆಬ್ಬಾವು ಮಹಾ ಸಂಕೋಚದ, ಅಂಜುಬುರಕ ಪ್ರಾಣಿ. ತನ್ನ ದಾರಿಗೆ ಮನುಷ್ಯ ಅಡ್ಡ ಬಂದರೆ ತಕ್ಷಣ ಏನೂ ಆಗಿಯೇ ಇಲ್ಲ ಎಂಬಂತೆ ನಿಧಾನ ತೆವಳಿಕೊಂಡು ಪಾರಾಗಲು ಮೊದಲು ಯತ್ನಿಸುತ್ತದೆ. ಅದರ ದಾರಿ ಬಂದಾಗಿ, ಅನಿವಾರ್ಯವಾದಾಗ ಮಾತ್ರ ಫೂತ್ಕರಿಸಿ ಹೆದರಿಸಲು ನೋಡುತ್ತದೆ. ಆಗಲೂ ಪಾರಾಗುವ ದಾರಿ ದೊರೆಯದೇ ಇದ್ದಲ್ಲಿ ಮಾತ್ರ ಎಗರಿ ಮನುಷ್ಯನ ಮೇಲೆ ಆಕ್ರಮಣ

ನಡೆಸುತ್ತದೆ. ಅದು ಮೊದಲು ದಾಳಿ ಮಾಡುವುದು ಕಾಲಿನ ಮೇಲೆ. ಅದರ ಹೊಡೆತ ಅಥವಾ ಮೈ ಕಾಲಿಗೆ ಸುತ್ತಿಕೊಂಡು ಎಳೆದಾಗ ಮನುಷ್ಯ ಸಮತೋಲತಪ್ಪಿ ನೆಲಕ್ಕೆ ಬೀಳುತ್ತಾನೆ. ಆಗ ಮೈಯಿಡೀ ಸುತ್ತಿಕೊಂಡು ನುಲಿಯುವುದರಿಂದ ಮನುಷ್ಯ ಉಸಿರುಕಟ್ಟಿ ಸಾಯುತ್ತಾನೆ. ಹಾಗೆಂದು ಹೆಬ್ಬಾವು ತಾನಾಗೇ ಮನುಷ್ಯನ ಬೇಟೆಗೆ ಮುಂದಾಗುವುದಿಲ್ಲ. ಸಾಕಷ್ಟು ದೊಡ್ಡ ಹೆಬ್ಬಾವು ಮಾತ್ರ ಅನಿವಾರ್ಯ ಸಂದರ್ಭಗಳಲ್ಲಿ ಮನುಷ್ಯನ ಮೇಲೆ ಆಕ್ರಮಣ ನಡೆಸಿ ಕೊಲ್ಲುವುದೂ ಸಾಧ್ಯ.

ಹೆಬ್ಬಾವು ಮೊಟ್ಟೆ ಇಟ್ಟು ಮರಿ ಮಾಡುತ್ತದೆ. ಒಮ್ಮೆಗೇ ಹೆಣ್ಣು ನೂರಾ ಏಳು ಮೊಟ್ಟೆಗಳನ್ನಿಟ್ಟ ದಾಖಲೆ ಇದೆ. ಆನಂತರ ಅವು ಒಡೆದು ಮರಿಗಳಾಗಲು ಅರವತ್ತರಿಂದ ಎಂಬತ್ತು ದಿನ ಬೇಕು. ಅಷ್ಟು ದಿನ ಹೆಣ್ಣು ಹಾವು ಮೊಟ್ಟೆಗಳನ್ನು ಆವರಿಸಿ ಸುತ್ತಿಕೊಂಡು ಕದಲದೇ ಕಾಯುತ್ತದೆ. ಅಗತ್ಯ ಎನಿಸಿದಲ್ಲಿ ಮೈ ಕದಲಿಸಿ, ಕೊಡವಿ, ಅಗತ್ಯವಾದ ಬಿಸಿಯನ್ನು ಅದು ಕಾಯ್ದುಕೊಳ್ಳುತ್ತದೆ.

ಇಂಥ ಹೆಬ್ಬಾವು ಕೆಲವರಿಗೆ ರುಚಿಕರ ಖಾದ್ಯ. ಇದರ ಮಾಂಸ ಸಿಹಿಯಾಗಿ ಇರುತ್ತದೆಂದು ಹೇಳುತ್ತಾರೆ. ಭಾರತದ ಈಶಾನ್ಯ ರಾಜ್ಯಗಳಲ್ಲಿ ಇದರ ಭಕ್ಷಣೆ ಸಾಮಾನ್ಯ. ಹೆಬ್ಬಾವಿನ ನಾನಾ ವಿನ್ಯಾಸದ ಚರ್ಮಕ್ಕಂತೂ ಎಲ್ಲಿಲ್ಲದ ಬೇಡಿಕೆ.

■ ಶೇಷಗಿರಿ ಜೋಡಿದಾರ್

ಜಾನುವಾರು ರಕ್ಷಣೆಯ ಅಗತ್ಯ

'ನೀನ್ಯಾರಿಗಾದೆಯೋ ಎಲೆ ಮಾನವ?' ಎಂದು ಕೇಳಿದಾಗ ಉತ್ತರಿಸುವುದು ಕಷ್ಟ. ಪಶು ಸಂಪತ್ತು ಆಯಾ ದೇಶದ ಶ್ರೀಮಂತಿಕೆ, ಸಂಪತ್ತಿನ ಅಳತೆಗೋಲು. ಹಳ್ಳಿಗಳ, ಸಣ್ಣ ಹಿಡುವಳಿಗಳ ನಮ್ಮಂಥ ದೇಶದಲ್ಲಿ ಆಧುನಿಕ ಯಂತ್ರ, ಉಪಕರಣಗಳಿಗಿಂತ ಪಶುಗಳೇ ಹೆಚ್ಚು ಉಪಯುಕ್ತ.

ಈಚಿನ ದಿನಗಳಲ್ಲಿ ರಫ್ತು ಮಾಡಲೆಂದೇ ಪಶುಗಳನ್ನು ಅತ್ಯಾಧುನಿಕ ವಧಾ ಸ್ಥಾನಗಳಿಗೆ ನಿತ್ಯ ಕೊಂಡೊಯ್ಯಲಾಗುತ್ತದೆ. ಒಂದು ಗುಂಪಿನ ಜನ ಗೋಹತ್ಯೆ ನಿಷೇಧಿಸಬೇಕು ಎಂದು ಹುಯಿಲೆಬ್ಬಿಸುತ್ತಾರೆ. ಉಳಿದ ಪ್ರಾಣಿಗಳಾದ ದನ, ಎಮ್ಮೆ ಸತ್ತರೂ ಚಿಂತೆ ಇಲ್ಲ. ಕೇವಲ ಧಾರ್ಮಿಕ ವಿಚಾರದ ನೆಲೆಯಲ್ಲಿಯೇ ನೋಡಿದಾಗ ಇಂಥ ಆಭಾಸಗಳು ಆಗುತ್ತವೆ. ಪಶು ಸಂಪತ್ತಿನ ಬಗ್ಗೆ ವಿಶ್ಲೇಷಿಸುವಾಗ, ನಿಲುವು ತಳೆಯುವಾಗ ಬೇರೆ ಆಯಾಮ, ಮಗ್ಗುಲುಗಳನ್ನೂ ಪರಿಗಣಿಸ ಬೇಕಾಗುತ್ತದೆ.

ನಮ್ಮಲ್ಲಿ 245 ಮಿಲಿಯನ್ ಜಾನುವಾರುಗಳಿವೆ. ಇವುಗಳಲ್ಲಿ 160 ಮಿಲಿಯನ್ ಜಾನುವಾರುಗಳು ಕೃಷಿ ಉತ್ಪಾದನೆಯಲ್ಲಿ ಬಳಕೆಯಾಗುತ್ತವೆ. ಅವುಗಳು ಇಂಧನದ ಬಳಕೆ ತಪ್ಪಿಸುವುದಲ್ಲದೇ, ಪ್ರಕೃತಿ ಕಲುಷಿತಗೊಳ್ಳುವುದನ್ನು ತಡೆಯುತ್ತವೆ. ಇಂಥ ಜಾನುವಾರುಗಳನ್ನು ಕೇವಲ ಧಾರ್ಮಿಕದೃಷ್ಟಿಯಿಂದ ಮಾತ್ರ ಪರಿಗಣಿಸುವುದು ಅಥವಾ ಪಾಶ್ಚಿಮಾತ್ಯದ ಹಾಗೆ ಲಾಭದ ದೃಷ್ಟಿಯಿಂದ ಮಾತ್ರ ನೋಡುವುದು ಅಪಾಯಕಾರಿ.

ಧಾರ್ಮಿಕ ಪಾವಿತ್ರ್ಯತೆ ಗೋವುಗಳನ್ನು ರಕ್ಷಿಸುವುದಕ್ಕೆ ಒಂದು ಪ್ರಬಲ ಕಾರಣ. ನಮ್ಮ ದೇಶದಲ್ಲಿ ಜಾನುವಾರಗಳನ್ನು ಬೇಸಾಯ, ಸರಕು ಸಾಗಾಟ ಮತ್ತು ನೀರೆತ್ತುವ ಕೆಲಸಗಳಿಗಾಗಿ ಉಪಯೋಗಿಸಲಾಗುತ್ತದೆ. ದನ, ಎಮ್ಮೆಗಳು ಪೋಷಣೆಗೆ ಅವಶ್ಯಕವಾದ ಹಾಲನ್ನು ಒದಗಿಸುತ್ತವೆ. ಸೆಗಣಿ ಉರುವಲು ಮತ್ತು ಜೈವಿಕ ಅನಿಲದ ಉತ್ಪಾದನೆಗಾಗಿ ಉಪಯೋಗಿಸಲ್ಪಡುತ್ತದೆ. ಚರ್ಮ, ಮಾಂಸ, ಕೊಂಬು ಮತ್ತು ಉದರದಿಂದ ದೊರೆಯುವ ಔಷಧಿಗಳು ಪ್ರಾಣಿಗಳಿಂದ ದೊರೆಯುವ ಇತರ ಉತ್ಪನ್ನಗಳು.

ದನ, ಎತ್ತು, ಎಮ್ಮೆ, ಕೋಣಗಳೆಂದು ಭಾರತದಲ್ಲಿರುವ ಜಾನುವಾರುಗಳ ಸಂಖ್ಯೆ 245 ಮಿಲಿಯಗಳಷ್ಟು. ಇದರಲ್ಲಿ 85 ಮಿಲಿಯ ಹಾಲು ಉತ್ಪಾದನೆಗಾಗಿಯೂ, 160 ಮಿಲಿಯ ಕೃಷಿ ಕೆಲಸಗಳಿಗಾಗಿಯೂ ಉಪಯೋಗಿಸಲ್ಪಡುತ್ತವೆ. ಪ್ರತಿಯೊಂದು ಪ್ರಾಣಿಯೂ 1/2 ಅಶ್ವಶಕ್ತಿಯದ್ದು ಶಕ್ತಿ (Energy) ಯನ್ನು ಉತ್ಪಾದಿಸುತ್ತವೆ ಎಂದು ಲೆಕ್ಕಹಾಕಿದರೆ ಇವು ಉತ್ಪಾದಿಸುವ ಶಕ್ತಿ ಒಂದು ಮಿಲಿಯ ಸಣ್ಣಗಾತ್ರದ ಟ್ರಾಕ್ಟರುಗಳು ಉತ್ಪಾದಿಸುವ ಶಕ್ತಿಗೆ ಸಮಾನ. 160 ಮಿಲಿಯ ಜಾನುವಾರುಗಳು ಉತ್ಪಾದಿಸುವ ಶಕ್ತಿಯ ಬೆಲೆ ಸುಮಾರು 3,900 ಕೋಟಿ ರೂಪಾಯಿಗಳಷ್ಟಾಗುತ್ತದೆ. ದುಡಿಮೆಯ ಎತ್ತುಗಳಿಂದ ಹೆಕ್ಟೇರಿಗೆ 0.6 ಅಶ್ವಶಕ್ತಿಯಷ್ಟು ಶಕ್ತಿ ದೊರೆಯುತ್ತದೆ. ಒಂದು ಹೆಕ್ಟೇರ್ ಪ್ರದೇಶದಲ್ಲಿ ಸೂಕ್ತ ಬೇಸಾಯ ಕ್ರಮಗಳನ್ನು ಕೈಗೊಳ್ಳಲು 1 ರಿಂದ 1.5ರಷ್ಟು ಅಶ್ವಶಕ್ತಿಯ ಅವಶ್ಯಕತೆಯಿದೆ.


ಭಾರತದ ಸುಮಾರು 50 ಮಿಲಿಯ ಕೃಷಿ ಹಿಡುವಳಿಗಳಲ್ಲಿ ಶೇ.75ರಷ್ಟು ಹಿಡುವಳಿಗಳ ವಿಸ್ತೀರ್ಣ 2 ಹೆಕ್ಟೇರಿಗಿಂತ ಕಡಿಮೆ ಸಣ್ಣ ಹಿಡುವಳಿಗಳಲ್ಲಿ ಟ್ರಾಕ್ಟರುಗಳನ್ನು ಉಪಯೋಗಿಸುವುದು ಆರ್ಥಿಕವಾಗಿ ಲಾಭದಾಯಕವಲ್ಲ. ಜಾನುವಾರುಗಳು ಲಭ್ಯವಿರುವ ಹಸುರು ಹುಲ್ಲು ಮತ್ತು ಕೃಷಿ ತ್ಯಾಜ್ಯ ವಸ್ತುಗಳನ್ನು ಉಪಯೋಗಿಸಿ ಶಕ್ತಿಯನ್ನು ಒದಗಿಸುವುದರಿಂದ ಇಂಧನದ ಉಳಿತಾಯವಾಗುತ್ತದೆ. ಹಾಲು ಉತ್ಪಾದಿಸುವ ಜಾನುವಾರುಗಳಲ್ಲಿ 52 ಮಿಲಿಯ ದನಗಳೂ 38 ಮಿಲಿಯ ಎಮ್ಮೆಗಳೂ ಸೇರಿವೆ. ಇವುಗಳಲ್ಲಿಂದ ದೊರೆಯುವ ಹಾಲು ಸುಮಾರು 70 ಮಿಲಿಯ ಟನ್ನುಗಳಷ್ಟು.

ಜಾನುವಾರುಗಳ ಕೊಡುಗೆಯಲ್ಲಿ ಒಣಸೆಗಣಿಯ ಪಾತ್ರ ಮಹತ್ತರವಾದದ್ದು. ಸುಮಾರು 320 ಮಿಲಿಯ ಟನ್ನುಗಳಷ್ಟು ಸೆಗಣಿ ಗ್ರಾಮೀಣ ಪ್ರದೇಶಗಳಲ್ಲಿ ಇಂಧನವಾಗಿ ಉಪಯೋಗಿಸಲ್ಪಡುತ್ತದೆ. 25 ಟನ್ ಒಣಸೆಗಣಿಯ ಇಂಧನ ಶಕ್ತಿ ಒಂದು ಟನ್ ಕಲ್ಲಿದ್ದಲು ಇಂಧನದ ಶಕ್ತಿಗೆ ಸಮಾನ. ಸುಮಾರು 80 ಮೀಲಿಯ ಟನ್ ಸೆಗಣಿ ಜೈವಿಕ ಅನಿಲ ಉತ್ಪಾದನೆಗೆ ಉಪಯೋಗಿಸಲ್ಪಡುತ್ತದೆ. ಜೈವಿಕ ಅನಿಲ ಉತ್ಪಾದನೆಯ ನಂತರ ಶೇ.3 ರಿಂದ 4ರಷ್ಟು ಸಾರಜನಕದ ಅಂಶವನ್ನೊಳಗೊಂಡ ತ್ಯಾಜ್ಯ ಸಾವಯವ ಗೊಬ್ಬರವೂ ದೊರೆಯುತ್ತದೆ. ಈ ಸಾರಜನಕರದ ಬೆಲೆ ಅಂದಾಜು 950 ಕೋಟಿ ರೂಪಾಯಿಗಳಷ್ಟು. ಜಾನುವಾರುಗಳಿಂದ ದೊರೆಯುವ ಶಕ್ತಿ ಸುಮಾರು 8,000 ಕೋಟಿ ರೂಪಾಯಿ ಬೆಲೆಯ ಇಂಧನದ ವೆಚ್ಚವನ್ನು ಉಳಿಸುತ್ತದೆ.

'ಗೋಸಂರಕ್ಷಣೆಯೆಂದರೆ ಮನುಷ್ಯ ಮತ್ತು ಪ್ರಾಣಿಗಳೊಂದಿಗಿರುವ ಭ್ರಾತೃತ್ವ, ಕರ್ಮ ಮತ್ತು ತಪಸ್ಯದಿಂದ ಈ ಉದಾತ್ತ ಭಾವನೆ ಬೆಳೆಯಬೇಕು' ಎಂದು ಪ್ರೊ. ವಾಸ್ವಾನಿಯವರು ನುಡಿದಿದ್ದರು. 'ಅದೊಂದು ಬಲಹೀನ, ಅಸಾಹಾಯಕ ಜೀವಿಗಳ ರಕ್ಷಣಾಕಾರ್ಯ' ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಭಿಪ್ರಾಯಪಟ್ಟಿದ್ದರು. ಭಾರತೀಯ ಗೋಸಂರಕ್ಷಣೆಯ ನೀತಿಯ ಕೃಷಿ ಪ್ರಾಧಾನ್ಯವುಳ್ಳ ರಾಷ್ಟ್ರದ, ಕೃಷಿ ಸಂಬಂಧ ಸಮಾಜದ ಆರ್ಥಿಕ ಅಭಿವೃದ್ಧಿಯಲ್ಲಿ ಜಾನುವಾರುಗಳ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ.

■ ಪಿ.ಎಸ್.ರೈ

ದೊಡ್ಡ ಜನರ ಕರಾಚಿಯ ಸಣ್ಣ ಶಾಲೆ



ಪಾಕೀಸ್ತಾನದ ಕರಾಚಿಯಲ್ಲಿ ಹಲವು ಶಾಲೆಗಳಿವೆ. ಬಹಳಷ್ಟು ಪ್ರತಿಷ್ಠಿತರಿಗೇ ಮೀಸಲಾದವು. ಇಲ್ಲಿನದೇ ಕರಾಚಿ ಗ್ರಾಮರ್ ಸ್ಕೂಲ್‌ನಲ್ಲಿ, ಲಾಹೋರ್‌ನ ಐಚಿಸನ್ ಶಾಲೆಯಲ್ಲಿ ಪ್ರತಿಷ್ಠಿತರ ಮಕ್ಕಳಿಗೆ ಮಾತ್ರ ಪ್ರವೇಶ. ಸೆಂಟ್ ಪ್ಯಾಟ್ರಿಕ್ಸ್ ಶಾಲೆ ಹಾಗಲ್ಲ. ಕರಾಚಿಯ, ಹತ್ತಿರದ ಊರುಗಳಿಂದ ಬರುವ ನಾನಾ ವರ್ಗದ ವಿದ್ಯಾರ್ಥಿಗಳಿಗೆ ತೆರೆದ ಬಾಗಿಲು. ಅದರಲ್ಲೂ ಮಧ್ಯಮವರ್ಗದ ಕುಟುಂಬಗಳಿಂದ ಬಂದ ನಾನಾ ಜನಾಂಗ, ಧರ್ಮದ ವಿದ್ಯಾರ್ಥಿಗಳು ಇಲ್ಲಿ ಕಲಿತದ್ದು ಹೆಚ್ಚು.

ಕಷ್ಟದ ದುಡಿಮೆ, ಶಿಸ್ತಿನ ಜೀವನಕ್ಕೆ ಇಲ್ಲಿ ಆದ್ಯತೆ. ಆದ್ದರಿಂದಲೇ ಇಲ್ಲಿ ಕಲಿತ ಎಷ್ಟೋ ಜನ ಮೇಲೆ ಬಂದಿದ್ದಾರೆ. ಎತ್ತರದ ಸ್ಥಾನಗಳಲ್ಲಿ ಇದ್ದಾರೆ.

ಕಳೆದ ಮಾರ್ಚ್ ತಿಂಗಳಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಮಾವೇಶ. ಪಾಲ್ಗೊಂಡಿದ್ದ ಪ್ರತಿಷ್ಠಿತರಲ್ಲಿ ಪಾಕೀಸ್ತಾನವನ್ನು ಈಗ ಆಳುತ್ತಿರುವ ದಂಡನಾಯಕ ಪರ್ವೆಜ್ ಮುಷರಫ್ ಕೂಡ ಒಬ್ಬರು. ತಾಯಿ, ಮಗಳ ಜೊತೆ, ತಾವು ಕಲಿತಿದ್ದ ಶಾಲೆಗೆ ಬಂದಿದ್ದ ಮುಷರಫ್, ತಮಗೆ ಬೆತ್ತದ ರುಚಿ ಕಾಣಿಸಿದ ಶಾಲೆಯ ವಿಶೇಷ ಕೊಠಡಿಗೂ ಭೇಟಿ ಇತ್ತಿದ್ದರು.

ಅಂಥದೊಂದು ದಂಡನೆಯಿಂದ, ಶಾಲೆಯಲ್ಲಿ ಕಲಿತ ಶಿಸ್ತಿನಿಂದ ಮುಂದೆ ಮಿಲಿಟರಿ ಶಾಲೆಯಲ್ಲಿ ತಮಗೆ ಏನೇನೂ ಕಷ್ಟವಾಗಲಿಲ್ಲ ಎಂದೂ ಅವರು ಹೇಳಿಕೊಂಡಿದ್ದಾರೆ. ಮುಷರಫ್‌ರ ಹಾಗೆ ಇದೇ ಶಾಲೆಯಲ್ಲಿ ಕಲಿತು ಉನ್ನತ ಸ್ಥಾನಕ್ಕೇರಿದ ಹಣಕಾಸು ಸಚಿವ ಶೌಕತ್ ಅಜೀಝ್, ಸಿಂಧ್ ರಾಜ್ಯಪಾಲ ಹಾಗೂ ಕರಾಚಿ ಕೋರ್‌ನ ಕಮ್ಯಾಂಡರ್ ಕೂಡ ಅವತ್ತು ಹಾಜರಿದ್ದರು.

ಗೈರು ಹಾಜರಾಗಿದ್ದ ದೊಡ್ಡ ವ್ಯಕ್ತಿ ಎಂದರೆ ಭಾರತದ ಗೃಹ ಸಚಿವ ಎಲ್.ಕೆ. ಅಡ್ವಾನಿ. ಅವರು ಕರಾಚಿಯ ಸೆಂಟ್ ಪ್ಯಾಟ್ರಿಕ್ಸ್ ಶಾಲೆಯಲ್ಲಿ ಹನ್ನೆರಡು ವರ್ಷ ಕಲಿತವರು. ಈ ಹಿಂದೆಯೇ ಅವರು ಹಳೆಯ ಈ ಶಾಲೆಗೆ ಭೇಟಿ ನೀಡಬೇಕಿತ್ತು. ಪಾಕ್ - ಭಾರತ ನಡುವೆ ಹೊಸದಾಗಿ ಬಸ್ ಪ್ರಯಾಣ ಆರಂಭಗೊಂಡು, ಪ್ರಧಾನಿ ವಾಜಪೇಯಿ ಲಾಹೋರಿಗೆ ತೆರಳುವಾಗಲೂ ಅಡ್ವಾನಿ ಅವರ ಜೊತೆಗೂಡಲಿಲ್ಲ. 'ನೀವು ಲಾಹೋರ್‌ಗೆ ಹೋಗಿ ಬನ್ನಿ, ನಾನು ಕರಾಚಿಗೆ ಹೋಗಿ ಬರುತ್ತೇನೆ' ಎಂದಿದ್ದರು. ಆ ಗಳಿಗೆ ಮಾತ್ರ ಇದುವರೆಗೆ ಕೂಡಿ ಬಂದಿಲ್ಲ. ಸೆಂಟ್ ಪ್ಯಾಟ್ರಿಕ್ ಶಾಲೆಯ ವಿಶೇಷವೆಂದರೆ ಬೆತ್ತ ಕೈಯಲ್ಲಿ ಹಿಡಿದೇ ಅಲ್ಲಿಯ ಮಾಸ್ತರುಗಳು ಪಾಠ ಮಾಡುತ್ತಾ ಇದ್ದುದು. ಹುಡುಗ ಕೊಂಚ ತುಂಟ ಎನ್ನಿಸಿದರೆ ಒದೆ ಬಿದ್ದವು ಎಂದೇ ಲೆಕ್ಕ. ಮುಷರಫ್ ಶಾಲೆಯಲ್ಲಿ ಇದ್ದಾಗ ಬಹಳ ನಾಚಿಕೆ ಹುಡುಗ. ತನ್ನ ಪಾಡಿಗೆ ತಾವು ಇರುತ್ತಾ ಇದ್ದವರು. ಅಂಥವರಿಗೂ ಮಾಸ್ತರುಗಳ ದೊಣ್ಣೆ ಪೆಟ್ಟಿನ ಜ್ಞಾಪಕ ಇದೆ.

ಅಡ್ವಾನಿ ಓದುವಾಗ ಪೆಟ್ಟು ತಿಂದಿದ್ದರೆ! ಇದಕ್ಕೆ ಉತ್ತರ ಹೇಳಬಹುದಾದವರು ಒಬ್ಬರೇ. ಶಾಲೆಯ ವೈಸ್ ಪ್ರಿನ್ಸಿಪಾಲರಾಗಿ ನಿವೃತ್ತರಾದ ಫಾದರ್ ಜೆ.ಜಿ. ಟಾಡ್. ಅವರಿಗೀಗ ಇಳಿ ವಯಸ್ಸು. 'ಅಡ್ವಾನಿ, ಮುಷರಫ್ ಮುಂತಾದವರಿಗೆ ನಿಮ್ಮ ದೊಣ್ಣೆ ಪೆಟ್ಟಿನ ರುಚಿಯ ಪರಿಚಯವಿತ್ತೇ?' ಎಂದು ಕೇಳಿದರೆ ಖಡಾ ಖಂಡಿತ ಉತ್ತರ ದೊರೆಯುವುದು ಕಷ್ಟ. ಪೆಟ್ಟು ತಿಂದವರ ನೆನಪು ಇರುವುದಿಲ್ಲ. ಪೆಟ್ಟು ತಿನ್ನದೇ ಪಾರಾದವರು ನೆನಪಾಗುತ್ತಾರೆ. ಅಂಥವರ ಪಟ್ಟಿಯಲ್ಲಿ ಅಡ್ವಾನಿ ಹೆಸರು ಇಲ್ಲ ಎಂದು ಅರೆ ಮನಸ್ಸಿನಿಂದಲೇ ಹೇಳುತ್ತಾರೆ.

ತಾವು ವಿದ್ಯಾರ್ಥಿಗಳನ್ನು, ಒಂದು ಕಾಲಕ್ಕೆ ದಂಡಿಸುತ್ತಾ ಇದ್ದುದು, ಪೆಟ್ಟು ತಿಂದ ಅಂಥ ಎಷ್ಟೋ ಜನ ಈಗ ಉನ್ನತ ಹುದ್ದೆಯಲ್ಲಿ ಇರುವುದು, ಅವರು ಸತ್ಯ ಹೇಳಲು ಮುಜುಗರಿಸುವಂತಾಗುತ್ತದೆ. ಅಲ್ಲದೇ ತೀರಾ ವಯಸ್ಸಾಗಿರುವುದರಿಂದ ನೆನಪೂ ಅಷ್ಟು ಸರಿಯಾಗಿಲ್ಲ. ಈ ಹಿಂದೆ ಪಾಕ್ ಪ್ರಧಾನಿಯಾಗಿದ್ದ, ಅತ್ಯಂತ ಜನಪ್ರಿಯ ವ್ಯಕ್ತಿ ಮೊಹಮ್ಮದ್ ಖಾನ್ ಜುನೇಜೋ ಕೂಡ ಟಾಡ್ ಅವರ ವಿದ್ಯಾರ್ಥಿ ಆಗಿದ್ದವರು. ಇಡೀ ಪಾಕೀಸ್ತಾನವೇ ಅವರನ್ನು ಗೌರವದಿಂದ ಕಾಣುತ್ತಿತ್ತು.

ಟಾಡ್ ಅವರಂಥವರ ಶಿಷ್ಯತ್ವ, ಸೆಂಟ್ ಪ್ಯಾಟ್ರಿಕ್ ಶಾಲೆಯ ಕಠಿಣ ಕ್ರಮಗಳನ್ನು ದಾಟಿ ಬಂದ ನಂತರವೂ, ಉನ್ನತ ಸಾಧನೆಗೈಯದ ಹಲವರಿದ್ದಾರೆ. ಅಂಥವರ ಪಟ್ಟಿಯಲ್ಲಿ ಮಾಜಿ ಪಾಕ್ ಪ್ರಧಾನಿ ಬೇನಜೀರ್ ಭುಟ್ಟೋ ಅವರ ಪತಿ ಅಸೀಫ್ ಅಲಿ ಝರ್ದಾರಿ ಹೆಸರು ಅಗ್ರಸ್ಥಾನದಲ್ಲಿದೆ. ಶಾಲೆಯಲ್ಲಿ ವಿವಿಧ ಜನಾಂಗ, ವರ್ಗ, ಧರ್ಮಗಳ ಜನ ಶಾಂತಿ ಸಹಬಾಳ್ವೆ ನಡೆಸಬೇಕೆಂಬ ಪಾಠ ಕೂಡ ಕಲಿಸಲಾಗುತ್ತದೆ. ಆದರೆ ಅದೇಕೋ, ಕಠಿಣ ಶ್ರಮ, ಮೇಲೇರುವ ಹುಮ್ಮಸ್ಸು ರೂಢಿಸಿಕೊಂಡ ಹಾಗೆ ಶಾಂತಿಯ ಮಂತ್ರ ಇನ್ನೂ ಇಲ್ಲಿನ ವಿದ್ಯಾರ್ಥಿಗಳು, ಆನಂತರ ದೇಶದ ನಾಯಕರಾದವರ ಮೇಲೆ ಪರಿಣಾಮ ಬೀರಿಲ್ಲ.



■ ಸುಭಾಷ್ ಚಂದ್ರ, ಎಂ.

ಹೊಸ ಪುಸ್ತಕ




ಸಮಾನತೆಯ ಚಿಂತನೆಗಳು

ಲೇ: ಬಂಗಾರಪ್ಪ ಹೊನಪೂರ
ಪ್ರ: ಚಿಂತನ ಪ್ರಕಾಶನ
ಮಾನವ ನಿಲಯ, ಅಂಬೇಡ್ಕರ್ ನಗರ,
ಹಾಸನ - ಮೈಸೂರು ರಸ್ತೆ, ಹೊಳೆನರಸೀಪುರ.
ಪುಟ: 118, ಬೆಲೆ: 50/-

ಧರ್ಮ ಮತ್ತು ವೈಚಾರಿಕತೆ

ಸಂ : ಬಿ.ವಿ. ವೀರಭದ್ರಪ್ಪ
ಪ್ರ: ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 88, ಬೆಲೆ: 20/-





ಜ್ಞಾನಪೀಠ ಹಾಗೂ ಪಂಪ ಪ್ರಶಸ್ತಿ ಪುರಸ್ಕೃತರು

ಲೇ: ಮಾನಸ
ಪ್ರ: ತನುಮನು ಪ್ರಕಾಶನ
47, 'ಜ'ಬ್ಲಾಕ್, ಮೂರನೇ ಅಡ್ಡ ರಸ್ತೆ,
ರಾಮಕೃಷ್ಣನಗರ, ಮೈಸೂರು - 570 023.
ಪುಟ: 124, ಬೆಲೆ: 20/-

ಬ್ರಿಟಿಷ್ ಬಾಲಕ ರಾಬರ್ಟ್ ಶೂಮನ್ ಹತ್ತು ವರ್ಷದವನಿದ್ದಾಗ ಉತ್ತರ ಧ್ರುವಕ್ಕೆ ಹೋಗಿದ್ದ. ಮರು ವರ್ಷ ಆತ ದಕ್ಷಿಣ ಧ್ರುವದ ಯಾತ್ರೆ ಯಶಸ್ವಿಯಾಗಿ ಮುಗಿಸಿ, ಎರಡೂ ಧ್ರುವಗಳಿಗೆ ಯಾತ್ರೆ ಕೈಗೊಂಡ ಅತಿ ಕಿರಿಯ ಬಾಲಕ ಎನಿಸಿಕೊಂಡ.

★

ಡೇವಿಡ್ ಮ್ಯಾಕ್‌ಕೊನೆಲ್ ಪುಸ್ತಕ ವ್ಯಾಪಾರಿ. ಖ್ಯಾತ ನಾಟಕಕಾರ ಶೇಕ್ಸ್‌ಪಿಯರ್‌ನ ಕೃತಿ ಮನೆ ಮನೆ ಬಾಗಿಲಿಗೆ ಹೋಗಿ ಮಾರಾಟ ಮಾಡುವುದು ಅವನ ಉದ್ಯೋಗ. ಪುಸ್ತಕ ಮಾರಾಟ ಜನಪ್ರಿಯಗೊಳಿಸಲು ಆತ ಪುಸ್ತಕದ ಜೊತೆ ಉಚಿತವಾಗಿ ಸೆಂಟ್ ಬಾಟಲು ಕೊಡುವ ಯೋಜನೆ 1886ರಲ್ಲಿ ಹಮ್ಮಿಕೊಂಡ.

ಅಮೇರಿಕಾದ ಜನಕ್ಕೆ ಶೇಕ್ಸ್‌ಪಿಯರ್ ಸಾಹಿತ್ಯಕ್ಕಿಂತ ಸೆಂಟ್ ಬಾಟಲುಗಳೇ ಹೆಚ್ಚು ಇಷ್ಟ ಎಂದು ಅರಿತುಕೊಂಡ. ಸೌಂದರ್ಯವರ್ಧಕ ತಯಾರಿಕೆ ಆರಂಭಿಸಿದ ಆತ, ಗೃಹಿಣಿಯರನ್ನೇ ತನ್ನ ಉತ್ಪನ್ನಗಳ ಮಾರಾಟಕ್ಕೆ ಬಳಸಿದ. ಹೀಗೆ ಹುಟ್ಟಿದ್ದು ಕ್ಯಾಲಿಫೋರ್ನಿಯಾ ಪರ್‌ಫ್ಯೂಮ್ ಕಂಪೆನಿ. ಮುಂದೆ ಅದೇ ಬೃಹತ್ ಉದ್ಯಮವಾಗಿ 'ಏವನ್' ಎಂದು ಹೆಸರಾಯಿತು. 'ಏವನ್' ಎಂದರೆ 'ಪ್ರಥಮಶ್ರೇಣಿ' ಎಂದು ಅರ್ಥವಾದರೂ, ಡೇವಿಡ್ ಆ ಹೆಸರು ಆರಿಸಲು ಬೇರೆಯೇ ಕಾರಣ ಇದೆ. ತನ್ನ ಉದ್ಯಮಕ್ಕೆ ಸ್ಫೂರ್ತಿ ನೀಡಿದ್ದು ಶೇಕ್ಸ್‌ಪಿಯರ್. ಆತನ ಹುಟ್ಟಿದೂರು 'ಏವನ್'. ಶೇಕ್ಸ್‌ಪಿಯರ್‌ನ ನೆನಪಿಗಾಗಿ ಮ್ಯಾಕ್‌ಕೊನೆಲ್ಲ 'ಏವನ್' ಎಂಬ ಹೆಸರಿಟ್ಟ

★


ಸೈನ್ಯ ತನ್ನ ಹೊಟ್ಟೆಯ ಮೇಲೆ ನಡೆಯುತ್ತದೆ ಎನ್ನುತ್ತಿದ್ದ ನೆಪೋಲಿಯನ್. ಸೈನಿಕರಿಗೆ ಆಹಾರ ಕೆಡದಂತೆ ಕಾಯ್ದಿಡಲು ಯೋಚಿಸಿದ. ಅಂಥ ಉಪಾಯ ಸೂಚಿಸಿದವರಿಗೆ ಬಹುಮಾನ ನೀಡುವುದಾಗಿ ಘೋಷಿಸಿದ್ದ 1975ರಲ್ಲಿ. ಬಹುಮಾನ ಫ್ರೆಂಚ್ ಸಂಶೋಧಕನ ಪಾಲಾಯಿತು. ಡಬ್ಬಿಯೊಳಗೆ ಗಾಳಿಯಾಡದಂತೆ ಆಹಾರ ಸಂಗ್ರಹಿಸಿ ಇಟ್ಟರೆ ಬಹು ಕಾಲ ಕೆಡುವುದಿಲ್ಲ ಎಂದು ಅವನು ಸೂಚಿಸಿದ್ದ. ಅಂದಿನಿಂದಲೇ ಡಬ್ಬಿಯಲ್ಲಿ ಆಹಾರ ಸಂಗ್ರಹಿಸಿಡುವ ಪರಿಪಾಠ ಆರಂಭವಾಯಿತು. ಅದೇ ಈಗ ಜಗತ್ತಿನಾದ್ಯಂತ ಬಹು ದೊಡ್ಡ ಉದ್ಯಮ ಆಗಿದೆ.

★

ಜೇನು ಎಷ್ಟು ಕಾಲವಾದರೂ ಕೆಡುವುದಿಲ್ಲ. ಈಜಿಪ್ಟ್‌ನ ಪಿರಮಿಡ್‌ನಲ್ಲಿ ಐದಾರು ಸಾವಿರ ವರ್ಷದ ಹಿಂದೆ ಸಂಗ್ರಹಿಸಿ ಇಟ್ಟಿದ್ದ ಜೇನು ಸ್ವಲ್ಪವೂ ಹಾಳಾಗಿರಲಿಲ್ಲ. ಅದನ್ನು ಪುರಾತತ್ವ ಶಾಸ್ತ್ರಜ್ಞರೇ ರುಚಿ ನೋಡಿ ಸಾಬೀತು ಮಾಡಿದ್ದಾರೆ.

★

ಬಹಳಷ್ಟು ಹಾವುಗಳು ಒಂದು ವರ್ಷ ಕಾಲ ಒಂದೇ ಒಂದು ತುತ್ತು ಆಹಾರ ಸೇವಿಸದೇ ಬದುಕಿ ಉಳಿಯಬಲ್ಲವು.



ಬರಲಿವೆ ಹಾರುವ ಕಾರುಗಳು

ಈಗಾಗಲೇ ಕಾರುಗಳ ಮಹಾಪೂರ. ಯಾವುದು ಕೊಳ್ಳುವುದು? ಯಾವುದು ಬಿಡುವುದು? ಎಂಬ ತಲೆ ಬಿಸಿ. ಒಂದಂತೂ ನಿಜ. ನೀವು ಯಾವುದೇ ಕಾರು ಕೊಂಡರೂ, ಇಲ್ಲಿನ ರಸ್ತೆಗಳಲ್ಲಿಯೇ ಓಡಿಸಬೇಕು. ಸಿಗ್ನಲ್‌ಗಳಲ್ಲಿ ಕಾಯಬೇಕು. ಟ್ರಾಫಿಕ್ ಜಾಂ ಆದಾಗ ಶಪಿಸುತ್ತಾ ಕುಳಿತುಕೊಳ್ಳಬೇಕು. ಇದೆಲ್ಲ ಸಮಸ್ಯೆಗೆ ಪರಿಹಾರ ಹಾರುವ ಕಾರು. ಅದನ್ನು ಅಮೇರಿಕಾದ ಎಂಜಿನಿಯರ್ ಒಬ್ಬ ರೂಪಿಸಿದ್ದಾನೆ.

ಆತನ ಹೆಸರು ಪಾಲ್ ಮೊಲಿಯರ್. ಆತ ತಯಾರಿಸುವ ನೂತನ ಕಾರು ಹಾರಬಲ್ಲದು. ಫ್ಯಾಮಿಲಿ ಕಾರ್‌ಗಿಂತ ಅದು ಕೊಂಚ ದೊಡ್ಡದು. ಕಾರ್‌ನ ಪ್ರಾಯೋಗಿಕ ಪರೀಕ್ಷೆ ನಡೆದಿದೆ. ಅದು ಸಫಲವಾದಲ್ಲಿ ನಮ್ಮ ಪ್ರಯಾಣದ ರೀತಿಯೇ ಬದಲಾಗಲಿದೆ. ಅಂದ ಹಾಗೆ ಕಾರ್‌ನ ಸದ್ಯದ ಹೆಸರು ಎಂ400. ಹಾರುವ ಕಾರ್‌ನ ಕಲ್ಪನೆ ಹೊಸದಲ್ಲ. ಆದರೆ ಅಂಥ ಎಲ್ಲ ಕಾರ್‌ಗಳಿಗೆ ರೆಕ್ಕೆಗಳು ಇವೆ. ನೆಲದ ಮೇಲೆ ಅವು ಓಡಾಡಬೇಕಾದರೆ ರೆಕ್ಕೆ ಬಿಚ್ಚಿ ಇಡಬೇಕು.

ಮೊಲಿಯರ್‌ನ ಕಾರ್ ಹಾಗಲ್ಲ. ಅದರಲ್ಲಿ ನಾಲ್ಕು ಎಂಜಿನ್ನುಗಳು. ವಿವಿಧ ಘಟ್ಟಗಳಿಗೆ ಅನುಗುಣವಾಗಿ ವೇಗ, ಅದರಿಂದ ಹಾರುವ ಶಕ್ತಿ. ಅದು ನೇರವಾಗಿ ಮೇಲೇರಬಲ್ಲದು. ಬೇಕಾದಲ್ಲಿ ಇಳಿಯಬಲ್ಲದು. ಇದೇ ಅದರ ಬಹುದೊಡ್ಡ ಅನುಕೂಲ. ತಾಸಿಗೆ ಆರು ನೂರು ಕಿಲೋಮೀಟರ್ ವೇಗ. ಆದ್ದರಿಂದಲೇ ಜಾನಪದ ಕತೆಗಳ 'ಹಾರುವ ಕಂಬಳಿ' ಸಾಕಾರವಾದಂತೆ.

ಬ್ರಿಟಿಷ್ ಮಾದರಿಯ ಕುಪ್ಪಳಿಸುವ ಜೆಂಪ್‌ಜೆಟ್ ಇದಕ್ಕೆ ಸ್ಫೂರ್ತಿ. ಎಂಜಿನ್ನಿನ ಶಕ್ತಿ ಉತ್ಪಾದಿಸುವ ಒತ್ತಡ ಸರಿಯಾದ ಬಳಕೆಗೆ ಬಗ್ಗಿಸಿಕೊಳ್ಳುವ ಸೂತ್ರ ಇಲ್ಲಿ ಕೊಂಚ ಬದಲಾವಣೆಗಳೊಡನೆ ಅಳವಡಿಸಲಾಗಿದೆ. ಹಾಗಾಗಿಯೇ ಈ ಕಾರ್ ಎಂಥ ಸ್ಥಿತಿಯಲ್ಲೂ ನೇರ ಮೇಲಕ್ಕೇರಬಲ್ಲದು ಅಥವಾ ಇಳಿಯಬಲ್ಲದು.

ಸದ್ಯಕ್ಕೆ ಇದು ಮಿಲಿಟರಿಯಲ್ಲಿ ಹೆಚ್ಚು ಉಪಯುಕ್ತ. ಹಾಗೇ ವಾಣಿಜ್ಯ ವ್ಯವಹಾರಗಳಲ್ಲೂ ಸಾಕಷ್ಟು ಲಾಭದಾಯಕ ಬಳಕೆ ಸಾಧ್ಯ. ಬೇಗ ಸಾಮಾನು ಸರಂಜಾಮು ಸಾಗಿಸಲು, ವ್ಯಕ್ತಿಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಕರೆದೊಯ್ಯಲು, ಪೊಲೀಸರು, ಅಗ್ನಿ ಶಾಮಕ ದಳದವರು, ಪರಿಹಾರ ಕಾರ್ಯನಿರತರು ಇಂಥ ಕಾರ್‌ನಿಂದ ಹೆಚ್ಚು ಲಾಭ ಪಡೆಯಲು ಸಾಧ್ಯವಿದೆ.

ಇದು ಕಂಪ್ಯೂಟರ್ ವಿನ್ಯಾಸದಿಂದ ಸಿದ್ಧಗೊಂಡಿದೆ. ಈಗಾಗಲೇ ನೂರು ದಶಲಕ್ಷ ಡಾಲರ್ ವೆಚ್ಚ ಆಗಿದೆ. ಇದನ್ನು ನಡೆಸಲು ಪೈಲಟ್ ಕೂಡ ಅವಶ್ಯವಿಲ್ಲ. ಎಲ್ಲಿಂದ ಎಲ್ಲಿಗೆ, ಯಾವ ಮಾರ್ಗದಲ್ಲಿ ಹೋಗಬೇಕೆಂದು ಕಂಪ್ಯೂಟರ್ ಪ್ರೋಗ್ರಾಮಿಂಗ್ ಮಾಡಿದರೆ ಸಾಕು. ಮುಂದಿನದನ್ನು ಕಂಪ್ಯೂಟರೇ ನಿರ್ವಹಿಸುತ್ತದೆ.

ರಾತ್ರಿ ಮಂಜು ಮುಸುಕಿದ ವೇಳೆ ಅಜ್ಜ ಮನೆಯ ಹಿತ್ತಲಲ್ಲಿ, ಬಟ್ಟೆ ಒಣಗಲು ಕಟ್ಟಿರುವ ಹಗ್ಗಕ್ಕೆ ತಾಗದಂತೆ ಈ ಕಾರಲ್ಲಿ ಹೋಗಿ ಇಳಿಯಬೇಕು. ಇದು ಕಾರಿನ ನಿರ್ಮಾಣ ತಂಡದ ಎಂಜಿನಿಯರ್ ಒಬ್ಬನ ಆಶಯ.

ಇಷ್ಟೆಲ್ಲಾ ಅತ್ಯಾಧುನಿಕ ತಂತ್ರಜ್ಞಾನದ ಈ ಹಾರುವ ಕಾರ್‌ನ ಎಂಜಿನ್ ಕೈ ಕೊಟ್ಟರೆ ತುರ್ತಾಗಿ ನೆಲಮುಟ್ಟಲು ಪ್ಯಾರಾಚೂಟ್‌ಗಳನ್ನೂ ಒದಗಿಸಲಾಗಿದೆ. ಈಗಿರುವ ಬಹುದೊಡ್ಡ ತೊಂದರೆ ಎಂದರೆ ಕಾರ್‌ನ ಎಂಜಿನ್ ಹೊರಡಿಸುವ ಭಾರೀ ಸದ್ದು. ಈ ಕಾರ್ ಮೇಲೇರಲು ಸದ್ಯಕ್ಕೆ ವಿಶೇಷ ನಿಲ್ದಾಣಗಳೂ ಬೇಕು. ಆದರೆ, ಮುಂದೊಂದು ದಿನ ಇಂಥ ಎಲ್ಲ ದೋಷಗಳನ್ನು ನಿವಾರಿಸುವ ಭರವಸೆ ಮೊಲಿಯರ್‌ಗೆ ಇದೆ.


ಡೇವಿಸ್‌ನಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಮಾಜಿ ಪ್ರೊಫೆಸರ್ ಪಾಲ್‌ವೇಲಿಯರ್‌ಗೆ ಈ ಕಾರ್‌ನ ಗೀಳು ಇಂದು ನಿನ್ನೆಯದಲ್ಲ. 1963ರಿಂದಲೇ ಇದು ಬಿಡದ ಕನಸು. 1999ರಲ್ಲಿ ಇಬ್ಬರಿಗಾಗಿ ರೂಪಿಸಿದ ಮಾದರಿಯೊಂದು ಸಿದ್ಧಪಡಿಸಿದ. ಅದರಲ್ಲಿ ಆತ ಇಪ್ಪತ್ತು ಮೀಟರ್ ಎತ್ತರದಲ್ಲಿ ಹಾರಿಯೂ ನೋಡಿದ. ಈಗ ಆತನ ಬಳಿ ವಿಮಾನದ ಲೈಸೆನ್ಸ್ ಇಲ್ಲ. ಅದಕ್ಕೆ ಆತ ತನ್ನ ಮಾದರಿ ಕಾರ್‌ನ್ನು ಕ್ರೇನ್ ಒಂದಕ್ಕೆ ತೂಗು ಹಾಕಿದ್ದಾನೆ.

ಈ ಹಾರುವ ಕಾರ್‌ನ ಇನ್ನಿತರ ತೊಂದರೆಗಳ ಪಟ್ಟಿಯೂ ಇದೆ. ಅದು ಪೆಟ್ರೋಲ್ ಬಳಸಿಯೇ ಹಾರುತ್ತದೆ. ನಿಜ. ಆದರೆ, ಅದು ಒಂದು ಲೀಟರ್‌ಗೆ ಎಂಟು ಕಿಮೀ ಮಾತ್ರ ಕ್ರಮಿಸಬಲ್ಲದು. ಜೊತೆಗೆ ಕಾರ್ ದುಬಾರಿ. ಮೊದ ಮೊದಲ ಕಾರ್‌ಗಳ ಬೆಲೆ ಒಂದು ಮಿಲಿಯನ್ ಡಾಲರ್ ಆಗಬಹುದು. ನಂತರ ಅದರ ಬೆಲೆ ಅರವತ್ತು ಸಾವಿರ ಡಾಲರ್‌ವರೆಗೂ ಇಳಿಯಬಹುದು.

ಈಗ ನಾವು ಬಳಸುತ್ತಿರುವ ಕಾರ್‌ಗಳಿಗೂ ಹೊಸ ಮಾದರಿ ಕಾರ್‌ಗೂ ಭಾರೀ ವ್ಯತ್ಯಾಸವಿದೆ. ಅತ್ಯಾಧುನಿಕ, ಬೆಲೆ ಬಾಳುವ ಫೆರಾರಿ, ಪೋರ್ಶ್ ಮುಂತಾದವು ಗಾಳಿಯ ಚಲನೆ ಅನುಸರಿಸಿ ವಿನ್ಯಾಸಗೊಳಿಸಲಾಗಿದೆ. ಹಾಗೆಂದೇ ಅವು ಅತಿ ವೇಗವಾಗಿ ಚಲಿಸುವುದು ಸಾಧ್ಯ ಎಂದು ಕಂಪೆನಿಗಳೇ ಹೇಳಿಕೊಳ್ಳುತ್ತಿವೆ. ಏನೇ ಹೇಳಿದರೂ ಅವು ನಗರಗಳಲ್ಲಿ ತಾಸಿಗೆ ಅರವತ್ತು ಕಿಲೋಮೀಟರ್‌ಗಿಂತ ಹೆಚ್ಚು ವೇಗದಲ್ಲಿ ಧಾವಿಸಲಾರವು. ಆದರೆ ಎಂಥ ನಗರದಲ್ಲೂ ಎಂ400 ಕಾರ್ 350ಕಿ.ಮೀ ವೇಗದಲ್ಲಿ ಧಾವಿಸಬಲ್ಲದು. ಮುಖ್ಯವಾಗಿ ಸಿಗ್ನಲ್‌ಗಳ ಕಾಟವಿಲ್ಲ. ಟ್ರಾಫಿಕ್ ಜಾಮ್‌ನ ಭಯವಿಲ್ಲ. ಅದೆಲ್ಲಕ್ಕಿಂತ ಕೆಟ್ಟ ರಸ್ತೆಗಳ ಗುಂಡಿ, ಗೊಟರುಗಳಲ್ಲಿ ಕಾರು ಹೇಗೆ ಓಡಿಸುವುದಪ್ಪ! ಎಂಬ ಆತಂಕವಿಲ್ಲ.

ಅದಕ್ಕಾಗಿಯೇ ಇದರ ಬಗ್ಗೆ ಇಷ್ಟೊಂದು ಆಸಕ್ತಿ ಕುತೂಹಲ.

■ ಕೆ. ರತ್ನಾಕರ



ಕಣ್ಮನ ತಣಿಸುವ ಅಪೂರ್ವ ಶಿವಗಂಗೆ ಜಲಪಾತ



ಪ್ರಕೃತಿಯ ಪ್ರತಿಯೊಂದು ಸೃಷ್ಟಿಗೂ ತನ್ನದೇ ಆದ ವಿಶಿಷ್ಟತೆ. ನಿಸರ್ಗದಲ್ಲಿ ನೋಡಲು ಸಾಕಷ್ಟು ಜಲಪಾತಗಳು! ಕಣ್ಣಿಗೆ ತಂಪು ನೀಡುವ ಜಲಪಾತಗಳನ್ನು ನೋಡುತ್ತಾ ಹೋದಂತೆ ಯಾವುದು ರಮ್ಯ? ಪ್ರಶ್ನೆಯೇನಾದರೂ ಎದ್ದಲ್ಲಿ ಉತ್ತರಕ್ಕೆ ತಾಕಲಾಟ ಸಹಜ. ಉತ್ತರಕನ್ನಡದ ತುಡುಗುಣಿ ಜಲರಾಶಿ ಗಣೇಶ ಫಾಲ್‌ನಲ್ಲಿ ಪ್ರಶಾಂತವಾಗಿ ಹರಿಯುತ್ತಾ ಪ್ರಕೃತಿ ಸಹಜವಾದ ರಮ್ಯ ತಾಣ 'ಶಿವಗಂಗೆ' ಯಲ್ಲಿ ಸೃಷ್ಟಿಸಿರುವ ಜಲಪಾತ ಯಾವತ್ತೂ ಮನದಾಳದಲ್ಲಿರುವ ಅಪರೂಪದ ಧಾರೆ. ನಿಶಬ್ಧತೆಯ ನಡುವಲ್ಲಿ ನೀಳಧಾರೆಯಾಗಿ ಇಳಿದು ಮಡುವಾಗಿ ಮುನ್ನಡೆದು ಮಜಲುಮಜಲಾಗಿ ಸಾಗುವ ಶಿವಗಂಗೆ ಕಣ್ಮನಗಳನ್ನು ಹಬ್ಬದೋಕುಳಿಯಲ್ಲಿ ತೇಲಿಸುವ ಅಪೂರ್ವ ಜಲಪಾತ.

ಯಲ್ಲಾಪುರ-ಶಿರಸಿ ಮಾರ್ಗ ಮಧ್ಯದ ಮಂಚಿಕೇರಿ ಗ್ರಾಮ ಸಮೀಪದ ಹೆತ್ಲಳ್ಳಿಹತ್ತಿರವಾಗಿ ಶಿವಗಂಗೆ ಜಲಪಾತವಿದೆ. ಹೆತ್ಲಳ್ಳಿಯಿಂದ ಒಳದಾರಿಯಲ್ಲಿ ಸುಮಾರು ಆರೇಳು ಕಿ.ಮೀ. ಸಾಗಿದಾಗ ಗಣೇಶಫಾಲ್ ಸಿಗುವುದು. ಗಣೇಶಫಾಲ್ ಕ್ರಾಸ್‌ವರೆಗೆ ಬಸ್ ಸೌಕರ್ಯವಿದ್ದು ಪ್ರವಾಸಿಗರು ಹುಲೇಕಲ್ ಜಡಿಗದ್ದೆ ಬಸ್ ಹತ್ತಬೇಕು. ವನಸಿರಿಯ ಮಧ್ಯೆ ಬಂಡೆಗಲ್ಲುಗಳನ್ನು ಕೊರೆಯುತ್ತಾ ಬರುವ ಹೊಳೆ-ಹಳ್ಳದ ಹಸಿರ ನೀರ ರಾಶಿ ಗಣೇಶಫಾಲ್‌ದಲ್ಲಿ! ಗಣೇಶಫಾಲ್ ಸಂಕದ (ಕಿರುಸೇತುವೆ) ಎಡಗಡೆ ನೀರಲ್ಲಿ ಮೈದಳೆದು ನಿಂತಿರುವ ಹಚ್ಚಹಸಿರಿನ ರಾಶಿಯ ಸಿರಿನೋಟ! ಬಲಬದಿಗೆ ಬಂಡೆಗಳು ಥಳಥಳ ಹೊಳೆವಂತೆ ಶುಭ್ರಗೊಳಿಸುತ್ತಾ ಶಿವಗಂಗೆಯತ್ತ ಧಾವಿಸುತ್ತಿರುವ ಹಳ್ಳದ ಸೌಮ್ಯ ಹರಿದಾಟದ ಆರ್ಭಟ! ಹೊಳೆಯಾಚೆ ಆದಿಕಾಲದಲ್ಲಿ ಕಲ್ಲಿನಲ್ಲಿ ಕಡೆಯಲ್ಪಟ್ಟ ಗಣಪತಿ ವಿಗ್ರಹದ ಮಂಟಪದಲ್ಲಿ ಈಶ್ವರ ಮತ್ತು ನಂದಿ ಮೂರ್ತಿಗಳ ಸಂಗಮ.

ಗಣೇಶ್‌ಫಾಲ್ ದಾಟಿ ಒಂದೂವರೆ ಕಿ.ಮೀ. ನಡೆದ ಬಳಿಕ ಶಿವಗಂಗಾ

ಜಲಪಾತವರೆಗೆ ಒಂದು ಕಿ.ಮೀ.ನ ತುಂಬಾ ಇಳಿಜಾರಿನ ಕಾಡುಜಾಗ. ಜಾಗರೂಕರಾಗಿ ಕಲ್ಲುಗಳಿಂದಾವೃತವಾದ ಇಳಿಜಾರನ್ನು ಜಾರುತ್ತಿದ್ದಂತೆ ಯಂತ್ರ ಉರುಳಿದಂತೆ ಧಡಲ್ ಧಡಲ್ ಶಬ್ದ ಕೇಳಿ ಬರುತ್ತದೆ. ಪೂರ್ತಿ ಕೆಳಗಿಳಿದಾಗ ಕ್ಷಣಕಾಲ ಪ್ರವಾಸಿಗ ಪ್ರಕೃತಿಯ ಅಂದಚೆಂದಕ್ಕೆ ಮರುಳಾಗಿ ತನ್ನನ್ನು ತಾನೇ ಮರೆತಿರುತ್ತಾನೆ. ಹಾಗಿದೆ ಅಲ್ಲಿನ ನಿಸರ್ಗ ಸೌಂದರ್ಯತೆ! ಸುಮಾರು 140 ಅಡಿಗಳ ಮೇಲಿಂದ 70 ಅಡಿ ವಿಶಾಲದ ಕಲ್ಲಿನ ಕೊನರನ್ನು ಭೇದಿಸಿ ಹಾಲನ್ನು ಉಕ್ಕಿಸುವಂತೆ ಒಂದರಲ್ಲಿ ಎರಡು ಪಾತಗಳಾಗಿ ಭೋರ್ಗರೆಯುವ ಜಲಪಾತ! ಜಲಪಾತದ ತುದಿಯಂಚಿನಲ್ಲಿ ಮುಗಿಲನ್ನು ಚುಂಬಿಸಲು ಸನ್ನದ್ಧದಂತೆ ಬೆಳೆದ ವನಸಿರಿ, ಜಲಧಾರೆಯ ಕೆಳ ಅಂಚಿನಲ್ಲಿ ಉಗಿ ಎಬ್ಬಿಸುವ ನೀರಿನ ಅಂಚಿನ ಪುಟಿತ, ಬಲಕ್ಕೆ ಸುಮಾರು 300 ಅಡಿ ಅಗಲ 200 ಅಡಿ ಉದ್ದದ ವಿಶಾಲದ ನೀಳ್ಗಂಡೆ. ಎಡಕ್ಕೆ ಭಾರೀಗಾತ್ರದ ಗಿಡಮರಗಳ ರಾಶಿ, ಜಲಪಾತಕ್ಕೆ ಅಭಿಮುಖವಾಗಿ ಕಣ್ಣಿಗೆ ರಾಚುವ ಮನಸ್ವೇಚ್ಛೆಯಾಗಿ ಹಬ್ಬಿರುವ ಹಚ್ಚಹಸಿರಿನ ದಿವ್ಯನೋಟ ಶಿವಗಂಗೆಯ ತಾಣದ ಈ ದೃಶ್ಯಗಳು ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ.

ಜಲಪಾತದ ಮೇಲ್ಭಾಗದಲ್ಲಿ ಮೊದಲ 30 ಅಡಿಗಳ ಧಾರೆ 35 ಅಡಿಗಳ ಅಗಲದಲ್ಲಿ ಕೆಳಗಿನ ವಿಶಾಲ ಕಲ್ಲಿನ ಮೇಲೆ ಹರಡಿಕೊಂಡು ಇಳಿಯುತ್ತದೆ. 20 ಅಡಿ ಉದ್ದದಲ್ಲಿ ಸಂಗ್ರಹವಾಗುವ ನೀರು 90 ಅಡಿ ಕೆಳಗೆ ಭೋರ್ಗರೆಯುತ್ತಾ ಧುಮುಕುತ್ತದೆ. ಅಡಿಗಿನ 20 ಅಡಿ ನೀರರಾಗಿ ರಭಸದಿಂದ ಆರ್ಭಟಿಸುತ್ತಾ ಹೊಂಗಿರಣಗಳನ್ನು ಸಿಡಿಸಿ ಉಗಿ ಎಬ್ಬಿಸುವ ಪರಿ ನಯನ ಮನೋಹರ! ಭಾರೀ ಗಾತ್ರದ ಬಲಭಾಗದ ವಿಶಾಲ ಕಲ್ಲಿನ ಗೋಡೆಯನ್ನು ಶಿವನಿಗೆ ಹೋಲಿಸಿ ಕಲ್ಲು, ಮುಕುಟದಿಂದ ಸಿಡಿಯುವ ಜಲರಾಶಿಯನ್ನು ಗಂಗೆಗೆ ಉತ್ಪ್ರೇಕ್ಷಿಸಿ ಕಣ್ಮನ ತಣಿಸುವ ಈ ಜಲಪಾತವನ್ನು ಶಿವಗಂಗಾ ಫಾಲ್ಸ್ ಎಂದು ಕರೆದಿದ್ದಾರೆಂದರೆ ಬಹುಶಃ ಅತಿಶಯೋಕ್ತಿಯೆನಿಸದು. ಕೆಳಗೆ ಬಿದ್ದ ನೀರು 130 ಅಡಿ ಉದ್ದದ ಮಡುವಿನಲ್ಲಿ ಶೇಖರವಾಗಿ ಎರಡು ಸಾಪಾದ ಮಜಲುಗಳನ್ನು ಸೃಷ್ಟಿಸಿದ್ದು ಮೈಸೂರಿನ, ಖ್ಯಾತ ಕೃಷ್ಣರಾಜಸಾಗರವನ್ನು ನೆನಪಿಸುತ್ತದೆ. ಮೊದಲ ಕಲ್ಲು ಹಾಸಿನ ಮೇಲೆ ಪುಟಿಯುತ್ತಾ 100 ಅಡಿ ಉದ್ದಕ್ಕೆ ಹರಿದು ಇನ್ನೊಂದು ಕಲ್ಲುಹಾಸಿಗೆ ಸಾಗುತ್ತದೆ. ಈ ಕಲ್ಲುಹಾಸಿನ ಮಧ್ಯೆ ಸ್ತ್ರೀ ದೇವತೆ, ಎದುರಿನಲ್ಲಿ ದೇವ, ಇವೆರಡರ ಪಕ್ಕಕ್ಕೆ ಈಶ್ವರಲಿಂಗ - ಆದಿಕಾಲದಲ್ಲಿ ಕಡೆದ ಸ್ಪಷ್ಟ ಚಿತ್ರಣಗಳಿದ್ದು ಈ ಹಿನ್ನೆಲೆಯಿಂದಾಗಿಯೂ ಸಹ ಜಲಪಾತ ಶಿವಗಂಗೆ ಎಂದು ಕರೆಸಿಕೊಂಡಿರಬಹುದು. ಮಳೆಗಾಲ ಪೂರ್ತಿ ಹೊಳುವಾದ ಬಳಿಕ ಶಿವಗಂಗೆಯ ಅಪೂರ್ವ ಗಂಗಾಸಿರಿಯನ್ನು ನೋಡಲು ನಿಸಗಪ್ರಿಯ ಪ್ರವಾಸಿಗರು ಬರುತ್ತಾರೆ. ಗಣೇಶ ಫಾಲ್‌ದಿಂದ ನೀರು ಹರಿಯುವ ಕಲ್ಲುಬಂಡೆಗಳ ಅಂಚಿನ ಗುಂಟ ಸುಮಾರು ಒಂದೂವರೆ ಕಿ.ಮೀ ಮುಂದೆ ಸಾಗಿದರೆ ಜಲಪಾತದ ಮೇಲಿನ ಅಂಚಿನತ್ತ ತಲುಪಿ ದಬದಬೆಯನ್ನು ವೀಕ್ಷಿಸಬಹುದಾದರೂ ಕೆಳಗಿನಷ್ಟು ಆಹ್ಲಾದಕ್ಕೆ ಉನ್ಮಾದ ಅನುಭವಗಳು ಕಡಿಮೆ. ಮಳೆಗಾಲದಲ್ಲಿ ಹರಿಯುತ್ತಿರುವ ಭಾರೀ ನೀರು, ಮಳೆ ಜಾರುವ ನೆಲ, ಮೈತುಂಬ ಅಂಟಿಕೊಂಡು ರಕ್ತಹೀರುವ 'ಉಂಬಳ' ಗಳಿಂದಾಗಿ ಶಿವಗಂಗೆಯ ರೌದ್ರಾವತಾರವನ್ನು ನೋಡುವುದು ಕಷ್ಟಸಾಧ್ಯವೆಂದೇ ಹೇಳಬೇಕು.

ಶ್ರೀದೇವಿ ಮಾರಿಕಾಂಬೆ ನೆಲಸಿರುವ ಶಿರಸಿಯ ಹತ್ತಿರದ ಸೋಂದೆಯ ಪಕ್ಕದಲ್ಲಿ ತುಡುಗುಣಿ ಹೊಳೆ ಹರಿಯುತ್ತದೆ. ತುಡುಗುಣಿ ಹೊಳೆ ಮುಂದೆ ಗಣೇಶಫಾಲ್ ಮೂಲಕ ಶಿವಗಂಗೆಯಲ್ಲಿ ಶ್ರೀಮಂತ ಜಲಪಾತವನ್ನು ನಿರ್ಮಿಸಿದೆ. ಶಿವಗಂಗೆಯಲ್ಲಿ ಪ್ರಕೃತಿಯ ಸೊಬಗನ್ನು ಆಸ್ವಾದಿಸುತ್ತಾ ಮುಂದೆ ಬೇಡ್ತಿ ಜಲರಾಶಿಯಲ್ಲಿ ಸಂಗಮವಾಗುತ್ತದೆ. ಈ ಸಂಗಮದ ಜಲರಾಶಿ ಆಚೆಗಿರುವ ಉತ್ತರಕನ್ನಡದ ಇನ್ನೊಂದು ಹೆಸರಾಂತ ಮಾಗೋಡು ಜಲಪಾತ ನೀರನ್ನು ಸಂಗ್ರಹಿಸಿಕೊಂಡು ವೈದ್ಯ ಹೆಗ್ಗಾರದಲ್ಲಿ ದೊಡ್ಡ ಹೊಳೆಯಾಗಿ ಅರಬೈಲ ಬೆಟ್ಟ ಪ್ರದೇಶಗಳಲ್ಲಿ ಹರಿಯುತ್ತಾ ಮುಂದೆ ಗಂಗಾವಳಿ ನದಿಯನ್ನು ಸೇರುತ್ತದೆ.

ಪ್ರಕೃತಿಯ ಅದ್ಭುತ ಸಿರಿಸೊಬಗಿನ ಅಪೂರ್ವ ಶಿವಗಂಗೆ ಜಲಪಾತವನ್ನು ತೀರಾ ಹತ್ತಿರದಿಂದ ನೋಡಿ ಆನಂದಿಸಲು ಐದಾರು ಕಿ.ಮೀ. ಅಂತರವನ್ನು ಕಾಲ್ನಡಿಗೆಯಿಂದ ಬರಬೇಕು ಸ್ವಲ್ಪ ಆಯಾಸವೆನಿಸಿದರೂ ಪ್ರತಿವರ್ಷ ದೂರದೂರದ ಪ್ರವಾಸಿಗರು ಶಿವಗಂಗೆಗೆ ಭೇಟಿಯಿತ್ತು 'ರೋಮಾಂಚಕ, ನಿಜಕ್ಕೂ ಧನ್ಯರು' ಎಂದು ಉದ್ಗರಿಸುತ್ತಿದ್ದಾರೆ.

ಲೇಖಕರು : ವೀರೇಶ ಯಂಗಟಿ

ಚಿತ್ರಗಳು : ಜಗನ್ನಾಥ ಮರಾಠೇ

ನಡುರಾತ್ರಿಯಲ್ಲೂ ಹಗಲು

ಲಂಡನ್ ನಗರಕ್ಕೆ ಹೋದರೆ ಬೇಸಿಗೆ ಒಂದು ವಿಚಿತ್ರ ಅನುಭವ. ಅಲ್ಲಿ ಬೆಳಿಗ್ಗೆ ಮೂರು ಗಂಟೆಗೆ ಸೂರ್ಯೋದಯ, ಮುಳುಗುವುದು ರಾತ್ರಿ ಹತ್ತು ಗಂಟೆಗೆ. ದಿನದ ಅವಧಿ ಸರಿ ಸುಮಾರು ಹದಿನೆಂಟು ತಾಸು. ದೆಹಲಿಗೆ ಹೋಗುವ ಜನ ಬೇಸಿಗೆಯಲ್ಲಿ ಬೆಳಗಿನ ನಾಲ್ಕು ಗಂಟೆಗೇ ಸೂರ್ಯೋದಯ ಆಗುವುದನ್ನು, ರಾತ್ರಿ ಎಂಟು ಗಂಟೆಯಾದರೂ ಸಂಜೆಯಾಗದೇ ಇರುವುದು ನೋಡಿ ಬೆರಗಾಗುತ್ತಾರೆ. ಅಂಥದ್ದರಲ್ಲಿ ರಾತ್ರಿ, ಹಗಲು ಸೂರ್ಯ ನೆತ್ತಿ ಮೇಲೆ ಸುಡುತ್ತಾ ಇದ್ದರೆ ಅಂಥದೊಂದು ವಿಚಿತ್ರ ನಾರ್ವೆ, ಸ್ವೀಡನ್ ಮುಂತಾದ ದೇಶಗಳಲ್ಲಿ ಕಾಣಬಹುದು. ಮೇ ಮಧ್ಯದಿಂದ ಸುಮಾರು ಜುಲೈ ಅಂತ್ಯದವರೆಗೂ ಅಲ್ಲಿ ಹುಟ್ಟಿದ ಸೂರ್ಯ ಮುಳುಗುವುದೇ ಇಲ್ಲ. ಇದೊಂದು ವಿಶೇಷ. ಹಾಗಾಗಿಯೇ ಇಲ್ಲಿನ ಜನ ಈ ಋತುವಿನಲ್ಲಿ ಒಂದು ಹಬ್ಬ ಕೂಡ ಆಚರಿಸುತ್ತಾರೆ. ಅವತ್ತು ರಾಷ್ಟ್ರೀಯ ರಜಾದಿನ. ಇಂಥ ವಿಚಿತ್ರ ನಡೆಯಲು ಕಾರಣವಿದೆ. ಭೂಮಿ ತನ್ನ ಅಕ್ಷದ ಮೇಲೆ 23.2 ಡಿಗ್ರಿಯಷ್ಟು ವಾಲಿಕೊಂಡಿದೆ. ಅದು ತನ್ನ ಅಕ್ಷದ ಮೇಲೆ ತಿರುಗುತ್ತಲೇ, 365.25 ದಿನಗಳಲ್ಲಿ ಒಮ್ಮೆ ಸೂರ್ಯನನ್ನು ಸುತ್ತು ಹಾಕುತ್ತದೆ. ಅಕ್ಷದ ದೈನಂದಿನ ಚಲನೆಯಿಂದ ಹಗಲು-ರಾತ್ರಿ ಸೂರ್ಯನ ಸುತ್ತ ನಡೆಸುವ ವಾರ್ಷಿಕ ಚಲನೆಯಿಂದ ಋತುಮಾನಗಳು. ಭೂಮಿ ತನ್ನ ಅಕ್ಷದಲ್ಲಿ ಬಾಗಿರುವುದರಿಂದ ಧ್ರುವ ಪ್ರದೇಶಗಳಲ್ಲಿ ಸೂರ್ಯನ ಮುಂಬೆಳಗು ರಾತ್ರಿಯಿಡೀ ಕೆಲವು ತಿಂಗಳು ಕಾಣಿಸುತ್ತದೆ. ಸೂರ್ಯ ಮುಳುಗಿದರೂ ಬೆಳಕು ವಾತಾವರಣದಲ್ಲಿ ಪ್ರತಿಫಲಿಸಿ ಆ ಭಾಗದ ಭೂವಲಯವನ್ನು ಮುಟ್ಟುತ್ತದೆ. ಸಂತೋಷದ ಸಂಗತಿ ಎಂದರೆ ಅಲ್ಲಿ ಹಾಗೆ ಕೆಲವು ತಿಂಗಳು ಸೂರ್ಯ ಮುಳುಗುವುದೇ ಇಲ್ಲವಾದರೂ ಬಿಸಿಲಿನ ತಾಪ ಮಾತ್ರ ಇರುವುದಿಲ್ಲ. ಹಾಗೇನಾದರೂ ಆಗಿದ್ದರೆ ಧ್ರುವ ಪ್ರದೇಶದ ಹಿಮವೆಲ್ಲ ಕರಗಿ, ಮತ್ತೊಂದು ಅಪಾಯಕ್ಕೆ ನಾಂದಿಯಾಗುತ್ತಾ ಇತ್ತು.


■ ವೆಂಕಟೇಶ್ ಚನ್ನದಾಸರ

★

ಸಿಲ್ವನ್ ಗೋಲ್ಡ್‌ಮನ್ ಡಿಪಾರ್ಟ್‌ಮೆಂಟ್ ಸ್ಟೋರಿನ ಒಡೆಯ. ತನ್ನ ಅಂಗಡಿಗೆ ಬಂದವರು ಒಂದೇ ಸಲ ತಮಗೆ ಬೇಕಾದುದೆಲ್ಲ ಆರಿಸಿ ಕೊಂಡೊಯ್ಯಲು ಅನುಕೂಲ ಆಗುವಂತೆ ಸಣ್ಣ ತಳ್ಳುವ ಗಾಡಿಗಳನ್ನು ರೂಪಿಸಿದ. ಅದು ಎಷ್ಟು ಜನಪ್ರಿಯ ಆಗಿದೆ ಎಂದರೆ, ಇಂಥ ತಳ್ಳುವ ಗಾಡಿಗಳಿಲ್ಲದ ಡಿಪಾರ್ಟ್‌ಮೆಂಟ್ ಸ್ಟೋರ್‌ಗಳನ್ನು ಕಲ್ಪಿಸಿಕೊಳ್ಳುವುದು ಇಂದು ಸಾಧ್ಯವೇ ಇಲ್ಲ. ಆಲ್ವಿನಾ ಒನಾಸಿಸ್ ರಸೆಲ್ ಅತಿ ಕಿರಿಯ ಶತಕೋಟಿ ಒಡತಿ. 1998ರಲ್ಲಿ ಆಕೆ ಮೂರು ವರ್ಷದವಳಿದ್ದಾಗ ಶಿಪ್ಪಿಂಗ್ ಉದ್ಯಮದ ದೊರೆ ಅರಿಸ್ಟಾಟಲ್ ಒನಾಸಿಸ್‌ನಿಂದ ಆಕೆ ಐದು ಶತಕೋಟಿ ಡಾಲರ್ ಮೊತ್ತ ಹಾಗೂ ಸ್ಕೋರ್ಪಿಯೋಸ್ ದ್ವೀಪದ ಒಡೆತನ ಪಡೆದಳು. ಅರಿಸ್ಟಾಟಲ್, ಅಲ್ವಿನಾಗೆ ತಾತ ಆಗಬೇಕು.

■

ಹೀಗೆ ಈ ಬದುಕು....



ಮನೆಗೊಂದು ಹೊಸ ಸಿಡಿ ಪ್ಲೇಯರ್ ತರಲಾಯಿತು. ದುಬಾರಿ ಬೆಲೆಯ ಅದನ್ನು ಮಕ್ಕಳ್ಯಾರೂ ಮುಟ್ಟಬಾರದೆಂದು ಮೊದಲೇ ತಾಕೀತು ಮಾಡಲಾಯಿತು. ಅದನ್ನು ಹಾಕಿ ಕೇಳೋಣ ಎಂದರೂ ಯಜಮಾನರ ತಕರಾರು. ಒಳ್ಳೇ ಮುಹೂರ್ತ ನೋಡಿ ಶುರು ಮಾಡೋಣ ಎಂದು ಬಾಯಿ ಮುಚ್ಚಿಸಿದರು.

ಮರು ದಿನದ ಮುಂಜಾನೆಯೇ ಅವರ ಬಾಸ್ ಮನೆಗೆ ಬರಬೇಕೇ? ಬರುತ್ತಲೇ 'ಸಿಡಿ ಪ್ಲೇಯರ್ ತಗೊಂಡಿದಿರಂತೆ!' ಎನ್ನುತ್ತಲೇ ಬಂದರು. ಮನೆಯವರಿಗೆ ಇಷ್ಟ ಇಲ್ಲದಿದ್ದರೂ ಅದನ್ನು ಡೆಮಾನ್‌ಸ್ಟ್ರೇಷನ್ ಮಾಡಬೇಕಾಯಿತು. ಮುಖ ಕಿವುಚಿಕೊಂಡು, ಅಂತೂ ಸಿಡಿ ಹಾಡಿಸಲು ಮುಂದಾದರು. ಏನೇನು ಮಾಡಿದರೂ ಅದು ಜಪ್ಪಯ್ಯ ಅನ್ನಲಿಲ್ಲ.

'ನಿನ್ನೆ ಅಂಗಡೀಲಿ ಅಷ್ಟು ಚೆನ್ನಾಗಿ ಹಾಡಿತು. ಇದ್ದಕ್ಕಿದ್ದ ಹಾಗೆ ಈಗೇನಾಯಿತು? ಯಾರೋ ತರಲೆಗಳು ಆಗಲೇ ಮುಟ್ಟಿ ಹಾಳು ಮಾಡಿರಬೇಕು' ಎಂದು ಮಕ್ಕಳ ಮೇಲೆ ರೇಗಾಡಿದರು. ಅವರ ಬಾಸ್ 'ಇರಲಿ ಬಿಡಿ. ಅಂಗಡಿಯವರಿಗೆ ಫೋನ್ ಮಾಡಿದರೆ ಬಂದು ಸರಿಮಾಡಿ ಹೋಗುತ್ತಾರೆ' ಎಂದು ಸಮಜಾಯಿಷಿ ಹೇಳುತ್ತಿರುವಾಗ, ನಮ್ಮ ಕೊನೆಯ ಏಳೆಂಟು ವರ್ಷದ ಸಂದೀಪ.

'ಅಯ್ಯೋ, ಡ್ಯಾಡಿ ನೀವು ಸ್ವಿಚ್ ಹಾಕೇ ಇಲ್ಲ' ಎಂದು ಪ್ಲಗ್ ವೈರ್ ಹಾಕಿದ್ದ ಸ್ವಿಚ್‌ನತ್ತ ತೋರಿಸಿದ.

■ ಅನಿತಾ, ಬೆಂಗಳೂರು.

ಸದಾ ಜನರಿಂದ ತುಂಬಿಕೊಂಡಿರುವ ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶದ ಜನಜಂಗುಳಿಯಲ್ಲಿ ನಡೆಯುತ್ತಿದ್ದೆ. ಅಚ್ಚುಕಟ್ಟಾಗಿ ಶರ್ಟ್ ಪ್ಯಾಂಟ್ ಹಾಕಿಕೊಂಡ ವ್ಯಕ್ತಿಯೊಬ್ಬ ನನ್ನನ್ನು ತಡೆದು, 'ಎಕ್ಸ್‌ಕ್ಯೂಜ್ ಮಿ' ಎಂದ. 'ಯಸ್' ಎಂದು ನಾನು ನಿಂತಾಗ ಡೂ ಯೂ ಸ್ಪೀಕ್ ಇಂಗ್ಲಿಷ್ ಆರ್ ಕನ್ನಡ? ಎಂದ. ನಾನೂ ಸ್ಟೈಲಾಗಿಯೇ 'ಇಂಗ್ಲಿಷ್' ಎಂದೆ. ತಕ್ಷಣವೇ ಆ ವ್ಯಕ್ತಿ, 'ಇಫ್ ಯೂ ಡೋಂಟ್ ಮೈಂಡ್, ಪ್ಲೀಸ್ ಲಿಸನ್ ಟು ಮಿ' ಎಂದ.

'ನೋ ಪ್ರಾಬ್ಲಮ್, ಪ್ರೊಸೀಡ್' ಎಂದೆ ನಾನು.

'ಸರ್, ಐ ಹ್ಯಾಮ್ ಲಾಸ್ಟ್ ಮೈ ಪಾಕೆಟ್. ಐ ಆ್ಯಮ್ ವರ್ಕಿಂಗ್ ಇನ್ ಮಲ್ಟಿನ್ಯಾಷನಲ್ ಕಂಪನಿ ಇನ್ ಮೈಸೂರ್. ಪ್ಲೀಸ್ ಹೆಲ್ಪ್ ಮಿ ಬೈ ಗಿವಿಂಗ್ ಟೆನ್ ರುಪೀಸ್. ಐ ವಿಲ್ ರಿಟರ್ನ್ಡ್ ಯೂ ಬೈ ಎಂ.ಓ.' ಎಂದ. ಆತನ ವೇಷಭೂಷಣಗಳನ್ನು ನೋಡಿ ಆತ ಹೇಳುತ್ತಿರುವುದು ನಿಜವಿರಬಹುದೆಂದು ಭಾವಿಸಿ ಆತನ ದುರಾದೃಷ್ಟಕ್ಕೆ ಮರುಗಿ, ಕೂಡಲೇ ಆತನಿಗೆ ಹತ್ತು ರೂಪಾಯಿ ಕೊಟ್ಟೆ. ಆತ ಖುಷಿಯಿಂದ 'ಥ್ಯಾಂಕ್ ಯು ಸಾರ್. ಪ್ಲೀಸ್ ಗಿವ್ ಯುವರ್ ಅಡ್ರೆಸ್. ಐ ವಿಲ್ ರಿಟರ್ನ್ಡ್ ಯುವರ್ ಮನಿ' ಎಂದ. ನಾನು 'ನೋ ನೋ ಇಟ್ಸಾಲ್ ರೈಟ್' ಎಂದು ಮುನ್ನಡೆದೆ.

ಸಂಕಷ್ಟದಲ್ಲಿ ಸಿಲುಕಿದವನಿಗೆ ಸಹಾಯ ಮಾಡಿದ ತೃಪ್ತಭಾವ ನನ್ನಲ್ಲಿ ಮೂಡಿತು. ಮೂರನೇ ದಿನ ಅದೇ ಮಾರ್ಗದಲ್ಲಿ ನಾನು ಬರುತ್ತಿರುವಾಗ ಅದೇ ವ್ಯಕ್ತಿ ಬೇರೆ ಬಟ್ಟೆ ತೊಟ್ಟು ಹೋಗಿ ಬರುತ್ತಿರುವ ಜನರಲ್ಲಿ ಮತ್ತೆ ಇಂಗ್ಲಿಷ್‌ನಲ್ಲಿ ಭಿಕ್ಷೆ ಕೇಳುತ್ತಿರುವುದು ಕಂಡು ಅಚ್ಚರಿಗೊಂಡೆ 'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬ ಮಾತನ್ನು ನೆನಪಿಸಿಕೊಳ್ಳುತ್ತ ಮುನ್ನಡೆದೆ.

■ ವಿಜಯ್ ಅಂಟೀನ, ಧಾರವಾಡ.

ಬೆಂಗಳೂರಿನ ಸ್ನೇಹಿತರೊಬ್ಬರು ಕೆಲಸದ ನಿಮಿತ್ತ ಬಿಜಾಪುರಕ್ಕೆ ಹೋಗಿದ್ದರು. ಅಲ್ಲಿನ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡ ಅಪರು ಅಲ್ಲಿ ತಮ್ಮ ಪರಿಚಿತರೊಬ್ಬರ ಮನೆಗೆ ಹೋದರು. ಅವರು ಮನೆಯಲ್ಲಿರಲಿಲ್ಲ. ಅವರ ಪತ್ನಿ 'ಅವರು ಮನ್ಯಾಗಿಲ್ಲ ಹಿಂದುಗಡೆ ಬರ್ರಿ' ಎಂದರು.

ಅದನ್ನು ಕೇಳಿ ಬೆಂಗಳೂರಿನ ಸ್ನೇಹಿತರು ಗಾಭರಿಯಾಗಿ, ಏನು ಹೇಳಬೇಕೆಂದು ತೋಚದೇ, 'ಬೇ... ಬೇಡ ಆಮೇಲೆ ಬರ್ತೀನಿ' ಎನ್ನುತ್ತಾ ನಡೆದರು. ಕೆಲ ಗಂಟೆಗಳ ನಂತರ ಅವರು ಆ ಸ್ನೇಹಿತನ ಮನೆಗೆ ಹೋದಾಗ ಆ ಸ್ನೇಹಿತ ನಗುಮುಖದಿಂದ ಸ್ವಾಗತಿಸಿ, 'ಮಧ್ಯಾಹ್ನ ಬಂದಿದ್ದು ನೀನೇನಾ?' ಎಂದ 'ಹೌದು' ಎಂದರಿವರು. ಮಧ್ಯಾಹ್ನ ತಾವು ಬಂದಾಗ ಅವರು ಹೆಂಡತಿ ಹೇಳಿದ ಮಾತನ್ನು ಅವರು ಅಪಾರ್ಥ ಮಾಡಿಕೊಂಡಿದ್ದರಂತೆ.

ಬಿಜಾಪುರದವರ ಭಾಷೆಯಲ್ಲಿ ಹಿಂದುಗಡೆ ಬನ್ನಿ ಎಂದರೆ ಆಮೇಲೆ ಬನ್ನಿ ಎಂದರ್ಥ. ಪಾಪ, ಆ ಬೆಂಗಳೂರಿನ ಸ್ನೇಹಿತರು ಹಿಂದುಗಡೆ ಎಂಬುದನ್ನು ಮನೆಯ ಹಿಂದುಗಡೆ ಎಂದು ಅರ್ಥೈಸಿಕೊಂಡು ಗಾಭರಿಯಾಗಿದ್ದರು. ಆಮೇಲೆ ಈ ವಿಷಯವನ್ನು ತಿಳಿದ ಆ ಬಿಜಾಪುರ ಸ್ನೇಹಿತರ ಪತ್ನಿಯು ಅವರಲ್ಲಿ ಕ್ಷಮೆ ಯಾಚಿಸಿದಳಂತೆ.

■ ರಾಜು ಎಂ., ಕುಕನೂರು

ನಾನು ಐದನೇ ಕ್ಲಾಸಿನಲ್ಲಿ ಓದುತ್ತಿರುವಾಗ ಶಾಲೆಯಲ್ಲಿ ಪ್ರವಾಸಕ್ಕೆ ಹೋಗುವ ಏರ್ಪಾಡು ಮಾಡಿದ್ದರು. ಬೆಳಿಗ್ಗೆ ಏಳು ಗಂಟೆಗೆ ನಮ್ಮೂರಿನಿಂದ ಡೈರೆಕ್ಟಾಗಿ ಬದಾಮಿಗೆ ಹೋಗುವ ಬಸ್ಸಿನಲ್ಲಿ ಹೋಗುವ ವಿಚಾರ ಮಾಡಿದ್ದರು. ಮರಳಿ ರಾತ್ರಿ ಬರುವುದು. ಬದಾಮಿಯಿಂದ ಬನಶಂಕರಿ ಮಹಾಕೂಟ ಶಿವಯೋಗಮಂದಿರ ಪಟ್ಟದಕಲ್ಲು ನಾವು ಹೋಗುವ ಪ್ರವಾಸದ ಸ್ಥಳಗಳು ಬೆಳಿಗ್ಗೆ ಏಳುಗಂಟೆಯ ಬಸ್ಸಿಗೆ ನಮ್ಮ ಶಾಲೆಯ ಹುಡುಗಿಯರು, ನಮ್ಮ ಟೀಚರ್ ತಯಾರಾಗಿ ಬಸ್‌ಸ್ಟಾಂಡಿಗೆ ಬಂದರೆ ಎಂಟು ಒಂಭತ್ತು ಗಂಟೆಯಾದರೂ ಬದಾಮಿಯ ಬಸ್ಸು ಬರಲೇ ಇಲ್ಲಾ. ಬಾಗಲಕೋಟೆಯ ಬಸ್ಸಿಗೆ ಹತ್ತಿ ಬಾಗಲಕೋಟೆಯಿಂದ ಟ್ರೈನು ಹಿಡಿದು ಬದಾಮಿಗೆ ಹೋಗುವ ವಿಚಾರ ಮಾಡಿದರು. ಅದರಂತೆ ಟ್ರೈನಿನ ಪ್ರಯಾಣ ಮಾಡಿ ಬದಾಮಿಯ ರೈಲ್ವೆ ನಿಲ್ದಾಣದಲ್ಲಿ ಇಳಿದು ಬದಾಮಿಗೆ ಐದಾರು ಕಿ.ಮಿ.ನಡೆದು ಅಲ್ಲಿಂದ ಬನಶಂಕರಿಗೆ ನಡೆದು ಮುಟ್ಟಿದಾಗ ರಾತ್ರಿ ಏಳು ಗಂಟೆ. ಒಂದೇ ದಿನದ ಬುತ್ತಿ ರಾತ್ರಿಗೆ ಮುಗಿದು ಹೋಯಿತು. ನಡೆದು ನಡೆದು ಎಲ್ಲರಿಗೂ ಸುಸ್ತು. ರಾತ್ರಿ ಬನಶಂಕರಿಯಲ್ಲಿ ಕಳೆದು ನಸುಕಿನಲ್ಲಿ ಮತ್ತೆ ಪಾದಯಾತ್ರೆ. ಬಸ್ಸಿಗೆ ಹೋಗಲಿಕ್ಕೆ ಯಾರ ಹತ್ತಿರವೂ ದುಡ್ಡಿಲ್ಲಾ ಈ ಪ್ರವಾಸಕ್ಕೆ ಒಬ್ಬರಿಗೆ ಐದು ರೂಪಾಯಿ, ಐದು ರೂಪಾಯಿ ಬದಾಮಿಗೆ ಮುಗಿದು ಹೋಗಿವೆ. ಮುವ್ವತ್ತು ನಾಲ್ವತ್ತು ಹುಡುಗಿಯರ ಬಸ್‌ಚಾರ್ಜ್ ತಗಿಸಲಿಕ್ಕೆ ಟೀಚರ ಹತ್ತಿರವೂ ಅಷ್ಟು ದುಡ್ಡಿಲ್ಲಾ. ಎಲ್ಲರಿಗೂ ಪಜೀತಿ. ಬನಶಂಕರಿಯಿಂದ ನಸುಕಿನಲ್ಲಿ ಹೊರಟು ಶಿವಯೋಗ ಮಂದಿರಕ್ಕೆ ಬಂದು ಅಲ್ಲಿ ಹೊಳೆಸ್ನಾನ ಮಾಡಿ ಅವೇ ಬಟ್ಟೆಗಳನ್ನು ತೊಟ್ಟುಕೊಂಡು ದಾಸೋಹದಲ್ಲಿ ಜೋಳದ ನುಚ್ಚು, ಹಿಟ್ಟಿನ ಸಾರು, ಊಟ ಮಾಡಿ ಮತ್ತೆ ಕಾಲು ನಡಿಗೆಯಿಂದ ಮಹಾಕೂಟಕ್ಕೆ ಪ್ರಯಾಣ ಅಲ್ಲಿಂದ ಪಟ್ಟದಕಲ್ಲು ಮುಟ್ಟಿದಾಗ ದೀಪ ಹಚ್ಚುವ ಸಮಯ. ಎಲ್ಲ ಹುಡುಗಿಯರ ಮುಖದಲ್ಲಿ ಆಯಾಸದ ಕಳೆ ಇದ್ದರೂ ಎಲ್ಲ ಊರುಗಳನ್ನು ನೋಡಿದ ಸಂತಸ. ಅಂಥದರಲ್ಲಿ ಹೊಟ್ಟೆ ಹಸಿವು. ಪಟ್ಟದ ಕಲ್ಲಿನಿಂದ ಒಂದು ಟ್ರ್ಯಾಕ್ಟರ್ ಬಾಡಿಗೆ ಮಾಡಿಕೊಂಡು ಊರಿಗೆ ಹೋಗಿ ದುಡ್ಡು ಕೊಡುತ್ತೇವೆ ಅಂತ ಹೇಳಿ ಎಲ್ಲ ಹುಡುಗಿಯರನ್ನು ಟ್ರ್ಯಾಕ್ಟರ್‌ನಲ್ಲಿ ಕರೆದುಕೊಂಡು ನಮ್ಮ ಊರಿಗೆ ಬಂದಾಗ ರಾತ್ರಿ ಒಂಬತ್ತು ಗಂಟೆ. 'ನಮ್ಮ ಪ್ರವಾಸಕ್ಕೆ ಜಯವಾಗಲಿ, ಎಂದು ಕೂಗಿರಿ ಅಂತಾ ಟೀಚರ್ ಹೇಳಿದಾಗ ನಗುನಗುತ್ತಲೇ ಜಯಕಾರ ಮಾಡಿದೆವು. ಇಂತಹ ಪ್ರವಾಸ ಎಂದೂ ಮರೆಯಲಾರೆವು. ಐದು ರೂಪಾಯಿಯಲ್ಲಿ ಐದು ಊರುಗಳನ್ನು ಐದನೇ ಕ್ಲಾಸಿನಲ್ಲಿ ನೋಡಿದ ನೋಡಿದ ನೆನಪು ಎಂದಿಗೂ ಮಾಸದು.


■ ಚನ್ನಮ್ಮ ಸರಗಣಾಚಾರಿಮಠ.

ಪರಿಸರ ಸಂರಕ್ಷಣೆಗೆ ದಿಟ್ಟ ಹೆಜ್ಜೆಯನ್ನಿಟ್ಟ ಶಿಕ್ಷಕ



ಕೊಳಚೆ ನೀರುಣಿಸಿ ಹಣ್ಣಿನ ಗಿಡ ಬೆಳೆಸಿದ ಸಾಹಸಿ;

ಬಾದಾಮಿ ತಾಲೂಕು ಕೆರೂರಿನ ರಾಚಪ್ಪ ಯಂಡಿಗೇರಿ ವೃತ್ತಿಯಿಂದ ಶಿಕ್ಷಕರು, ತಮ್ಮ ಬಿಡುವಿನ ವೇಳೆಯಲ್ಲಿ ಐದು ಎಕರೆ ಬರಡು ಭೂಮಿಯಲ್ಲಿ ಕೊಳಚೆ ನೀರುಣಿಸಿ ಸಾವಿರ ಹಣ್ಣಿನ ಗಿಡ ಬೆಳೆಸುವಲ್ಲಿ ಸಫಲರಾಗಿದ್ದಾರೆ. ಇವರು ನವಲಗುಂದ ತಾಲೂಕು ಅರೇಕುರಹಟ್ಟಿ ಗ್ರಾಮದ ಪ್ರೌಢಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



'ಕಾಡನ್ನು ಬೆಳೆಸಿ ನಾಡನ್ನು ಉಳಿಸಿ' ಎಂಬ ಉಕ್ತಿಗೆ ಸಾಕ್ಷಿ ಎಂಬಂತೆ ಈ ಹಣ್ಣಿನ ಗಿಡಗಳು ಪರಿಸರದಲ್ಲಿನ ವಾಯು ಮಾಲಿನ್ಯ ತಡೆಗಟ್ಟುತ್ತವೆ. ಕೆರೂರದಲ್ಲಿನ ಎಣ್ಣೆ ಮಿಲ್ಲುಗಳು ಉಗುಳುವ ಹೊಗೆಯಿಂದುಂಟಾಗುವ ವಾಯು ಮಾಲಿನ್ಯ ಹಾಗೂ ಕೊಳಚೆ ನೀರಿನ ಜಲಮಾಲಿನ್ಯ ತಡೆಗೆ ಒಡ್ಡು ಹಾಕುವ ಸಾಹಸದಂತೆ ಈ ಶಿಕ್ಷಕರು ಹಣ್ಣಿನ ಗಿಡಗಳನ್ನು ಬೆಳೆಸಿ ಪರಿಸರ ಸಂರಕ್ಷಣೆಯಲ್ಲಿ ಪಾಲ್ಗೊಂಡಿದ್ದಾರೆ.

ಹುಬ್ಬಳ್ಳಿ ತಾಲ್ಲೂಕಿನ ದೇವರ ಗುಡಿಹಾಳ ಗ್ರಾಮದ ರೈತರೊಬ್ಬರು ತಮ್ಮ ಹೊಲದಲ್ಲಿ 3 ಕಿ.ಮೀ. ದೂರದಿಂದ ನೀರನ್ನು ಹೊತ್ತು ಹಾಕಿ 100 ಮಾವಿನ ಗಿಡಗಳನ್ನು ಬೆಳೆಸಿದ್ದನ್ನು ನೋಡಿ ಸ್ಫೂರ್ತಿಗೊಂಡು ಇವರು 1994 ರಲ್ಲಿ ಧಾರವಾಡ ತಾಲೂಕಿನ ಜೋಗಯ್ಯನ ಕೊಪ್ಪದ ಪ್ರಸಿದ್ಧ ಮಾವಿನ ಗಿಡಗಳ ಬೆಳೆಗಾರ ಸಿ.ಸಿ. ಪಾಟೀಲರವರಿಂದ 180 ಆಪೂಸ ಮಾವಿನ ಸಸಿಗಳನ್ನು ತಂದು ಹಚ್ಚಿದರು. ಬಾವಿ, ಬೋರುಗಳಿಲ್ಲದೆ ಹಣ್ಣಿನ ಗಿಡಗಳನ್ನು ಬೆಳೆಸುವುದು ಹುಚ್ಚು ಪ್ರಯತ್ನ ಎಂದು ಊರಿನ ಜನರ ಗೇಲಿ ಮಾಡಿದ್ದರು.

ನಾನ್ನೂರು ಅಡಿ ದೂರದಲ್ಲಿ ಊರಿನ ಕೊಳಚೆ ನೀರು ಹರಿದು ಬಂದು ತೆಗ್ಗಿನಲ್ಲಿ ಸಂಗ್ರಹವಾಗುತ್ತದೆ. ಇದನ್ನು ಸೈಕಲ್ ಗಾಡಿಯ ಮುಖಾಂತರ ಹೊಲದಲ್ಲಿನ ನೀರಿನ ಟ್ಯಾಂಕಿನಲ್ಲಿ ಸಂಗ್ರಹಿಸಿಕೊಂಡು ಗಿಡಗಳನ್ನು ಪೋಷಿಸಿದರು. ತದನಂತರ ಬಾದಾಮಿಯ ತೋಟಗಾರಿಕಾ ಸಹಾಯಕರಾದ ಎಂ.ಎಚ್. ದಾಲರೋಟಿಯವರ ತಾಂತ್ರಿಕ ಸಲಹೆ ಮೇರೆಗೆ ಹದಿನೆಂಟು ಲೀಟರ್ ಸಾಮರ್ಥ್ಯದ ಮಣ್ಣಿನ ಬಿಂದಿಗೆಗಳನ್ನು ತಂದು,' ತಳಭಾಗದಲ್ಲಿನ ಸಣ್ಣ ರಂಧ್ರದ ಮೂಲಕ ನೀರು ಎಲ್ಲ ಗಿಡಗಳಿಗೆ ಹನಿ ಹನಿಯಾಗಿ ಬೀಳುವಂತೆ ಮಾಡಿದರು.



ಎರಡು ಮಾವಿನ ಗಿಡಗಳ ಮಧ್ಯದಲ್ಲಿನ ಸ್ಥಳವನ್ನು ವ್ಯರ್ಥ ಮಾಡಬಾರದೆಂದು ಮಿಶ್ರ ಬೇಸಾಯವಾಗಿ, 600 ದಾಳಿಂಬೆ ಗಿಡಗಳನ್ನು ಹಚ್ಚಲಾಗಿದೆ. ಈಗ ದಾಳಿಂಬರದ ಗಿಡಗಳು ಹಣ್ಣಿನಿಂದ ತುಂಬಿ ಬೆಳೆಯುತ್ತಲಿವೆ. 1996ರಲ್ಲಿ ಹೊಲದ ಸುತ್ತಲೂ ಸಾಗವಾನಿ, ತೆಂಗು, ಚಿಕ್ಕು, ನಿಂಬೆ ಹೀಗೆ ಎಲ್ಲ ತರದ ಗಿಡಗಳನ್ನು ಹಚ್ಚಿ ಸಾವಿರ ಹಣ್ಣಿನ ಗಿಡಗಳ ಸರದಾರರಾಗಿದ್ದಾರೆ. ಇನ್ನೂ ಉಳಿದ ಸ್ಥಳದಲ್ಲಿ ಮಲ್ಲಿಗೆ ಹೂವಿನ ಗಿಡಗಳನ್ನು ಬೆಳೆಸುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಹನಿ ನೀರಾವರಿ ವ್ಯವಸ್ಥೆಯ ಉದ್ದೇಶದಿಂದ ಈಗ ಬಾವಿಯನ್ನು ಕೂಡಾ ತೋಡಲಾಗಿದೆ, ಹಚ್ಚ ಹಸಿರಿನ ಈ ಹಣ್ಣಿನ ಗಿಡಗಳ ತೋಟ ಊರಿನ ಉದ್ಯಾನದಂತೆ ಕಂಗೊಳಿಸುತ್ತಲಿದೆ.

■ ಬಿ.ಪಿ. ಚಿಕ್ಕಣ್ಣವರ

ಹಿಮೊಫಿಲಿಯಾ

ರಕ್ತಸ್ರಾವ ನಿಲ್ಲಬೇಕಾದರೆ ರಕ್ತ ಹೆಪ್ಪುಗಟ್ಟಬೇಕು. ಕೆಲವರಲ್ಲಿ ಹೀಗಾಗುವುದಿಲ್ಲ. ಸ್ರಾವ ಜೋರಾಗಿ ಅಪಾಯ ಉಂಟಾಗುತ್ತದೆ. ಅಂಥವರು ಎಚ್ಚರದಿಂದ ಜೀವನ ನಡೆಸಬೇಕಾಗುತ್ತದೆ. ಅವರ ಸಮೀಪದ ಬಂಧುಗಳೂ ಸದಾ ನಿಗಾ ವಹಿಸಿ ನೋಡಿಕೊಳ್ಳಬೇಕಾಗುತ್ತದೆ. ಇದೊಂದು ರಾಜ ಕಾಯಿಲೆ ಎಂಬ ಮಾತಿತ್ತು. ವಂಶ ಪಾರಂಪರ್ಯ ಕೊಡುಗೆ ಆದರೂ, ನಾನಾ ಕೊರತೆಗಳಿಂದಾಗಿಯೂ ಈ ದೋಷ ಕಾಣಿಸಬಹುದು.

ಹಿಮೊಫಿಲಿಯಾ ಅಥವಾ ಕುಸುಮರೋಗ ಎಂದರೆ ರಕ್ತ ಹೆಪ್ಪುಗಟ್ಟುವ ತೊಂದರೆ. ಇದು ಅನುವಂಶಿಕವಾಗಿ ಬರುತ್ತದೆ. ಈ ಕಾಯಿಲೆ ಗಂಡಸರಿಗೆ ಮಾತ್ರ ಬರುತ್ತದೆ. ತಾಯಂದಿರು ಈ ಕೊರತೆಯ ಜೀನ್ ಅನ್ನು ತಮ್ಮ ಗಂಡು ಮಕ್ಕಳಿಗೆ ಹಂಚುತ್ತಾರೆ. ಆದರೆ ತಾಯಂದಿರು ಈ ಕಾಯಿಲೆಯಿಂದ ನರಳುವುದಿಲ್ಲ. ಯುರೋಪಿನ ರಾಜವಂಶದವರಿಗೆ ಈ ಕಾಯಿಲೆ ಇದ್ದುದರಿಂದ ಹಿಮೊಫಿಲಿಯಾ ಜಗತ್ಪ್ರಸಿದ್ಧವಾಗಿದೆ.

ಆರೋಗ್ಯವಂತರಲ್ಲಿ ಗಾಯವಾದ ಮೂರ್‍ನಾಲ್ಕು ನಿಮಿಷಗಳಲ್ಲಿ ಯಾವ ಚಿಕಿತ್ಸೆ ಕೊಡದಿದ್ದರೂ ರಕ್ತ ತಾನಾಗಿಯೇ ಹೆಪ್ಪುಗಟ್ಟಿ ರಕ್ತಸ್ರಾವ ನಿಲ್ಲುತ್ತದೆ. ಆದರೆ ಹಿಮೊಫಿಲಿಯಾ ಇದ್ದಲ್ಲಿ ರಕ್ತ ಹೆಪ್ಪುಗಟ್ಟದೇ ಸ್ರಾವ ಮುಂದುವರೆಯುತ್ತದೆ. ರಕ್ತದಲ್ಲಿ ಎಲ್ಲ ಅಂಶಗಳೂ ಸಮಪ್ರಮಾಣದಲ್ಲಿದ್ದಾಗ ಮಾತ್ರ ರಕ್ತ ಹೆಪ್ಪುಗಟ್ಟುವ ಕ್ರಿಯೆ ನಡೆಯುತ್ತದೆ. ಇದರಲ್ಲಿ ಮುಖ್ಯವಾದವುಗಳೆಂದರೆ ಪ್ರೊಥ್ರಾಂಬಿನ್, ಥ್ರಾಂಬೋಪ್ಲಾಸ್ಟಿನ್, ಫೈಬ್ರಿನೋಜೆನ್, ಚಪ್ಪಟೆ ರಕ್ತಕಣಗಳು, ಕ್ಯಾಲ್ಸಿಯಂ, ವಿಟಮಿನ್ 'ಕೆ', ಫ್ಯಾಕ್ಟರ್ 8,9 ಮತ್ತು 11 ಇವುಗಳಲ್ಲಿ ಯಾವುದರ ಕೊರತೆಯುಂಟಾದರೂ ರಕ್ತ ಹೆಪ್ಪುಗಟ್ಟುವಿಕೆಯಲ್ಲಿ ಏರುಪೇರಾಗುತ್ತದೆ.

ಗಾಯವಾದಾಗ ರಕ್ತ ಒಸರಲಾರಂಭಿಸುತ್ತದೆ. ರಕ್ತವು ನಾಳದೊಳಗಿದ್ದಾಗ ಅದು ಹೆಪ್ಪುಗಟ್ಟಬಾರದು. ಆದರೆ ಅದು ಹೊರಗಿನ ಗಾಳಿಯೊಂದಿಗೆ ಬೆರೆತಾಗ, ಅಪ[illegible]ಗಿನ ಚಪ್ಪಟೆ ರಕ್ತಕಣಗಳು ನಾಶವಾಗಿ ಥ್ರಾಂಬೊಪ್ಲಾಸ್ಟಿನ್ ಎಂಬ ಕಿಣ್ವವನ್ನು ಉತ್ಪತ್ತಿ ಮಾಡುತ್ತದೆ. ಇದು ಕ್ಯಾಲ್ಸಿಯಂ, ವಿಟಮಿನ್ 'ಕೆ' ಮತ್ತಿತರ ಅಂಶಗಳ ಜೊತೆಯಲ್ಲಿ ಪ್ರೊಥ್ರಾಂಬಿನ್ ಮತ್ತು ಫೈಬ್ರಿನೋಜೆನ್ ಸೇರಿ ತಂತುಗಳಾಗಿ ರಕ್ತವು ಗರಣೆಕಟ್ಟಿ ಸ್ರಾವವು ನಿಲ್ಲುತ್ತದೆ.

ಹಿಮೊಫಿಲಿಯಾದ ಮುಖ್ಯ ಲಕ್ಷಣವೆಂದರೆ ಅತಿಯಾಗಿ, ಹಿಡಿತದಲ್ಲಿರಿಸಿ ಕೊಳ್ಳಲಾರದಷ್ಟು ರಕ್ತಸ್ರಾವವಾಗುವಿಕೆ ಮತ್ತು ರಕ್ತ ಹೆಪ್ಪುಗಟ್ಟುವ ಅವಧಿ ಬಹಳ ನಿಧಾನವಾಗುವುದು. ಥ್ರಾಂಬೋಪ್ಲಾಸ್ಟಿನ್‌ನ ಕೊರತೆಯೇ ಈ ತೊಂದರೆಗೆ ಮೂಲ. ರಕ್ತದಲ್ಲಿ ಫ್ಯಾಕ್ಟರ್ 8,9, ಹಾಗೂ 11 ಅಂಶಗಳು ಕಡಿಮೆ ಪ್ರಮಾಣದಲ್ಲಿದ್ದರೆ ಥ್ರಾಂಬೋಪ್ಲಾಸ್ಟಿನ್‌ನ ಕೊರತೆಯುಂಟಾಗುತ್ತದೆ. ಶೇಕಡಾ 80ರಷ್ಟು ಹಿಮೊಫಿಲಿಯಾ ರೋಗಿಗಳಲ್ಲಿ ಫ್ಯಾಕ್ಟರ್ 8 ಅಂಶವು ಬಹಳ ಕಡಿಮೆ ಪ್ರಮಾಣದಲ್ಲಿರುತ್ತದೆ ಎಂದು ತಿಳಿದು ಬಂದಿದೆ.

ಈ ಕಾಯಿಲೆಯಿರುವವರು ಜೋರಾಗಿ ಸೀನಿದರೆ ಮೂಗಿನಿಂದ ರಕ್ತ ಬರಬಹುದು. ಅಕಸ್ಮಾತ್ ತುಟಿ ಇಲ್ಲವೆ ನಾಲಗೆ ಕಚ್ಚಿಕೊಂಡರೂ ರಕ್ತಸ್ರಾವವಾಗುತ್ತದೆ. ಸ್ವಲ್ಪ ತರಚಿದರೂ ವಿಪರೀತ ರಕ್ತಸ್ರಾವವಾಗುತ್ತದೆ. 'ಇಂಜಕ್ಷನ್ ಚುಚ್ಚಿದರೆ ಸೂಜಿ ಚುಚ್ಚಿದ ಜಾಗದಿಂದಲೇ ರಕ್ತ ಸುರಿಯಲು ಪ್ರಾರಂಭಿಸುತ್ತದೆ. ಈ ರೋಗಿಗಳಲ್ಲಿ ಕಂಡು ಬರುವ ಇನ್ನೊಂದು ತೊಂದರೆಯೆಂದರೆ ಕೀಲುಗಳಲ್ಲಿ ರಕ್ತಸ್ರಾವವಾಗುವುದು. ಇದರಿಂದ ಕೀಲು ಊದಿಕೊಂಡು ಕೆಂಪಗಾಗುತ್ತದೆ. ಕೆಲವರಲ್ಲಿ ಕೀಲಿನಲ್ಲಿ ಸೇರಿದ ರಕ್ತ ಕ್ರಮೇಣ ಹೀರಿಕೊಳ್ಳಲ್ಪಟ್ಟು ಸ್ವಲ್ಪ ದಿನಗಳಲ್ಲಿ ಮೊದಲಿನಂತಾಗಬಹುದು. ಹೆಚ್ಚಿನವರಲ್ಲಿ ಸೋಂಕು ಉಂಟಾಗಿ ನೋವು ಇರುತ್ತದೆ. ಆಗ ಚಿಕಿತ್ಸೆ ತೆಗೆದುಕೊಳ್ಳಬೇಕಾಗುತ್ತದೆ.

ಹೀಗೆ ರಕ್ತಸ್ರಾವಕ್ಕೊಳಗಾಗುವವರನ್ನು ರಕ್ತದ ಪರೀಕ್ಷೆ ಮಾಡಿಸುವುದರಿಂದ ಥ್ರಾಂಬೊಪ್ಲಾಸ್ಟಿನ್ ಹಾಗೂ ಫ್ಯಾಕ್ಟರ್ 8,9,11 ಅಂಶಗಳು ಕಡಿಮೆ ಪ್ರಮಾಣದಲ್ಲಿರುವುದು ತಿಳಿಯುತ್ತದೆ. ಫ್ಯಾಕ್ಟರ್ 8ರ ಅಂಶವು ಶೇಕಡಾ ಮೂರಕ್ಕಿಂತ ಕಡಿಮೆಯಿದ್ದರೆ ಹಿಮೊಫಿಲಿಯಾ ತೀವ್ರ ಸ್ವರೂಪದ್ದೆಂದು ತಿಳಿಯಬೇಕು. ಶೇಕಡಾ ಐದಕ್ಕಿಂತ ಹೆಚ್ಚಿದ್ದರೆ ಸೌಮ್ಯ ಸ್ವರೂಪದ್ದು ಎನ್ನಬಹುದು.

ಹಿಮೊಫಿಲಿಯಾ ಇದೆಯೆಂದು ತಿಳಿದ ಕ್ಷಣದಿಂದ ಮಕ್ಕಳನ್ನು ಜಾಗ್ರತೆಯಿಂದ ನೋಡಿಕೊಳ್ಳಬೇಕು. ಮಗು ಮಲಗುವ ಹಾಗೂ ಆಡುವ ಜಾಗಗಳಲ್ಲಿ ಮೆತ್ತನೆಯ ಬಟ್ಟೆ ಹಾಸಬೇಕು. ಆಟವಾಡುವಾಗ ಸದಾ ಗಮನ ಹರಿಸಬೇಕು. ಪೆಟ್ಟು ಮಾಡಿಕೊಳ್ಳದಿರುವಂತಹ ಆಟಗಳನ್ನು ಆಡಲು ಪ್ರೋತ್ಸಾಹಿಸಬೇಕು. ಇಂಜಕ್ಷನ್ ಕೊಡಿಸಬಾರದು.

ಅಕಸ್ಮಾತ್ ಬಿದ್ದು ರಕ್ತಸ್ರಾವವಾಗ ತೊಡಗಿದ್ದರೆ ಗಾಯವಾದ ಜಾಗಕ್ಕೆ ಐಸ್ ನೀರಿನಲ್ಲಿ ಅದ್ದಿದ ಹತ್ತಿಯನ್ನು ಇಲ್ಲವೇ ಬಟ್ಟೆಯನ್ನು ಒತ್ತಿ ಹಿಡಿಯಬೇಕು. ಗಟ್ಟಿಯಾಗಿ ಬ್ಯಾಂಡೇಜ್ ಕಟ್ಟಿದರೂ ಕೆಲವು ವೇಳೆ ಸ್ರಾವ ನಿಲ್ಲುವುದಿಲ್ಲ. ಇಂತಹ ಸ್ಥಿತಿಯಲ್ಲಿ ಮಗುವಿಗೆ ಪ್ಲಾಸ್ಮಾ ಕೊಡಬೇಕು. ಈ ಪ್ಲಾಸ್ಮಾದಲ್ಲಿ ಥ್ರಾಂಬೋಪ್ಲಾಸ್ಟಿನ್ ಮತ್ತು ಫ್ಯಾಕ್ಟರ್ 8 ಅಂಶ ಇರುವುದರಿಂದ ರಕ್ತ ಹೆಪ್ಪುಗಟ್ಟುತ್ತದೆ. ಕೀಲಿನೊಳಗೆ ರಕ್ತಸ್ರಾವವಾದಾಗ ಮಕ್ಕಳಿಗೆ ಓಡಾಡಲು ಕಷ್ಟವಾಗುತ್ತದೆ. ಪ್ಲಾಸ್ಮಾ ಕೊಡುವುದರ ಜೊತೆಯಲ್ಲಿ ವಿಶ್ರಾಂತಿ ನೀಡಬೇಕು.

ಹಿಮೊಫಿಲಿಯಾದ ಇನ್ನೊಂದು ವಿಧದಲ್ಲಿ ರಕ್ತಸ್ರಾವವಾಗದೇ ಅಲ್ಲಲ್ಲಿ ನೀಲಿಗಂಟುಗಳಾಗಬಹುದು. ಇದು ಕೂಡ ಥ್ರಾಂಬೋಪ್ಲಾಸ್ಟಿನ್ ಕೊರತೆಯಿಂದ ಕಂಡು ಬರುತ್ತದೆ.

ಥ್ರಾಂಬೋಪ್ಲಾಸ್ಟಿನ್ ಯಕೃತ್ತಿನಲ್ಲಿ (ಲಿವರ್) ತಯಾರಾಗುತ್ತದೆ. ಇದಕ್ಕೆ ವಿಟಮಿನ್ 'ಕೆ' ಅಗತ್ಯವಾಗಿ ಬೇಕಾಗುತ್ತದೆ. ಮಗು ಸೇವಿಸುವ ಆಹಾರದಲ್ಲಿ ವಿಟಮಿನ್ 'ಕೆ' ಕೊರತೆಯಾದಾಗ ಇಲ್ಲವೇ ಕರುಳಿನ ಕಾಯಿಲೆಗಳುಂಟಾದಾಗ ಆಹಾರದಲ್ಲಿರುವ ವಿಟಮಿನ್ 'ಕೆ'ಯನ್ನು ಹೀರಿಕೊಳ್ಳಲು ಅಸಮರ್ಥವಾದಾಗ ಈ ಕಾಯಿಲೆ ಉದ್ಭವವಾಗುತ್ತದೆ. ಯಕೃತ್ತಿನ ಕಾಯಿಲೆಗಳಾದ ಕಾಮಾಲೆ, ಸಿರೋಸಿಸ್‌ಗಳಲ್ಲಿಯೂ ಥ್ರಾಂಬೋಪ್ಲಾಸ್ಟಿನ್‌ನ ತಯಾರಿಕೆ ಕಡಿಮೆಯಾಗುತ್ತದೆ.


ಚಿಕಿತ್ಸೆ ಮಾಡುವಾಗ ಪ್ಲಾಸ್ಮಾವನ್ನು ಕೊಡುವುದಲ್ಲದೇ ವಿಟಮಿನ್ 'ಕೆ'ಯನ್ನು ಕೊಡಬೇಕು.

ಹಿಮೊಫಿಲಿಯಾದಿಂದ ಬಳಲುವವರು ತಮ್ಮ ಜೊತೆಗೆ ಸದಾ ಒಂದು ಡೈರಿಯನ್ನಿಟ್ಟುಕೊಂಡಿದ್ದು ಅದರಲ್ಲಿ ಕಾಯಿಲೆ ಇರುವುದನ್ನು ನಮೂದಿಸಿ ಕೊಂಡಿದ್ದರೆ ಒಳ್ಳೆಯದು. ಏನೇ ತೊಂದರೆಯಾದರೂ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು.

ವಿಟಮಿನ್ 'ಕೆ' ಇರುವ ಆಹಾರ ದ್ರವ್ಯಗಳು :

ಮೀನು, ಮೊಟ್ಟೆ, ಕ್ಯಾಬೇಜ್ (ಎಲೆಕೋಸು), ಬಸಳೆಸೊಪ್ಪು, ಲಿವರ್, ಹೂಕೋಸು (ಕಾಲಿಫ್ಲವರ್) ಟೊಮೆಟೊ, ಬಟಾಣಿ, ಮತ್ತು ಚೀಸ್‌ಗಳಲ್ಲಿ ಹೆಚ್ಚಾಗಿರುತ್ತದೆ.

■ ಡಾ. ವಸುಂಧರಾ ಭೂಪತಿ



ಗಂಡ ಅರಿಯಬೇಕಾದ ಹೆಂಡತಿಯ ಅಂತರಂಗ

ಗಂಡು - ಹೆಣ್ಣು ಒಂದಾಗಿ ಸಂಸಾರ ಆರಂಭಿಸುವಾಗ ಕನಸು ಇರುತ್ತವೆ. ಯಾರಿಗೂ ದೊರೆಯದ ಸೌಭಾಗ್ಯ ತಮಗೆ ದೊರೆತಿದೆ ಎಂಬ ಆನಂದ, ಸೊಕ್ಕು ಎಲ್ಲ ಮೇಳವಿಸಿದ ಮತ್ತ ಸ್ಥಿತಿ. ಅದಕ್ಕೇ ಕೆ.ಎಸ್.ನ. ಹಾಡಿದ್ದು;

'ಮದುವೆಯಾಗಿ ತಿಂಗಳಿಲ್ಲ ನೋಡಿರಣ್ಣ ಹೇಗಿದೆ!'

'ನಾನು ಕೂಗಿದಾಗಲೆಲ್ಲ ಬರುವಳೆನ್ನ ಶಾರದೆ'

ಈ ಆತ್ಮೀಯತೆ, ಒಬ್ಬರನೊಬ್ಬರ ಕ್ಷಣ ಕೂಡ ಬಿಟ್ಟಿರಲಾರೆವೆಂಬ ಭಾವನೆ ಕ್ರಮೇಣ ನಶಿಸುತ್ತದೆ. ಅವಳ ಪಾಲಿಗೆ ಆತ ಕೇವಲ 'ರೀS'. ಆತನ ಪಾಲಿಗೆ ಅವಳು ಕೇವಲ 'ಲೇ...'. ಸಂಸಾರ ಒಂದು ರೀತಿಯ 'ರೀ..ಲೇ' ಗಳ ರಿಲೇ.

ಕಣ್ಸನ್ನೆಯ ಕರೆಗೇ ಸುಖದ ನವಿರು ತುಂಬಿಕೊಂಡು ಹತ್ತಿರ ಧಾವಿಸುತ್ತಿದ್ದ ಹೆಂಡತಿ, ಕರೆದರೂ ಬರುವುದಿಲ್ಲ. ಇನ್ನೂ ದಬಾಯಿಸಿದರೆ ಸಿಡಿಮಿಡಿ ಮಾಡುತ್ತಾಳೆ. ಒಂದು ಅಕ್ಕರೆಯ ಮಾತಿಲ್ಲ. ಬರೀ ಸಂಸಾರದ ಗೋಳು. ಅದು ಇಲ್ಲ, ಇದು ಇಲ್ಲ ಎಂಬ ರಾಗ. ಗಂಡ ಬೇಸರಿಸುತ್ತಾನೆ. ಏನಾಯಿತು ಇವಳಿಗೆ! ಎಂದು ತಲೆಕೆಡಿಸಿಕೊಳ್ಳುತ್ತಾನೆ.

ಅದೇ ಈ ಹೆಂಗಸು ಕಾಂಪೋಂಡಿಗೆ ಒರಗಿಕೊಂಡು ನೆರೆಮನೆಯಾಕೆಯ ಜೊತೆ ಗಂಟೆಗಟ್ಟಲೆ ಹರಟುತ್ತಾಳೆ. ಅಕ್ಕನ, ತಂಗಿಯೋ, ಗೆಳತಿಯೋ ಫೋನ್ ಮಾಡಿದರೆ ಮುಗಿದೇ ಹೋಯಿತು. ಫೋನಿಗೆ ಕಿವಿ ಕೀಲಿಸಿ ' ಅದೇ ನಾನೂ ಹೇಳೋದು' ಅಂತಲೋ, 'ಏನಾಯಿತು ಗೊತ್ತಾ?' ಎಂದು ಕಣ್ಣಲ್ಲಿ ವಿಸ್ಮಯ ತುಂಬಿಕೊಂಡು ಉದ್ಗರಿಸುವ ರೀತಿ ಕಂಡೇ ಗಂಡನಿಗೆ ರೇಗುತ್ತದೆ. 'ಏನಿರುತ್ತದೆ ಹಾಗೆ ಗಂಟೆಗಟ್ಟಲೇ ಮಾತಾಡುವಂಥದ್ದು! ಹೆಂಗಸರೇ ಹೀಗೆ. ಅರ್ಥಹೀನ ಮಾತು ಆಡಿಯೇ ಜೀವನ ಕಳೆದುಬಿಡುತ್ತಾರೆ' ಎಂಬ ವಾದ ತಲೆಯಲ್ಲಿ ಮೊಳೆಯುತ್ತದೆ.

ವಾಸ್ತವ ಏನೆಂದರೆ, ಹೆಣ್ಣಿನ ಲೋಕ ಬೇರೆಯೇ. ಮದುವೆಯ ಆರಂಭದ ದಿನಗಳ ಮತ್ತು ಇಳಿದಿದೆ. ಈಗ ಆಕೆ ತಾಯಿ. ಮಗುವಿಗೆ ಗಲ್ಲದ ಮೇಲೊಂದು ಕೆಂಪು ಗುಳ್ಳೆ ಕಾಣಿಸಿಕೊಂಡಿದೆ. ಆಕೆ ಗಾಭರಿಯಾಗುತ್ತಳೆ. ವೈದ್ಯರ ಹತ್ತಿರ ಹೋಗುವಷ್ಟು ದೊಡ್ಡ

'ನಮ್ಮ ಮಗೂಗೂ ಹೀಗೇ ಆಗಿತ್ತೂರೀ...' ಎಂದು ಆರಂಭಿಸಿ, ತಾನು ಅನುಭವಿಸಿದ ಧಾವಂತ, ಚಡಪಡಿಕೆ ಎಲ್ಲ ತೆರೆದು ಇಡುತ್ತಾ ಹೋಗುತ್ತಾಳೆ. ಗಂಡ ತಾನೊಬ್ಬ ಮೂರ್ಖಳೆಂಬಂತೆ ಮಾತಾಡಿ ಮನಸ್ಸು ಕುಗ್ಗಿಸಿದ್ದಾನೆ. ಇಲ್ಲಿ ಈ ಗೆಳತಿ, ಅದಕ್ಕೆಲ್ಲ ಬಹು ದೊಡ್ಡ ಅರ್ಥವಿದೆ ಎಂಬಂತೆ ಮಾತಾಡುತ್ತಿದ್ದಾಳೆ. ತಾಸು, ಅರ್ಧ ತಾಸಿನ ಮಾತಿನಲ್ಲಿ ಎಲ್ಲಿಯೋ ಒಂದು ಪರಿಹಾರದ ಎಳೆ. ಅದು ದೊರೆತು ಸಮಾಧಾನ ಆಗಬೇಕಾದರೆ, ಇಡೀ ಮಾತು ಕಾಲದ ಪರಿವೆ ಇಲ್ಲದೆಯೇ ಸಾಗಬೇಕು.

ಸಮಸ್ಯೆಯಲ್ಲ. ಹಾಗೆಂದು ಸುಮ್ಮನೆ ಇರಲು ತಾಯಿ ಜೀವ ಸಮ್ಮತಿಸುವುದಿಲ್ಲ. ನಿಮ್ಮನ್ನು ಕೇಳಿದರೆ 'ಸೊಳ್ಳೆಗಿಳ್ಳೆ ಕಚ್ಚಿರಬೇಕು ಬಿಡು' ಎಂದು ಉಡಾಫೆಯಿಂದ ತಳ್ಳಿ ಹಾಕುತ್ತೀರ. ಅದೇ ನೆರೆಮನೆಯಾಕೆ, ಆಕೆ ಇಂಥದ್ದೆಲ್ಲ ಅನುಭವಿಸಿ ಈಕೆಗಿಂತ ನುರಿತವಳು 'ನಮ್ಮ ಮಗೂಗೂ ಹೀಗೇ ಆಗಿತ್ತೂರೀ...' ಎಂದು ಆರಂಭಿಸಿ, ತಾನು ಅನುಭವಿಸಿದ ಧಾವಂತ, ಚಡಪಡಿಕೆ ಎಲ್ಲ ತೆರೆದು ಇಡುತ್ತಾ ಹೋಗುತ್ತಾಳೆ. ಗಂಡ ತಾನೊಬ್ಬ ಮೂರ್ಖಳೆಂಬಂತೆ ಮಾತಾಡಿ ಮನಸ್ಸು ಕುಗ್ಗಿಸಿದ್ದಾನೆ. ಇಲ್ಲಿ ಈ ಗೆಳತಿ, ಅದಕ್ಕೆಲ್ಲ ಬಹು ದೊಡ್ಡ ಅರ್ಥವಿದೆ ಎಂಬಂತೆ ಮಾತಾಡುತ್ತಿದ್ದಾಳೆ. ತಾಸು, ಅರ್ಧ ತಾಸಿನ ಮಾತಿನಲ್ಲಿ ಎಲ್ಲಿಯೋ ಒಂದು ಪರಿಹಾರದ



ಎಳೆ. ಅದು ದೊರೆತು ಸಮಾಧಾನ ಆಗಬೇಕಾದರೆ, ಇಡೀ ಮಾತು ಕಾಲದ ಪರಿವೆ ಇಲ್ಲದೆಯೇ ಸಾಗಬೇಕು. ಆಗ ಆಕೆಗೊಂದು ಸಮಾಧಾನ.

ಇದು ಗಂಡನಾದವನು ಅರಿಯಬೇಕು. ಗಂಡಿನ ಲೋಕ ಬೇರೆ. ಆತ ಎದುರಿನವರ ಮಾತಿಗಿಳಿದ ಕೂಡಲೇ ನೇರ ವಿಷಯಕ್ಕೆ ಬರಬಲ್ಲ. ಹಾಗೇ ವಿಷಯ ಪ್ರಸ್ತಾಪನೆ ಆದ ನಂತರ, ಅಷ್ಟೇ ಸಲೀಸಾಗಿ ಮಾತು ಮುಗಿಸಬಲ್ಲ. ಹೆಣ್ಣು ಹಾಗಲ್ಲ. ಇಲ್ಲಿ ಮಾತು ಕೇವಲ ವ್ಯವಹಾರದ ಸಂಬಂಧವಲ್ಲ. ಅದೊಂದು ಆತ್ಮೀಯ ಲೋಕದ, ನೆಮ್ಮದಿ ಮೂಡಿಸುವ ಮಾಧ್ಯಮ. ಆಕೆಗೆ ಸಂಕೋಚವಿದೆ. ತಾನು ಪ್ರಸ್ತಾಪಿಸುವ ವಿಷಯದ ಅಳುಕಿದೆ. ವಿಷಯ ಪ್ರಸ್ತಾಪಿಸಿ ಮಾತು ಮುಗಿಸಿದರೆ, ತಾನು ತೀರಾ ವ್ಯವಹಾರಿಕ, ಸ್ವಾರ್ಥ ಬುದ್ಧಿಯ ಹೆಂಗಸಾಗಿಬಿಟ್ಟೇನೆಂಬ ಆತಂಕವಿದೆ. ಗಂಡು ಇದನ್ನು ಅರಿಯುವುದಿಲ್ಲ. ಆತನದೇನಿದ್ದರೂ ಒಂದೆರಡು ಮಾತಿನ, ಒರಟು ಸಂವಾದ. ಅಲ್ಲಿ ಬಾಯಿಬಿಡಲು ಹೆಂಡತಿ ಹಿಂಜರಿಯುತ್ತಾಳೆ. ಇಬ್ಬರ ನಡುವೆ ಒಂದು ಕಂದಕ ಮೂಡುತ್ತದೆ.

ಇನ್ನೊಂದು, ಗಂಡ ದಿನದ ದುಡಿಮೆ ಮುಗಿಸಿ ಮನೆಗೆ ಬರುತ್ತಾನೆ. ಈಗೀಗ ಹೆಣ್ಣು ಅದೇ ಕೆಲಸ ಮಾಡುತ್ತಾ ಇದ್ದಾಳೆ. ಆದರೂ ಗಂಡಿಗೆ ತಾನು ಮಾಡುವ ಕೆಲಸ ಮಾತ್ರ ಶ್ರಮದಾಯಕ ಎಂಬ ಭ್ರಮೆ. ಮನೆಗೆ ಬಂದವನೇ ಕಾಲು ಚಾಚಿ ಟಿವಿ ನೋಡಲೋ, ಪೇಪರು ಓದಲೋ ಬಯಸುತ್ತಾನೆ. ಒಳಗೆ ಆಕೆ ಅಡುಗೆ ತಯಾರಿ ನಡೆಸಿರುತ್ತಾಳೆ. ಆಕೆಯೂ ದಿನವೆಲ್ಲ ಮನೆಯ ಒಳಗೋ, ಹೊರಗೋ ದುಡಿದವಳು ಎಂದು ತಪ್ಪಿಯೂ ಗಂಡಸು ಯೋಚಿಸುವುದಿಲ್ಲ. ಗಂಡ, ಹೆಂಡತಿ ಬೇರೆ ಬೇರೆಯ ಜಗತ್ತು ಸೃಷ್ಟಿಸಿಕೊಳ್ಳುತ್ತಾರೆ. ರಾತ್ರಿ ಮಲಗುವಾಗಲೂ ವಿರುದ್ಧ ದಿಕ್ಕಿಗೆ ಮುಖ ಮಾಡಿ ಮಲಗುತ್ತಾರೆ. ಗಂಡನ್ನ ಕೇಳಿದರೆ 'ದಿನವಿಡೀ ದುಡಿದು ಸುಸ್ತಾಗಿ ಬಂದಿರುತ್ತೇನೆ. ದಿಂಬಿಗೆ ತಲೆ ಕೊಟ್ಟರೆ ಸಾಕು ಅನಿಸುತ್ತಿರುತ್ತದೆ. ಅಷ್ಟಕ್ಕೂ ಹೆಂಡತಿಯ ಜೊತೆ ಮಾತಾಡುವಂಥದ್ದಾದರೂ ಏನಿರುತ್ತದೆ ಹೇಳಿ!' ಎನ್ನುತ್ತಾನೆ.

ಇಂಥದ್ದಕ್ಕೆ ವ್ಯತಿರಿಕ್ತ ಬಸವರಾಜ್, ಸುನೀತಾ. ಆತ ವಕೀಲ. ಆಕೆ ಸಾರ್ವಜನಿಕ ಉದ್ದಿಮೆ ಒಂದರಲ್ಲಿ ಲೆಕ್ಕಾಧಿಕಾರಿ. ಮೊಕದ್ದಮೆಗಳ ಕಡತದ ನಡುವೆ ಮಾನವೀಯ ಸಂಗತಿಯೊಂದು ಇರುತ್ತದೆ ಬಸವರಾಜ್‌ಗೆ. ಹಾಗೇ ಲೆಕ್ಕದ ನಿರ್ಜೀವ ಅಂಕಿ ಸಂಖ್ಯೆಗಳ ನಡುವೆಯೂ ಒಂದು ಕತೆ ಇರುತ್ತದೆ. ಬೇಗ ಮನೆಗೆ ಬರುವ ಸುನೀತಾ. ಗಂಡನೊಡನೆ ಮಾತಿಗೆ ಕಾತರಿಸುತ್ತಾಳೆ. ಹಾಗೇ ಆತ ಕೂಡಾ ಮನೆಗೆ ಬಂದವನು ಅಂಗಿ ಬಿಚ್ಚಿ, ನಿರಾಳವಾಗಿ, ಮುಖ ಕೈಕಾಲು ತೊಳೆದು ಕಾಫಿಗಾಗಿ ಕೈಚಾಚುವಾಗ 'ಇವತ್ತು ಏನಾಯ್ತು ಗೊತ್ತಾ?' ಎಂಬಂಥ ಭಾವ ಇರುತ್ತದೆ ಕಣ್ಣಲ್ಲಿ. ಅಥವಾ ಹಾಗೆ ಮಾತಿಗೊಂದು ನೆವ ಬೇಕು ಅಂತಲೂ ಇಲ್ಲ. 'ಇವತ್ತು ನೀನು ಜಡೆ ಹಾಕ್ಕೊಳ್ಳೋ ಬದಲು ತುರುಬು ಕಟ್ಟಕೊಂಡಿದ್ದರೆ ಚೆನ್ನಾಗಿರೋದು' ಅನ್ನುವಂಥ ಮಾತೇ ಇರಬಹುದು.

'ಬೆಳಿಗ್ಗೇನೆ ಯಾಕೆ ಹೇಳಲಿಲ್ಲ?'

'ಹೊರಟ ಗಳಿಗೇಲಿ ಹಾಗನ್ನಸಿತು. ನಿನಗೆ ಆಗಲೇ ಲೇಟ್ ಆಗಿತ್ತು ಸುನೀ...'

ತನ್ನ ಗಂಡ ಸದಾ ತನ್ನ ಬಗೆಗೆ ಕಾಳಜಿ ವಹಿಸುತ್ತಾನೆ. ಇಷ್ಟ, ಅಣಿಷ್ಟಗಳನ್ನು ಬಾಯಿ ಬಿಟ್ಟು ಹೇಳುತ್ತಾನೆ ಎಂಬುದೇ ಆಕೆಗೆ ನೆಮ್ಮದಿಯ ಸಂಗತಿ. ಆಕೆಗೂ ಇಂಥ ವ್ಯಕ್ತಿಯೊಡನೆ ಅಳುಕಿಲ್ಲದೇ, ಏನೆಂದು ಕೊಳ್ಳಬಹುದೋ ಎಂಬ ಧಾವಂತವಿಲ್ಲದೇ ಮಾತು ತೆರೆದುಕೊಳ್ಳಬಹುದು. ನಿಜಕ್ಕೂ ನೋಡಿದರೆ ಅವರೇನೂ ತಲೆಹೋಗುವಂಥ ಗಂಭೀರ ಸಮಸ್ಯೆಗಳ ಕುರಿತು ಚರ್ಚಿಸುವುದಿಲ್ಲ. ಆದರೆ ಅವರ ಸಣ್ಣ ಪುಟ್ಟ ಒಣ ಮಾತುಗಳೇ ಸಂಸಾರದ ದೋಣಿ ಸುಗಮವಾಗಿ ಸಾಗಲು ಸಹಕಾರಿ.


ರಾಮಮೂರ್ತಿಗೆ ಸೆಕ್ರೆಟರಿಯೇಟ್‌ನಲ್ಲಿ ಉದ್ಯೋಗ. ರಾಜಕೀಯ, ಸಾಮಾಜಿಕ ಆಗುಹೋಗುಗಳ ಬಗ್ಗೆ ಆಸಕ್ತಿ. ಬೆಳಿಗ್ಗೆ ದಿನಾ ಬಸ್ಸಿನಲ್ಲಿ ಹೋಗುವಾಗ ಜೊತೆಯಾಗುವ ಸಹೋದ್ಯೋಗಿ ಶ್ರೀನಿವಾಸ್ ಜೊತೆ ಅವರ ಮಾತು ಬಿಚ್ಚಿಕೊಳ್ಳುವುದೇ, ಅವತ್ತಿನ ಪೇಪರ್ ಸುದ್ದಿಯಿಂದ. ಭ್ರಷ್ಟಾಚಾರ, ಸ್ವದೇಶೀ, ವಿದೇಶೀ, ಹೀಗೆ ನಾನಾ ವಿಷಯಗಳ ಚರ್ಚೆ ಆಗುತ್ತದೆ. ಎಷ್ಟೋ ಸಲ ದೊಡ್ಡ ವಿವಾದವೇ ಆಗುವುದುಂಟು. ಆದರೆ ಸಂಜೆ ಮನೆಗೆ ಬಂದರೆ ಅವರು ಧಾವಿಸುವುದು ಟಿವಿಯತ್ತ. ಅಲ್ಲಿ ಬರುವ ನ್ಯೂಸ್, ವಿಶ್ಲೇಷಣೆ, ಇಡೀ ಪ್ರಪಂಚದ ಆಗುಹೋಗು ಕುರಿತೇ ತೀವ್ರ ಆಸಕ್ತಿ. ಅವರ ಹೆಂಡತಿ ಸಾವಿತ್ರಮ್ಮನಿಗೆ ಇದ್ಯಾವುದರಲ್ಲೂ ಆಸಕ್ತಿ ಇಲ್ಲ. ಮಕ್ಕಳು, ಮರಿ, ನೆಂಟರು ಎಂದು ಒದ್ದಾಡುವ ಜೀವ. ಗಂಡ ದೊಡ್ಡವರು, ತಿಳಿದವರು. ತನ್ನಂಥವಳ ಜೊತೆ ಮಾತುಕತೆ ಆಡುವುದು ಏನಿರುತ್ತದೆ? ಎಂದು ಆಕೆಯೂ ಭಾವಿಸುತ್ತಾರೆ. ಆದರೆ ಮೊನ್ನೆ ಮೊನ್ನೆ ಆದದ್ದು ನೋಡಿ. ಊರಿಂದ ಅಪರೂಪಕ್ಕೆ ನೆಂಟರು ಬಂದಿದ್ದರು. ಎಲ್ಲರೂ ಖುಷಿಯಿಂದ ಹೊರಗೆ ವರಾಂಡದಲ್ಲಿ ಹರಟುತ್ತಾ ಕೂತಿದ್ದರೆ, ರಾಮಯ್ಯನವರು ಒಳಗೇ, ಟಿವಿ ಮುಂದೆ ತಪಸ್ಸು ಮಾಡುವವರಂತೆ ಪಟ್ಟು ಹಿಡಿದು ಕೂತವರು ಅಲುಗಾಡಲೇ ಇಲ್ಲ.

'ನನ್ನ ಜೊತೆ ಮಾತಾಡದೆ ಇದ್ದರೆ ಪರವಾ ಇಲ್ಲ. ಬಂದವರ ಜೊತೆ ನಾಲ್ಕು ಮಾತಾಡಬಾರದಿತ್ತೇ?' ಆಗಲೂ ಆ ಟಿವಿಯ ಮುಂದೇ ಕುಳಿತು ತಪಸ್ಸು ಮಾಡಬೇಕೇ?' ಬಂದವರ ಜೊತೆ ಮಕ್ಕಳೆಲ್ಲ ನಲಿಯುತ್ತಾ ಇರುವಾಗ ಅದನ್ನು ನೋಡಿ ಸಂತೋಷ ಪಡುವ ಮನಸ್ಸು ಅವರಿಗೆ ಇಲ್ಲವಲ್ಲ ! ಎಂಬುದೇ ಬೇಜಾರು' ಅನ್ನುತ್ತಾರೆ ಸಾವಿತ್ರಮ್ಮ.

ಗಂಡ, ಹೆಂಡತಿಯ ನಡುವೆ ಅನ್ಯೋನ್ಯತೆ ಮುಖ್ಯ. ಅದನ್ನು ಹೇಗೆ ಸಾಧಿಸುವುದು ಎಂಬುದು ಅವರವರಿಗೆ ಬಿಟ್ಟದ್ದು. ಇದು ಸಾಧಿಸಲು ಸಾಧ್ಯವಾಗದೇ ಹೆಣಗುವವರೇ ಹೆಚ್ಚು. ಪಂಕಜ ಮದುವೆ ಆದದ್ದು ಕಾರ್ಖಾನೆಯಲ್ಲಿ ದುಡಿಯುವ ಮೂರ್ತಿಯನ್ನು. ದಿನವಿಡೀ ಆತನಿಗೆ ಮೈ ಮುರಿಯುವಷ್ಟು ಕೆಲಸ. ಬೆಳಿಗ್ಗೆ ಎಂಟು ಗಂಟೆಗೆ ಮನೆ ಬಿಟ್ಟರೆ ಬರುವುದು ರಾತ್ರಿ ಎಂಟಕ್ಕೇ. ಮೈಯೆಲ್ಲ ಹಣ್ಣಾಗಿರುತ್ತದೆ. ಉಂಡು ಮಲಗಿದರೆ ಸಾಕು ಎಂಬಂಥ ಸ್ಥಿತಿ. ಹೋಗಲಿ, ಹಾಸಿಗೆಗೆ ತಲೆ ಕೊಟ್ಟ ಮೇಲಾದರೂ, ಒಂದು ಆತ್ಮೀಯ ಮಾತು ಆಡಬಾರದೇ! ಅದೂ ಇಲ್ಲ. ಇದೇ ಪಂಕಜಾನ ಕೊರಗು.

ಅದೇ ರಜನೀ, ರಮಾಕಾಂತರ ಜೋಡಿಯ ಕತೆ ಬೇರೆಯೇ. ಇಬ್ಬರೂ ಹೊರಗೆ ದುಡಿಯುತ್ತಾರೆ. ಮನೆಗೆ ಬಂದ ಮೇಲೆ ಕೆಲಸದ ಹೊರೆ. ಅದು ರಜನಿಗೆ ಚಿಂತೆಯಿಲ್ಲ. ಏಕೆಂದರೆ ಆಕೆಯ ಪತಿ ಸದಾ ಆಕೆಯ ಸುತ್ತಲೇ ಸುಳಿಯುತ್ತಾ, ಸಣ್ಣ ಪುಟ್ಟ ಸಹಾಯ ಮಾಡುತ್ತಾರೆ. ಹೀಗಾಗಿ ಆಕೆಗೆ ಮನೆಯ ಕೆಲಸ ಮಾಡುವುದು ದೊಡ್ಡ ಹೊರೆ ಎನ್ನಿಸುವುದೇ ಇಲ್ಲ. ಹಾಗೆಂದು ಆಕೆಯ ಪತಿ ಹೆಂಡತಿಯ ಗುಲಾಮನಂತೇನೂ ವರ್ತಿಸುವುದಿಲ್ಲ. ಇಬ್ಬರೂ ಆತ್ಮೀಯ ಸ್ನೇಹಿತರ ಹಾಗೆ, ಪರಸ್ಪರ ಅರ್ಥಮಾಡಿಕೊಂಡ ಟೀಂ ಒಂದರ ಇಬ್ಬರು ಆಟಗಾರರ ಹಾಗೆ ಸಂಸಾರ ನಡೆಸುತ್ತಾರೆ. ಹಾಗಾಗಿ ಅಲ್ಲಿ ಸುಖವಿದೆ. ನಗುವಿದೆ.

■ ಲಕ್ಷ್ಮೀ ಕೊಡದಗುಡ್ಡ



ದಕ್ಷಿಣ ಕೊರಿಯಾದಲ್ಲಿ ಸೋಲ್ ಸಮೀಪ ಬೌದ್ಧ ಸನ್ಯಾಸಿಯಿಂದ ಕೇಶ ಮುಂಡನ ವಿಧಿಯಲ್ಲಿ ಪಾಲ್ಗೊಂಡಿರುವ ಮಕ್ಕಳು

ವಿಚಿತ್ರ ಜಗತ್ತು



ಪೇಪರ್ ಕಾರ್ : ಜಪಾನಿನ ಉತ್ತರ ಪ್ರಾಂತ್ಯ ಐಟಿಯಲ್ಲಿ ವಿಶೇಷ ಬಗೆಯ ಕಾರು ತಯಾರಾಗಿದೆ. ವಿದ್ಯುತ್‌ನಿಂದ ಈ ಕಾರು ತಾಸಿಗೆ 125ಕಿ.ಮೀ. ಕ್ರಮಿಸಬಲ್ಲದು. ವಿಶೇಷವೆಂದರೆ ಇದರ ಕವಚ ಹ್ಯಾಂಡ್‌ಮೇಡ್ ಪೇಪರ್‌ನಿಂದ ತಯಾರಾಗಿದೆ. 2005ರಲ್ಲಿ ನಡೆಯುವ ಮೇಳ ಐಟಿಯಲ್ಲಿ ನಡೆಯಬೇಕೆಂದು ಬೇಡಿಕೆ ಇದೆ. ಆ ಬೇಡಿಕೆ ಸಮರ್ಥನೀಯ ಎಂದು ಸಾಧಿಸಿ ತೋರಿಸಲು ಜಪಾನೀಕುಳ್ಳರು ಮಾಡಿದ ಸಾಧನೆ ಇದು.

ಕಳೆದುದು ಸಿಕ್ಕಿದೆ : ಲಂಡನ್‌ನ ಸ್ಕಾಟ್ ಮೂಲದ ದಂಪತಿಗಳ ಕಳುವಾಗಿದ್ದ ಕಾರು ಪತ್ತೆಯಾಗಿದೆ. ನಮ್ಮ ಭಾರತೀಯ ಪೊಲೀಸರ ಹಾಗೇ, ಅಲ್ಲಿನ ಪೊಲೀಸರೂ ಕೇವಲ 25 ವರ್ಷದ ನಂತರ ಪತ್ತೆ ಮಾಡಿದ್ದಾರೆ. ಮಾರಿಸ್ ತಯಾರಿಕೆಯ ಈ ಕಾರು 1975ರಲ್ಲಿ ಕಳುವಾಗಿತ್ತು. ಇತ್ತೀಚೆಗೆ ಅದು ಗ್ಲಾಸ್ಗೋದ ಕಾಲುವೆ ಒಂದರ ತಳದಲ್ಲಿ ಪತ್ತೆ ಆಗಿದೆ. ವಾರ್ಡ್ ದಂಪತಿಗಳ ಕಾರು ಪತ್ತೆ ಬಗ್ಗೆ ತಿಳಿಸಿದಾಗ, ಶ್ರೀಮತಿ ವಾರ್ಡ್‌ಗೆ ನಂಬಿಕೆಯೇ ಆಗಲಿಲ್ಲ. ಸುದ್ದಿ ತಿಳಿದ ವಾರ್ಡ್ 'ಇಪ್ಪತ್ತೈದು ವರ್ಷ ನೀರಲ್ಲಿ ಮುಳುಗಿದ ಕಾರ್‌ನ ಪೇಂಟ್ ಹೇಗಾಗಿರಬಹುದು!' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಪತ್ತೆಯಾದದ್ದು ನಿಜವಾದ ಆಶ್ಚರ್ಯ ಆಗಿರುವಾಗ, ಬೇರೆ ಆಶ್ಚರ್ಯಗಳಿಗೆ ಇಲ್ಲಿ ಸ್ಥಾನವೇಇಲ್ಲ. ಪೊಲೀಸರ ವಿಚಾರಕ್ಕೆ ಬಂದರೆ ಭಾರತವೂ ಒಂದೇ, ಲಂಡನ್ನೂ ಒಂದೇ ಅಲ್ಲವೇ?

ಸಿಗರೇಟು ಬಿಡಿ ಬಹುಮಾನ ಪಡೆಯಿರಿ : ಇಂಥದೊಂದು ಆಹ್ವಾನ ಮೆಕ್ಸಿಕೋ ನಗರ ವಾಸಿಗಳನ್ನು ಕೆಣಕುತ್ತಿದೆ. ಮೇ ತಿಂಗಳ 2 ರಿಂದ 29ರವರೆಗೆ ಸಿಗರೇಟು ಬಿಡಬೇಕು. ಅಂಥ ವ್ಯಕ್ತಿಗೆ ಹದಿನೆಂಟು ವರ್ಷದ ಮೇಲಾಗಿರಬೇಕು. ಸತತ ಒಂದು ವರ್ಷವಾದರೂ ಸಿಗರೇಟು ಅಭ್ಯಾಸಕ್ಕೆ ಅಂಟಿದವರಾಗಿರಬೇಕು. ಗೆದ್ದ ವ್ಯಕ್ತಿಗೆ ಸುಮಾರು ಹನ್ನೊಂದು ಸಾವಿರ ಡಾಲರ್‌ನಷ್ಟು ಬಹುಮಾನವಂತೆ. ಸಿಗರೇಟು ಚಟ ಬಿಡಿಸಲು ಇಂಥದ್ದು ಅವಶ್ಯಕ ಎನ್ನುತ್ತಾರೆ ಸ್ಪರ್ಧೆ ಪ್ರಾಯೋಜಕರು ಆಯ್ಕೆ ಕ್ರಮ ಏನೆಂದು ಅವರ್‍ಯಾರೂ ಸ್ಪಷ್ಟಪಡಿಸಿಲ್ಲ.


ಸಾವಿನ ನಡುವೆ ಹುಟ್ಟು : ಕಳೆದ ಫೆಬ್ರವರಿಯಲ್ಲಿ ಮೊಝಾಂಬಿಕ್‌ನಲ್ಲಿ ಭಾರೀ ಪ್ರವಾಹ ಸುಮಾರು ಆರುನೂರು ಜನ ಸತ್ತರು. ಪ್ರವಾಹದಿಂದ ಪಾರಾಗಲು ಮರವೇರಿದ್ದ ಸೋಫಿಯಾ ಅಲ್ಲೇ ಹೆಣ್ಣು ಮಗುವಿಗೆ ಜನ್ಮವಿತ್ತಳು. ತಾಯಿ ಮಗುವನ್ನು ಮಾರ್ಚ್ 1 ರಂದು ಹೆಲಿಕಾಪ್ಟರ್ ಮೂಲಕ ಪಾರು ಮಾಡಲಾಯಿತು. ಪ್ರವಾಹದ ನಡುವೆ ಮರದ ಮೇಲೆ ಜನಿಸಿದ ಮಗುವಿಗೆ ರೋಸಿತಾ ಎಂದು ಹೆಸರಿಟ್ಟಿದ್ದು, ಜಗತ್ತಿನ ಎಲ್ಲೆಡೆಯಿಂದ ಆಕೆಗೆ ನೆರವು ಬರುತ್ತಿದೆ. ಮೊಝಾಂಬಿಕ್ ಅಧ್ಯಕ್ಷರೇ ಸ್ವತಃ ತಾಯಿ-ಮಗುವನ್ನು ಕಂಡು ಶುಭ ಹಾರೈಸಿದ್ದಾರೆ. ರೋಸಿತಾಳ 8 ದಿನ ಖರ್ಚು ಸರ್ಕಾರ ವಹಿಸಿಕೊಳ್ಳಲಿದೆ. ಹಾಗೇ ಆಕೆಗೆ ಕುಟುಂಬಕ್ಕೆ ಮನೆ ಕೂಡ ಕೊಡಲು ಮುಂದಾಗಿದೆ.

ಅರೆಬೆತ್ತಲೆ ಮತದಾನ : ಇಟಲಿಯಲ್ಲಿ ಇತ್ತೀಚೆಗೆ ಚುನಾವಣೆ ನಡೆಯಿತು. ತಮ್ಮ ಪರಿಸರಕ್ಕೆ ಹಾನಿ, ವಿಮಾನ ಹಾರಾಟದ ಸದಾ ಕಿರಿಕಿರಿ ಆ ಊರಲ್ಲಿ. ಇದನ್ನು ಪ್ರತಿಭಟಿಸಲು ಹೆಣ್ಣು, ಗಂಡು ಅರೆಬೆತ್ತಲಾಗಿ ಬಂದು ಮತದಾನ ಮಾಡಿದರು.

ಆಘಾತಗೊಂಡಂತೆ ಕಂಡ ಬೂತ್ ಅಧಿಕಾರಿಗಳು, ಮೊದಲು ಕಸಿವಿಸಿಪಟ್ಟಿದ್ದು, ನಿಜ. ಆಮೇಲೆ ಅವರಲ್ಲಿನ ರಸಿಕತೆ ಮೇಲುಗೈ ಪಡೆದು, ಅರೆಬೆತ್ತಲೆಯ ಪುಕ್ಕಟೆ ಪ್ರದರ್ಶನದಿಂದ ಮನರಂಜನೆಯನ್ನು ಪಡೆದರಂತೆ.

ಅಮೋನಿಯಾ ಸಿಗರೇಟು : ಅಮೇರಿಕಾದ ಕಂಪೆನಿಯೊಂದು ಹೊಸ ಬಗೆ ಸಿಗರೇಟು ತಯಾರಿಸಿದೆ. ಇದರಲ್ಲಿ ತಂಬಾಕಿಗೆ ಅಮೋನಿಯಾ ಲೇಪಿಸಲಾಗುತ್ತದೆ. ಪರಿಣಾಮ ಎಂದರೆ ಸಿಗರೇಟಿನ ನಿಕೋಟಿನ್ ಸುಲಭವಾಗಿ ದೇಹದೊಳಗೆ ಕರಗುತ್ತದೆ. ಅದರಿಂದ ಸಿಗರೇಟು ಸೇವನೆ ಇನ್ನಷ್ಟು ಗಾಢ ವ್ಯಸನ ಆಗಲಿದೆ ಎಂದು ಫ್ರಾನ್ಸ್‌ನ ಸಂಸ್ಥೆಯೊಂದು ಎಚ್ಚರಿಸಿದೆ.

ಸೀಸೆಯಲ್ಲಿ ಸಂದೇಶ : ಕಳೆದ ಕ್ರಿಸ್‌ಮಸ್‌ನಲ್ಲಿ ಮಲೇಶಿಯಾದ ಹನ್ನೆರಡು ವರ್ಷದ ಹುಡುಗನೊಬ್ಬ ಸೀಸೆಯಲ್ಲಿ ಸಂದೇಶವಿಟ್ಟು ಸಮುದ್ರಕ್ಕೆ ಎಸೆದಿದ್ದು ಅದೀಗ ಶ್ರೀಲಂಕಾದ ಮೀನುಗಾರನೊಬ್ಬನಿಗೆ ಸಿಕ್ಕಿದೆ. ಎರಡೂವರೆ ಸಾವಿರ ಕಿಲೋಮೀಟರ್ ಪ್ರಯಾಣಿಸಿರುವ ಈ ಸಂದೇಶಕ್ಕೆ ಉತ್ತರ ಕೂಡ ದೊರೆತಿದೆ. ಮಲೇಶಿಯಾದ ಹನ್ನೆರಡು ವರ್ಷದ ದಿನೇಶ್ವರನ್ ಕಳುಹಿಸಿದ್ದ ಸಂದೇಶಕ್ಕೆ ಪ್ರತಿಯಾಗಿ ಮೀನುಗಾರ ಮಣಿವಣ್ಣನ್ ಉತ್ತರ ಬರೆದಿದ್ದಾರೆ. ಉತ್ತರ ಕಳುಹಿಸುವಾಗ ಹುಡುಗ ಕಳುಹಿಸಿದ್ದ ಸಂದೇಶವನ್ನು ಜೊತೆಗೆ ಇರಿಸಲಾಯಿತು. ಸಂದೇಶ ಅಷ್ಟು ದೂರ ಪ್ರಯಾಣಿಸಬಹುದು ಎಂದಾಗಲೀ ಅದಕ್ಕೆ ಉತ್ತರ ದೊರೆಯಬಹುದು ಎಂದಾಗಲೀ ಯಾರೂ ನಿರೀಕ್ಷಿಸಿರಲಿಲ್ಲ.



ಕ್ರಿಕೆಟ್ ಜಗತ್ತಿನ ಮಹಾನ್ ತಾರೆ ಸ್ಟೀವ್ ವಾ ಕಲ್ಕತ್ತಾ ಸಮೀಪದ ಬ್ಯಾರಕ್‌ಪುರದಲ್ಲಿ ಕುಷ್ಠರೋಗ ಪೀಡಿತ ಹೆಣ್ಣು ಮಕ್ಕಳಿಗಾಗಿ ಆಶ್ರಮವೊಂದನ್ನು ಉದ್ಘಾಟಿಸಲು ಬಂದಿದ್ದಾಗ ದೊರೆತ ಹೃದಯಸ್ಪರ್ಶಿ ಸ್ವಾಗತ.



ಕಾಶ್ಮೀರ: ನ್ಯಾಯ ಎಲ್ಲಿದೆ?

ಒಂದು ಕಾಲಕ್ಕೆ ಸ್ವರ್ಗ ಸೀಮೆ ಎನಿಸಿದ್ದ ಕಾಶ್ಮೀರ ಇಂದು ನರಕ ಸದೃಶ. ಕಳೆದ ಎರಡು ದಶಕಗಳಿಂದ ತೀವ್ರವಾಗಿರುವ ಭಯೋತ್ಪಾದನೆ ಇಲ್ಲಿನ ಜನರ ಜೀವನವನ್ನು ತಲ್ಲಣಗೊಳಿಸಿದೆ. ಸಾವಿರಾರು ಜನ ಮನೆ ಬಿಟ್ಟು ಹೋಗಿದ್ದಾರೆ. ಯಾವ ಕ್ಷಣ ಏನಾದೀತೊ? ಎಂಬ ಆತಂಕದಲ್ಲಿ ಉಳಿದವರು ದಿನ ಕಳೆಯುತ್ತಾ ಇದ್ದಾರೆ. ಇಷ್ಟಾದರೂ ಇಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಎಂಬುದೇ ಇಲ್ಲ ಎಂಬಂಥ ಸ್ಥಿತಿ ಮೂಡಿದೆ. ಸರಕಾರ ಇದ್ದೂ ಇಲ್ಲವಾಗಿದೆ. ನ್ಯಾಯಾಲಯಗಳು ಕಾರ್ಯನಿರ್ವಹಿಸುವುದೇ ಕಷ್ಟ. ವಕೀಲರು, ನ್ಯಾಯಾಧೀಶರು ಭಯದ ನೆರಳಲ್ಲಿ ಬದುಕುತ್ತಿದ್ದಾರೆ. ಇಂಥ ಕಡೆ ನ್ಯಾಯ ದೊರಕುವುದು ಸಾಧ್ಯವೇ?

ಕಾಶ್ಮೀರ ಎಂದರೆ ನೆನಪಾಗುತ್ತಾ ಇದ್ದುದು ಕಾಳಿದಾಸ ಬಣ್ಣಿಸಿದ್ದ ಕೇಸರಿ ಹೊಲಗಳು, ಸೇಬು ಮಾಗಿ ತೊನೆದಾಡುವ ಮರಗಳು, ಕಲಾವಿದರು ಚಿತ್ರಿಸಿದ ದಾಲ್ ಸರೋವರದ ದೋಣಿ ಮನೆಗಳು ಹಾಗೂ ಚೆಲುವಾದ ಕಾಶ್ಮೀರದ ಹೆಣ್ಣುಗಳು.

ಅದೊಂದು ಸ್ವರ್ಗಸೀಮೆ. ಬದುಕಲ್ಲಿ ಒಮ್ಮೆಯಾದರೂ ನೋಡಲೇಬೇಕು ಎಂಬ ಆಕಾಂಕ್ಷೆ ಹುಟ್ಟಿಸುತ್ತಿದ್ದ ಹಿಮಾಲಯದ ಪರ್ವತಾವಳಿಯ ನಾಡು. ಇಂದು ಅದು ನರಕವಾದ ಸ್ವರ್ಗ.


ಅಲ್ಲಿ ಇತ್ತೀಚೆಗೆ ಹರಿದಷ್ಟು ರಕ್ತ, ಹೊಸಕಿ ಹಾಕಿದ ಬದುಕುಗಳಿಗೆ ಲೆಕ್ಕವಿಲ್ಲ. ಆಗ ಜಗತ್ತಿಗೆ ಕಣ್ಣು ಬಿಡುತ್ತಿರುವ ಮಗುವಿಗೆ ಬಂದೂಕಿನ ಗುಂಡಿನ ಜೋಗುಳ. ಉಳಿದವರ ಎದೆ ತುಂಬ ಬತ್ತಿದ ಭಯ. ಯಾವ ಗಳಿಗೆಗೆ ಬದುಕು ಮುಗೀದೀತೋ ಎಂಬ ಅನಿಶ್ಚಯ.

ರಾಜಧಾನಿ ಶ್ರೀನಗರದ ಬೀದಿಗಳಲ್ಲಿ ಹಾಳು ಸುರಿಯುವ ಮೌನ. ಸಂಜೆಯಾಗುತ್ತಿದ್ದಂತೆ ಇರುವ ಚೂರುಪಾರು ಜೀವನವೂ, ಮಾಯಾದಂಡದ ಮೋಡಿಗೆ ಒಳಗಾದಂತೆ ಮುದುಡಿಬಿಡುತ್ತದೆ. ಶಾಪಗ್ರಸ್ತ ನಗರದ ಹಾಗೆ ಎಲ್ಲ. ರಾತ್ರಿಯಾದರೆ ಅಲ್ಲಿ ಸಂತಸದಿಂದ ಹುಡುಗರು, ಪ್ರವಾಸಿಗಳಿಂದ ತುಂಬಿರುತ್ತಾ ಇದ್ದ ಹೋಟೆಲುಗಳಿಲ್ಲ. ಸಂಗೀತ, ಮದ್ಯ, ಮನರಂಜನೆ ಎಲ್ಲಕ್ಕೂ ಅಲ್ಲಿ ಪ್ರತಿಬಂಧವಿದೆ. ಕತ್ತಲು, ಮೌನದ ನಡುವೆ ಭದ್ರತಾ ಪಡೆಯ ಸೈನಿಕರನ್ನು ತುಂಬಿಕೊಂಡ ಟ್ರಕ್ಕುಗಳು ರಕ್ಕಸ ವೇಗದಿಂದ ಗಸ್ತು ತಿರುಗುತ್ತವೆ. ಇದ್ದಕ್ಕಿದ್ದ ಹಾಗೆ ಭೀಕರ ಗುಂಡಿನ ಸದ್ದು. ಚೀತ್ಕಾರ. ಕೆಲವೊಮ್ಮೆ ರಾತ್ರಿಯಿಡೀ ಮುಂದುವರಿಯುವ ಗುಂಡಿನ ಕಾಳಗ.

ಬೆಳಗಾದರೆ ಮಕ್ಕಳು ಶಾಲೆಗೆ ಧಾವಿಸುವ ತರಾತುರಿ ಇಲ್ಲ. ಏಕೆಂದರೆ ಅಲ್ಲಿ ಶಾಲೆಗಳೇ ಇಲ್ಲ. ಶಾಲೆಗಳಿದ್ದರೂ ಮುರಿದುಬಿದ್ದಿವೆ. ಇಲ್ಲ, ಅಲ್ಲಿ ಪಾಠ ಹೇಳುತ್ತಿದ್ದ ಶಿಕ್ಷಕರು ಊರು ತೊರೆದಿದ್ದಾರೆ. ತಲೆಮಾರುಗಳಿಂದ ಪಾಠ ಹೇಳುವುದೇ ಕಸುಬಾಗಿದ್ದ ಪಂಡಿತರು ಈಗಲ್ಲಿ ಹುಡುಕಿದರೂ ಸಿಗುವುದಿಲ್ಲ. ಕೆಲವರನ್ನು ಸಾಮೂಹಿಕವಾಗಿ ಕೊಂದು ಹಾಕಲಾಗಿದೆ. ಜೀವ ಉಳಿಸಿಕೊಂಡವರು ಜಮ್ಮುವಿನ ಹೊರವಲಯದ ಶಿಬಿರಗಳಲ್ಲಿ ವಸತಿ ಹೂಡಿದ್ದಾರೆ.

ಸರ್ಕಾರಿ ಕಚೇರಿಗಳು ಇವೆ ಎಂದರೆ ಇವೆ. ಇಲ್ಲ ಎಂದರೆ ಇಲ್ಲ. ಇಲ್ಲಿ ಆಡಳಿತ ಇದೆ ಎಂದರೆ ಇದೆ ಎಂದು ಒಪ್ಪಿಕೊಳ್ಳುವ ಜನ ಬುದ್ಧಿಗೇಡಿಗಳು

ಅಥವಾ ಆಡಳಿತ ಪಕ್ಷದಲ್ಲಿ ಇರುವವರು ಮಾತ್ರ. ಇಲ್ಲಿಗೊಬ್ಬ ಅರಿವುಗೇಡಿ ಮುಖ್ಯಮಂತ್ರಿ. ಆತನ ಹೆಸರು ಡಾ.ಫಾರೂಕ್ ಅಬ್ದುಲ್ಲಾ. ವೈದ್ಯಕೀಯದಲ್ಲಿ ಡಿಗ್ರಿ ಪಡೆದರೂ, ಆತನೆಂದೂ ಯಾವ ರೋಗಿಗೂ ಮದ್ದು ನೀಡಿದ ಉದಾಹರಣೆ ಇಲ್ಲ. ಇವತ್ತು ಕಾಶ್ಮೀರದ ರೋಗಕ್ಕೂ ಆತನಿಂದ ಮದ್ದು ದೊರೆಯುವುದು ಅಸಾಧ್ಯ. ಅಧಿಕಾರ ಇದ್ದಾಗ ದೆಹಲಿಯಲ್ಲಿ, ಇಲ್ಲದಾಗ ಲಂಡನ್‌ನಲ್ಲಿ ಮೋಜು ಮಜಾ ಮಾಡುತ್ತಾ ಕಾಲ ಕಳೆಯುತ್ತಾನೆ.



ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ

ಮೊನ್ನೆ ಕ್ಲಿಂಟನ್ ಭಾರತಕ್ಕೆ ಭೇಟಿ ನೀಡಿದ್ದ. ಆ ಸಮಯದಲ್ಲೇ ಚಟ್ಟಿಸಿಂಗ್‌ಪುರಾದಲ್ಲಿ ಹಾಡು ಹಗಲೇ ಮೂವತ್ತೈದು ಸಿಖ್ಖರ ನರಮೇಧ ನಡೆಯಿತು. ಮನೆಯ ಗಂಡಸರನ್ನು ಎಳೆದು ತಂದು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿ ಕೊಲ್ಲಲಾಯಿತು. ಆ ಸಮಯದಲ್ಲಿ ಈ ರಾಜ್ಯದ ಮುಖ್ಯಮಂತ್ರಿ ದೆಹಲಿಯಲ್ಲಿ ಇದ್ದ. ಮರುದಿನ ಮುಂಜಾನೆ ಅಮೇರಿಕಾದ ಅಧ್ಯಕ್ಷನ ಜೊತೆ ಉಪಹಾರ ಸ್ವೀಕರಿಸಲು ಸಜ್ಜಾಗುತ್ತಿದ್ದ.

ಶ್ರೀನಗರದಿಂದ ನಿಮಿಷ ನಿಮಿಷಕ್ಕೂ ನರಮೇಧದ ವಿವರಗಳು ಆತನಿಗೆ ತಲುಪುತ್ತಿದ್ದವು. ಆದರೂ ಆತ ತುಟಿಪಿಟಿಕ್ಕೆನ್ನದೇ ದೆಹಲಿಯಲ್ಲಿ ಕಾಲೂರಿ ನಿಂತುಬಿಟ್ಟಿದ್ದ. ಇಡೀ ಜಗತ್ತು ತಲ್ಲಣದಿಂದ ಪ್ರತಿಕ್ರಿಯಿಸುತ್ತಾ ಇದ್ದಾಗಲೂ ಆತನಿಗೇನೂ ಅನ್ನಿಸಲಿಲ್ಲ.

ಮರುದಿನ ಮುಂಜಾನೆ ಉಪಾಹಾರ. ಶ್ರೀನಗರದಲ್ಲಿ ಅಧಿಕಾರಿಗಳು ಬೇಸತ್ತು ಹೋಗಿದ್ದರು. ಈ ಮನುಷ್ಯನಂತೂ ತಾನಾಗಿ ಬರುವುದಿಲ್ಲ ಎಂಬುದು ಖಚಿತವಾಗಿತ್ತು. ''ನೀವು ಇಲ್ಲಿಗೆ ಈ ಕೂಡಲೇ ಹೊರಟು ಬರಬೇಕು'' ಎಂಬ ಸಂದೇಶ ರವಾನಿಸಲಾಯಿತು. ಅದನ್ನು ದೆಹಲಿಯ ಅಧಿಕಾರಿಗಳು ಆ ಮಹಾನುಭಾವನಿಗೆ ತಲುಪಿಸಿದಾಗ, ಕ್ಲಿಂಟನ್ ಆಪ್ತ ವಲಯದ ಅತಿಥಿಗಳ ನಡುವೆ ಆಸೀನನಾಗಿದ್ದ. ತಾನೀಗ ನಡುವೆ ಎದ್ದು ಹೊರಟರೆ ಅಪಚಾರ ಆದೀತೇ ಎಂಬ ಆತಂಕ. ಆಚೀಚಿನವರ ಜೊತೆ ಪಿಸುಮಾತಲ್ಲಿ ವಿಚಾರಿಸುವಾಗ, ಕ್ಲಿಂಟನ್ ಕಿವಿಗೂ ಅದು ಬಿದ್ದು,

''ಔಪಚಾರಿಕತೆ ಇರಲಿ, ನೀವೀಗ ಬರಬೇಕಾದ್ದು ಅಲ್ಲಿ. ಮೊದಲು ಹೊರಡಿ'' ಎಂದ ಮೇಲೆಯೇ ಆತ ಎದ್ದು ಹೊರಟದ್ದು.

ತನ್ನ ರಾಜ್ಯದ ಮೂವತ್ತೈದು ಕುಟುಂಬಗಳ ಸಾವು, ನೋವು, ಭವಿಷ್ಯಕ್ಕಿಂತ ''ಕ್ಲಿಂಟನ್ ಏನೆಂದುಕೊಳ್ಳಬಹುದು!'' ಎಂಬುದೇ ಆತನ ಬಹು ದೊಡ್ಡ ಕಾಳಜಿ ಆಗಿತ್ತು. ಇಂಥವನ ರಾಜ್ಯದಲ್ಲಿ ಪ್ರಜೆಗಳು ನೆಮ್ಮದಿಯಿಂದ ಇರುವುದು ಸಾಧ್ಯವೇ!.

ಕಳೆದ ಹತ್ತು ವರ್ಷಗಳಲ್ಲಿ ಇಲ್ಲಿ 23,562 ಜನ ಹತರಾಗಿದ್ದಾರೆ. ಹತರಾದ ಉಗ್ರಗಾಮಿಗಳ ಸಂಖ್ಯೆಯೇ 10,816. ಭದ್ರತಾ ಪಡೆಗಳಿಗೆ ಸೇರಿದ 2,085 ಜನ ಸತ್ತಿದ್ದಾರೆ. 8,037 ಜನ ನಾಗರಿಕರನ್ನು ಉಗ್ರಗಾಮಿಗಳು ಕೊಂದಿದ್ದಾರೆ. ಉಗ್ರಗಾಮಿಗಳು ಮತ್ತು ಭದ್ರತಾಪಡೆಗಳ ಘರ್ಷಣೆಯ ನಡುವೆ ಸಿಕ್ಕು 2,624 ಜನ ಅಮಾಯಕ ನಾಗರಿಕರು ಅಸು ನೀಗಿದ್ದಾರೆ.

ಜೀವ ಹರಣ ಇಲ್ಲಿ ಸಾವಿರ ಲೆಕ್ಕದಲ್ಲಿಯೇ, ವಿಚಿತ್ರವೆಂದರೆ ಈ ಹತ್ತು ವರ್ಷಗಳಲ್ಲಿ ಒಬ್ಬನೇ ಒಬ್ಬ ಉಗ್ರಗಾಮಿಗೂ ಇಲ್ಲಿನ ಯಾವುದೇ ನ್ಯಾಯಾಲಯ ಸಣ್ಣದೊಂದು ಶಿಕ್ಷೆಯನ್ನು ವಿಧಿಸಿಲ್ಲ.

ಭಯೋತ್ಪಾದನೆ ಆರೋಪದ ಮೇಲೆ ಕಳೆದ ಹತ್ತು ವರ್ಷಗಳಲ್ಲಿ 34ಸಾವಿರಕ್ಕೂ ಹೆಚ್ಚು ಜನ ಬಂಧಿತರಾಗಿದ್ದಾರೆ. ಇವರಲ್ಲಿ ಈಗ ಜೈಲಲ್ಲಿ ಇರುವವರು 675 ಜನ ಮಾತ್ರ. ಉಳಿದವರನ್ನು ಪ್ರಾಥಮಿಕ ವಿಚಾರಣೆ ನಂತರ ಬಿಡುಗಡೆ ಮಾಡಲಾಗಿದೆ. ಅಥವಾ ಆಗಾಗ ಸಭೆ ಸೇರುವ ಸ್ಕ್ರೀನಿಂಗ್ ಕಮಿಟಿ ಬಿಡುಗಡೆಗೊಳಿಸಿದೆ. ಜೈಲಲ್ಲಿ ಇರುವ ವಿಚಾರಣಾಧೀನ ಕೈದಿಗಳ ವಿರುದ್ಧ ಮೊಕದ್ದಮೆಗಳು ನಡೆಯುತ್ತವೆ. ಅವರು ನಡೆಸಿದ ಹತ್ಯೆ, ಸುಲಿಗೆ, ಅಪಹರಣ ಕಣ್ಣಾರೆ ಕಂಡವರಿಲ್ಲ. ಕಂಡವರೂ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವುದಿಲ್ಲ. ಅಕಸ್ಮಾತ್ ಹೇಳಿದರೆ ಅವರ ಕತೆ ಮುಗಿದಂತೆಯೇ. ಕಂಡೂ ಕಂಡು ಸೆರಗಲ್ಲಿ ಕೆಂಡ ಕಟ್ಟಿಕೊಳ್ಳಲು ಯಾರು ಮುಂದಾಗುತ್ತಾರೆ!

ಇದರಲ್ಲಿ ಸರ್ಕಾರದ ಪರ ವಕೀಲರೇ ಇಲ್ಲಿ ಇಲ್ಲ. ಇದ್ದವರು ಕೇಸು ನಡೆಸಲು ಹಿಂಜರಿಯುತ್ತಾರೆ. ಇವತ್ತು ಅಲ್ಲಿನ ಉಗ್ರಗಾಮಿಗಳ ವಿರುದ್ಧ ಬಿರಳೆತ್ತಿ ತೋರಿದರೆ, ನಾಳೆ ಏನಾಗುತ್ತದೆ ಎಂಬುದು ಸ್ಪಷ್ಟ.

ಬಹಳಷ್ಟು ಪ್ರಕರಣಗಳಲ್ಲಿ ಹತ್ಯೆ ಸ್ಥಳದಲ್ಲಿ ದೊರೆತ ಗುಂಡುಗಳನ್ನು ವೈಜ್ಞಾನಿಕವಾಗಿ ಪರೀಕ್ಷೆಗೆ ಒಳಪಡಿಸಿ, ಅದು ಯಾವ ಬಂದೂಕದಿಂದ ಹಾರಿತೆಂದು ಸಾಬೀತುಪಡಿಸುವುದು ಒಂದೇ ದಾರಿ.

ಐ.ಎಸ್.ಐ.

1948ರಲ್ಲಿ ಜನನ, ಸೈನಿಕ ಮತ್ತು ಇತರ ರಹಸ್ಯಗಳನ್ನು ನೆರೆಯ ರಾಷ್ಟ್ರಗಳಿಂದ ಪಾಕಿಸ್ತಾನಕ್ಕೆ ಒದಗಿಸುವುದು ಅದರ ಕರ್ತವ್ಯ. ಜನರಲ್ ಅಯೂಬ್‌ಖಾನ್‌ರ ಅವಧಿಯಲ್ಲಿ ಮಹತ್ವ ಪಡೆಯಿತು. ಜಿಯಾ-ಉಲ್-ಹಕ್‌ರಿಗೆ ಅಧಿಕಾರದಲ್ಲೇರಲು ಏಣಿಯಾಯಿತು. ನಂತರ ಜಿಯಾರ ಗುಲಾಮ ರಶಿಯಾದ ವಿರುದ್ಧ ಅಫ್‌ಘಾನ ಉಗ್ರರಿಗೆ ಅಮೇರಿಕ ಶಸ್ತ್ರಾಸ್ತ್ರ ಪೂರೈಸುವದರೊಂದಿಗೆ ಅವರಿಗೆ ತರಬೇತಿ ವ್ಯವಸ್ಥೆ. ಕಾಶ್ಮೀರ, ಪಂಜಾಬ್ ಉಗ್ರಗಾಮಿಗಳಿಗೆ ಗಡಿಯಾಚೆಗಿನ ತರಬೇತಿ ಶಿಬಿರಗಳ ಆಯೋಜನೆ. ಭಾರತದ ವಿರುದ್ಧ ವೈರತ್ವಕ್ಕೆ ಪ್ರಚೋದನೆ. ಮೂಲಭೂತವಾಗಿ ಮತಾಂಧ ಮುಸ್ಲಿಮ್ ಸಂಘಟನೆಗಳಿಗೆ ಹಣಕಾಸಿನ ಸಹಾಯ, ಸ್ಫೋಟಕಗಳ ಪೂರೈಕೆ ಹಾಗೂ ತರಬೇತಿ.

ಭಾರತದ ಎಲ್ಲ ರಾಜ್ಯಗಳಲ್ಲಿಯೂ ಐ.ಎಸ್.ಐ. ಬೀಡುಬಿಟ್ಟದ್ದು ಬಹ್ವಂಶ ಕೋಮು ಗಲಭೆಗಳಿಗೆ ಇದರ ಪ್ರಚೋದನೆಗೆ ಕಾರಣವೆಂಬ ನಂಬಿಕೆ. ಪಾಕಿಸ್ತಾನ ದೊಡನೆಯ ಮೂರು ಯುದ್ಧಗಳಲ್ಲಿ (1947, 1965, 1971) ಬಂಗ್ಲಾದೇಶ ಉದಯಿಸಿ, ಭಾರತ ವಿಜಯಿಯಾಗಿದ್ದರೂ, ಐ.ಎಸ್.ಐ. ಬೆಂಬಲಿತ ಕೂಟ ಯುದ್ಧಗಳಲ್ಲಿ ಪಾಕಿಸ್ತಾನಕ್ಕೆ ನಿರಂತರ ಜಯ.

ಭಾರತದ ಸಿಬಿಐ, ಅಮೇರಿಕದ ಸಿ.ಆಯ್.ಎ., ಆಗಿನ ರಶಿಯ ಒಕ್ಕೂಟದ ಕೆ.ಜಿ.ಬಿ., ಬ್ರಿಟನ್‌ನ ಸ್ಕಾಟ್‌ಲೆಂಡ್ ಯಾರ್ಡ್-ಈ ಬೇಹುಗಾರಿಕೆ ಸಂಸ್ಥೆಗಳು ಸಂಬಂಧಿತ ಸರಕಾರಗಳ ಆಜ್ಞೆ ಪಾಲಿಸುತ್ತಿದ್ದರೆ ಐ.ಎಸ್.ಐ ಆಜ್ಞೆ ನೀಡುವ ತಂದೆಯೂ ಹೌದು, ಆಜ್ಞಾಧಾರಕ ಮಗನೂ ಹೌದು.

■ ಡಾ.ಟಿ.ಕೆ. ತಾಪಸ್

ಈಗ ರದ್ದಾಗಿರುವ 'ಟಾಡಾ' ಕಾಯ್ದೆಯಲ್ಲಿ ವಿಶೇಷ ಅವಕಾಶ ಕಲ್ಪಿಸಲಾಗಿತ್ತು. ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್ ಅಥವಾ ಅವರಿಗಿಂತ ಮೇಲಿನ ಅಧಿಕಾರಿಯ ಎದುರು 'ಟಾಡಾ' ಅನ್ವಯ ಬಂಧಿತನಾದ ವ್ಯಕ್ತಿ ನೀಡಿದ ತಪ್ಪೊಪ್ಪಿಗೆ ಹೇಳಿಕೆಯನ್ನು ಸಾಕ್ಷ್ಯ ಎಂದು ಪರಿಗಣಿಸಿ ನ್ಯಾಯಾಲಯಗಳು ಶಿಕ್ಷೆ ವಿಧಿಸಬಹುದಾಗಿತ್ತು. ಆದರೂ ಕಾಶ್ಮೀರದಲ್ಲಿ ಇಂಥದ್ದೂ ಪ್ರಯೋಗಕ್ಕೆ ಬರಲಿಲ್ಲ.

ನ್ಯಾಯಾಲಯ ಹಲವಾರು ನ್ಯೂನ್ಯತೆ ಹುಡುಕುತ್ತಾ ಇತ್ತು. ತಪ್ಪೊಪ್ಪಿಗೆ ಇಂಗ್ಲೀಷಿನಲ್ಲಿದ್ದು, ಬಂಧಿತನಿಗೆ ಇಂಗ್ಲಿಷು ತಿಳಿಯದೇ ಇದ್ದರೆ, ಅಥವಾ ತಪ್ಪೊಪ್ಪಿಗೆ ಉರ್ದುನಲ್ಲಿದ್ದು ವಿಚಾರಣೆ ನಡೆಸಿದ ಅಧಿಕಾರಿಗೆ ಆ ಭಾಷೆ ಗೊತ್ತಿಲ್ಲದೇ ಇದ್ದಲ್ಲಿ ಅದನ್ನು ನ್ಯಾಯಾಲಯ ಮಾನ್ಯ ಮಾಡದೇ, ಟಾಡಾ ಬಂಧಿತನ ನೆರವಿಗೆ ಧಾವಿಸುತ್ತಿತ್ತು. ಅಸಂಖ್ಯಾತ ಜನಕ್ಕೆ ಹೀಗೆ ಧಾರಾಳವಾಗಿ ಜಾಮೀನು ದೊರೆಯುತ್ತಿತ್ತು. ಒಮ್ಮೆ ಜಾಮೀನು ದೊರೆತ ಮೇಲೆ ಅವರನ್ನು ಮತ್ತೆ ಹುಡುಕಿ ತರುವುದು ಸಾಧ್ಯವೇ ಇಲ್ಲ.

ಭಯೋತ್ಪಾದನೆ ಹಾಗೂ ಕಾಶ್ಮೀರ

ಪಾಕಿಸ್ತಾನ ಕಾಶ್ಮೀರದ ಮೇಲೆ ಕಣ್ಣಟ್ಟಿದೆ. ಭಯೋತ್ಪಾದಕ ತಂಡಗಳ ಕಾರ್ಯಾಚರಣೆಗಳ ಮೂಲಕ ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಿಸುವದು ಹುನ್ನಾರ.

1989ರಿಂದ ಗಡಿಯಾಚೆಗಿನ ಭಯೋತ್ಪಾದನೆಯ ತಂತ್ರಗಳ ಮೂಲಕ, ಬಾಡಿಗೆಯಾಳುಗಳ ಮೂಲಕ, ಅಪರೋಕ್ಷವಾಗಿ ಲೂಟಿ, ದೊಂಬಿ, ಅಪಹರಣ, ಅತ್ಯಾಚಾರ, ನರಮೇಧಗಳ ಮೂಲಕ ಜನತೆಯನ್ನು ಮಣಿಸಲಾಗಿದೆ. ಇದಕ್ಕೆ ಪಾಕಿಸ್ತಾನದ ಸೈನ್ಯ-ಸರಕಾರಗಳ ಬೆಂಬಲ.

ರಾಜ್ಯದಿಂದ 30,000 ಕಾಶ್ಮೀರಿ ಪಂಡಿತರು ತಮ್ಮದಾದುದೆಲ್ಲವನ್ನು ತೊರೆದು ಪಲಾಯನ ಗೈದಿದ್ದಾರೆ. ರಕ್ತಪಾತ ದೈನಂದಿನ ಕಾರ್ಯಕ್ರಮ. ಕ್ಲಿಂಟನ್ ಭೇಟಿಯ ಸಮಯದಲ್ಲಿ (21.3.2000) 36 ಸಿಖ್ಖರ ನರಮೇಧ.

ನಿರುದ್ಯೋಗಿ ಯುವಕರು ಗಡಿದಾಟಿ ಶತ್ರುಪಾಳಯ ಸೇರಿ ಉಗ್ರಗಾಮಿ ತರಬೇತಿ ಪಡೆಯುತ್ತಿದ್ದಾರೆ. ಜನತೆ ಸಹ ಪ್ರತ್ಯೇಕತಾ ವಾದಕ್ಕೆ ಮಣೆ ಹಾಕತೊಡಗಿದ್ದಾರೆ. ಪಾಕ್‌ಪರ ಸರ್ವಪಕ್ಷ ಹುರಿಮತ್ ಪರಿಷತ್ತಿನ ಸಭೆಗಳಿಗೆ ಹೆಚ್ಚೆಚ್ಚು ಜನ ಬೆಂಬಲಿಸುತ್ತಿದ್ದಾರೆ. ಸರಕಾರಿ ನೌಕರರಲ್ಲಿ ಹಲವರು ಉಗ್ರಗಾಮಿ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದಾರೆ. ಪರಿಸ್ಥಿತಿ ರಾಜ್ಯ-ಕೇಂದ್ರ ಸರಕಾರಗಳ ಕೈ ಮೀರಿದೆ.


ಆಫ್‌ಘಾನಿಸ್ತಾನದ ತಾಲಿಬಾನ್ ಉಗ್ರಗಾಮಿಗಳ ನೆರವಿನಿಂದ ಕಾರ್ಗಿಲ್ ಪ್ರದೇಶ ರಣಕ್ಷೇತ್ರವಾಗಿತ್ತು (1998 ರ ಮೇ ತಿಂಗಳಿಂದ ಮೂರು ತಿಂಗಳು) ಇದಕ್ಕೆ ಚೀನ, ಅಮೇರಿಕಗಳ ಮೌನ ಸಮ್ಮತಿ, ಪರೋಕ್ಷ ಬೆಂಬಲ. ಆದರೆ ಪಾಕಿಸ್ತಾನ ಸೋತು ಕೈಚೆಲ್ಲಿದೆ, ಛೀಮಾರಿಗೊಳಗಾಗಿದೆ. ಮುಖಭಂಗಿತವಾಗಿದೆ. ಕಾರ್ಗಿಲ್‌ದಿಂದ ಹಿಂತೆಗೆಯುವಂತೆ ಬಂದ ಒತ್ತಡಕ್ಕೆ ಉಗ್ರಗಾಮಿಗಳ ಮತ್ತು ಪಾಕ್‌ಸೈನ್ಯದ ಅಸಮ್ಮತಿ. ಇದರ ಸೇಡು ವಿಮಾನ ಅಪಹರಣದಲ್ಲಿ ಅಂತ್ಯ. ಪಾಕಿಸ್ತಾನ ಅಪರಹಣಕಾರರಿಗೆ ಇಂಧನ ವಿಶೇಷ ಶಸ್ತ್ರಾಸ್ತ್ರ ಒದಗಿಸಿದ್ದು ತಿಳಿದಿದೆ. ನಂದನವನವಾಗಿದ್ದ ಕಾಶ್ಮೀರ ಇಂದು ಸ್ಮಶಾನ ಸದೃಶವಾಗಿದೆ.

■ ಡಾ.ಟಿ.ಕೆ. ತಾಪಸ್

ತೊಂಬತ್ತರ ದಶಕದ ಆರಂಭದಲ್ಲಿ ಶ್ರೀನಗರದಲ್ಲಿ ಸರ್ಕಾರೀ ವಕೀಲರುಗಳೇ ಇರಲಿಲ್ಲ. ನ್ಯಾಯಾಲಯಗಳು ಅಸ್ತಿತ್ವದಲ್ಲೇ ಇಲ್ಲ ಎನ್ನುವ ಸ್ಥಿತಿ. ಆಗ ರಾಜ್ಯಪಾಲರಾಗಿದ್ದ ಜಗಮೋಹನ್ ಜಮ್ಮುವಿನಿಂದ ಉಪೇಂದ್ರಕುಮಾರ್ ಜಲಾಲಿ ಮತ್ತಿತರ ಎಂಟು ಜನರನ್ನು ಸರ್ಕಾರೀ ವಕೀಲರನ್ನು ನೇಮಿಸಿ ಶ್ರೀನಗರಕ್ಕೆ ತರಲಾಯಿತು. ಅವರೆಲ್ಲರನ್ನು ರಾಜಭವನದ ಸಮೀಪವೇ ಭಾರಿ ಬಿಗಿ ಭದ್ರತೆಯ ಕಟ್ಟಡದಲ್ಲಿ ನೆಲೆಗೊಳಿಸಲಾಯಿತು.

ಇವರೇ ದಾಖಲೆ ಅವಧಿಯಲ್ಲಿ ಸುಮಾರು ಹತ್ತು ಸಾವಿರ ಮೊಕದ್ದಮೆಗಳ ವಿಲೇವಾರಿಗೆ ಕಾರಣರಾದರು. ಬಹುಪಾಲು ಇಂಥ ಮೊಕದ್ದಮೆಗಳ ಪರಿಹಾರ, ಮಾನವ ಹಕ್ಕುಗಳಿಗೆ ಸಂಬಂಧಿಸಿದ್ದವು.

ಪೊಲೀಸರದ್ದು ಇಲ್ಲಿ ಮಹಾ ತಲೆನೋವು.



ಆಮದು ಮಾಡಿಕೊಳ್ಳಲಾದ ಸಹಾಯಕ ಅಡ್ವೊಕೇಟ್ ಜನರಲ್ ಉಪೇಂದ್ರಕುಮಾರ್ ಜಲಾಲೀ

ಬಂಧಿತರನ್ನು ಪೊಲೀಸು ಕಸ್ಟಡಿಗೆ ಒಪ್ಪಿಸುವ ಅವಧಿ ತೀರಾ ಕಡಿಮೆ. ಆ ಆರೋಪಿಗಳಿಗೆ ಬೇಗ ಜಾಮೀನು ದೊರೆಯುತ್ತದೆ. ತಮ್ಮ ಅಧೀನದಲ್ಲಿರುವ ಸ್ವಲ್ಪವೇ ಸಮಯದಲ್ಲಿ ವಿಚಾರಣೆ ನಡೆಸಿ, ಪ್ರಬಲ ಸಾಕ್ಷಾಧಾರಗಳನ್ನು ಸಂಗ್ರಹಿಸುವುದು ತೀರಾ ಕಷ್ಟ.

ಉಗ್ರಗಾಮಿಗಳ ನಿಯಂತ್ರಣ ಕಷ್ಟ. ಸುಲಿಗೆ, ಅಪಹರಣ, ಹತ್ಯೆ ನಡೆದಾಗ ಮೊದಲು ಸ್ಥಳಕ್ಕೆ ಧಾವಿಸುವವರು ಭದ್ರತಾ ಪಡೆಗಳವರು. ಅವರು ಕಾರ್ಯಾಚರಣೆ ನಡೆಸಿ ವಶಪಡಿಸಿಕೊಳ್ಳುವ ಸಾಕ್ಷಿಗಳನ್ನು, ಆನಂತರ ಪೊಲೀಸರು ವಶಕ್ಕೆ ತೆಗೆದುಕೊಳ್ಳಬೇಕು. ಕೇಸು ವಿಚಾರಣೆಗೆ ಬಂದಾಗ ಭದ್ರತಾ ಪಡೆಯ ಅಧಿಕಾರಿ ಬೇರೆಲ್ಲಿಗೋ ವರ್ಗವಾಗಿ ಹೋಗಿರುತ್ತಾನೆ. ಪೊಲೀಸರ ವಶಕ್ಕೆ ಬಂದ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯ ಮಾನ್ಯ ಮಾಡುವುದಿಲ್ಲ. ಕೇಸುಗಳು ಬಿದ್ದು ಹೋಗುತ್ತವೆ.

ಸ್ಥಳೀಯ ಪೊಲೀಸರ ಕತೆ ಇರಲಿ, ಸಿಬಿಐ ಸಿದ್ಧಪಡಿಸಿದ ಕೇಸುಗಳೇ ಇಲ್ಲಿ ಮಣ್ಣು ಮುಕ್ಕುತ್ತವೆ. 91ರ ವೇಳೆಗೆ ತನಿಖೆ ಮುಗಿಸಿ, ಮೊಕದ್ದಮೆ ಹೂಡಲಾಗಿದ್ದ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಿದ್ದು ಒಂದೆರಡು ವರ್ಷದ ಹಿಂದೆ. ಅಷ್ಟು ವೇಳೆಗೆ ಪ್ರಮುಖ ಸಾಕ್ಷಿಗಳೇ ನಾಪತ್ತೆ ಆಗಿದ್ದಾರೆ. ಒಂದು ಪ್ರಕರಣದಲ್ಲಿ ಜಮ್ಮು ಕಾಶ್ಮೀರ ಲಿಬರೇಷನ್ ಫ್ರಂಟ್‌ನ ಮುಖ್ಯಸ್ಥ ಯೂಸೀನ್ ಮಾಲಿಕ್ ಪ್ರಮುಖ ಸಾಕ್ಷಿ.


ಎಷ್ಟೋ ಸಂದರ್ಭದಲ್ಲಿ ಮೊಕದ್ದಮೆ ವಿಚಾರಣೆಗೆ ಬರುವ ಹೊತ್ತಿಗೆ ಅದನ್ನು ಸಿದ್ಧಪಡಿಸಿದ ಅಧಿಕಾರಿಗೇ ಇಡೀ ಪ್ರಕರಣ ಮರೆತೇ ಹೋಗಿರುತ್ತದೆ. ನ್ಯಾಯಾಲಯಕ್ಕೆ ಸಾಕ್ಷಿಗಳನ್ನು ಹಾಜರುಪಡಿಸಬೇಕು. ಅವರಿಗೆ ಭದ್ರತೆ ಒದಗಿಸಲು ಸಾಧ್ಯ ಇಲ್ಲ. ಸಾಕ್ಷಿಗಳೇ ಇಲ್ಲ ಎಂದು ಕೇಸು ವಜಾ ಆಗುತ್ತದೆ.

ಒಂದು ರಸ್ತೆ ಅಪಘಾತ ಆದರೂ, ನೋಡಿಕೊಂಡು ಹಾಗೇ ಹೋಗುವ ಜನ ಹೆಚ್ಚು. 'ನಮಗೇಕೆ ಪೊಲೀಸರ, ನ್ಯಾಯಾಲಯದ'

ಉಸಾಬರಿ' ಎಂದು ಜಾರಿಕೊಳ್ಳುವವರೇ ಹೆಚ್ಚು. ಇದು ಎಲ್ಲ ನಗರಗಳ ಕತೆ. ಇನ್ನು ಕಾಶ್ಮೀರದಲ್ಲಿ ಭಯೋತ್ಪಾದಕರ ವಿರುದ್ಧ ಸಾಕ್ಷಿ ಹೇಳಲು ಯಾರು ಬರುತ್ತಾರೆ? ಎನ್ನುತ್ತಾರೆ ಕಾಶ್ಮೀರದ ಹಿರಿಯ ಪೊಲೀಸ್ ಅಧಿಕಾರಿ ಒಬ್ಬರು. 'ಬಿಗಿ ಭದ್ರತೆ ಒದಗಿಸುತ್ತೇವೆ' ಎಂದರೂ ಸಾಕ್ಷಿಗಳು ಮುಂದೆ ಬರುವುದೇ ಇಲ್ಲ.

ಈ ಹಿಂದೆ ಕಾಶ್ಮೀರದ ಸಿಂಹ ಎನಿಸಿಕೊಂಡಿದ್ದ ಶೇಖ್ ಅಬ್ದುಲ್ಲಾ ವಿರುದ್ಧ ಸಾಕ್ಷಿ ಹೇಳಿದರೆಂಬ ಕಾರಣಕ್ಕೆ, ಅವರೆಲ್ಲರ ವಿರುದ್ಧವೇ ಧರ್ಮ ಗುರುಗಳು ಬಹಿಷ್ಕಾರ ಹಾಕಿದ್ದುಂಟು. ಇದಕ್ಕಿಂತ ಮಿಗಿಲಾಗಿ ರಾಜಕೀಯ ಕೂಡ ಇಲ್ಲಿ ವಿಚಿತ್ರ. ಶೇಖ್ ಅಬ್ದುಲ್ಲಾ ದಂಗೆಗೆ ಪ್ರಚೋದನೆ ನೀಡಿದ್ದಾರೆಂದು ಆರೋಪಿಸಿ ವಿಚಾರಣೆಗೆ ಗುರಿಪಡಿಸಲಾಗಿತ್ತು. ಅವರಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಲಾಗಿತ್ತು. ಆದರೆ ರಾಜಕೀಯದ ವಿಚಿತ್ರ ತಿರುವಿನಿಂದಾಗಿ, ಅವರ ಮರಣದಂಡನೆ ರದ್ದಾಯಿತು. ಆತ ಕಾಶ್ಮೀರದ ಮುಖ್ಯಮಂತ್ರಿಯೂ ಆದರು.

ಅರವತ್ತರ ದಶಕದಲ್ಲಿ 'ಅಲ್‌ಫತಾ' ಸಂಘಟನೆ ಕಾಶ್ಮೀರದಲ್ಲಿ ನಿಷೇಧಗೊಂಡಿತು. ಸಂಘಟನೆಯ ನೂರಾರು ಯುವಕರನ್ನು ವಿಚಾರಣೆಯೂ ಇಲ್ಲದೆ ಬಂಧಿಸಿ ಇಡಲಾಗಿತ್ತು. ಆನಂತರ ಅವರೆಲ್ಲ ಬಿಡುಗಡೆಗೊಂಡರು. ಅಂಥವರಲ್ಲಿ ಬಹಳಷ್ಟು ಜನ ರಾಜ್ಯ ಸರ್ಕಾರದ ಪ್ರಮುಖ ಸ್ಥಾನಗಳಲ್ಲಿ ಅಧಿಕಾರಿಗಳಾಗಿದ್ದಾರೆ.



ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಪರಿಯತ್
ಸಂಘಟನೆಯ ನಾಯಕರುಗಳಾದ ಅಬ್ದುಲ್ ಘನಿ ಭಟ್ ಹಾಗೂ ಜೀಲಾನಿ

ನ್ಯಾಯಾಲಯ ಸಾಕ್ಷಿ ಒಬ್ಬನಿಗೆ ಹಾಜರಾಗಿ ಸಾಕ್ಷಿ ನೀಡುವಂತೆ ಸೂಚಿಸಿದಾಗ, ಆತ ಗೈರು ಹಾಜರಾದರೆ ಕ್ರಮ ಜರುಗಿಸಬಹುದು. ಆತನ ಆಸ್ತಿ ಪಾಸ್ತಿ ಮುಟ್ಟುಗೋಲು ಹಾಕಿಕೊಳ್ಳಬಹುದು. ಆದರೆ ಕಣ್ಣಿಗೇ ಕಾಣದಂತೆ ನಾಪತ್ತೆ ಆಗಿಬಿಡುವ ಸಾಕ್ಷಿಗಳನ್ನು ಹುಡುಕಿ ತರುವುದಾದರೂ ಎಲ್ಲಿಂದ?

ನ್ಯಾಯಾಲಯಗಳು ಜಾಮೀನು ನೀಡಲು ಎಷ್ಟೊಂದು ಕಾತರದಲ್ಲಿ ಇರುತ್ತವೆ ಎಂದರೆ, ನ್ಯಾಯಾಧೀಶರು ಪ್ರತ್ಯೇಕ ಜಾಮೀನು ಮಂಜೂರಾತಿ ಬರೆಯುವ ಗೋಜಿಗೂ ಹೋಗಬೇಕಿಲ್ಲ. ಜಾಮೀನು ಮಂಜೂರಾತಿಯ ಮುದ್ರಿತ ಪ್ರತಿಗಳೇ ಇರುತ್ತವೆ. ಇಲ್ಲಿ ಆರೋಪಿಯ ಹೆಸರು ಬರೆದು, ಸಹಿ ಹಾಕಿದರೆ ಮುಗಿಯಿತು.

ಇನ್ನು ಜೈಲುಗಳ ಕತೆ ಅಷ್ಟೇ ಶೋಚನೀಯ. ಎಷ್ಟೋ ಜನ ಬಂಧಿತ ಕೈದಿಗಳು ಸಲೀಸಾಗಿ ಪರಾರಿಯಾಗಿದ್ದಾರೆ. ಕಾಟ್ಮಂಡುವಿನಿಂದ ಭಾರತದ ವಿಮಾನ ಅಪಹರಿಸಿದ್ದವರು ಜೈಲಲ್ಲಿ ಇರುವ 'ಜನರಲ್ ಫಾರೂಖ್'

ಭಯೋತ್ಪಾದನೆ ಮತ್ತು ನೇಪಾಳ

ಭಾರತದೊಂದಿಗಿನ ನೇಪಾಳದ ಗಡಿ 1850ಕಿ.ಮೀ. ಇದೆ. ನೇಪಾಳದ ದಕ್ಷಿಣದ ಗಡಿ ಉತ್ತರ ಪ್ರದೇಶ, ಬಿಹಾರಗಳಿಗೆ ಹೊಂದಿದೆ. ಉಗ್ರಗಾಮಿಗಳು ಭಾರತದ ಗಡಿದಾಟಿ ಒಳ ಸೇರುವುದು ಅಸಾಧ್ಯವೆನ್ನುವಷ್ಟು ಕಠಿಣವಾಗಿದೆ.

ಪಾಕಿಸ್ತಾನ ನೇಪಾಳದೊಡನೆ ಉತ್ತಮ ರಾಜಕೀಯ ಸಂಬಂಧ ಹೊಂದಿದೆ. ಅದು ಐ.ಎಸ್.ಐ. ಮುಖಾಂತರ ನೇಪಾಳದ ತೆರಾಯಿ ಭಾಗದಲ್ಲಿ ಜಮೀನು ಖರೀದಿಸಿದೆ. ಉತ್ತರ ಪ್ರದೇಶದ ಆಚೆಗಿನ ತೆರಾಯಿ ಅರಣ್ಯ ಪ್ರದೇಶ ಕಳ್ಳ ಸಾಗಣೆಗಾರರು, ಅಪರಾಧಿಗಳಿಗೆ ಅಡಗುದಾಣಗಳಾಗಿವೆ. ಪಾಕಿಸ್ತಾನ, ಬಂಗ್ಲಾದೇಶ ಹಾಗೂ ಈಶಾನ್ಯ ಭಾರತದ ವಿಧ್ವಂಸಕ ಸಂಘಟನೆಗಳು ಭಾರತ ವಿರೋಧೀ ಚಟುವಟಿಕೆಗಳಿಗೆ ನೇಪಾಳವನ್ನುಪಯೋಗಿಸಿಕೊಳ್ಳುತ್ತಿವೆ. ಕಾಶ್ಮೀರಿ, ಉಲ್ಫಾ ಮತ್ತು ಬೋಡೋ ಉಗ್ರಗಾಮಿಗಳು ನೇಪಾಳ, ಭೂತಾನಗಳಲ್ಲಿ ಆಶ್ರಯ ಪಡೆಯುತ್ತಿವೆ. ಉತ್ತರ·ಪ್ರದೇಶ, ಬಿಹಾರ್ ಗಡಿಗಳಲ್ಲಿ ಮೂಲಭೂತವಾದಿಗಳ. ಶಸ್ತ್ರಾಸ್ತ್ರ ಕಳ್ಳ ಸಾಗಣೆದಾರರ, ಮಾದಕ ದ್ರವ್ಯ ವ್ಯಾಪಾರದ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ನಿರಂತರವಾಗಿ ನಡೆಯುತ್ತಿವೆ.

ಜಗತ್ತಿನ ಏಕೈಕ ಹಿಂದೂ ರಾಷ್ಟ್ರ-ನೇಪಾಳದಲ್ಲಿ 1970-2000ದ ಅವಧಿಯಲ್ಲಿ ಹಿಂದೂಗಳ ಸಂಖ್ಯೆ ಶೇಕಡಾ 70ಕ್ಕೆ ಕುಸಿದಿದೆ. ಅಸಾಮ್, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಬಂಗ್ಲಾದೇಶಗಳಿಂದ ಹರಿದು ಬರುತ್ತಿರುವ ಮುಸ್ಲಿಂ ವಲಸೆಗಾರರು, ಐ.ಎಸ್.ಐ. ಬೆಂಬಲದೊಂದಿಗೆ ನೇಪಾಳದ ನಾಗರಿಕತೆ ಪಡೆಯುತ್ತಿದ್ದಾರೆ.

1992ರಿಂದಲೇ ಐ.ಎಸ್.ಐ. ಕಾಠಮಾಂಡುವನ್ನು ಆಶ್ರಯ ತಾಣವಾಗಿ ಉಪಯೋಗಿಸಲಾರಂಭಿಸಿತು. ಪಾಕಿಸ್ತಾನದಲ್ಲಿ ತರಬೇತಾದ ಉಗ್ರರು ಆ ದೇಶದ ರಹದಾರಿಯೊಂದಿಗೆ ನೇಪಾಳ ಸೇರಿ, ಭಾರತೀಯ ರಾಷ್ಟ್ರೀಯರೆಂದು ಭಾರತ ಪ್ರವೇಶಿಸಿ, ಕಾಶ್ಮೀರಕ್ಕೆ ತೆರಳುತ್ತಾರೆ. ಭಾರತೀಯರಿಗಾಗಲಿ, ನೇಪಾಳಿಯರಿಗಾಗಲಿ ಪಾಸ್‌ಪೋರ್ಟ್ ಅಥವಾ ವೀಸಾ ಅಗತ್ಯವಿಲ್ಲ. ಕಾವಲುಗಾರರಿಲ್ಲದ ಠಾಣೆಗಳು, ನಿಯಮಗಳಲ್ಲಿ ವಿಚಿತ್ರ ಸಡಿಲು, ನಿಷ್ಕ್ರಿಯ ಪೊಲೀಸ್ ಮತ್ತು ಸುಂಕದಾಡಳಿತಗಳು ಪರಿಸ್ಥಿತಿಯನ್ನು ಬಿಗಡಾಯಿಸಿವೆ. ಭಾರತದಲ್ಲಿ ತಮಗೆ ವಹಿಸಿದ ಕಾರ್ಯವನ್ನು ಪೂರೈಸಿದ ಉಗ್ರಗಾಮಿಗಳು ನೇಪಾಳದಲ್ಲಿ ಐ.ಎಸ್.ಐ. ಪಾಕ್ ರಾಯಭಾರಿ ಕಚೇರಿಯೊಂದಿಗೆ ಸಂಪರ್ಕ ಸಾಧಿಸಿ, ಪಾರಾಗುತ್ತಿದ್ದಾರೆ.

ಆಕ್ಷೇಪಾರ್ಹ ಚಟುವಟಿಕೆಗಳಿಗಾಗಿ ನೇಪಾಳದ ಆತಿಥ್ಯ ಸ್ವೀಕರಿಸುತ್ತಿರುವ ಭಾರತೀಯ ಉಗ್ರಗಾಮಿಗಳು, ಅವರ ಸಂಘಟನೆಗಳು ತಲೆನೋವಾಗುತ್ತಿರುವ ಬಗೆಗೆ ನೇಪಾಳದ ಲಕ್ಷ್ಯ ಸೆಳೆದರೂ ಅದು ಪ್ರಯೋಜನಕಾರಿಯೆನಿಸಿಲ್ಲ. ಪ್ರತಿಯೊಂದು ಕಾಶ್ಮೀರಿ ಉಗ್ರಗಾಮಿ ಸಂಘಟನೆ ನೇಪಾಳದಲ್ಲಿ ತನ್ನ ಪ್ರತಿನಿಧಿಯನ್ನಿರಿಸಿದೆ.

ಭಯೋತ್ಪಾದಕತೆಯ ಅಂತರಾಷ್ಟ್ರೀಯ ಮುಖ ನೇಪಾಳದ ಮುಕ್ತಗಡಿಯ ಮೂಲಕ ಇತ್ತೀಚಿನ ವಿಮಾನಾಪಹರಣದ ರೂಪದಲ್ಲಿ ಹೊರಬಂದಿದೆ.

■ ಡಾ. ಟಿ.ಕೆ. ತಾಪಸ್

ಐ.ಎಸ್.ಐ. ಬೆಂಬಲಿತ ಪ್ರಮುಖ ಉಗ್ರಗಾಮಿ ಸಂಘಟನೆಗಳು

ಹೆಸರು	ಹಿಜಬುಲ್ಲಾ ಮುಜಾಹಿದೀನ್	ಲಷ್ಕರ್-ಈ-ತಾಯಬ್	ಹರಕತುಲ್ಲಾ ಅನ್ಸಾರ್	ಅಲ್ ಬದರ್
ಕೇಂದ್ರಸ್ಥಾನ ಮತ್ತು ಸ್ಥಾಪನೆ	ಮುರ್ಝುಫರಾಬಾದ್ (ಪಾಕ್) 1990	ಲಾಹೋರ್ 1980	ಇಸ್ಲಾಮಾಬಾದ್ 1993	ಮುರ್ಝಾಫರಾಬಾದ್ (ಪಾಕ್)
ಗುರಿ	ಪಾಕಿಸ್ತಾನದಲ್ಲಿ ಕಾಶ್ಮೀರ ಸೇರ್ಪಡೆ	ಮುಸ್ಲಿಂ ಮೂಲಭೂತ ವಾದದ ಪ್ರಚಾರ	ಜಾಗತಿಕ ಇಸ್ಲಾಂ ಏಕಸ್ವಾಮ್ಯ ಸ್ಥಾಪನೆ ಮತ್ತು ಕಾಶ್ಮೀರಕ್ಕೆ ಸ್ವಾತಂತ್ರ್ಯ	ಜಮ್ಮು-ಕಾಶ್ಮೀರವನ್ನು ಪಾಕಿಸ್ತಾನದಲ್ಲಿ ವಿಲೀನಗೊಳಿಸುವುದು.
ಕಾರ್ಯಕರ್ತರು	ಆಮದಾದ ಉಗ್ರಗಾಮಿಗಳು	ಕಠಿಣ ತರಬೇತಿ ಪಡೆದ ಪಡೆ	ಉಗ್ರಗಾಮಿ ಪಡೆ	ಉಗ್ರಗಾಮಿಗಳು
ಕಾರ್ಯಕ್ಷೇತ್ರ	ಜಮ್ಮು-ಕಾಶ್ಮೀರ	ಕಾಶ್ಮೀರ ಸಹಿತ ಇಡೀ ಭಾರತ,	ಭಾರತ, ಬಂಗ್ಲಾದೇಶ, ಮಯನ್ಮಾರ್, ತಜಕಿಸ್ತಾನ, ಪಾಕಿಸ್ತಾನ	ಜಮ್ಮು-ಕಾಶ್ಮೀರ

■ ಡಾ|| ಟಿ.ಕೆ.ತಾಪಸ್



ಬಿಡುಗಡೆಯ ಶರತ್ತು ಇರಿಸಿದ್ದರು. ವಿಚಿತ್ರ ಎಂದರೆ ಎಷ್ಟೋ ವರ್ಷಗಳ ಹಿಂದೆಯೇ ಆತ ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದ.

ಕಾಶ್ಮೀರದ ವಕೀಲರ ಸಂಘ ಭಯೋತ್ಪಾದಕರ ಬಗ್ಗೆ ಅನುಕಂಪ ಹೊಂದಿದೆ. ಹೀಗಾಗಿಯೇ ಇಲ್ಲಿ ಜಾಮೀನು ದೊರೆಯುವುದು ಸುಲಭ. ಅಲ್ಲದೇ ನ್ಯಾಯಾಧೀಶರಿಗೂ ಪ್ರಾಣಭಯ. ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದಕ್ಕಿಂತ ಹಾಗೇ ಬಿಟ್ಟುಬಿಡುವುದು ಅವರಿಗೂ ಹಿತ. ಇಂಥ ಪರಿಸ್ಥಿತಿಯಲ್ಲಿ ಕಾಶ್ಮೀರದಲ್ಲಿ ನಡೆಯುತ್ತಾ ಇರುವುದು ನ್ಯಾಯ ವಿತರಣೆಯ ನಾಟಕ ಅಷ್ಟೇ. ನ್ಯಾಯಾಂಗ ವ್ಯವಸ್ಥೆ ಅಲ್ಲಿದೆ ಎಂದು ಸಾಬೀತಾಗುವುದು ಸಿವಿಲ್ ಮೊಕದ್ದಮೆಗಳ ವಿಷಯದಲ್ಲಿ ಮಾತ್ರ. ಭಯೋತ್ಪಾದಕರ ಕುರಿತಂತೆ ಅದು ಸಂಪೂರ್ಣ ಇಲ್ಲವಾಗಿ ಬಿಟ್ಟಿದೆ. ಹಾಗಾಗಿಯೇ ಕಾಶ್ಮೀರದಲ್ಲಿ ಇನ್ನೂ ಉಗ್ರಗಾಮಿಗಳ ಅಟ್ಟಹಾಸದ ನಗು ಕೇಳಿ ಬರುತ್ತಲೇ ಇದೆ.

■ ವಿವಿಧ ಮೂಲಗಳಿಂದ

ಶಾಸ್ತ್ರೀ ಪ್ರಶ್ನೆ :

ಬದುಕಿನ ಸಮಸ್ಯೆಗಳಿಂದ ಕಂಗಾಲಾಗಿದ್ದ ಕಲ್ಲೇಶಿ ವಿಶ್ವವಿಖ್ಯಾತ, ವಿಮಾನಗಳಲ್ಲಿಯೇ ಸಂಚರಿಸುವ, ಹೋರಾಟ ರತ್ನ ಮಂಕುತಿಮ್ಮ ಶಾಸ್ತ್ರಿಗಳ ಮನೆಯ ಬಾಗಿಲನ್ನು ತಟ್ಟಿದಾಗ ಹೊರ ಬಂದ ಶಾಸ್ತ್ರಿಗಳು 'ಯಾರು ನೀವು? ನಿಮಗೇನು ಬೇಕಾಗಿತ್ತು?' ಎಂದು ಕೇಳಿದರು. ಇದನ್ನು ಕೇಳಿದ ಕಲ್ಲೇಶಿ ತಾನು ಬೇರಾರದೋ ಮನೆಗೆ ಬಂದಿರಬೇಕು ಎಂದು ಭಾವಿಸಿ ಅಲ್ಲಿಂದ ನಡೆದು ಬಿಟ್ಟ.

ಕಲ್ಲೇಶಿಯ ಕಾರು!

'ಇದು ನಿಮ್ಮ ಕಾರೇ?' ಎಂಬ ಪ್ರಶ್ನೆಗೆ ಖದೀಮ ಕಲ್ಲೇಶಿ, 'ಹೌದು ಮತ್ತು ಅಲ್ಲ' ಎಂದು ಕುತೂಹಲ ಕೆರಳಿಸಿದ. 'ಅದು ಹೇಗೆ?' ಎಂಬ ಪ್ರಶ್ನೆಗೆ ಆತ 'ಕಾರು ಪೇಟೆಗೆ ಹೋಗುವಾಗ ಪತ್ನಿಯದು, ಆಟಕ್ಕೆ ಹೋಗುವಾಗ ಅಳಿಯನದು, ಮ್ಯಾಟನಿಗೆ ಹೋಗುವಾಗ ಮಗಳದ್ದು, ಆಟಕ್ಕೆ ಹೋಗುವಾಗ ಮಗನದು' ಎಂದ. 'ಹಾಗಾದರೆ ಅದು ಯಾವಾಗ ನಿಮ್ಮದು' ಎಂಬ ಪ್ರಶ್ನೆಗೆ 'ಮತ್ತಿನ್ನ್ಯಾವ್ಯಾಗ ಕಂತು ತುಂಬುವಾಗ, ತೆರಿಗೆ ತೆರುವಾಗ, ಪೆಟ್ರೋಲ್ ಹಾಕಿಸುವಾಗ, ಪೊಲೀಸರು ಹಿಡಿದಾಗ' ಎಂದ ಕಲ್ಲೇಶಿ ಖಿನ್ನನಾಗಿ.

ಕೆ. ವೆಂಕಣ್ಣಾಚಾರ್

ಕೆಡದ ಜೇನು


ಜೇನು ಎಷ್ಟು ಕಾಲವಾದರೂ ಕೆಡುವುದಿಲ್ಲ. ಈಜಿಪ್ಟ್‌ನ ಪಿರಮಿಡ್‌ನಲ್ಲಿ ಐದಾರು ಸಾವಿರ ವರ್ಷದ ಹಿಂದೆ ಸಂಗ್ರಹಿಸಿ ಇಟ್ಟಿದ್ದ ಜೇನು ಸ್ವಲ್ಪವೂ ಹಾಳಾಗಿರಲಿಲ್ಲ. ಅದನ್ನು ಪುರಾತತ್ವ ಶಾಸ್ತ್ರಜ್ಞರೇ ರುಚಿ ನೋಡಿ ಸಾಬೀತು ಮಾಡಿದ್ದಾರೆ.

ಪ್ಲಾಸ್ಮಾ ಬದಲು ಎಳೆನೀರು

ತುರ್ತು ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ಎಳೆ ನೀರನ್ನು ಪ್ಲಾಸ್ಮಾದ ಬದಲಿಗೆ ಬಳಸಬಹುದು. ಈ ವಿಷಯವನ್ನು ದ್ವಿತೀಯ ಮಹಾಯುದ್ಧದ ವೇಳೆ ಫಿಜಿಯ ವೈದ್ಯರು ಕಂಡು ಹಿಡಿದು, ಯಶಸ್ವಿಯಾಗಿ ಬಳಸಿಕೊಂಡರು.

ಹಾನಿಗವನದ ಬಗ್ಗೆ!?

• ಗೋಪಿ ಹಿರೇಬೆಟ್ಟು



Honey ಮೂನು ಆಚರಿಸಲು ಹೋದವರ ರಸಕ್ಷಣಗಳಂತೆ! ಈ ಹನಿಗವನ ಸಾಹಿತ್ಯ ಪ್ರಕಾರವಂತೆ ! ಹೊಸದಾಗಿ ಕವಿಗಳಾಗಿ ಮೂಡಿ ಬರಲು ಬಯಸುವ ಉದಯ - ಉನ್ಮಾದಕರಿಗೆ ಅನುಕೂಲ ಈ ಹನಿಗವನಗಳು. ಹನಿಗವನಗಳಿಂದ ಪತ್ರಿಕೆಗಳಿಗೂ ಬರಹಗಾರರಿಗೂ ಕಾಗದಕ್ಕೂ ಹೆಚ್ಚಿನ ಹಾನಿ ಇಲ್ಲ. ಹಾನಿಯಾಗುವುದು ಉದ್ದುದ್ದ ಬರೆದರೆ ಹಾಳೆಗಳಿಗೆ, ಸತ್ಯ ಸಂಗತಿ ಬರೆದರೆ ಸತ್ಯವಂತರಿಗೆ! ಹಗರಣಗಳ ಹೊರಗೆಳೆದರೆ ರಾಜಕಾರಣಿಗಳಿಗೆ ತೊಂದರೆ!

ತಕ್ಷಣ ಹುಟ್ಟು, ತಕ್ಷಣ ಓದಿ (ಮರೆತು!) ಬಿಡಬಹುದು. ಅಲ್ಲದೆ ಪತ್ರಿಕೆಯ ಮೂಳೆಯಲ್ಲಿ ಉಳಿದ ಭಾಗ ಭರ್ತಿ ಮಾಡಲು ಸಂಪಾದಕ ಬಳಗದವರಿಗೆ ಅನುಕೂಲವೂ ಆಗುತ್ತದೆ. ಹನಿಗವನವೆಂಬುವುದು ಮಿಂಚಿನ ಹಾಗೆ! ಬರಹಗಾರರು ಬಂದು ಹೋಗುವ ಮೊದಲೇ ಬರೆದಿಡಬೇಕು. ಹನಿಗವನವನ್ನು ಪುಂಡ(ಲೀಕ)ರು'ಮಿಡಿ'ಗಳಿಗೆ ಹೋಲಿಸಿದ್ದಾರೆ. ಮಿಡಿ ಯಾವತ್ತು ಇಡಿ. ಆದರೆ ಮ್ಯಾಕ್ಸಿಯಲ್ಲ! ಮಿಡಿ ಚಿಕ್ಕದಾಗಿ ಚೊಕ್ಕದಾಗಿ ಎಲ್ಲವನ್ನೂ ತೋರಿಸುತ್ತದೆಯಂತೆ! ಇಲ್ಲಿ ಎಲ್ಲವನ್ನೂ ಎಂದರೆ ವಸ್ತು ವಿಷಯವನ್ನೂ!

ಹನಿಗವನ ಯಾವ ವಿಷಯದಲ್ಲಿ ಇರಬಹುದು. ಯಾವ ವಸ್ತುವಿಗೂ ತುರುಕಿಸಬಹುದು ಅಥವಾ ಪೂರ್ಣವಾಗದೆ ಉಳಿದ ದೊಡ್ಡ ಕವಿತೆಗಳನ್ನು ಹನಿಗವನವೆಂದೂ ಕರೆಯುವವರುಂಟು. ಕೆಲವರಂತೂ ದೊಡ್ಡ ಕವನವನ್ನು ಅಲ್ಲಲ್ಲೇ ತುಂಡರಿಸಿ ಮೂರ್ನಾಕು 'ತುಂಡುಗವನ'ವನ್ನೂ ರಚಿಸಿ ಬಿಡುತ್ತಾರೆಂದು ಸಂಪಾದಕರ ಗಮನಕ್ಕೆ ಬಂದಿದೆಯಂತೆ!

ಹನಿಗವನ ಬರೆಯುವವರ ಸಂಖ್ಯೆ ಇತ್ತೀಚೆಗೆ ಬಹಳಷ್ಟು ಹೆಚ್ಚುತ್ತಿದೆ. ಅಥವಾ ಹೆಚ್ಚಿನ ಎಲ್ಲರೂ ಹನಿಗವಿಗಳೇ! ಯಾವುದೇ ಒಂದು ರೀತಿಯಲ್ಲಿ ಅಥವಾ ಒಂದು ಕಡೆಯಲ್ಲಿ ಹನಿಗವನವನ್ನು ಉದುರಿಸಿ ಬಿಡುತ್ತಾರೆ. ಉದಾಹರಣೆಗೆ, ಆಟೋಗ್ರಾಫ್‌ಗಳಲ್ಲಿ ಬರೆದ ನಾಲ್ಕು ಸಾಲುಗಳು. ಪ್ರೇಮ ಪತ್ರದ ಸಾಲುಗಳಲ್ಲಿ, ಅಥವಾ ಗೆಳತಿಯೊಂದಿಗೆ ಶೃಂಗಾರದಲ್ಲಿ ಮೈ ಮರೆತಿರುವಾಗ ಮುತ್ತುಗಳೆಡೆಯಲ್ಲಿ ಈ ಹನಿಗವನಗಳು ಉದುರುವುದು ತನ್ನಿಂದ ತಾನಾಗಿಯೇ!

ಕೆಲವರು ಮಾತ್ನಾಡುವಾಗ ಹಾಸ್ಯ ರಸ ಹೊಮ್ಮುತ್ತದೆ. ಕೆಲವರಿಂದ ಜೊಲ್ಲು ರಸದ ಹನಿಗಳು ಚಿಮ್ಮುತ್ತವೆ. ಈ 'ಹನಿ'ಗಳಿಂದ ಹಲ್ಲುದುರುವ ಅಪಾಯವೂ ಇದೆಯಂತೆ ! ಹನಿಗವನಗಳಲ್ಲಿ ಹಾಸ್ಯಕ್ಕೆ ಹೆಚ್ಚು ಪ್ರಾಧಾನ್ಯತೆ. ಕೆಲವು ಕು-ಕವಿಗಳು ಗಂಭೀರವಾದ ನಗ್ನ ಸತ್ಯವನ್ನು ನಾಲ್ಕೇ ಸಾಲಿನಲ್ಲಿ ಅಥವಾ ನಾಲ್ಕೇ ಶಬ್ದದಲ್ಲಿ ಬರೆಯುವವರುಂಟು !

'ಚಿಕ್ಕದು, ಚೊಕ್ಕದು', 'ಎರಡೇ ಮಕ್ಕಳಿರಲಿ' ಎಂಬ ಕುಟುಂಬ ಯೋಜನೆಯ ಸಾಲುಗಳು. ಹನಿಗವನ ರಚನಾಕಾರರಿಗೆ 'ಸ್ಫೂರ್ತಿ' ಯಾಗಿರಬೇಕು. ಮಿಡಿಯನ್ನು ನೋಡಿ ಸ್ಫೂರ್ತಿಗೊಂಡವರೂ ಉಂಟಂತೆ! ಈ ಚಿಕ್ಕ ಸಾಹಿತ್ಯ ಪ್ರಕಾರದಲ್ಲಿ ಸಾಹಿತ್ಯಾಭಿಮಾನಿಗಳಲ್ಲದವರಿಗೂ ವಿಶೇಷ ಆಸಕ್ತಿ. ಆತುರಾಸುರರು ಇವುಗಳನ್ನು ಮಾತ್ರ ಓದುತ್ತಾರೆ.

ಸೆನ್ಸಾರ್‌ನಿಂದ ತಪ್ಪಿಸುವ ವಿಚಾರದಲ್ಲಿ ಹನಿಗವಿಗಳು ಜಾಣರು. ಶಬ್ದಗಳನ್ನೇ ಸೆನ್ಸಾರ್ ಕಟ್ ಮಾಡಿ ಕೆಳಗೆ - ಕೆಳಗೆ ಅಕ್ಷರಗಳನ್ನು ಜೋಡಿಸಿ ಮೋಡಿ ಮಾಡಿ ಬಿಡುತ್ತಾರೆ. ಹನಿಗವನ ಎಷ್ಟು ಚಿಕ್ಕದು ಅಷ್ಟೇ ಚೊಕ್ಕದು. ಹಾಗಾಗಿ ಕೆಲವರು ಇದನ್ನು 'ಕದ್ದು' ಮುದ್ದು ಮಾಡಿ ಪ್ರಕಟಿಸುತ್ತಾರೆ. ಹನಿಗವನ ಕೃತಿ (ಚೌರ್ಯ!) ವಾಗುವುದು ಕಂಡು ಬರುತ್ತದೆ.

ಹನಿಗವನವು ಸಾಹಿತ್ಯ ಪ್ರಕಾರವೆ? ಎಂಬುವುದರ ಬಗ್ಗೆ ಹಲವಾರು ಭಿನ್ನಾಭಿಪ್ರಾಯಗಳೂ ಇವೆ. ಆದರೆ ಹೆಚ್ಚುತ್ತಿರುವ



ಹನಿಗವಿ ಪಂಡಿತರು ಇದನ್ನು 'ಸಾಹಿತ್ಯ ಪ್ರಕಾರ' ಎಂಬುವುದು ಖಂಡಿತ! ಹನಿಗವನ ಬರೆದ ಕವಿಗಳಾಗುವವರು ಅನೇಕರು. ಹನಿಗವಿಗಳೆಂದು ಹೇಳಿ ಗುರುತಿಸಿಕೊಳ್ಳಲು ಹಲವರಿಗೆ ಸ್ವಲ್ಪ ಕೀಳರಿಮೆ ಇದೆ. ಕಿರು ಕವಿಗಳು ಕವಿಗಳಲ್ಲವೆಂಬುವುದು ಸಾಹಿತ್ಯಾಭಿಮಾನಿಗಳ ಅನುಮಾನಾಭಿಪ್ರಾಯ!

ಇತ್ತೀಚೆಗೆ ಹನಿಗವಿಗಳ 'ಕವಿಗೋಷ್ಠಿ' ಆಗುತ್ತಿರುವುದರಿಂದ 'ಕವಿ'ಗಳೇ ಇವರೆಲ್ಲ ಎಂಬುವುದು ಸರಿ! ಕವಿಗೋಷ್ಠಿಗಳಲ್ಲಿ ಹಾಸ್ಯ ರಸವೇ ಮೇಲುಗೈ ಪಡೆಯುತ್ತಿರುವುದು ಹನಿಗವನ ಎಂದರೆ ಹಾಸ್ಯಕ್ಕೆ ಮೀಸಲಾಗಿಸಲು ಹೊರಟಿರುವಂತಿದೆ ದಂತ ಪ್ರದರ್ಶನಕಾರರು! ಹನಿಗಳು ಹೊರ ಹೊಮ್ಮುವುದರ ಬಗ್ಗೆ ಕವಿಗೋಷ್ಠಿಯ ಎದುರಿನ ಸಾಲಿನ ಪ್ರೇಕ್ಷಕರ ಮುಖ ಕಂಡಾಗ ತಿಳಿಯುತ್ತದೆ. ಕರವಸ್ತ್ರದಿಂದ ಆಗಾಗ ಮುಖ ಒರೆಸುತ್ತಿರುತ್ತಾರೆ! ಅಂತೂ ಈ ಮಿಡಿಗಳ ಕಂಡಾಗ ಕೆಲವರು ಸಿಡಿಮಿಡಿಗೊಳ್ಳುವುದು ಕಂಡು ಬಂದಿರುವುದೆನಗೆ ಹೆದರಿಕೆ ಹುಟ್ಟಿಸಿದೆ!

■ ಗೋಪಿ ಹಿರೇಬೆಟ್ಟು

ಅವರು ತೊಟ್ಟುಕೊಂಡಿದ್ದ ಉದ್ದನೆಯ
ಅಂಗಿಯನ್ನು ಆಗಾಗ ಎತ್ತುತ್ತಿದ್ದರು.
ಸೊಂಟದ ದಾರದಲ್ಲಿ ಸಣ್ಣ ಸಣ್ಣ ಕೈ
ಚೀಲಗಳು ನೇತಾಡುತ್ತಾ ಇದ್ದವು.
ಕೈಯಲ್ಲಿ ಡಬ್ಬಗಳಿದ್ದವು. 'ಚರಕ್'
ಡಬ್ಬಳಗಳಿಂದ ಚುಚ್ಚುತ್ತಿದ್ದರು.
'ಚರಕ್.... ಚರಕ್' ಎಂಬ
ಸದ್ದಾಗುತ್ತಿತ್ತು.
ಆ ಡಬ್ಬಳ ದಾಟಿದ ದ್ವಾರದಲ್ಲಿ
ಸಕ್ಕರೆ ಹೊರ ಸುರಿಯುತ್ತಿತ್ತು.

ಕತೆ

ಅನುತಾಪ

ಆಳ್ವರಮ್ಮನ ಗಂಡ ಬಿಟ್ಟು ಹೋಗಿದ್ದ. ಅವಳು ಗಂಡನೊಡನೆ ಕೂಡಿ ಹತ್ತು ವರ್ಷ ಸಂಸಾರ ಮಾಡಿದುದರಲ್ಲಿ ಅವಳಿಗೆ ದೊರಕಿದ ಲಾಭ ಎಂದರೆ ಒಬ್ಬ ಗಂಡು ಮಗ. ಕೊನೆಗಾಲಕ್ಕೆ ಕೊಳ್ಳಿ ಇಡಲಿಕ್ಕಾಗಿ. ಮಗ ಪಿಚ್ಚನನ್ನು ಹಿಡಿದುಕೊಂಡು ಆ ರೈಲ್ವೆ ಜಂಕ್ಷನಿನಲ್ಲಿ ಬಂದು ಇಳಿದಳು. ಅದೂ ಕೂಡ ಬಹಳ ತಂತ್ರದಿಂದ ಟಿಕೇಟು ಪಡೆಯದೆ ಮದರಾಸಿನಿಂದ ಬಂದು ಇಳಿದಿದ್ದಳು. ಇಳಿದ ಪ್ರಯಾಣಿಕರೊಡನೆ ತೆರೆದ ಗೇಟಿನೊಳಗಿನಿಂದ ಹಾದು ಹೋಗಲು ಧೈರ್ಯ ಸಾಲಲಿಲ್ಲ. ಭೀತಿಯಿಂದ ತಲೆ ಮರೆಸಿಕೊಂಡು ಗೂಡ್ಸ್ ಶೆಡ್ ಕಡೆ ಹೋದರೆ? ಮನಸ್ಸು ಅಪಾಯ ಸೂಚಿಸಿತು. 'ಕಬ್ಬಿಣದ ಸರಳಿನ ಬೇಲಿಯ ಸಂದಿನ ಹಾದಿಯಲ್ಲಿ ನುಸುಳಿ ಊರು ಸೇರಬಹುದಲ್ಲಾ....' ಹಾಗೆ ಮಾಡುವಷ್ಟರಲ್ಲಿ ಅವಳ ಕಣ್ಣಿಗೆ ಒಂದು ವಿಶೇಷವಾದ ದೃಶ್ಯ ಕಂಡಿತು. ಅಚ್ಚರಿಯಿಂದ ಅದನ್ನೇ ನೋಡುತ್ತಾ ನಿಂತಳು. ಎವೆಯಿಕ್ಕದೆ ಮೊಣಕಾಲವರೆಗೆ ಅಂಗಿತೊಟ್ಟಿರುವ ಸಣ್ಣ ಹುಡುಗರು ಗೂಡ್ಸುಗಾಡಿಯೊಳಗೆ ಓಡೋಡಿ ಹತ್ತಿ ಇಳಿಯುತ್ತಿದ್ದರು. ಅದನ್ನು ದಿಟ್ಟಿಸಿ ನೋಡುತ್ತಿದ್ದಂತೆ ಅವಳಿಂದ ನಂಬಲಸಾಧ್ಯವಾಯಿತು. ಅವರು ತೊಟ್ಟುಕೊಂಡಿದ್ದ ಉದ್ದನೆಯ ಅಂಗಿಯನ್ನು ಆಗಾಗ ಎತ್ತುತ್ತಿದ್ದರು. ಅವರ ಸೊಂಟದ ದಾರದಲ್ಲಿ ಸಣ್ಣ ಕೈ ಚೀಲಗಳು ಜೋತಾಡುತ್ತಿದ್ದವು. ಕೈಯಲ್ಲಿ ಡಬ್ಬಳಗಳಿದ್ದವು.

'ಚರಕ್' ಡಬ್ಬಳಗಳಿಂದ ಚುಚ್ಚುತ್ತಿದ್ದರು. 'ಚರಕ್ ಚರಕ್' ಎಂಬ ಶಬ್ದವಾಗುತ್ತಿತ್ತು.

ಆ ಡಬ್ಬಳ ದಾಟಿದ ದ್ವಾರದಲ್ಲಿ ಸಕ್ಕರೆಯು ಹೊರ ಸುರಿಯುತ್ತಿತ್ತು. ಸುರಿಯುವಲ್ಲಿ ಆ ಸಣ್ಣ ಕೈ ಚೀಲವನ್ನು ಹಿಡಿದು ತುಂಬುತ್ತಿದ್ದರು. ಹಾಗೇ



ಮತ್ತೊಂದು ಚೀಲಕ್ಕೆ ಅಕ್ಕಿ, ಮತ್ತೊಂದು 'ಚರಕ್' ಈಗ ಗೋಧಿ, ಬೇಳೆ ಇತ್ಯಾದಿ ಇತ್ಯಾದಿ, ಆ ರೇಲ್ವೆ ಸ್ಟೇಶನಿನಲ್ಲಿದ್ದ ಗೂಡ್ಸ್ ಬಂಡಿಯಲ್ಲಿ ಸಕ್ಕರೆ, ಅಕ್ಕಿ, ಗೋಧಿ ಮತ್ತು ಬೇಳೆ ಇನ್ನು ಇತ್ಯಾದಿ ಮೂಟೆ ಮೂಟೆಯಾಗಿ ಬೇರೆ ಬೇರೆ ಊರುಗಳಿಗೆ ಹಂಚಿ ಹೋಗಲು ಬಂಡಿಗಳು ಕಾದು ನಿಂತಿದ್ದವು. ಆ ಪಡ್ಡೆ ಹುಡುಗರು ಅದರಿಂದಾಗಿಯೇ ಬಹಳ ಚಮತ್ಕಾರದಿಂದ ಕದಿಯುತ್ತಿದ್ದುದು ನೋಡಿಕೊಂಡು ಇರುವಾಗಲೇ ಹುಡುಗರು ಓಡೋಡಿ ರೇಲ್ವೆ ಕಬ್ಬಿಣದ ಸರಳಿನ ಬೇಲಿಯೆಡೆಗೆ ಆಗಾಗ ಹೋಗುತ್ತಿದ್ದರು. ಹೊರಗಡೆ ಹೆಂಗಸರು ಸೆರಗು ಹಿಡಿದುಕೊಂಡು ಕಾದು ನಿಲ್ಲುತ್ತಿದ್ದರು. ಅವರಲ್ಲಿದ್ದ ತುಂಬಿದ ಸಣ್ಣ ಕೈ ಚೀಲಗಳು ಸೆರಗಿಗೆ ಹೋಗುತ್ತಿದ್ದವು. ಅಬ್ಬಬ್ಬ ಎಂತಹಾ ಅವಸರದ ಚಮತ್ಕಾರ! ಆಳ್ವರಮ್ಮ ಬಹಳ ಬುದ್ಧಿಶಾಲಿಯಾಗಿದ್ದಳು. ನಿಮಿಷದಲ್ಲಿ ಪರಿಸರದಲ್ಲಾಗುತ್ತಿದ್ದ ಪ್ರಕೃತಿಯ ವಿಷಯವನ್ನು ಬಹಳ ಸೂಕ್ಷ್ಮವಾಗಿ ಅರ್ಥಮಾಡಿಕೊಂಡಳು.

'ಆ ಪಡ್ಡೆ ಹುಡುಗರ ಸಂಗಡ ತನ್ನ ಮಗ ಪಿಚ್ಚನನ್ನು ನಿಲ್ಲಿಸಿ ಪರೀಕ್ಷಿಸಿದರೆ ಹೇಗೆ?' ಮನದಲ್ಲಿ ತಾಳೆ ಹಾಕಿದಳು.

ಸರಿ ಖರ್ಚಿಲ್ಲದ ವ್ಯಾಪಾರ, ಅದರಲ್ಲಿ ಏನಾದರೂ ತೊಡಕು ಎದುರು ಕಾಯಬಹುದೇ? ಕ್ಷಣ ನಿಂತು ಗಮನಿಸಿದಳು.

ರೈಲ್ವೆ ಕಾರ್ಮಿಕರು, ಹಮಾಲಿಗಳು ಯಾರು ಬಂದು ನೋಡಿದರೂ ಯಾರಿಗೂ ಸ್ಪಷ್ಟವಾಗದ ಒಂದು ಚಮತ್ಕಾರದ ಚುರುಕಿನ ಕಾರ್ಯ. ಕೆಲವೊಮ್ಮೆ ಅಪ್ಪಿ ತಪ್ಪಿ ಯಾರಾದರೂ ಕಂಡರೂ ಸಾಮಾನ್ಯವಾಗಿ ಕೇಳುತ್ತಿದ್ದರು 'ಹೇ.... ಹುಡುಗರೇ ಏನು ಮಾಡ್ತಿದ್ದಿರೋ?' ಅದಕ್ಕೆ ಪ್ರತಿಯಾಗಿ ಹುಡುಗರೂ ನೆಗಾಡುತ್ತಾ 'ಏನೂ ಇಲ್ಲ ಸಾರ್....' ಎಂದಷ್ಟೇ ಒಂದೆರಡು ಕಡೆಗಳಿಂದ ಪ್ರತಿಕ್ರಿಯಿಸುತ್ತಿದ್ದರು. ಅದರೆಡೆಗಳಿಂದ ಅವರದೇ ಲೋಕದಲ್ಲಿದ್ದ ಹಮಾಲಿಗಳು ಕೆಲವರು 'ಹೇ ಹೋಗ್ರೋ..... ಗೂಡ್ಸತ್ರ ಏನೋ ಮಾಡ್ತಿರಿ, ಕೊಂದು ಬಿಡ್ತೇನೆ....' ಆ ಮಾತುಗಳನ್ನೆಲ್ಲಾ ಯಾರೂ ಅಷ್ಟಾಗಿ ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಅವರ ಕೆಲವು ಬಾರಿಯ ಬೆದರಿಕೆಗೆ ನಾಟಕೀಯವಾಗಿ ಕೆಲವೊಮ್ಮೆ ಹೊರಗಡೆ ಓಡಿ ಹೋಗಿ, ಮತ್ತೆ ಪುನಃ ಯಥಾಸ್ಥಿತಿಗೆ ಬರುತ್ತಿದ್ದರು.

ಬೇಲಿಯ ಹೊರಗೆ ನಿಂತ ಹೆಂಗಸರಿಂದ ಅರ್ಧ ಬೆಲೆಗೆ ಕೊಂಡುಕೊಳ್ಳಲು ಪೆಟ್ಟಿಗೆ ಅಂಗಡಿಯ ಮಾಲಿಕರು ಅಲ್ಲೇ ಹತ್ತಾರು ಜನ ಸಾಲುಗಟ್ಟಿ ನಿಂತಿರುವರು.

ಸಮಯ ಸಂದರ್ಭವನ್ನು ಗಮನಿಸಿದ ಆಳ್ವರಮ್ಮ ತನ್ನ ಚಾತುರ್ಯವನ್ನು ಉಪಯೋಗಿಸಿ ಅವರೊಡನೆ ಒಂದಾದಳು, ಕ್ಷಣದಲ್ಲಿ ಕಾರ್ಯನಿರತಳಾದಳು. ಅವಳು ಈ ವೃತ್ತಿಯಲ್ಲಿ ಕೈ ಅದ್ದಿದ ಘಳಿಗೆ ಉತ್ತಮವಾಗಿತ್ತು!

ಮೂರು ವರ್ಷ ತುಂಬುವುದರೊಳಗೆ ಆಳ್ವರಮ್ಮ ಚಿಕ್ಕದಾಗಿ ಒಂದು ಮನೆಯನ್ನು ಮಾಡಿಕೊಂಡಳು. ಆ ಮನೆಗೆ ಬೇಕಾದ ಸಿಮೆಂಟ್, ಇಟ್ಟಿಗೆ ಕಲ್ಲು ಇತ್ಯಾದಿಗಳನ್ನೆಲ್ಲ ಬಾಡಿಗೆ ಲಾರಿಯಲ್ಲಿ ಸಾಗಿಸಿದಳು.

ಮೊದ ಮೊದಲು ಹೊಟ್ಟೆಪಾಡಿಗಾಗಿ ಕದಿಯಲು ಶುರುಮಾಡಿದ್ದಳು. ಈಗ ಮನಸ್ಸಿನ ಅಭಿಲಾಷೆಗಳಿಗೆ ವಸಂತ ತುಂಬತೊಡಗಿತು. ಪಿಚ್ಚನಿಂದ ಒಂಟಿಯಾಗಿ ಕದಿಯಲು ಸಾಲದಾಯಿತು.

ಆಳ್ವರಮ್ಮ ಚಿಂತಿಸಿದಳು, ಅಕ್ಕಪಕ್ಕದಲ್ಲಿ ಶಾಲೆಗೆ ಹೋಗುತ್ತಿದ್ದ ಮಕ್ಕಳು ತನ್ನ ಕಸುಬಿಗೆ ಎಳೆದರೆ ಹೇಗೆ? ಸುಮ್ಮನೆ ಬಿಡಲಿಲ್ಲ. ಆ ಮಕ್ಕಳ ಹೆತ್ತವರನ್ನು ಖುದ್ದಾಗಿ ಮಾತನಾಡಿಸಿದಳು.

'ಇವರೆಲ್ಲಾ ಓದಿ ಅದೇನು ಮಹಾ ತಂದು ಹಾಕ್ತಾರೆ ನಿಮಗೆ. ಏನು ಮಾತನಾಡದೆ ಅವ್ರನ್ನೆಲ್ಲರನ್ನು ನನ್ನೊಟ್ಟಿಗೆ ಕಳುಹಿಸಿ ಕೊಡಿ, ಅವ್ರಿಗೆ ತಿಂಗಳು ತಿಂಗಳು ಐವತ್ತು ರೂಪಾಯಿ ಕೊಡ್ತೇನೆ.'

ಸಕಲವೂ ಬಾಯಿಮಾತಿನ ಚಾತುರ್ಯದಲ್ಲಿತ್ತು. ನೆನಸಿದಂತೆ ನಡೆಯಿತು. ಆಕೆಯ ವ್ಯಾಪಾರ ದಿನದಿಂದ ದಿನಕ್ಕೆ ಇಮ್ಮಡಿಯಾಗತೊಡಗಿತು.

ಕಾಲಕ್ಕೆ ಮುಪ್ಪು ಹಿಡಿಯಿತು. ಪಿಚ್ಚ ಬೆಳೆದಂತೆ ಆಳ್ವರಮ್ಮನ ನರನಾಡಿಗಳು ಹಣ್ಣಾಗತೊಡಗಿದವು. ದೇಹ ಮಾತ್ರ ಮೊದಲಿಗಿಂತ ಎರಡುಪಾಲು ಉಬ್ಬಿಕೊಂಡಿತು. ಗಂಟುನೋವು, ಮಾಂಸ ಸ್ನಾಯುಗಳೆಲ್ಲಾ ಊದಿಕೊಂಡವು. ನಡೆಯಲು ಮೊದಲಿನಂತೆ ಆಗುತ್ತಿರಲಿಲ್ಲ.

ಒಂದು ದಿನ ಆಳ್ವರಮ್ಮನನ್ನು ಆಸ್ಪತ್ರೆಗೆ ಸೇರಿಸಿದರು. 'ರೋಮಾಟಿಸಂ' ಎಂದು ವೈದ್ಯರು ಪರೀಕ್ಷೆ ಮಾಡಿ ಹೇಳಿದರು. ತಿಂಗಳುಗಟ್ಟಲೆ ಹಾಸಿಗೆಯ ನಂಟು ಬೆಳೆಸಬೇಕಾಯಿತು. ದಿನಂಪ್ರತಿ ಔಷಧೋಪಚಾರ ಆಗುತ್ತಿತ್ತು. ಹಾಗೆಯೇ ರಕ್ತವನ್ನು ತೆಗೆಯುತ್ತಿದ್ದರು. 'ಚರ್ ಚರ್' ಎಂದು ಕಾಲು ಔನ್ಸಿಗಿಂತಲೂ ಅಧಿಕವಾಗಿ ರಕ್ತವನ್ನು ಚುಚ್ಚಿ ತೆಗೆಯುತ್ತಿದ್ದರು. ಯಾವುದೋ ಈ.ಎಸ್.ಆರ್. ರೀಡು ನೋಡಬೇಕಂತೆ, ಶರೀರಕ್ಕೆ ಹೋಗುತ್ತಿದ್ದ ಔಷಧಿಯ ಪ್ರಯೋಜನಕ್ಕೆ ಬರುತ್ತಿರುವುದೇ ಎಂದು ಆಗಾಗ ರಕ್ತವನ್ನು ಹೊರತೆಗೆದು ನೋಡಿದರೆ ಮಾತ್ರ ಸ್ಪಷ್ಟವಾಗುತ್ತಿತ್ತು.

ಮುದುಕಿ ತರೆದು ತರೆದು ನೋಡಿದಳು. ಸಹಿಸಲು ಆಗುತ್ತಿರಲಿಲ್ಲ. ರಕ್ತ ತೆಗೆಯಲು ಸಿಸ್ಟರ್‌ಗಳು ಬರುವಾಗಲೆಲ್ಲಾ ಶರೀರ ಒಮ್ಮೆ 'ಜುಂ' ಎನ್ನುತ್ತಿತ್ತು. ಹಾಗೆ ಅಂದು ದೊಡ್ಡ ಡಾಕ್ಟರ್ ಬಂದರು. ನರ್ಸಿನ ಬಳಿ ಕೇಳಿದರು.

'ಈ. ಎಸ್. ಆರ್. ರೀಡಿಂಗ್ ನೋಡಿದ್ದಿರೇನು?'

'ಇಲ್ಲ ಡಾಕ್ಟರ್'

'ಸರಿ ಸರಿ ರಕ್ತ ತೆಗಿ'

ಸಿರಂಜಿನ ಸೂಜಿಯನ್ನು ತೋರುತ್ತ ನರ್ಸ್ ಬರುವಾಗ ಮುದುಕಿಗೆ ಸಹಿಸಲು ಆಗುತ್ತಿರಲಿಲ್ಲ. 'ದಿನಂಪ್ರತಿ' ಹೀಗೆ ರಕ್ತವನ್ನು ತೆಗೆಯುತ್ತಾ ಇದ್ದರೆ ಶರೀರದಲ್ಲಿ ಇರೋ ರಕ್ತವೆಲ್ಲಾ ಖಾಲಿಯಾಗಿ ಬಿಡುವುದು' ಮನಸ್ಸಿನಲ್ಲಿ ಅಂದುಕೊಂಡಳು. ಬಾಯಿ ತೆರೆಯಲಿಲ್ಲ. ಬಾಯಿ ಮುಚ್ಚಿ ಸಕಲವನ್ನು ಅನುಭವಿಸಬೇಕಾದದ್ದು ಅನಿವಾರ್ಯವಾಗಿತ್ತು.

ಭೂತಕಾಲದ ಪರ್ವ ದಿನಗಳನ್ನು ಸ್ಮರಿಸಿಕೊಂಡಳು.


ತಾನು ಊರ ಹುಡುಗರನ್ನು ಸೇರಿಸಿಕೊಂಡು ದಿನಂಪ್ರತಿ ಮೂಟೆಗಳನ್ನು ಡಬ್ಬಳಗಳಿಂದ ಚುಚ್ಚುತ್ತಿರಲಿಲ್ಲವೆ. ಬಹುಶಃ ಈ ಪ್ರಕ್ರಿಯೆಯು ಅವಳ ಬಾಯನ್ನು ಮುಚ್ಚಿಸಿರಬೇಕು.

ಡಾಕ್ಟರು ಒಂದು ವಿಚಾರವನ್ನು ಮರೆತಿದ್ದರು. ಆಳ್ವರಮ್ಮನ ಮಂಚದ ತುದಿಯಲ್ಲಿ ನೇತುಬಿದ್ದಿದ್ದ ಚಾರ್ಟನ್ನು ಕೂಲಂಕಷವಾಗಿ ನೋಡುತ್ತ ಉಲಿದರು.

'ಆಳ್ವರಮ್ಮ..... ನಿಮಗೆ ಡಯಾಬಿಟಿಸ್ ಇದೆಯಲ್ಲಾ. ಶರೀರದಲ್ಲಿನ ರಕ್ತದಲ್ಲಿ ಸಕ್ಕರೆ ಅಂಶ ಜಾಸ್ತಿಯಾಗಿದೆ. ದಿನಂಪ್ರತಿ ಇನ್ಸುಲೀನ್ ಸೂಜಿ ಹಾಕಬೇಕಾಗಿದೆ. ಆದ್ದರಿಂದ ನೀವಾಗಿಯೇ ನಿಮ್ಮ ಶರೀರಕ್ಕೆ ಇಂಜೆಕ್ಷನ್ ಮಾಡ್ಲಿಕ್ಕೆ ಕಲಿತುಕೊಳ್ಳಿ. ಇನ್ನು ಮೇಲೆ ನೀವು ಸಾಯೊವರೆಗೂ ಇದು ನಿಮ್ಗೆ ಬೇಕಾಗುತ್ತೆ.....' ಎಂದು ಹೇಳಿಕೊಂಡೇ ಅವರ ಪಾಡಿಗೆ ಹೋಗುತ್ತಿದ್ದರು. ಶರೀರದಲ್ಲಿ ಸಕ್ಕರೆ ಕಾಯಿಲೆ ಇರುವ ವಿಚಾರ ತಿಳಿದಾಗ ಆಳ್ವರಮ್ಮನಿಗೆ ಚಾವಟಿಯಿಂದ ಶರೀರದ ಮೇಲೆ ರಭಸವಾದ ಒಂದು ಪೆಟ್ಟು ಬಿದ್ದಂತಾಯಿತು. ಗೂಡ್ಸುಗಾಡಿಯಲ್ಲಿದ್ದ ಸಕ್ಕರೆಗಾಗಿ ಸೂಜಿಯಿಂದ ಚುಚ್ಚಲು ಪಡ್ಡೆ ಹುಡುಗರೊಡನೆ ಹೇಳಿದ್ದಳು. ಈಗ ಒಡಲಿನಲ್ಲಿದ್ದ ಸಕ್ಕರೆ ತನ್ನ ಶರೀರದಲ್ಲಿ ತಾನೇ ಚುಚ್ಚಬೇಕಾದ ಪರಿಸ್ಥಿತಿ ಬಂದಿತು. 'ವಿಧಿಯ ಆಟ ಹೇಗಿದೆ' ಎಂದು ತನ್ನಲ್ಲೇ ಕನವರಿಸಿಕೊಂಡಳು.


ತಮಿಳಿನಲ್ಲಿ : ಜಯಸುಧಾ
ಕನ್ನಡಕ್ಕೆ : ಕೋವರ್‌ಕೊಲ್ಲಿ ಕರುಣಾಕರ,
ಸಂತೇವೇರಿ ಅಂಚೆ, ಚಿಕ್ಕಮಗಳೂರು ಜಿಲ್ಲೆ-577 137.

ಪ್ರಶ್ನೆ



ಹೂವಿಂದ ಹೂವಿಗೆ
ಹಾರುವ ಓ ದುಂಬಿ
ನಿನಗೊಂದು ಪ್ರಶ್ನೆ
ಕೇಳಲೆ? ನಾನು
ಒಂದೇ ಹೂವಿನಲಿ
ಸಿಗಲು ಸಾಕಷ್ಟು ಮಕರಂದ
ಇನ್ನೊಂದು ಹೂವಿಗೆ
ಹಾರುವೆಯಾ? ನೀನು

■ ತಾರಗೋಡ ಮಂಜುನಾಥ ಮೂರ್ತಿ



ಇನ್ನು ಕ್ರಿಕೆಟ್ ಮೊದಲಿನಂತೆ ಇರುವುದಿಲ್ಲ

ಕ್ರಿಕೆಟ್ ಜನರ ಹುಚ್ಚು, ಅಭಿಮಾನದ ಕೇಂದ್ರ. ಕ್ರಿಕೆಟ್ ಕಲಿಗಳೇ ಅವರ ಆರಾಧ್ಯ ದೈವ. ಅವರು ನಿಂತರೆ, ಕುಳಿತರೆ ಅದೊಂದು ಸುದ್ದಿ. ಕ್ರಿಕೆಟ್ ವೀರರ ಪೋಸ್ಟರುಗಳೇ ದೇವರ ಪಟಗಳಿಗಿಂತ ಹೆಚ್ಚಾಗಿ ಮನೆಯ ತುಂಬಾ. ಟಿವಿಯಲ್ಲಿ ಪಂದ್ಯ ನೇರ ಪ್ರಸಾರವಾದರೆ, ಕೆಲಸ ಕಾರ್ಯ ಬಂದ್ ಆಗಿ ಎಲ್ಲ ಮನೆ ಸೇರುತ್ತಾ ಇದ್ದರು. ಹೋಟೆಲು, ಟಿವಿ ಅಂಗಡಿಗಳ ಮುಂದೆ ಗುಂಪು ಸೇರಿ 'ಮುಂದೇನಾಯಿತು?' ಎಂದು ಇಣುಕುವ ಕುತೂಹಲ.

ಇನ್ನು ಮುಂದೆ ಆ ಕ್ರೇಜ್ ಖಂಡಿತ ಇರದು. ಏಕೆಂದರೆ ನಂಬಿದ ಜನರ ಬೆನ್ನಿಗೇ ಚೂರಿ ಇಕ್ಕಿ ಕಾಸು ಮಾಡಿದ ಆಟಗಾರರನ್ನು ಕೀಳು ಜಂತುಗಳಿಗಿಂತ ಕಡೆಯಾಗಿ ಕಾಣುವುದೇ ಈಗ ಜನರ ಮನಸ್ಸಲ್ಲಿ ಅಚ್ಚೊತ್ತಿ ನಿಂತಿದೆ.



ಈಗ ಒಂದಂತೂ ಸಾಬೀತಾಗಿದೆ. ನಮ್ಮ ಕ್ರಿಕೆಟ್ ಜನರಂಥ ನಾಚಿಕೆ ಬಿಟ್ಟವರು, ನಾಟಕ ಆಡುವವರು ಜಗತ್ತಿನಲ್ಲಿ ಎಲ್ಲೂ ಸಿಗಲಾರರು. ದಕ್ಷಿಣ ಆಫ್ರಿಕಾದ ಹ್ಯಾನ್ಸಿ ಕ್ರೋನಿಯೇ ಸಿಕ್ಕಿಬಿದ್ದಿದ್ದಾನೆ. ಇವರು ಸಿಕ್ಕಿಕೊಂಡಿಲ್ಲ ಎಂಬುದಷ್ಟೇ ವ್ಯತ್ಯಾಸ. ಆದರೆ ಇಬ್ಬರೂ ಕಳ್ಳರೇ.... ಮಹಾ ಸುಳ್ಳರು. ಅದೆಲ್ಲಕ್ಕಿಂತ ಹೆಚ್ಚಾಗಿ 'ಕ್ರಿಕೆಟ್‌ನಲ್ಲಿ ಬೆಟ್ಟಿಂಗ್ ನಡೆಯುತ್ತಿದೆಯೇ?' 'ಬೆಟ್ಟಿಂಗ್ ಸಾಧ್ಯವೇ ಇಲ್ಲ' ಎಂಬಂಥ ಮುಕ್ತಾ ಫಲಕಗಳನ್ನು ಉದುರಿಸುತ್ತಾ ಇದ್ದಾರೆ. ಇದು ಬಹುಷಃ ನೀಚತನದ ಪರಮಾವಧಿ.

ಇದು ಇಂದಿನದಲ್ಲ. ಬಹಳ ಹಿಂದೆಯೇ ಮನೋಜ್ ಪ್ರಭಾಕರ್ ಗಂಟಲು ಹರಿಯುವ ಹಾಗೆ ಬಡಿದುಕೊಂಡಿದ್ದ. 'ಉಲ್ಟಾ ಚೋರ್ ಕೋತ್‌ವಾಲ್‌ಕೋ ಡಾಂಟಾ' ಎಂಬಂತೆ ಕಳ್ಳ ಖದೀಮ ಕ್ರಿಕೆಟ್ ಪುಢಾರಿಗಳು ಆತನನ್ನೇ ಬಾಯಿ ಬಡಿದು ಕೂರಿಸಿದರು. ಆತ ಸುಮ್ಮನೆ ತನ್ನ ಕೆರಿಯರ್ ಹಾಳು ಮಾಡಿಕೊಂಡ.

ಈ ಹ್ಯಾನ್ಸಿ ಕ್ರೋನಿಯೇ ಸಿಕ್ಕಿಬಿದ್ದ. ಆಳಿಗೊಂದು ಕಲ್ಲು ಎಂಬಂತೆ ಎಲ್ಲ ವರ್ತಿಸುತ್ತಾ ಇದ್ದಾರೆ.

ಕ್ರಿಕೆಟ್ ಸಭ್ಯರ ಆಟ. ಇದೊಂದು ಮಿಥ್ಯೆ. ಕ್ರೀಡಾಂಗಣದಲ್ಲಿ ಆಟಗಾರರು ವರ್ತಿಸುವ ರೀತಿ, ಅವರು ಉಪಯೋಗಿಸುವ ಬೈಗಳು, ವರ್ತನೆ ನೋಡಿದವರಿಗೆ ಇದು ಸಭ್ಯರ ಆಟ ಎಂದು ನಂಬುವುದು ಕಷ್ಟ. ಒಂದು ಕಾಲಕ್ಕೆ ಗೆಲುವು ಮುಖ್ಯ, ದೇಶದ ಪ್ರತಿಷ್ಠೆ ಮುಖ್ಯ ಎನಿಸಿತ್ತು. ಇಂಗ್ಲೆಂಡ್-ಆಸ್ಟ್ರೇಲಿಯಾ, ಭಾರತ-ಪಾಕಿಸ್ತಾನ ಪಂದ್ಯ ನಡೆದರೆ ಅದೊಂದು ಮಹಾ ಯುದ್ಧದ ಹಾಗೆ. ಎರಡೂ ದೇಶಗಳ ಜನ ಪಂದ್ಯದ ಉದ್ದಕ್ಕೂ ತುದಿಗಾಲಲ್ಲಿ ನಿಂತಿರುತ್ತಾ ಇದ್ದರು. ಇಂಗ್ಲೆಂಡ್-ಆಸ್ಟ್ರೇಲಿಯಾ ಸೆಣಸಾಟ ಎಂಥ ವಿಚಿತ್ರ ಆಯಾಮ ಪಡೆಯಿತು ಎಂದರೆ, ಬ್ಯಾಟುಗಾರನ ಮೈಮೇಲೆ ಚೆಂಡೆಸೆದು, ಕೈಕಾಲು ಮುರಿದು ಗೆಲ್ಲುವ ತಂತ್ರ ಜಾರಿಗೆ ಬಂತು. ಅದನ್ನೇ 'ಬಾಡಿಲೈನ್' ಬೌಲಿಂಗ್ ಎಂದರು. ಬೌನ್ಸರ್‌ಗಳನ್ನು ಎಸೆದು ತಲೆ ಒಡೆದರು. ಖ್ಯಾತ ಬೌಲರ್ ಲಿಂಡ್ವಾಲ್ ಎಸೆದ ಬಾಲ್ ಆಟಗಾರನ ಬೂಟಿಗೆ ಬಿದ್ದು, ಬೆರಳು ಒಡೆದು ರಕ್ತ ಚಿಮ್ಮಿ, ಬೂಟಿಂದ ಅವನ ಕಾಲು ತೆಗೆದು ಚಿಕಿತ್ಸೆ ನೀಡುವುದೇ ಪ್ರಯಾಸ ಆಯಿತು. ಈ ಬಗ್ಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ತಲೆ ಕೆಡಿಸಿಕೊಂಡಿತು. ಬಾಡಿಲೈನ್ ಬೌಲಿಂಗ್ ಮೇಲೆ ನಿಯಂತ್ರಣ ತಂದಿತು. ವಿಶೇಷ ರೀತಿಯ ನಿಯಮಗಳನ್ನು ಜಾರಿಗೆ ತಂದಿತು.

ಆದರೂ ಸ್ಪಿನ್ ಬದಲು ವೇಗದ ಬೌಲಿಂಗೇ ಮೇಲುಗೈ ಪಡೆಯಿತು. ಈಗ ಬ್ಯಾಟುಗಾರರು ಯುದ್ಧಕ್ಕೆ ಹೊರಟ ಸೈನಿಕರ ಹಾಗೆ ನಾನಾ ಬಗೆಯ ಕವಚ ಶಿರಸ್ತ್ರಾಣಗಳನ್ನು ತೊಟ್ಟುಕೊಂಡೇ ಕಣಕ್ಕೆ ಇಳಿಯಬೇಕಾಗುತ್ತಿದೆ.

ಕೆರ್ರಿ ಪ್ಯಾಕರ್ ಕ್ರಿಕೆಟ್‌ನಲ್ಲಿ ಹಣದ ಹುಚ್ಚು ಆರಂಭಿಸಿದ. ಆತ ಒಂದು ದಿನದ ಸೀಮಿತ ಓವರ್‌ಗಳ ಪಂದ್ಯ ಆರಂಭಿಸಿದಾಗ ಜನ ನಕ್ಕಿದ್ದರು. ಅವನೊಬ್ಬ ಹುಚ್ಚ ಎಂದು ಗೇಲಿ ಮಾಡಿದ್ದರು. ಕಂಗೆಡದ ಪ್ಯಾಕರ್ ದುಡ್ಡು ಕೊಟ್ಟು ಆಟಗಾರರನ್ನು ಸೆಳೆದುಕೊಂಡ. ಅವನ ಜೊತೆ ಸೇರಿದ ಆಟಗಾರರನ್ನು ದೇಶಗಳೇ ಬಹಿಷ್ಕರಿಸಿದವು. ಪ್ಯಾಕರ್ ದುಡ್ಡು ಕಳೆದುಕೊಂಡ. ಆದರೆ ಆತ ಹಾಕಿಕೊಟ್ಟ ಹಾದಿ ಜನಪ್ರಿಯ.

1983ರಲ್ಲಿ ಒಂದು ದಿನದ 65 ಪಂದ್ಯಗಳು ಮಾತ್ರ ನಡೆದಿದ್ದರೆ, ಕಳೆದ ವರ್ಷ ಅಂಥ 154 ಪಂದ್ಯಗಳು ನಡೆದವು. ಈ ವರ್ಷ ನಾಲ್ಕು ತಿಂಗಳ ಕಳೆಯುವಷ್ಟರಲ್ಲಿ ಈಗಾಗಲೇ 57 ಅಂತಾರಾಷ್ಟ್ರೀಯ ಒಂದು ದಿನದ ಪಂದ್ಯಗಳು ನಡೆದಿವೆ. ಅದಕ್ಕೆ ಮುಖ್ಯ ಕಾರಣ ಎಂದರೆ ಅಲ್ಲಿ ಸಂಪಾದಿಸ ಬಹುದಾದ ಹಣ. ಮಂಡಳಿಗಳು, ಆಟಗಾರರಿಬ್ಬರಿಗೂ ಕೈ ತುಂಬಾ ದುಡ್ಡು. ಈ ಪಂದ್ಯಗಳು ಜನಪ್ರಿಯ ಆಗುತ್ತಾ ಇದ್ದ ಹಾಗೆ ಟಿವಿ, ಜಾಹೀರಾತು. ಸ್ಪಾನ್ಸರ್ ಎಂಬ ಹೊಸ ರೋಗ ಅಂಟಿಕೊಂಡಿತು. ಕ್ರಿಕೆಟ್ ಆಟಗಾರರು ದಿನ ಬೆಳಗಾಗುವುದರೊಳಗೆ ಕೋಟ್ಯಾಧೀಶರಾದರು.

ಈಗ ಹಣ ಸಂಪಾದನೆಯೇ ಮುಖ್ಯ. ದೇಶ, ಆಟ ಎಲ್ಲ ಗೌಣ. ಒಂದು ಸಣ್ಣ ಉದಾಹರಣೆ ನೋಡಿ. ಇತ್ತೀಚೆಗೆ ಬೆಂಗಳೂರಲ್ಲಿ ಆಂಧ್ರ-ಕರ್ನಾಟಕ ತಂಡಗಳ ನಡುವೆ ರಣಜಿ ಸೆಮಿಫೈನಲ್ ನಡೆಯಿತು. ಕ್ರಿಕೆಟ್ ರಂಗದಲ್ಲಿ ಇದೊಂದು ಮುಖ್ಯ ಪಂದ್ಯ. ಆದರೆ ರಾಜ್ಯದ ಇಬ್ಬರು ಆಟಗಾರರು ಇರಲೇ ಇಲ್ಲ. ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಇಬ್ಬರೂ ಪಂದ್ಯದ ವಿಷಯ ಗೊತ್ತಿದ್ದರೂ ಇಂಗ್ಲೆಂಡಿನ ಕೌಂಟಿಯಲ್ಲಿ ಆಡಲು ಒಪ್ಪಿಕೊಂಡಿದ್ದರು. ಕಾರಣ ಇಷ್ಟೇ; ರಣಜಿಯಲ್ಲಿ ಆಡಿದರೆ ಕೀರ್ತಿ ಬರುತ್ತದೆ. ಅದು ಇಬ್ಬರಿಗೂ ಸಾಕಷ್ಟು ದೊರೆತಿದೆ. ಆದರೆ ಇಂಗ್ಲೆಂಡಿನ ಕೌಂಟಿಯಲ್ಲಿ ಆಡಿದರೆ ಕೈ ತುಂಬಾ ದುಡ್ಡು ಬರುತ್ತದೆ.

ಪಂದ್ಯಗಳಿಗಿಂತ ಹಣ ಮುಖ್ಯ ಆದಾಗ ಬೆಟ್ಟಿಂಗ್ ಮೇಲುಗೈ ಪಡೆಯಿತು. ಆಟಗಾರರಿಗೂ ಇದು ಗಳಿಕೆಯ ಸುಲಭ ಮಾರ್ಗ. ಅದರಲ್ಲೂ ಗೆಲ್ಲಲು ಶ್ರಮಿಸಬೇಕಿಲ್ಲ. ಪಂದ್ಯ ಸೋಲುವಂತೆ ಆಡಬೇಕು ಎಂದಾಗ ಖುಷಿಯಿಂದ ಒಪ್ಪಿಕೊಂಡರು. ದೇಶ, ಆಟ ನೋಡುವ ಅಭಿಮಾನಿಗಳು, ಕ್ರಿಕೆಟ್ ಯಾವುದೂ ಮುಖ್ಯವಲ್ಲ ಎನಿಸಿಬಿಟ್ಟಿತು.

ಬೀದಿ ಬೀದಿಗಳಲ್ಲಿ ಬೆಟ್ಟಿಂಗ್ ನಡೆಯತೊಡಗಿತು. ಬೆಂಗಳೂರಲ್ಲಿ ಎಷ್ಟೋ ಅಂತಾರಾಷ್ಟ್ರೀಯ ಒಂದು ದಿನದ ಪಂದ್ಯಗಳು ನಡೆಯುವಾಗ ಅಸಾಧಾರಣ ಬೆಟ್ಟಿಂಗ್ ನಡೆಯುತ್ತಾ ಇತ್ತು. ಪೊಲೀಸರು ಎಷ್ಟೋ ಕಡೆ ದಾಳಿ ಮಾಡಿ ಹಣ, ಬೆಟ್ಟಿಂಗ್‌ಗೆ ಉಪಯೋಗಿಸುತ್ತಿದ್ದ ಸಾಧನಗಳನ್ನು ವಶಪಡಿಸಿಕೊಂಡಿದ್ದೂ ಇದೆ. ಆದರೆ ಇದೊಂದು ಜೂಜುಕೋರರ ಮಾಮೂಲು ಅಕ್ರಮ ಗಳಿಕೆಯ ತಂತ್ರ ಎಂದೇ ಭಾವಿಸಲಾಗಿತ್ತು. ಅಲ್ಲಲ್ಲಿ ಈ ಬೆಟ್ಟಿಂಗ್ ದೊರೆಗಳು ಕ್ರಿಕೆಟ್ ಆಟಗಾರರ ಸಂಪರ್ಕ ಸಾಧಿಸಿ ದುಡ್ಡು ಮಾಡುವ ಯತ್ನ ನಡೆಸಿದ್ದು ಬೆಳಕಿಗೆ ಬಂತು. ಕಳೆದ ವಿಶ್ವಕಪ್ ಪಂದ್ಯದ ವೇಳೆ ಹಲವು ಬೆಟ್ಟಿಂಗ್ ಏಜೆಂಟರು, ತಾವು ಪಂದ್ಯದ ಗತಿ ತಿಳಿಯಲು ಆಟಗಾರರಿಗೆ ಲಂಚ ಕೊಡುತ್ತಿರುವುದಾಗಿ ಬಹಿರಂಗವಾಗಿಯೇ ಹೇಳಿದ್ದರು. ಆದರೆ ಐದು ವರ್ಷದ ಹಿಂದೆ, ಸಿಂಗರ್‌ಕಪ್‌ನಲ್ಲಿ ಪಂದ್ಯ ಸೋಲಲೆಂದೇ ತಮಗೆ ಐದು ಲಕ್ಷ ರೂಪಾಯಿ ನೀಡಲು ಮುಂದಾಗಿದ್ದ ವಿಷಯ ಮನೋಜ್ ಪ್ರಭಾಕರ್ ಹೇಳಿದಾಗ, ಆತನದೆಲ್ಲ ಬೊಗಳೆ ಎಂದು ಬಾಯಿ ಬಡಿಯಲಾಯಿತು. ಆತ ಹಣದ ಆಮಿಷಕ್ಕೆ ಮಣಿಯದೇ ಇದ್ದಾಗ ಆರಂಭ ಆಟಗಾರನಾಗಿದ್ದ ಆತನನ್ನು ಬೇಕೆಂದೇ ಆರನೇ ಆಟಗಾರನಾಗಿ ಕಣಕ್ಕೆ ಇಳಿಸಲಾಯಿತು.

ಅವತ್ತಿಂದ ಇವತ್ತಿನವರೆಗೆ ಒಳಗೊಳಗೇ ಬೆಟ್ಟಿಂಗ್ ನಡೆಯುತ್ತಾ ಬಂದಿದೆ. ವರ್ಷಕ್ಕೆ ಹತ್ತು ಸಾವಿರ ಕೋಟಿವರೆಗೆ ಬೆಟ್ಟಿಂಗ್‌ನಲ್ಲಿ ಹಣ ಚಲಾವಣೆ ಆಗುತ್ತಲಿದೆ ಎಂದು ಅಂದಾಜಿದೆ. ಭಾರತದ ಕ್ರಿಕೆಟ್ ತಂಡದ ಮಾಜಿ ಕ್ಯಾಪ್ಟನ್ ಒಬ್ಬ ಸ್ವಯಂ ವರಮಾನ ಘೋಷಣೆ ಯೋಜನೆ ಜಾರಿಗೆ ಬಂದಾಗ ವಿದೇಶದಿಂದ ಹದಿನಾರು ಕೋಟಿ ರೂಪಾಯಿಯಷ್ಟು ಹಣ ಭಾರತಕ್ಕೆ ತಂದ. ಹಾಗೆ ಮಾಡಿದ್ದು ಅಝರುದ್ದೀನ್ ಎಂಬುದೀಗ ಬಹಿರಂಗ ಸತ್ಯ. ಆದರೂ ಆತನನ್ನು ಯಾರೂ ಪ್ರಶ್ನಿಸಲು ಮುಂದಾಗಲಿಲ್ಲ.



ಬಂಧಿತನಾಗಿರುವ ಸಂಜೀವ್ ಚಾವ್ಲಾ.

ಹಾಗೆ ನೋಡಿದರೆ ಕ್ರೋನಿಯೇ ಸಿಕ್ಕಿಬಿದ್ದಿದ್ದೂ ಆಕಸ್ಮಿಕ. ಈಶ್ವರಸಿಂಗ್ ಸುಲಿಗೆ ತಡೆ ದಳದ ಇನ್‌ಸ್ಪೆಕ್ಟರ್. ಅಪೋಲೋ ಟೈರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಓಂಕಾರ್‌ಸಿಂಗ್ ಕನ್ವರ್. ಆತನಿಗೆ ಬರುತ್ತಿದ್ದ ಹಣದ ಬೇಡಿಕೆ, ಬೆದರಿಕೆ ಕರೆಗಳನ್ನು ಪತ್ತೆ ಹಚ್ಚುವ




ಕೊಚ್ಚಿಯಲ್ಲಿ ಪಂದ್ಯವಾಡಲು ಬಂದಾಗ ಪೊಲೀಸರಿಂದ ರಕ್ಷಣೆ. ಈಗ ಅದೇ ವ್ಯಕ್ತಿ ಪೊಲೀಸರ ಶಿಕಾರಿಯ ಗುರಿ.

ಕಾರ್ಯ ಸಿಂಗ್ ಪಾಲಿಗೆ ಬಂತು. ಸಿಂಗ್ ಕ್ರಿಕೆಟ್ ಅಭಿಮಾನಿ ಕೂಡ. ದಕ್ಷಿಣ ಏಷಿಯಾ, ಅರಬ್ ಎಮಿರೇಟ್ಸ್‌ಗಳಲ್ಲಿ ನೆಲೆಯಾಗಿರುವ ಸುಮಾರು 150 ಪಾತಕಿಗಳಲ್ಲಿ ಒಬ್ಬರದೇ ಈ ಬೆದರಿಕೆ, ಸುಲಿಗೆ ಕೆಲಸ. ಅವರಲ್ಲಿ ಯಾರು ಈ ಕೆಲಸಕ್ಕೆ ಮುಂದಾಗಿದ್ದಾರೆ ಎಂದು ಪತ್ತೆ ಹಚ್ಚುವುದೇ ಸಿಂಗ್ ಕೆಲಸ. ಇದೇ ಫೋನ್‌ಗಳಿಂದ ಮಾಜಿ ನಟ, ಟಿ-ಸಿರೀಸ್ ಕೆಸೆಟ್ ಗುಂಪಿನ ಮುಖ್ಯಸ್ಥ ಕಿಶನ್ ಕುಮಾರ್‌ಗೂ ಬೆದರಿಕೆ ಬರುತ್ತಾ ಇದ್ದವು. ಹಾಗಾಗಿ ಕಿಶನ್‌ಕುಮಾರ್‌ಗೆ ಬರುತ್ತಿದ್ದ ಕರೆಗಳ ಮೇಲೆ ಸಿಂಗ್ ಕಣ್ಣಿಟ್ಟರು.

ಕಿಶನ್‌ಗೆ ಪದೇ ಪದೇ ಇಬ್ಬರು ವ್ಯಕ್ತಿಗಳಿಂದ ಮೊಬೈಲ್ ಫೋನ್ ಕರೆ ಬರುತ್ತಿದ್ದವು. ಅಲ್ಲಿ ಏನೋ ಗುಟ್ಟಿನ ವ್ಯವಹಾರದ ವಾಸನೆ ಬಡಿಯಿತು. ಹೀಗಾಗಿ ಆ ಕರೆಗಳನ್ನು ರೆಕಾರ್ಡ್ ಮಾಡಿಕೊಳ್ಳಲು ಸಿಂಗ್ ಅನುಮತಿ ಪಡೆದುಕೊಂಡರು. ಕಿಶನ್‌ಕುಮಾರ್‌ನ ಸತತ ಸಂಪರ್ಕದಲ್ಲಿ ಇರುತ್ತಿದ್ದವರು ಲಂಡನ್‌ನ ಆಕ್ಸ್‌ಫರ್ಡ್ ಸ್ಟ್ರೀಟ್‌ನಲ್ಲಿ ಗಾರ್ಮೆಂಟ್ ಅಂಗಡಿ ಇರಿಸಿಕೊಂಡಿದ್ದ ಸಂಜೀವ್ ಚಾವ್ಲಾ ಹಾಗೂ ದೆಹಲಿಯಲ್ಲಿ ಪ್ರಿಂಟಿಂಗ್ ಪ್ರೆಸ್ ಇರಿಸಿಕೊಂಡಿದ್ದ ರಾಜೇಶ್ ಕಾಲ್ರಾನಿಂದ. ಮಾರ್ಚ್ ಮೊದಲವಾರ ಅನುಮತಿ ದೊರೆಯಿತು. ಒಂದು ದಿನ ಸಂಜೀವ್ ಫೋನ್ ಮಾಡಿ 'ಹ್ಯಾನ್ಸಿ ಜೊತೆ ಮಾತುಕತೆ ಆಗಿದೆ...' ಎಂದಾಗ ಸಿಂಗ್ ಕಿವಿ ಚುರುಕಾಯಿತು. ಅಷ್ಟೇ ಅಲ್ಲ 'ಸಖತ್ ಕಾಸು ಮಾಡಬಹುದು' ಎಂಬ ಮುಂದಿನ ವಾಕ್ಯ ಕೇಳುತ್ತಿದ್ದ ಹಾಗೆ 'ಇದೊಂದು ಭಾರಿ ಹಗರಣ' ಎಂಬುದು ಸಿಂಗ್‌ಗೆ ಖಚಿತವಾಯಿತು. ಹಾಗಾಗಿಯೇ ಆತ ಸಂಜೀವ್ ಚಾವ್ಲಾನ ಫೋನ್ ಕರೆಗಳ ಮೇಲೆ ನಿಯಂತ್ರಣ ಬಿಗಿಗೊಳಿಸಿದರು.

ಮಾರ್ಚ್ 14ರ ಮುಂಜಾನೆ 6. 34 ನಿಮಿಷ, ಸಂಜೀವ್ ಚಾವ್ಲಾ ದೆಹಲಿಯ ತಾಜ್ ಪ್ಯಾಲೇಸ್‌ನಲ್ಲಿ ತಂಗಿದ್ದ ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ಕ್ಯಾಪ್ಟನ್‌ಗೆ ಫೋನ್ ಮಾಡಿ 'ಹಾಯ್, ಹ್ಯಾನ್ಸೀ....' ಎನ್ನುತ್ತಿದ್ದುದು ಕೇಳಿದ್ದೇ ಸಿಂಗ್ ಬೆಚ್ಚಿಬಿದ್ದರು. ಒಬ್ಬ ಮಾಮೂಲಿ ಬಿಸಿನೆಸ್‌ಮನ್ ಕ್ರಿಕೆಟ್ ಉತ್ತುಂಗದಲ್ಲಿರುವ ವ್ಯಕ್ತಿಯೊಬ್ಬನನ್ನು ಹೆಸರಿಡಿದು ಕರೆಯುವ ವಿಚಾರವೇ ತಳಮಳ ಹುಟ್ಟಿಸಿತ್ತು.

ಮುಂದಿನ ಅವರಿಬ್ಬರ ಸಂಭಾಷಣೆ ಈ ಇತಿಹಾಸದ ಪುಟ ಸೇರಿದೆ. ಮುಂದಿನ ವಿಚಾರ ಏನೆಂಬುದೇ ಈಗ ಕುತೂಹಲದ ವಿಷಯ. ದಕ್ಷಿಣ ಆಫ್ರಿಕಾದ ಉದ್ಯಮಿ ಹಮೀದ್ ಕಾಸಿಂ ಈ ವ್ಯವಹಾರದ ಮಧ್ಯವರ್ತಿ. ಕ್ರೋನಿಯೇ ಮ್ಯಾಚ್ ಸೋಲಲು ಒಪ್ಪಿದ ಮೇಲೆ ಆತನ ಪಾಲಿನ ಹಣ ತಲುಪಿಸುವ ಜವಾಬ್ದಾರಿ ಹೊತ್ತಿದ್ದ. ಹಾಗೆ ಕ್ರೋನಿಯೇ ಪಡೆದ ಮೊತ್ತ



ಎಷ್ಟೇ ಕೆಟ್ಟ ಕ್ರಿಕೆಟ್ ಬಂದ್ರೂ,
'ಟೀವಿ' ಆರಿಸದೇ ನೋಡುತ್ತಾ...
ಜೀವನದಲ್ಲಿ 'ತಾಳ್ಮೆ' ಕಲಿತುಕೊಂಡೆ!

ಭಾರತದ ಶಂಕಿತ ಆಟಗಾರರು


ಕಪಿಲ್‌ದೇವ್


ಅಜಯ್ ಜಡೇಜಾ


ಅಝರುದ್ದೀನ್


ನಯನ್ ಮೋಂಗಿಯ

ಸುಮಾರು ಆರೂವರೆ ಲಕ್ಷ ರೂಪಾಯಿ. ಇದೇನೂ ಭಾರೀ ದೊಡ್ಡ ಮೊತ್ತದ ಹಣ ಅಲ್ಲ ಎನ್ನಿಸದಿರಬಹುದು. ಆದರೆ ಬುಕ್ಕೀಗಳು ಒಂದೊಂದು ಪಂದ್ಯದಲ್ಲೂ ಮಾಡುವ ಹಣ ಲೆಕ್ಕ ಹಾಕಿದರೆ, ಇದು ಹಲವು ಕೋಟಿರೂ. ಗಳು. ಇದಕ್ಕೆ ತೆರಿಗೆ ಇಲ್ಲ. ಮುಖ್ಯ, ಇವರನ್ನು ನಂಬಿ ಸಾಮಾನ್ಯ ಜನ ನೂರು, ಸಾವಿರದ ಲೆಕ್ಕದಲ್ಲಿ ಬೆಟ್ಟಿಂಗ್‌ನಲ್ಲಿ ಹಣ ತೊಡಗಿಸುತ್ತಾರೆ. ಮನೆಯಲ್ಲಿ ಕುಳಿತು ಒಂದು ಫೋನ್ ಕರೆ ಮಾಡಿ ಕ್ರಿಕೆಟ್‌ನಲ್ಲಿ ಬೆಟ್ಟಿಂಗ್ ಮಾಡಬಹುದು. ಲಾಟರಿಗಿಂತಲೂ ವ್ಯಾಪಕವಾದ ಗೀಳಾಗಿದೆ ಇದು. ಕಾಲೇಜು ಹುಡುಗ, ಹುಡುಗಿಯರು, ಉದ್ಯಮಿಗಳು, ನಾಳೆ ಬೆಳಗಾಗುವುದರೊಳಗೆ ಲಕ್ಷಾಧೀಶರಾಗಬಹುದೆಂದು ಕನಸು ಕಟ್ಟಿಕೊಂಡ ನೌಕರರು ಸಾವಿರಾರು ರೂಪಾಯಿ ಹಣ ತೊಡಗಿಸುತ್ತಾರೆ. ಬುಕ್ಕೀ ಆದವನು ತನಗೆ ಕೈಕಚ್ಚಬಹುದು ಅನಿಸಿದಾಗ, ಇಡೀ ಪಂದ್ಯದಲ್ಲಿ ಯಾರು ಸೋಲಬೇಕು, ಯಾರೂ ಗೆಲ್ಲಬೇಕು ಎಂಬುದನ್ನು ನಿರ್ಧರಿಸುತ್ತಾನೆ. ಲಕ್ಷಾಂತರ ಜನರ ಕೋಟ್ಯಾಂತರ ರೂಪಾಯಿ ಜೇಬಿಗೆ ಇಳಿಬಿಟ್ಟುಕೊಂಡು, ಆಟಗಾರರಿಗೂ ಒಂದಿಷ್ಟು ಎಂಜಲು ಎಸೆದು ಲಾಭ ಮಾಡಿಕೊಳ್ಳುತ್ತಾನೆ.

ಭಾರತೀಯ ಕ್ರಿಕೆಟ್ ಆಟಗಾರರಲ್ಲಿ ಅಝರ್, ಕಪಿಲ್‌ದೇವ್, ನಯನ್ ಮೋಂಗಿಯಾ, ಅಜಯ್ ಜಡೇಜಾ ಬುಕ್ಕೀಗಳ ಕೈಗೊಂಬೆಗಳಾಗಿ ಸಾಕಷ್ಟು ಹಣ ದೋಚಿದ್ದಾರೆಂಬ ಅನುಮಾನ ಇದೆ. ಇದೆಲ್ಲ ಅಪ್ಪಟ ಸುಳ್ಳು ಎಂದು ಅಝರ್ ಹೇಳಿಕೆ ನೀಡಿ ಕೈ ತೊಳೆದುಕೊಂಡಿದ್ದಾನೆ.

'ಕ್ರಿಕೆಟ್ ಆಟಗಾರರ ವೈಭವದ ಜೀವನ ನೋಡಿ ಕರುಬುವ ಜನ ಹುಟ್ಟಿಸಿದ ವದಂತಿ ಇದು' ಎಂದು ಅಜಯ್ ಜಡೇಜಾ ಹೇಳಿಕೆ ನೀಡಿ ರಕ್ಷಣೆ ಪಡೆಯಲು ಯತ್ನಿಸಿದ್ದಾನೆ. ಸತ್ಯ ಏನೆಂಬುದು ಸದ್ಯದಲ್ಲೇ ಬಯಲಾಗುವುದು ಖಚಿತ.

ಸಂಜೀವ್ ಚಾವ್ಲಾ, ರಾಜೇಶ್ ಕಾಲ್ರಾ, ಹಾಗೂ ಕಿರಣ್ ಕುಮಾರ್ ಈಗ ಬಂಧನದಲ್ಲಿ ಇದ್ದಾರೆ. ಬರೀ ಒಂದು ಟೆಲಿಫೋನ್ ಕರೆ ಬಾಂಬ್ ಸಿಡಿದಂತೆ ಅಲ್ಲೋಲ ಕಲ್ಲೋಲ ಉಂಟು ಮಾಡಿದೆ. ಬಂಧಿತರು ಸತ್ಯ ಏನೆಂದು ಬಯಲು ಮಾಡಿದರೆ, ಭಾರತದಲ್ಲಿ ಕ್ರಿಕೆಟ್ ಗತಿ ಏನಾಗಬಹುದು? ಇಷ್ಟಂತೂ ನಿಜ, ಅದು ಮೊದಲಂತೆ ಖಂಡಿತಾ ಇರುವುದಿಲ್ಲ.

■ ಸುಹಾಸ



ನೀವು 'ಸ್ವಂತ ಮನೆ' ಕನಸು ಕಾಣುತ್ತಿದ್ದೀರಾ?

ಸ್ವಂತ 'ಮನೆ' ಹೊಂದ ಬಯಸುವವರು ತಿಳಿದಿರಲೇಬೇಕಾದ ಸಂಪೂರ್ಣ ವಿವರಗಳನ್ನು 'ಬದುಕು' ಒದಗಿಸುತ್ತದೆ. ಸ್ವಂತ ಮನೆ ಕಟ್ಟುವವರಿಗಾಗಿಯೇ ''ಸ್ವಂತ ಮನೆ'' ಹೆಸರಿನ ವರ್ಣರಂಜಿತ ಲೇಖನ ಮಾಲೆ ಆರಂಭಿಸುತ್ತಿದ್ದೇವೆ. ಈ ವಿನೂತನ ಲೇಖನಮಾಲೆಯಲ್ಲಿ ಈ ಕೆಳಗಿನ ವಿಷಯಗಳಿರುತ್ತವೆ.

- ನಿವೇಶನ ಆಯ್ಕೆ
- ಬ್ಯಾಂಕ್ ಸಾಲ ಸೌಲಭ್ಯ
- ಮನೆ ಅಂದಕ್ಕಾಗಿ ಸರಳ ಉಪಾಯಗಳು
- ನಿವೇಶನ ನೋಂದಾವಣೆ
- ಕಾಂಟ್ರ್ಯಾಕ್ಟರ್ ಜೊತೆಗಿನ ವ್ಯವಹಾರ
- ಕಟ್ಟಡ ಸಾಮಗ್ರಿಗಳ ಗುಣ ಪರೀಕ್ಷೆ
- ಕಡಿಮೆ ವೆಚ್ಚದ ಮನೆ ನಿರ್ಮಾಣ....

ಇತ್ಯಾದಿ ಪ್ರತಿಯೊಬ್ಬರೂ ತಿಳಿದಿರಬೇಕಾದ ಸರಳ ಮಾಹಿತಿಗಳು

'ಬಿಸಿಲ ಬದುಕು' ಲೇಖನಮಾಲೆ ಆರಂಭ !

ಪ್ರಕಟಣೆಯ ದಿನಾಂಕ ನಿರೀಕ್ಷಿಸಿ

ನಿಮ್ಮ ಪ್ರತಿ ಕಾಯ್ದಿರಿಸಲು ಮರೆಯಬೇಡಿ !

ಮನೆ ಕಟ್ಟುವ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಪ್ರಶ್ನೆ, ಅನುಮಾನ, ಸಂದೇಹಗಳಿದ್ದರೆ ಈ ವಿಳಾಸಕ್ಕೆ ಬರೆಯಿರಿ ತಜ್ಞರ ಮೂಲಕ ಉತ್ತರ ಒದಗಿಸುತ್ತೇವೆ.

ವಿಳಾಸ : ಬಿಸಿಲ ಬದುಕು, 552, 15ನೇ ಮೇನ್, 3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್,
ಬಸವೇಶ್ವರನಗರ, ಬೆಂಗಳೂರು – 560 079 ಫೋನ್ : 3227810,



ಕಣ್ಣಿನ ದೋಷಕ್ಕಾಗಿ ಕಪ್ಪು ಕನ್ನಡಕ ಹಾಕಿಲ್ಲಯ್ಯಾ
ಸಭೆ ಸಮಾರಂಭಗಳಲ್ಲಿ ನಿದ್ರಿಸಿದರೂ ಯಾರಿಗೂ
ಗೊತ್ತಾಗಬಾರದು ಅಂತಾ......



ನಾಳೆ ಅಂದವನ ಬಾಳು ಹಾಳು ಅಂತ ನೀನೇ
ಹೇಳಿದ್ದೆಯಲ್ಲಮ್ಮಾ ಅದಕ್ಕೆ ನಾಳೆ ತಿನ್ನೋಕೆ
ಅಂತ ಇಟ್ಟಿದ್ದ ಕೋಡುಬಳೆ ಚಕ್ಕುಲಿ ಇಂದೇ
ತಿಂದು ಮುಗಿಸಿಬಿಟ್ಟೆ....



ಉಳಿದೆಲ್ಲಾ 'ದಾನ' ಗಳಿಂದ ನಮಗೆ
ಪುಣ್ಯ ಸಿಕ್ಕರೆ.... ಈ 'ಮತದಾನ'
ದಿಂದ ಸಿಗೋದು ನಿರಾಶೆಗಳೇ !



ಮತ್ತೊಬ್ಬರಿಗೆ ಕೇಳೋಕೆ ಇಷ್ಟಾನೇ ಇರದೇ ಇದ್ರು
ಸದಾ ಮಾತನಾಡುತ್ತಲೇ ಇರುವ ವ್ಯಕ್ತಿ ಎಂದರೆ
ಮೇಷ್ಟ್ರು ಅಲ್ವಾ ಸರ್...

ಪ್ಲೈವುಡ್ ಪುರಾಣ



ಪ್ಲೈವುಡ್ ನಿತ್ಯ ಬಳಕೆಯ ವಸ್ತು. ಬಾಗಿಲಿಂದ ಹಿಡಿದು ಕಪಾಟಿನ ಹಲಗೆವರೆಗೆ, ಆಫೀಸಿನ ಮೇಜಿಂದ ಹಿಡಿದು ಶೋರೂಂನ ಅಲಂಕಾರಕ್ಕೆ ಪ್ಲೈವುಡ್ ಬೇಕು. ಅದು ಹೇಗೆ ತಯಾರಾಗುತ್ತದೆ? ಅದರ ರೀತಿ ನೀತಿಗಳೇನು?

ಪ್ಲೈವುಡ್ ನಿತ್ಯ ಬಳಕೆಯ ವಸ್ತು. ಬಾಗಿಲಿಂದ ಹಿಡಿದು ಕಪಾಟಿನ ಹಲಗೆವರಗೆ, ಆಫೀಸಿನ ಮೇಜಿಂದ ಓಡಿದು ಶೋರೂಂನ ಅಲಂಕಾರಕ್ಕೆ ಪ್ಲೈವುಡ್ ಬೇಕು. ಅದು ಹೇಗೆ ತಯಾರಾಗುತ್ತದೆ? ಅದರ ರೀತಿ ನೀತಿಗಳೇನು? ಎಂಬುದನ್ನು ಇಲ್ಲಿ ಸುದೀರ್ಘವಾಗಿ ಕೊಡಲಾಗಿದೆ.

ಮನುಷ್ಯ ತುಂಬಾ ವರ್ಷಗಳಿಂದ ಮರ ಬಳಸುತ್ತಾ ಬಂದಿದ್ದಾನೆ. ಕಟ್ಟಡ ನಿರ್ಮಾಣ, ಪೀಠೋಪಕರಣ ಮರ ಇಲ್ಲದೆ ನಡೆಯದು. ಕಂಬ, ತೊಲೆ ಮುಂತಾದುವುಗಳಲ್ಲಿ ನೇರವಾಗಿ ಮರ ಬಳಸಬಹುದು. ಹಲಗೆಗಳನ್ನು ಮರದಿಂದ ಕತ್ತರಿಸಿ ತೆಗೆದರೆ ಅವು ಬಾಳಿಕೆ ಬರುವುದಿಲ್ಲ. ಬಿರುಕಾಗುತ್ತದೆ, ತಿರುಚಿಕೊಳ್ಳುತ್ತದೆ ಇಲ್ಲ ಚಕ್ಕೆ ಏಳುತ್ತದೆ. ಮರದ ಕಣಗಳು ಒಂದೇ ದಿಕ್ಕಿನಲ್ಲಿ ಜೋಡಣೆಯಾಗಿರುತ್ತದೆ. ಆದ್ದರಿಂದ ಈ ಸಮಸ್ಯೆ. ಇದರ ನಿವಾರಣೆಗೆ ಹುಟ್ಟಿಕೊಂಡದ್ದು ಪ್ಲೈವುಡ್.

ಮರದ ಕಾಂಡವನ್ನು ಸಣ್ಣ ಹಾಳೆಗಳಾಗಿ ಕತ್ತರಿಸಿ, ಒಂದೇ ದಿಕ್ಕಿನತ್ತ ಜೋಡಣೆ ಆಗಿರುವ ಕಣಗಳ ವಿಶ್ವಾಸ ನೋಡಿಕೊಂಡು, ಅದೇ ರೀತಿಯ ಇತರ ಹಾಳೆಗಳ ಮೇಲಿರಿಸಿ ಬೆಸೆಯಲಾಗುತ್ತದೆ. ಇದನ್ನೇ ಪ್ಲೈವುಡ್ ಎಂದು ಕರೆಯುತ್ತೇವೆ.

ಮರದಿಂದ ತಯಾರಾದ ಪ್ಲೈವುಡ್‌ಗೆ ಮರದ ಗುಣ ಲಕ್ಷಣ ಇರುತ್ತದೆ. ಕಾಲ ಕಳೆದಂತೆ, ಅದರ ಹಾಗೇ ಹಾಳಾಗುತ್ತದೆ. ಕೀಟ ಬಾಧೆಗೆ ತುತ್ತಾಗುತ್ತದೆ.

ಮರದ ಬಳಕೆಯಿಂದ ಅರಣ್ಯ ನಾಶ. ಇದರ ತಡೆಗೆ ಇಪ್ಪತ್ತು ವರ್ಷಗಳ ಹಿಂದೆ ಮರ ಕಡಿಯದಂತೆ ನಿಷೇಧ ನಮ್ಮಲ್ಲಿ ಜಾರಿ ಆಯಿತು. ಅದು ಕೇವಲ ಪುಸ್ತಕದಲ್ಲಿದೆ. ಕಾಡು ಮಾತ್ರ ನಾಶವಾಗುತ್ತಲೇ ಇದೆ. ಆದರೆ ಮಾನವನಿಗೆ ದೀರ್ಘಕಾಲ ತಾಳಿಕೆ ಬರುವ ಮರ ಮುಟ್ಟು ದೊರೆತರೆ ಕೊಂಚ ಅರಣ್ಯ ನಾಶದ ನಿಯಂತ್ರಣ ಆದೀತೆಂಬ ಯೋಚನೆ. ಈ ದಿಶೆಯಲ್ಲಿ ಪ್ಲೈವುಡ್ ನಾನಾ ಸಂಸ್ಕಾರಗಳಿಂದ ಹೆಚ್ಚು ಕಾಲ ಉಳಿಯುವಂತೆ ಮಾಡುವ ಯತ್ನ ನಿರಂತರವಾಗಿ ಸಾಗಿದೆ.

ಅರಣ್ಯದಿಂದ ತರಲಾದ ಮರದ ಕಾಂಡಗಳನ್ನು ಮೊದಲು ವೃತ್ತಾಕಾರವಾಗಿ ಜಿಲ್ಲೆಗಳಂತೆ ಕತ್ತರಿಸಲಾಗುತ್ತದೆ. ಆದರ ತೊಗಟೆ ಬಿಡಿಸಿದ ನಂತರ ಆ ತುಂಡುಗಳಿಂದ ತೆಳು ಹಾಳೆಗಳಂತೆ ಮತ್ತೆ ಕತ್ತರಿಸಲಾಗುತ್ತದೆ. ಅಂಥ ಪ್ರತಿ ಹಾಳೆ ಕೆಡದಂತೆ ಕಾಯ್ದಿಡಲು ಸೂಕ್ತ ರಾಸಾಯನಿಕ ಬಳಸಲಾಗುತ್ತದೆ. ಮರದೊಳಗಣ ನೀರಿನಂಶ ತಗ್ಗಿಸಲು ಒಣಗಿಸಲಾಗುತ್ತದೆ. ಅದರ ತೇವಾಂಶ ಶೇಕಡಾ 7 ರಿಂದ 8ಕ್ಕೆ ತಗ್ಗಿದ ನಂತರ ಮುಂದಿನ ಪ್ರಕ್ರಿಯೆ.

ಮರದಿಂದ ಕತ್ತರಿಸಿ ತೆಗೆಯಲಾದ ಹಾಳೆಗಳನ್ನು 'ವೆನೀರ್' ಎನ್ನುತ್ತಾರೆ. ಇವನ್ನು ಸಾಮಾನ್ಯ ವಾತಾವರಣದಲ್ಲಿ ಸೂಕ್ತ ಅಂಟು ಹಚ್ಚಿ ಒಂದಕ್ಕೊಂದು ಜೋಡಿಸಲಾಗುತ್ತದೆ. ಆನಂತರ ಒತ್ತಡ ಹೇರಿ ಒಂದೆಕ್ಕೊಂದು ಸರಿಯಾಗಿ ಅಂಟುವಂತೆ ಮಾಡಲಾಗುತ್ತದೆ. ಒತ್ತಡದಿಂದ ಅಂಟು ಒಂದೇ ಸಮನೆ ಹರಡುವುದಲ್ಲದೇ, ಹಾಳೆಗಳಲ್ಲಿನ ನೀರಿನ ಅಂಶ ಕೂಡ ಕಡಿಮೆಯಾಗುತ್ತದೆ.

ಹೀಗೆ ತಯಾರಾದ ಪ್ಲೈವುಡ್‌ನ ತಾಳಿಕೆ, ಕುದಿಯುವ ನೀರು ಬಿದ್ದರೂ ಕೆಡದ, ವಾತಾವರಣದಲ್ಲಿನ ಏರುಪೇರುಗಳಿಗೆ ಹೆಚ್ಚು ಕಡಿಮೆ ಆಗದಂತೆ ಹಾಗೂ ಒಂದಕ್ಕೊಂದು ಚೆನ್ನಾಗಿ ಅಂಟುವಂತೆ ಮಾಡುವುದು ಬಳಸಲಾದ ಅಂಟು.

ಫೀನೈಲ್ ಫಾರ್ಮಾಲ್ಡಿಹೈಡ್ ಅತಿ ಹೆಚ್ಚು ಜಿಗಿಯಾಗಿ ಬೆಸೆಯುವ ಅಂಟು. ಇದಲ್ಲದೇ ಯೂರಿಯಾ ಫಾರ್ಮಾಲ್ಡಿಹೈಡ್ ಹಾಗೂ ಮೆಲಾಮೀನ್ ಯೂರಿಯಾ ಫಾರ್ಮಾಲ್ಡಿಹೈಡ್ ಎಂಬ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಆದರೆ ಇವು ಉತ್ತಮ ಪ್ಲೈವುಡ್ ಆಗುವುದಿಲ್ಲ.

ಹೀಗೆ ಹಾಳೆಗಳನ್ನು ಅಂಟು ಹಾಕಿ ಸಂಯೋಜಿಸಿದ ವಸ್ತುವನ್ನು ಬಿಸಿ ವಾತಾವರಣದಲ್ಲಿ ಒತ್ತಡಕ್ಕೆ ಗುರಿ ಮಾಡಿ ಮತ್ತಷ್ಟು ಬಿಗಿಗೊಳಿಸಲಾಗುತ್ತದೆ. ಆನಂತರ ಮೇಲ್ಮೈಯನ್ನು ನಯಗೊಳಿಸಿ, ಸೂಕ್ತ ರಕ್ಷಕಗಳನ್ನು ಲೇಪಿಸಿ ಅಗತ್ಯ ಸೈಜುಗಳಲ್ಲಿ ಕತ್ತರಿಸಿ, ಒಣಗಿಸಿ ಮಾರಾಟಕ್ಕೆಂದು ಬಿಡುಗಡೆ ಮಾಡಲಾಗುತ್ತದೆ.

ಪ್ಲೈವುಡ್‌ಗಳಲ್ಲಿ ಹಲವು ಬಗೆ. ಅದರ ಉಪಯುಕ್ತತೆ, ಬೆಲೆಯನ್ನು ಗಮನದಲ್ಲಿ ಇರಿಸಿಕೊಂಡು ಇಂಥ ಪ್ಲೈವುಡ್ ನಿರ್ಮಾಣ ಮಾಡಲಾಗುತ್ತದೆ.

ತೇವ ನಿರೋಧಕ ಪ್ಲೈವುಡ್ : ಇದನ್ನು ಕಟ್ಟಡದ ಒಳಾಲಂಕಾರಕ್ಕೆ, ಪೀಠೋಪಕರಣ ತಯಾರಿಕೆಗೆ ಬಳಸಲಾಗುತ್ತದೆ. ಕೊಂಚ ಅಗ್ಗವಾಗಿರುವುದೂ ಇದಕ್ಕೆ ಕಾರಣ. ಆದರೆ ಹೆಚ್ಚಿನ ತೇವಾಂಶ ಇರುವೆಡೆಯಲ್ಲಿ ಇದು ದೀರ್ಘ ಬಾಳಿಕೆ ಬರಲಾರದು ಎಂದು ತಿಳಿದು ಬಂದಿದೆ. ಮರ ಕೊರೆಯುವ ಕೀಟ, ಗೆದ್ದಲು ಹಾಗೂ ಬೂಸ್ಟ್‌ನಂಥ ಫಂಗಸ್‌ಗಳಿಂದ ಈ ಪ್ಲೈವುಡ್ ನಾಶವಾಗುತ್ತದೆ.

ಮರಳುವ ನೀರಿಗೂ ಜಗ್ಗದ ಪ್ಲೈವುಡ್ :

ಇಂಥ ಪ್ಲೈವುಡ್ ಕನಿಷ್ಠ ಎಂಟು ತಾಸು ಮರಳುವ ನೀರಲ್ಲಿ ಇರಿಸಿದರೂ ಕೆಡಬಾರದು. ಇಂಥ ಪರಿಣಾಮಕ್ಕೆ ಹಲವು ವಿಶೇಷ ಬಗೆಯ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇಂಥ ಪ್ಲೈವುಡ್‌ಗೆ ಹೆಚ್ಚಿನ ಬೇಡಿಕೆ ಇಲ್ಲ. ಗ್ರಾಹಕರ ಬೇಡಿಕೆ ಅನುಸರಿಸಿ ಈ ಬಗೆಯ ಪ್ಲೈವುಡ್ ತಯಾರಿಸಲಾಗುತ್ತದೆ.

ಮೆರೀನ್ ಪ್ಲೈವುಡ್ : ಹಡಗು, ದೋಣಿಗಳ ನಿರ್ಮಾಣಕ್ಕೆ ಇದು ಬಳಕೆ

ಆಗುತ್ತದೆ. ಸಹಜವಾಗಿ ನೀರಲ್ಲಿ ನೆನೆದಾಗ, ಗಾಳಿ, ಬಿಸಿಲಿಗೆ ಒಣಗಿದಾಗ ಅದು ಕೆಡಬಾರದು. ಹಾಗೆ ಕೀಟಗಳು, ಪಾಚಿ, ಸಮುದ್ರದ ಇತರ ಸೂಕ್ಷ್ಮ ಜೀವಿಗಳಿಂದ ನಾಶವಾಗದಂತೆ ಇರಬೇಕಾಗುತ್ತದೆ. ಇಂಥ ಪ್ಲೈವುಡ್ ಎಪ್ಪತ್ತೆರಡು ತಾಸು ಕುದಿಯುವ ನೀರಲ್ಲಿ ಇದ್ದರೂ ಕೆಡದಂತೆ ಇರಬೇಕು.

ಶಟರಿಂಗ್ ಪ್ಲೈವುಡ್ : ಕಟ್ಟಡ ನಿರ್ಮಾಣದಲ್ಲಿ ಮೆಟ್ಟಲಾಗಿ, ಗೂಡುಗಳ ನಿರ್ಮಾಣಕ್ಕೆ ಇದನ್ನು ಬಳಸಲಾಗುತ್ತದೆ. ಕೀಟ, ಹುಳುಗಳ ಬಾಧೆಯಿಂದ ಇದು ಮುಕ್ತವಾಗಿರಬೇಕು. ಹಾಗೇ ಭಾರ ಹೊರುವ ಶಕ್ತಿ ಮತ್ತು ಕಾಂಕ್ರೀಟ್, ಕಲ್ಲಿನ ಜೊತೆ ಬೆರತೂ ಕೆಡದಂತೆ ಇರಬೇಕು. ಇದೂ ಕೂಡ ಎಪ್ಪತ್ತೆರಡು ತಾಸು ಕುದಿಯುವ ನೀರಲ್ಲೂ ಇದ್ದೂ ಕೆಡದಂತೆ ಇದ್ದರೆ ಮಾತ್ರ ಮಾನ್ಯತೆ.

ಫಿಲಂ ಲೇಪಿತ ಪ್ಲೈವುಡ್ : ಮೇಲುಭಾಗದಲ್ಲಿ ನಯವಾದ ಫಿಲಂ ಇರುವ ಈ ಬಗೆಯ ಪ್ಲೈವುಡ್‌ನಿಂದ ನಾನಾ ರೀತಿಯ ಪ್ರಯೋಜನ ಉಂಟು. ಕಾಂಕ್ರೀಟ್ ಜೊತೆಗೆ ಬಳಸಿದ ಮೇಲೂ ಮತ್ತೆ ಅದನ್ನು ತೆಗೆದು ಉಪಯೋಗಿಸಬಹುದು.

ಅಲಂಕಾರಿಕ ಪ್ಲೈವುಡ್ : ಕೆಲವೆಡೆ ಪ್ಲೈವುಡ್‌ನ ಬಳಕೆ ಬಾಗಿಲು, ಕಿಟಕಿ, ಮೇಜಿನ ಹಲಗೆಯಂತೆ ಆಗುತ್ತದೆ. ಆಗ ಅದು ಚೆನ್ನಾಗಿ ಕಾಣಬೇಕು. ಅಂಥ ಪ್ಲೈವುಡ್‌ಗಳ ಮೇಲುಭಾಗದ ಪದರು ಸಾಮಾನ್ಯವಾಗಿ ತೇಗ ಮುಂತಾದ ಮರಗಳಿಂದ ತೆಗೆದ ಹಾಳೆಯನ್ನು ಬಳಸಲಾಗುತ್ತದೆ. ಇದನ್ನು ಪಾಲಿಶ್ ಮಾಡಿದಾಗ ತೇಗದ ಅಥವಾ ಬೆಲೆ ಬಾಳುವ ಇತರ ಮರ ಬಳಸಿರುವಂತೆ

ಎನಿಸಿಬಿಡುತ್ತಾರೆ. ಹೀಗಾಗಿ ಪ್ಲೈವುಡ್ ಖರೀದಿಗೆ ಮುಂದಾಗುವ ಸಾಮಾನ್ಯ ಜನ ಹಲವು ಸಂಗತಿಗಳನ್ನು ಗಮನದಲ್ಲಿ ಇಟ್ಟುಕೊಂಡರೆ ಒಳ್ಳೆಯದು.

■ ಪ್ಲೈವುಡ್ ಕಂಪೆನಿಯ ಅಧಿಕೃತ ಏಜೆಂಟರು, ವ್ಯಾಪಾರಿಗಳಲ್ಲಿಯೇ ಬೇಕಾದ ಪ್ಲೈವುಡ್ ಖರೀದಿಸಿ. ಅದಕ್ಕೆ ಸರಿಯಾದ ರಸೀದಿ ಪಡೆಯಿರಿ. ನಾನಾ ನಕಲಿ ವಸ್ತುಗಳಿಂದ ತುಂಬಿರುವ ಪ್ಲೈವುಡ್ ಮಾರುಕಟ್ಟೆಯಲ್ಲಿ ಯಾವುದು ಅಧಿಕೃತ, ಯಾವುದು ಅನಧಿಕೃತ ಎಂದು ತಿಳಿಯುವುದು ಕಷ್ಟ. ಹೀಗಾಗಿಯೇ ಮುನ್ನೆಚ್ಚರಿಕೆ.

■ ವ್ಯಾಪಾರಿ ಯಾವ ಕಂಪೆನಿಯ ಪ್ಲೈವುಡ್ ಎಂದು ಹೇಳುತ್ತಾನೋ, ನಿಮಗೆ ಕೊಟ್ಟ ಮಾಲು ಅದೇ ಕಂಪೆನಿಯದು ಎಂಬುದು ಖಚಿತ ಪಡಿಸಿಕೊಳ್ಳಿ. ಕಂಪೆನಿಯ ಹೆಸರಿನಂತೆಯೇ ಇರುವ ಇನ್ನಾವುದೋ ಕಂಪೆನಿಯ ಮಾಲು ಆದಾಗಿರುವುದೇ ಹೆಚ್ಚು. ಅಂಥ ವಸ್ತುಗಳನ್ನು ಕೊಳ್ಳಬೇಡಿ.

■ ಐ.ಎಸ್.ಐ ಮುದ್ರೆಯನ್ನು ಗಮನಿಸಿ. ಮರೀನ್ ಪ್ಲೈವುಡ್‌ಗಾದರೆ ಐ.ಎಸ್ 710-1976 ಎಂದಿರುತ್ತದೆ. ಇತರೇ ಬಳಕೆಯ ಪ್ಲೈವುಡ್ ಮೇಲೆ ಐ.ಎಸ್ 303-1989 ಎಂದಿರುತ್ತದೆ.

■ ಡೀಲರ್‌ಗಳು ಸ್ಟಾಕಿಸ್ಟ್‌ಗಳು ಬೇರೆ ಬೇರೆ ಎಂಬುದು ನೆನಪಿರಲಿ. ಇಬ್ಬರೂ ಒಂದೇ ಕಂಪೆನಿಯ ಉತ್ಪನ್ನ ಕೊಡುತ್ತಾರಾದರೂ ಸ್ಟಾಕಿಸ್ಟ್ ಡೀಲರ್‌ಗಿಂತ ಶೇಕಡಾ 2 ರಿಂದ ಮೂರರಷ್ಟು ಹೆಚ್ಚಿಗೆ ದರ ವಿಧಿಸುತ್ತಾನೆ.

■ ಪ್ರತಿ ಕಂಪೆನಿಗೂ ತನ್ನದೇ ವಿಶಿಷ್ಟ ಲಾಂಛನದ ಮುದ್ರೆ ಇರುತ್ತದೆ.

ಪ್ರಮುಖ ಪ್ಲೈವುಡ್ ತಯಾರಿಕಾ ಕಂಪೆನಿಗಳು ಹಾಗೂ ಅವುಗಳ ಗುರುತು

ಕಾಣುತ್ತದೆ.

ಗೀರುಗೀರಿನ ಪ್ಲೈವುಡ್ : ಹಲವೆಡೆ ನಯವಾದ ಮೇಲ್ಪದರದಿಂದ ಅನುಕೂಲವಿಲ್ಲ. ಅದು ಒರಟಾಗಿ, ಹಿಡಿತಕ್ಕೆ ಜಾರದಂತಿರಬೇಕು. ಸಾರಿಗೆ ವಾಹನಗಳ ನೆಲಕ್ಕೆ ಇಂಥ ಪ್ಲೈವುಡ್ ಬಳಕೆ ಹೆಚ್ಚು.

ಪ್ರತಿ ಕಂಪೆನಿಯೂ ತಾನು ತಯಾರಿಸುವ ಪ್ಲೈವುಡ್‌ನ ವಿಶೇಷ ಗುಣಗಳನ್ನು ಸಾರಿ ಹೇಳುತ್ತದೆ. ಒಂದು ಕಂಪೆನಿ ತಾನು ತೇವ ನಿರೋಧಕ ಪ್ಲೈವುಡ್ ತಯಾರಿಕೆಯಲ್ಲಿ ಪರಿಣಿತ ಎಂದರೆ ಮತ್ತೊಂದು ಕ್ರಿಮಿ, ಕೀಟಗಳಿಂದ ನಾಶವಾಗದ ಪ್ಲೈವುಡ್ ತಯಾರಿಸುವುದಾಗಿ ಘೋಷಿಸುತ್ತದೆ. ಮಾರುಕಟ್ಟೆಯಲ್ಲಿ ನಾನಾ ಬ್ರ್ಯಾಂಡ್‌ಗಳು. ಭಾರೀ ಪೈಪೋಟಿ. ಇದರಿಂದ ಸಾಮಾನ್ಯ ಗ್ರಾಹಕ ಕಂಗೆಡುತ್ತಾನೆ. ಆತನಿಗೆ ಪ್ಲೈವುಡ್ ಬಗ್ಗೆ ಪರಿಜ್ಞಾನವೇ ಇರುವುದಿಲ್ಲ. ಇದರ ಲಾಭ ಮಾಡಿಕೊಳ್ಳುವ ವ್ಯಾಪಾರಿ ತನ್ನ ಮಾಲು ಗಿರಾಕಿಗೆ ಸುಲಭವಾಗಿ ಹೊತ್ತು ಹಾಕುತ್ತಾನೆ. ಆತ ಹೇಳುವ ಗುಣ ವಿಶೇಷಣ ಕೇಳಿದರೆ, ಅಂಥದೊಂದು ಅದ್ಭುತ ವಸ್ತು ಬೇರೆಲ್ಲೂ ಅಷ್ಟು ಅಗ್ಗದಲ್ಲಿ ಸಿಗುವುದೇ ಇಲ್ಲ

ಅದನ್ನು ಗಮನಿಸಬೇಕು.

■ ಪ್ಲೈವುಡ್ ನಾನಾ ಗಾತ್ರದಲ್ಲಿ ದೊರೆಯುತ್ತದೆ. ನಮಗೆ ಅಗತ್ಯವಿರುವ ಗಾತ್ರ ಅಥವಾ ದಪ್ಪದ ಪ್ಲೈವುಡ್‌ನ್ನೇ ಖರೀದಿಸಬೇಕು.

■ ಪ್ಲೈವುಡ್‌ನಲ್ಲಿಯೂ ಫಸ್ಟ್‌ಗ್ರೇಡ್ ಮತ್ತು ಸೆಕೆಂಡ್ ಗ್ರೇಡ್ ಎಂದಿರುತ್ತದೆ. ಸೆಕೆಂಡ್ ಗ್ರೇಡ್‌ನ ಪ್ಲೈವುಡ್‌ನಲ್ಲಿ ನಾವ್ಯಾರೂ ಪತ್ತೆ ಹಚ್ಚಲಾಗದ-- ಸಣ್ಣ ಪುಟ್ಟ ತಯಾರಿಕಾ ದೋಷಗಳಿರುತ್ತವೆ.

■ ಪ್ಲೈವುಡ್ ಚೆನ್ನಾಗಿ ಪರೀಕ್ಷಿಸಿ ಕೊಳ್ಳಬೇಕು. ಮೇಲ್ಮೈ ನಯವಾಗಿರಬೇಕು. ಅಂಟುಗಳು ಒಡೆದಿರಬಾರದು. ಎಲ್ಲಿಯೂ ಬಾಗಿರಬಾರದು. ಅಥವಾ ಗುಳ್ಳೆಗಳು ಎದ್ದಿರಬಾರದು.

■ ಅಗತ್ಯವಿದ್ದಷ್ಟೇ ಪ್ಲೈವುಡ್‌ಕೊಳ್ಳಿ. ಬೇಕಾದಷ್ಟು ಕೊಂಡು ಹಾಳು ಮಾಡಿದರೆ, ಅಷ್ಟು ಮರಗಳಿಗೆ ನಾವಾಗಿಯೇ ಕುತ್ತು ತಂದಂತೆ.

■


ಟಾಲ್‌ಸ್ಟಾಯ್ ಹೇಳಿದ

ಮಕ್ಕಳ ಕತೆಗಳು

ಅನುವಾದ : ಚಂದ್ರಾ ನಾಗಭೂಷಣಸ್ವಾಮಿ

ಟಾಲ್‌ಸ್ಟಾಯ್ ರಶಿಯಾ ದೇಶದ ಲೇಖಕ, ಜಗತ್ತಿನ ಅತ್ಯುತ್ತಮ ಸಾಹಿತಿಗಳಲ್ಲಿ ಒಬ್ಬನು ಎಂದು ಪ್ರಸಿದ್ಧನಾಗಿದ್ದಾನೆ. ಆತ ತನ್ನ ರೈತರ ಮಕ್ಕಳಿಗೆಂದು ಕೆಲವು ಮಕ್ಕಳ ಕಥೆಗಳನ್ನು ಬರೆದಿದ್ದಾನೆ. ಬಹಳ ಹಿಂದಿನ ಕಾಲದಲ್ಲಿ ಈಸೋಪ್ ಎಂಬಾತ ಹೇಳಿದ ಕಥೆಗಳನ್ನು ಟಾಲ್‌ಸ್ಟಾಯ್ ಹೊಸ ರೀತಿಯಲ್ಲಿ ಹೇಳಿದ್ದಾನೆ. ಕಥೆಯ ಅರ್ಥ ಏನು, ನೀತಿ ಏನು ಎಂದು ಟಾಲ್‌ಸ್ಟಾಯ್ ಬಿಡಿಸಿ ಹೇಳುವುದಿಲ್ಲ. ಮಕ್ಕಳು ಜಾಣರು, ಕಥೆ ಅವರಿಗೆ ತಿಳಿಯುತ್ತದೆ ಎಂದು ಹೇಳುತ್ತಿದ್ದ. ಅವನು ಹೇಳಿದ ಕಥೆಗಳಲ್ಲಿ ಕೆಲವನ್ನು ಇಲ್ಲಿ ಪ್ರತಿ ತಿಂಗಳು ನೀಡುತ್ತೇವೆ. ನಿಮಗೂ ಇಷ್ಟ ಆದರೆ ಬೇರೆ ಮಕ್ಕಳಿಗೂ ಹೇಳಿ.

ಗಂಡು ಕುದುರೆ, ಹೆಣ್ಣು ಕುದುರೆ



ಒಂದು ಹೆಣ್ಣು ಕುದುರೆ ಇತ್ತು. ಅದು ಹಗಲೂ ರಾತ್ರಿ ಮೈದಾನದಲ್ಲಿ ಮೇಯುತ್ತಿತ್ತು. ಉಳುವ ಕೆಲಸಕ್ಕೆ ಹೋಗುತ್ತಲೇ ಇರಲಿಲ್ಲ. ಇನ್ನೊಂದು ಗಂಡು ಕುದುರೆ ಇತ್ತು. ಅದು ಹಗಲೆಲ್ಲ ಹೊಲದಲ್ಲಿ ಕೆಲಸ ಮಾಡುತ್ತಿತ್ತು. ರಾತ್ರಿ ಮೇಯಲು ಮೈದಾನಕ್ಕೆ ಹೋಗುತ್ತಿತ್ತು.

ಒಂದು ದಿನ ಹೆಣ್ಣು ಕುದುರೆ ಗಂಡು ಕುದುರೆಯನ್ನು ಮಾತನಾಡಿಸಿತು. ''ನೀನೇಕೆ ಹೊಲ ಉಳಲು ಹೋಗುತ್ತೀ? ನಾನೇನಾದರೂ ನೀನಾಗಿದ್ದಿದ್ದರೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ಯಜಮಾನ ಚಾಟಿಯಿಂದ ಹೊಡೆದರೆ ನಾನೂ ಕಾಲು ಎತ್ತಿ ಒದೆಯುತ್ತಿದ್ದೆ'' ಅಂದಿತು.

ಮಾರನೆಯ ದಿನ ಗಂಡು ಕುದುರೆ ಹೆಣ್ಣು ಕುದುರೆ ಹೇಳಿದಂತೆಯೇ ಮಾಡಿತು. ಯಜಮಾನ ಹಠ ಮಾಡುವ ಗಂಡು ಕುದುರೆಯನ್ನು ಬಿಟ್ಟು ಬಿಟ್ಟ. ಹೋಗಿ ಹೆಣ್ಣು ಕುದುರೆಯನ್ನು ಎಳೆದುಕೊಂಡು ಬಂದು ಅದನ್ನು ನೊಗಕ್ಕೆ ಕಟ್ಟಿದ.

ನಾಯಿ ಮತ್ತು ಕೋಲು



ಒಂದು ನಾಯಿ ಯಾವಾಗಲೂ ಕೋಳಿಗಳನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು ತಿನ್ನುತ್ತಿತ್ತು. ಯಜಮಾನ ನಾಯಿಯನ್ನು ಹಿಡಿದು ಅದು ಓಡಲಾರದಂತೆ ಅದರ ಕೊರಳಿಗೆ ಒಂದು ಕೋಲನ್ನು ಅಡ್ಡಡ್ಡವಾಗಿ ನೇತುಹಾಕಿದ. ಆಗ ನಾಯಿ ''ನನ್ನ ಒಡೆಯನಿಗೆ ನನ್ನ ಮೇಲೆ ಎಷ್ಟೊಂದು ಪ್ರೀತಿ ಇದೆ. ಎಲ್ಲ ನಾಯಿಗಳಲ್ಲಿ ನಾನೇ ಎದ್ದು ಕಾಣಬೇಕೆಂದು ನನ್ನ ಕೊರಳಿಗೆ ಕೋಲು ಕಟ್ಟಿದ್ದಾನೆ'' ಎಂದು ಹೇಳಿಕೊಂಡು ತಿರುಗತೊಡಗಿತು.



ಡಾಟ್ ಕಾಮ್

ಇದೇನಿದು !

ವ್ಯವಹಾರಕ್ಕೆ ಬಳಕೆ ಆಗುವ ವೆಬ್‌ಸೈಟ್‌ಗಳನ್ನು ಸಾಮಾನ್ಯವಾಗಿ ಡಾಟ್ ಕಾಮ್ ಎಂದು ಕರೆಯಲಾಗುತ್ತದೆ. ಇಂಥ ಹಲವು ಬಗೆಯ ವೆಬ್‌ಸೈಟುಗಳ ಬಗ್ಗೆ ನಿತ್ಯ ಪತ್ರಿಕೆ, ಟಿವಿ, ರಸ್ತೆ ಬದಿಯ ಫಲಕಗಳಲ್ಲಿ ಜಾಹೀರಾತು ನೋಡುತ್ತೀರ. ಸೈಬರ್ ಕೆಫೆಗಳಲ್ಲಿ ಚೀರಿ ಹೇಳುವ ಪೋಸ್ಟರ್‌ಗಳು. ಇಂಥ ಜಾಹೀರಾತುಗಳೇ ಪ್ರತಿ ಕಂಪೆನಿಯೂ ತಿಂಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತದೆ.

ನಮ್ಮ ಓದುಗರಿಗಾಗಿ ಡಾಟ್ ಕಾಮ್‌ನ ಅತ್ಯಾಧುನಿಕ ತಂತ್ರಜ್ಞಾನದ ಮಾಹಿತಿ ಒದಗಿಸಿದ್ದಾರೆ
■ ಉಮೇಶ್ ಕಲ್ಬುರ್ಗಿ ■ ಜಿ.ಎ. ಶಾಂತಾರಾಂ ■ ಎಂ.ಡಿ.ಆರತಿ ■ ಚೈತ್ರಾ ಮೋಹನ್

ಮೊನ್ನೆ ರಾಜ್ಯದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಆಯವ್ಯಯ ಮಂಡಿಸಿದರು. ಅವರು ರಾಜ್ಯದ ಹಣಕಾಸು ಮಂತ್ರಿ ಕೂಡ. ಅವರು ಪ್ರಕಟಿಸಿದ ಹಲವು ಯೋಜನೆಗಳಲ್ಲಿ ಗ್ರಾಮೀಣ ಯುವಕರಿಗಾಗಿ 'ಯುವ ಡಾಟ್ ಕಾಮ್' ಎಂಬುದೂ ಒಂದು.

ಈ ಬಗ್ಗೆ ಓದಿದ, ಕೇಳಿದ ಜನ ನನ್ನ ಹತ್ತಿರ ಬಂದು 'ಯುವ ಡಾಟ್ ಕಾಮ್' ಎಂದರೇನು? ಹಳ್ಳಿಯ ಯುವಕರಿಗೆ ಇದರಿಂದ ಪ್ರಯೋಜನ ಎನ್ನುತ್ತಾರೆ. ನಿಜಕ್ಕೂ ಇದರಿಂದ ಪ್ರಯೋಜನ ಇದೆಯೇ? ಎಂದೆಲ್ಲ ಪ್ರಶ್ನಿಸಿದರು.

ಹಾಗೆ ನೋಡಿದರೆ, ಯಾವುದರಿಂದ ಪ್ರಯೋಜನ? ಯಾವುದರಿಂದ ಪ್ರಯೋಜನ ಇಲ್ಲ ಎಂದು ಹೇಳುವುದು ಕಷ್ಟ. ಮೊದಲು ಕಂಪ್ಯೂಟರ್‌ನ ಆರಂಭಿಕ ರೂಪವಾದ ಕ್ಯಾಲ್ಕುಲೇಟರ್‌ಗಳು ಬಂದಾಗ ಮಗ್ಗಿ ಲೆಕ್ಕ ಬರದಿರೋ ಸೋಮಾರಿಗಳು, ದಡ್ಡರಿಗೆ ಸೃಷ್ಟಿ ಆಗಿರೋ ಮೆಷೀನು ಇದು ಎಂದು ಬಹಳಷ್ಟು ಜನ ಭಾವಿಸಿದ್ದರು. ಆದಾದ ಮೇಲೆ ಕಂಪ್ಯೂಟರ್, ಅದರ ನಾನಾ ರೀತಿಯ ಅವಕಾಶಗಳು ಪರಿಚಿತವಾಗುತ್ತವೆ. ದಿನಕ್ಕೆ ಒಂದೊಂದು ಹೊಸ ಆವಿಷ್ಕಾರ ಕಾಣಿಸಿಕೊಳ್ಳುತ್ತ ಇದೆ. ಬೆಂಗಳೂರು ಕಂಪ್ಯೂಟರ್ ತಂತ್ರಜ್ಞಾನದ ಕೇಂದ್ರ. ಅದಕ್ಕೇ ಇದನ್ನು 'ಸಿಲಿಕಾನ್ ಸಿಟಿ' ಎಂದೂ ಅನ್ನುತ್ತಾರೆ. ಇದೆಲ್ಲ ಗೊತ್ತಿರುವ ಮಾತು. ವಿಜ್ಞಾನದಲ್ಲಿ ಯಾವುದೇ ಆವಿಷ್ಕಾರ ಆದಾಗ, ಅದರ ನಿಜವಾದ ಪ್ರಯೋಜನ ಏನು ಎಂದು ಹೇಳುವುದು ಕಷ್ಟ. ಹದಿನೇಳು ಹಾಗೂ ಹದಿನೆಂಟನೇ ಶತಮಾನದಲ್ಲಿ ವಿಜ್ಞಾನ ಭಾರೀ ಬೆಳವಣಿಗೆ ಕಂಡಿತು. ಅದಕ್ಕೆ ಒಂದು ಸಣ್ಣ ಕಾರಣ. ಏನಾದರೂ ಮಾಡಿ ಎಲ್ಲ ಲೋಹಗಳನ್ನು ಚಿನ್ನವಾಗಿ ಪರಿವರ್ತನೆ ಮಾಡುವ ಕಲೆ ಸಿದ್ಧಿಸಿಕೊಳ್ಳಬೇಕು ಎಂಬುದು. ಆದರೆ ಯಾರೊಬ್ಬರಿಗೂ ಚಿನ್ನ ಮಾಡುವ ವಿದ್ಯೆ ದಕ್ಕಲಿಲ್ಲ. ರಾಸಾಯನಿಕ ಶಾಸ್ತ್ರ ಅದ್ಭುತ ಪ್ರಗತಿ ಸಾಧಿಸಿತು.

ಅದೇ ರೀತಿ ಇಪ್ಪತ್ತನೇ ಶತಮಾನದಲ್ಲಿ 'ಎಲೆಕ್ಟ್ರಾನಿಕ್ಸ್' ಪ್ರತಿಯೊಬ್ಬರ ಜೀವನ ಆವರಿಸಿಕೊಂಡ ಶಾಸ್ತ್ರ ಆಯಿತು. ರೇಡಿಯೋ, ಟೆಲಿಫೋನು ವೈಭವದ, ಕೆಲವೇ ಜನರ ಸ್ವತ್ತಾಗಿದ್ದ ಕಾಲ ಹೋಯಿತು. ಇವತ್ತು ನಾವು ಕಟ್ಟಿಕೊಳ್ಳುವ ಎಲೆಕ್ಟ್ರಾನಿಕ್ ವಾಚ್‌ನಿಂದ ಹಿಡಿದು ಬಳಸುವ ಮೊಬೈಲ್ ಫೋನ್‌ಗಳವರೆಗೆ ಇದರ ಕೈವಾಡ ಹರಡಿಕೊಂಡಿತು.

ಮೊದಲ ಕ್ಯಾಲ್ಕುಲೇಟರ್ ಕಂಡು ಹಿಡಿದಾಗ ಅದು ದೊಡ್ಡದೊಂದು ರೂಮಿನಷ್ಟು ಗಾತ್ರ ಇತ್ತು. ಸರಳ ಕೂಡು, ಕಳೆಯುವ ಲೆಕ್ಕಕ್ಕೆ ಇಂಥದೊಂದು ಬೃಹತ್ ಯಂತ್ರ ಬೇಕೆ? ಎಂದು ಜನ ನಗಾಡಿದ್ದರು. ಇವತ್ತು ಅಂಥ ಕ್ಯಾಲ್ಕುಲೇಟರ್ ಸಣ್ಣ ಕೈಗಡಿಯಾರದ ಒಂದು ಭಾಗ ಮಾತ್ರ ಎಂಬಂತಾಗಿದೆ.


ಸಂಪರ್ಕ, ಮಾಹಿತಿ

ಎಲೆಕ್ಟ್ರಾನಿಕ್ಸ್‌ನ ಮುಖ್ಯ ಕಾಳಜಿ ಸಂಪರ್ಕ ಮತ್ತು ಮಾಹಿತಿ. ಇದನ್ನು ಆದಷ್ಟು ಸುಲಭ, ಸರಳ ರೀತಿಯಲ್ಲಿ ಎಲ್ಲರ ಕೈಗೆಟುಕುವಂತೆ ಮಾಡುವುದೇ ಪ್ರಮುಖ ಗುರಿ.

ಸಂಪರ್ಕ ಎಂದೊಡನೆ ನಮಗೆ ನೆನಪಾಗುವುದು ಅಂಚೆಯವನು ಅಥವಾ ಮನೆಯಲ್ಲಿ ಇರುವ ದೂರವಾಣಿ. ನಂತರು, ಮಿತ್ರರು ಬರೆದ ಕಾಗದ ಆ ಊರಲ್ಲಿ ಅಂಚೆ ಡಬ್ಬಕ್ಕೆ ಬಿದ್ದು, ಅಲ್ಲಿಂದ ಮೊಹರಾಗಿ ಬಸ್ಸು, ರೈಲು, ವಿಮಾನ ಏರಿ, ಗುರಿ ಮುಟ್ಟಿ ವಿಲೇವಾರಿಯಾಗಿ ನಮ್ಮ ಕೈ ಸೇರಲು ಎಷ್ಟೊಂದು ಕೈಗಳು ಕೆಲಸ ಮಾಡಬೇಕು ! ಹಾಗೇ ಎಷ್ಟೊಂದು ಸಮಯ, ಇಂಧನ ಎಲ್ಲ ತೆಗೆದುಕೊಳ್ಳುತ್ತದೆ ಅಲ್ಲವೇ!

ಇದನ್ನು ನಿವಾರಿಸಲು ನಡೆದ ಸಂಶೋಧನೆ ಇವತ್ತು ನಮ್ಮನ್ನು ಇ - ಮೇಲ್‌ವರೆಗೂ ಕೈಹಿಡಿದು ಕರೆದು ತಂದಿದೆ. ಆತ ಭಾರತದ ಹಳ್ಳಿಯಲ್ಲಿರಲಿ, ದೂರದ ಅಮೇರಿಕಾದಲ್ಲಿರಲಿ ಒಂದು ಕಂಪ್ಯೂಟರ್, ಟೆಲಿಫೋನ್ ಇಷ್ಟಿದ್ದರೆ ಸಾಕು. ಆತ ಬರೆದ ಪತ್ರ ಕ್ಷಣಮಾತ್ರದಲ್ಲಿ ಸೇರಬೇಕಾದವನ ಕೈಗೆ, ಕಂಪ್ಯೂಟರ್ ಮೂಲಕ ದೊರೆಯುತ್ತದೆ. ಮಾನವ ಶ್ರಮ, 'ಇಂಧನದ ವ್ಯಯ, ಸಮಯ ಹಣ ಎಲ್ಲ ನೀಗಿತಲ್ಲವೇ? ಅಷ್ಟೇ ಅಲ್ಲ, ನಮ್ಮ ಮನೆಯ ಕಿಟಕಿಯಲ್ಲಿ ಮುಖವಿಟ್ಟು ನೆರೆಮನೆಯ ವ್ಯಕ್ತಿಯೊಡನೆ ಮಾತಾಡಿದಷ್ಟು ಸಲೀಸಾಗಿಯೇ ಖಂಡಾಂತರಗಳಾಚೆಯ ವ್ಯಕ್ತಿಯೊಡನೆ ಹರಡಲು 'ಕಂಪ್ಯೂಟರ್' ಒಂದು ಕಿಟಕಿ ಆಯಿತು.

ಇನ್ನು ದೂರವಾಣಿ. ಒಂದು ಕಾಲಕ್ಕೆ ನಾವು ಬೇರೆ,ಊರಿನ ವ್ಯಕ್ತಿ ಜೊತೆ ಮಾತಾಡಲು ಟ್ರಂಕ್ ಕಾಲ್ ಬುಕ್ ಮಾಡಿ ತಾಸುಗಟ್ಟಲೇ ಕಾಯುತ್ತಾ ಚಡಪಡಿಸುತ್ತಾ ಇದ್ದೆವು. ಇವತ್ತು ಉಪಗ್ರಹದ ನೆರವಿಂದ ಮನೆಯ ದೂರವಾಣಿಯ ಮೂಲಕವೇ ಬೇರ್‍ಯಾವುದೇ ಊರಿನ, ಬೇಕಾದ ವ್ಯಕ್ತಿಯನ್ನು ಕ್ಷಣಾರ್ಧದಲ್ಲಿ ಸಂಪರ್ಕಿಸಲು ಸಾಧ್ಯ. ಮನುಷ್ಯನ ಓಡಾಟ, ವ್ಯವಹಾರದ



ಇಂಟರ್‌ನೆಟ್ ಬ್ರೌಸಿಂಗ್‌ಗೆ ಸಜ್ಜುಗೊಂಡಿರುವ ಒಂದು ಸೈಬರ್ ಕೆಫೆ

ಡಾಟ್ ಕಾಮ್ ಯಶೋಗಾಥೆ

ಸಾಫ್ಟ್‌ವೇರ್ ಉದ್ಯಮದಲ್ಲಿ ಇನ್‌ಫೋಸಿಸ್‌ನ ನಾರಾಯಣ ಮೂರ್ತಿ ಒಂದು ದಂತ ಕತೆ. ತಮ್ಮ ಹೆಂಡತಿಯಿಂದ ಹತ್ತು ಸಾವಿರ ಸಾಲ ಪಡೆದು ಆರಂಭಿಸಿದ ಉದ್ಯಮದ ಒಂದು ಶೇರಿನ ಬೆಲೆಯೇ ಇವತ್ತು ಹಲವು ಸಾವಿರ.



ಇಂಥ ಯಶೋಗಾಥೆಯನ್ನು ಡಾಟ್ ಕಾಮ್ ವ್ಯವಹಾರ ಆರಂಭಿಸಿದ ಹಲವರಲ್ಲೂ ಇವತ್ತು ಕಾಯಬಹುದು. ಅಂಥವರಲ್ಲಿ ಜಗನ್ ವಾಸನ್ ಒಬ್ಬರು.

ಎಂಜಿನಿಯರಿಂಗ್ ಮುಗಿಸಿ, ತಾಯಿಯಿಂದ ಬೇಡಿ ಪಡೆದ ಐನೂರು ರೂಪಾಯಿಯಿಂದ ಆರಂಭಿಸಿದ ವ್ಯವಹಾರ ಆಗಿ ಬರಲಿಲ್ಲ. ಅವತ್ತು ಕೆಲಸ ಹಿಡಿದು ಅಮೇರಿಕಾಗೆ ಹೋದರು ವಾಸನ್. ಆರು ವರ್ಷ ದುಡಿದು ಭಾರತಕ್ಕೆ ಮರಳಿದ ಅವರು ಡಾಟ್‌ಕಾಮ್ ವ್ಯವಹಾರ ಆರಂಭಿಸಿದರು. ವಾಸನ್ ತೊಡಗಿಕೊಂಡಿದ್ದು ಕೈಗಾರಿಕೆಗಳ ಸ್ಕ್ರ್ಯಾಪ್ ಮಾರಾಟದಲ್ಲಿ. ಇವತ್ತು ಅವರ ಕಂಪೆನಿ ಭಾರತದ ಮೊದಲ ಹತ್ತು ಕಂಪೆನಿಗಳಲ್ಲಿ ಒಂದು. ಇದಕ್ಕೆ ಕಾರಣ ಅವರು ಹೊಸ ರೀತಿಯ ಚಿಂತನೆ ನಡೆಸಿದ್ದು. ಈ ಮುಂಚೆ ಕೈಗಾರಿಕೆಗಳು ತಮ್ಮಲ್ಲಿನ ಬಹುಪಾಲು ಕಸವನ್ನು, ಹಳೆಯ ಯಂತ್ರಗಳನ್ನು ವಿಲೇವಾರಿ ಮಾಡಲು ತೀರಾ ಸಂಕೀರ್ಣ ಮಾರ್ಗ ಅನುಸರಿಸುತ್ತಾ ಇದ್ದವು. ಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ದಲ್ಲಾಳಿಗಳ ಕೈಗೆ ವ್ಯವಹಾರ ಒಪ್ಪಿಸುತ್ತಾ ಇದ್ದವು. ದಲ್ಲಾಳಿಗಳಿಗೇ ಶೇಕಡಾ 30ರಷ್ಟು ಕಮೀಷನ್ ನೀಡಬೇಕಾಗುತ್ತಿತ್ತು. ಇದೊಂದು ತೀರಾ ಸಮಯಗೇಡು ಹಾಗೂ ವೆಚ್ಚದ ಕೆಲಸ. ಇವೆರಡನ್ನೂ ನಿವಾರಿಸಲು ವಾಸನ್ ಮುಂದಾದದ್ದೇ ಅವರ ಯಶಸ್ಸಿನ ಗುಟ್ಟು. ಅವರು ಆರಂಭಿಸಿದ ವೆಬ್‌ಸೈಟನಲ್ಲಿ ತಮ್ಮ ಸ್ಕ್ರ್ಯಾಪ್ ಮಾಡುವ ಹಾಗೂ ಅದನ್ನು ಕೊಳ್ಳುವ ಉದ್ಯಮಗಳ ಪಟ್ಟಿ ಮಾಡಿದರು. ಮಧ್ಯವರ್ತಿಗಳನ್ನು ತಪ್ಪಿಸಿ ' ಕೊಳ್ಳುವವರು ಮಾರುವವರು ನೇರವಾಗಿ ವ್ಯವಹಾರ ನಡೆಸಲು ಅನುವಾದರು. ವಾಸನ್ ಪರಿಧಿಯೊಳಗೆ ಬರುವ ಇಂಥ ಉದ್ದಿಮೆಗಳು ನೋಂದಣಿ ಶುಲ್ಕವಾಗಿ ಎರಡೂವರೆ ಸಾವಿರದಿಂದ ಹದಿನೈದು ಸಾವಿರದವರೆಗೆ ನೀಡಬೇಕಾಗುತ್ತದೆ. ಇದಲ್ಲದೇ ಪ್ರತಿ ವಹಿವಾಟಿನ ಮೇಲೆ ಶೇಕಡಾ 2.5ರಷ್ಟು ಹಣವೂ ದೊರೆಯುತ್ತದೆ.

ಇವತ್ತು ಎಬಿಬಿ, ಎಲ್ ಅಂಡ್ ಟಿ, ಬಿಎಚ್‌ಇಎಲ್ ಹಾಗೂ ಮೈಕೋದಂಥ ಉದ್ದಿಮೆಗಳು ಸೇರಿದಂತೆ ಮುನ್ನೂರು ಗ್ರಾಹಕರ ಪಟ್ಟಿಯೇ ವಾಸನ್ ಗ್ರಾಹಕರಲ್ಲಿ ಸೇರಿದ್ದಾರೆ. ಇದು ಸದ್ಯದಲ್ಲಿಯೇ ಎರಡು ಸಾವಿರಕ್ಕೆ ಏರಲಿದೆ.

ಕೇವಲ ಸ್ಕ್ರ್ಯಾಪ್ ಮಾರಾಟ ಒಂದೇ ಅಲ್ಲ, ಯಾವ ಕೈಗಾರಿಕೆಯ ಸ್ಕ್ರ್ಯಾಪ್ ಇನ್ನೊಂದು ಕೈಗಾರಿಕೆಗೆ ಅಗತ್ಯ ಮತ್ತು ಅದರ ನಿಖರವಾದ ಬೆಲೆ ಏನು ಎಂಬುದನ್ನು ತಿಳಿಸಿ ಹೇಳುವ ತಜ್ಞರ ತಂಡವೇ ಇದೆ. ಇದರ ಲಾಭ ಕೈಗಾರಿಕೆಗಳಿಗೆ ದಕ್ಕುತ್ತದೆ. ಇವತ್ತು ವಾಸನ್ ಅವರ ಯಶಸ್ಸು ಕಥೆಯ ಹಾಗೆ ಅನ್ನಿಸಬಹುದು. ಆದರೆ ಅದಕ್ಕಾಗಿ ಅವರು ಪಟ್ಟ ಪರಿಶ್ರಮ, ಎದುರಿಸಿದ ಕಷ್ಟಗಳ ಪರಂಪರೆ ದೊಡ್ಡದೇ. ಇವತ್ತೂ ದಿನಕ್ಕೆ ನಾಲ್ಕು ತಾಸು ಮಾತ್ರ ನಿದ್ರಿಸುವ ಅವರ ಹೆಚ್ಚಿನ ಸಮಯವೆಲ್ಲ ಹೊಸ ಹೊಸ ಚಿಂತನೆಗೆ , ಟಿವಿ ವೀಕ್ಷಣೆಗೆ ಮೀಸಲು. ■

ಅನುಕೂಲತೆ ಗಮನಿಸಿ ಈಗೀಗ ಮೊಬೈಲ್ ಫೋನುಗಳೂ ಬಂದಿವೆ.

ಇವುಗಳಿಂದ ಸಂಪರ್ಕ ಸುಲಭವಾಗಿದೆ. ಸರಳವಾಗಿದೆ. ಹಾಗೇ ಮಾಹಿತಿಯ ವ್ಯವಹಾರ ಕೂಡ. ಎಲೆಕ್ಟ್ರಾನಿಕ್ಸ್ ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಕಂಪ್ಯೂಟರ್ ವಿಜ್ಞಾನದಲ್ಲಿ ಮಾಹಿತಿ ಎಂಬ ಪದದ ಅರ್ಥ, ವ್ಯಾಪ್ತಿ ಭಾರೀ ದೊಡ್ಡದು.

ಅದು ಒಬ್ಬನ ಮಾತಿರಬಹುದು. ಕ್ರಿಯೆ ಇರಬಹುದು, ಸಾಹಿತ್ಯ ಇರಬಹುದು, ಸಂಶೋಧನೆ ಇರಬಹುದು. ಹೀಗೆ ನಾನಾ ಬಗೆಯ ಮಾಹಿತಿಗಳು ಲಭ್ಯ. ಇದರಲ್ಲಿ ಎಲ್ಲವೂ ಎಲ್ಲರಿಗೂ ಬೇಕಾಗುವುದಿಲ್ಲ. ಆದರೆ ತನಗೆ ಅಗತ್ಯ ಎನ್ನಿಸುವ ಮಾಹಿತಿ, ಆ ವ್ಯಕ್ತಿ ಸುಲಭವಾಗಿ ಪಡೆಯಲು ಒಂದು ವ್ಯವಸ್ಥೆ ಬೇಕು. ದೆಹಲಿಯಲ್ಲಿ ಪ್ರಧಾನಿ ವಾಜಪೇಯಿ ಏನೇ ನಿರ್ಧಾರ ಪ್ರಕಟಿಸಿದರೂ, ಅದು ಕ್ಷಣಾರ್ಧದಲ್ಲಿ ನೇರವಾಗಿ ನಮಗೆ ತೋರುವಂತಾಗಲು ಟಿವಿ ಇದೆ. ಬಿಸಿನೆಸ್‌ನ ಮಾತುಕತೆ ಏನಾಗುತ್ತದೆ ಎಂದು ತಿಳಿಯಲು ವಿಡಿಯೋ ಕಾನ್ಫರೆನ್ಸಿಂಗ್ ಇದೆ. ಇಲ್ಲಿ ರವಾನೆ ಆಗುವುದಲ್ಲ ದೃಶ್ಯ ಮಾಹಿತಿ.

ಹಾಗೇ ನೀವು ಬರೆದ ಪುಸ್ತಕ ಒಂದನ್ನು ಇನ್ಯಾವುದೇ ಖಂಡದಲ್ಲಿರುವ ವ್ಯಕ್ತಿಯೊಬ್ಬ ಓದಬೇಕೆಂದರೆ, ನೂರಾರು ಪುಟಗಳ ಪುಸ್ತಕವನ್ನು ರವಾನಿಸಬೇಕಿಲ್ಲ. ನಿಮ್ಮ ಪುಸ್ತಕ ಕಂಪ್ಯೂಟರ್‌ಗೆ ಅಳವಡಿಸಿ, ಅದನ್ನೊಂದು ಜೇಬಲ್ಲಿ ಇಟ್ಟುಕೊಳ್ಳುವ ಸಣ್ಣ ಫ್ಲಾಪಿಯಲ್ಲಿ ಇಟ್ಟು ಕಳಿಸಬಹುದು. ಅದಕ್ಕಿಂತ ಹಗುರವಾದ, ಇನ್ನೂ ಹೆಚ್ಚು ಮಾಹಿತಿ ಸಂಗ್ರಹಿಸಿ ಇಟ್ಟುಕೊಳ್ಳಬಲ್ಲ ಕಾಂಪ್ಯಾಕ್ಟ್ ಡಿಸ್ಕ್‌ಗೆ ಅಳವಡಿಸಿ, ಅದನ್ನು ರವಾನಿಸಬಹುದು. ಇನ್ನೂ ಸುಲಭ ಎಂದರೆ ಇಂಟರ್‌ನೆಟ್‌ಗೆ ಅಳವಡಿಸಿದರೆ ಜಗತ್ತಿನ ಎಲ್ಲೆಡೆ ಅದನ್ನು ಜನ ಬೇಕೆಂದಾಗ ತೆಗೆದು ಓದಿಕೊಳ್ಳಬಹುದು.

ಇದಕ್ಕಿಂತ ಹೆಚ್ಚು ಮುಂದುವರಿದ ಬೇರೆ ಬೇರೆ ಬಗೆಯ ವೈಜ್ಞಾನಿಕ ಮಾಹಿತಿಗಳಿವೆ. ಉದಾಹರಣೆಗೆ ಬೆಂಗಳೂರಲ್ಲಿ ಕುಳಿತು ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬ ರೂಪಿಸಿದ ಸಾಫ್ಟ್‌ವೇರ್ ಸಮಸ್ಯೆಯ ಪರಿಹಾರವನ್ನು ಇಲ್ಲಿಂದ ನೇರವಾಗಿ ಅದಕ್ಕೆ ಸಂಬಂಧಿಸಿದ ವ್ಯಕ್ತಿಗೇ ರವಾನಿಸಬಹುದು. ಇದಕ್ಕಾಗಿ ಆತ ಎಲ್ಲ ಹೊತ್ತುಕೊಂಡು ಇನ್ನೊಂದೂರಿಗೆ ಧಾವಿಸುವ, ಪ್ರಯಾಣಿಸುವ ಅಗತ್ಯವಿಲ್ಲ.

ವ್ಯವಹಾರ ರಂಗ

ಬದುಕಿನ ಒಂದೊಂದೇ ರಂಗವನ್ನು ವ್ಯಾಪಿಸುತ್ತಾ ಬಂದ ಇಂಥ ಕಂಪ್ಯೂಟರ್ ಸಹಜವಾಗಿ ವ್ಯವಹಾರ ರಂಗವನ್ನು ಆವರಿಸಿತು.

ಮೊದಲು ಪರಸ್ಪರ ಸಂಪರ್ಕ, ವಿನ್ಯಾಸ, ನಿರ್ವಹಣೆ ಮುಂತಾದ ಕೆಲಸಗಳಿಗೆ ಬಳಕೆ ಆಗುತ್ತಿದ್ದ ಕಂಪ್ಯೂಟರ್ ನಿಧಾನವಾಗಿ ನೇರವಾಗಿ ಗ್ರಾಹಕರ ಜೊತೆ ಸಂಪರ್ಕ ಬೆಳೆಸಿ ತನ್ನ ವ್ಯಾಪಾರ, ವ್ಯವಹಾರ ನಡೆಸುವ ಕಾಲ ಬಂತು.

ವ್ಯವಹಾರಕ್ಕೆ ಬಳಕೆ ಆಗುವ ವೆಬ್‌ಸೈಟ್‌ಗಳನ್ನು ಸಾಮಾನ್ಯವಾಗಿ ಡಾಟ್ ಕಾಮ್ ಎಂದು ಕರೆಯಲಾಗುತ್ತದೆ. ಇಂಥ ಹಲವು ಬಗೆಯ ವೆಬ್‌ಸೈಟುಗಳ ಬಗ್ಗೆ ನಿತ್ಯ ಪತ್ರಿಕೆ, ಟಿವಿ, ರಸ್ತೆ ಬದಿಯ ಫಲಕಗಳಲ್ಲಿ ಜಾಹೀರಾತು ನೋಡುತ್ತೀರ. ಸೈಬರ್ ಕೆಫೆಗಳಲ್ಲಿ ಚೀರಿ ಹೇಳುವ ಪೋಸ್ಟರ್‌ಗಳು. ಇಂಥ ಜಾಹೀರಾತುಗಳಿಗೇ ಪ್ರತಿ ಕಂಪೆನಿಯೂ ತಿಂಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತದೆ.

ಇಂಡಿಯಾದಲ್ಲಿ ಇಂಥ ವೆಬ್‌ಸೈಟ್‌ಗಳು ದಿನದಿಂದ ದಿನಕ್ಕೆ ಭಾರೀ ವೇಗದಲ್ಲಿ ವೃದ್ಧಿ ಆಗುತ್ತಿವೆ. ಇಂಥ ವೆಬ್‌ಸೈಟ್‌ಗಳಲ್ಲಿ ಕೆಲವು ಭಾರೀ ಗಾತ್ರದವು. ಅಂಥವುಗಳನ್ನು ಪೋರ್ಟಲ್‌ಗಳು ಎನ್ನುತ್ತಾರೆ. ಇವು ಅಡ್ಡಡ್ಡ ಇರಬಹುದು. ಇಲ್ಲವೇ ಉದ್ದುದ್ದ ಇರಬಹುದು. ಉದ್ದುದ್ದ ಇರುವ ವೆಬ್‌ಸೈಟ್‌ಗಳನ್ನು ಪೋರ್ಟಲ್ ಎನ್ನುವುದುಂಟು.

ಕಳೆದ ವರ್ಷ 1999ರಲ್ಲಿ ಇಂಥ ನಾಲ್ಕೂವರೆ ಲಕ್ಷ ಸೈಟುಗಳನ್ನು ಭಾರತೀಯರು ನೋಂದಾಯಿಸಿದ್ದಾರೆ. ಇವರಲ್ಲಿ ಆದಿವಾಸಿ ಭಾರತೀಯರು ಸೇರಿಲ್ಲ. ಅಂದರೆ ಇಂಥ ವೆಬ್‌ಸೈಟ್‌ಗಳ ಪ್ರಗತಿ ಎಂಥದೆಂಬುದು ತಿಳಿಯಬಹುದು.

ಇದು ಕೇವಲ ಯಾರದೋ ಹುಚ್ಚಾಟಕ್ಕೆ ಮಾಡಿದ್ದು ಅಲ್ಲ. ಮೂರು ತಿಂಗಳ ಹಿಂದೆ ಸತ್ಯಂ ಆನ್‌ಲೈನ್ ಮತ್ತು ಇಂಡಿಯಾ ವರ್ಲ್ಡ್ ಗುಂಪಿನ

ವೆಬ್ ಸೈಟುಗಳಲ್ಲಿ ಜನ ಪ್ರತಿ ತಿಂಗಳು 13 ದಶಲಕ್ಷ ಪೇಜು ಗಳನ್ನು ತೆರೆದು ನೋಡುತ್ತಿದ್ದರು. ವೆಬ್‌ಸೈಟುಗಳನ್ನು ತೆರೆದು ನೋಡುತ್ತಿದ್ದರು. ಈಗ ತಿಂಗಳಿಗೆ 36 ದಶಲಕ್ಷ ಪೇಜುಗಳನ್ನು ಜನ ತೆರೆದು ನೋಡುತ್ತಾ ಇದ್ದಾರೆ.

ಇದು ವೆಬ್‌ಸೈಟ್‌ನ ವಿಚಾರ ಮತ್ತು ಅವುಗಳ ಜನಪ್ರಿಯತೆ. ಇನ್ನು ಇಲ್ಲಿ ವ್ಯವಹಾರ ಹೇಗೆ ನಡೆಯುತ್ತಿದೆ ಎಂಬುದು ಒಂದಿಷ್ಟು ನೋಡೋಣ.

ಈ ವೆಬ್‌ಸೈಟ್‌ಗಳಲ್ಲಿ ಮಾಹಿತಿ ಒದಗಿಸುವ, ಸುದ್ದಿ, ವಿಷಯಗಳನ್ನು ಬಿತ್ತರಿಸುವುದೇ ಮುಖ್ಯವಾಗಿರುತ್ತದೆ. ಒಂದು ಸಂಸ್ಥೆ ತನ್ನ ಬಗ್ಗೆಯೇ ಇಲ್ಲಿ ಮಾಹಿತಿ ನೀಡಬಹುದು. ಇಲ್ಲೇ ತನ್ನ ಉತ್ಪನ್ನದ ವಿವರ ನೀಡಬಹುದು.



ಡಾಟ್ ಕಾಮ್ ಕಂಪನಿಯೊಂದರ ಆರಂಭ

ಇ - ಕಾಮರ್ಸ್

ಡಾಟ್ ಕಾಮ್ ಎಂಬ ಅಂಕಿತವಿರುವ ಬಹುಪಾಲು ವೆಬ್‌ಸೈಟುಗಳಲ್ಲಿ ನೇರವಾಗಿಯೇ ಗ್ರಾಹಕರು ವ್ಯಾಪಾರ ಮಾಡಬಹುದು. ಅವು ಈಗ ಹೆಚ್ಚು ಹೆಚ್ಚು ಜನಪ್ರಿಯ. ಇದಕ್ಕೆ ಇ - ಕಾಮರ್ಸ್ ಅಥವಾ ಎಲೆಕ್ಟ್ರಾನಿಕ್ ಕಾಮರ್ಸ್ (ವಿದ್ಯುನ್ಮಾನ ವಾಣಿಜ್ಯ) ಎನ್ನುತ್ತಾರೆ.

ಯಾರಾದರೂ ಇಂಥದೊಂದು ಅಂಗಡಿ ತೆರೆಯಬೇಕಾದರೆ ತಮ್ಮದೇ ವೆಬ್‌ಸೈಟ್ ಸೃಷ್ಟಿಸಿಕೊಳ್ಳಬಹುದು. ಅಥವಾ ಈಗಾಗಲೇ ಸೃಷ್ಟಿ ಆಗಿರುವ ಸೈಟನೊಂದಿಗೆ ಸೇರಿಕೊಂಡು ವ್ಯವಹಾರ ನಡೆಸಬಹುದು.

ಸ್ವಂತದ ವೆಬ್‌ಸೈಟ್ ನಿರ್ಮಿಸಿ ನಿರ್ವಹಿಸಬಹುದು. ಭಾರೀ ವೆಚ್ಚದ್ದು. ವಿಶೇಷ ಬಗೆಯ ಹಾರ್ಡ್‌ವೇರ್ ಬೇಕಾಗುತ್ತದೆ. ಅದಕ್ಕೆ ಹಲವು ಲಕ್ಷ ಅಥವಾ ಕೋಟಿಗಳ ಲೆಕ್ಕದಲ್ಲಿ ದುಡ್ಡು ತೆರಬೇಕಾಗುತ್ತದೆ. ಅದಕ್ಕೆ ವಿಶೇಷ ಬಗೆಯ ಸಾಫ್ಟ್‌ವೇರ್ ಮತ್ತು ಅದನ್ನು ನಿರ್ವಹಿಸಬಲ್ಲ ಜನ ಬೇಕಾಗುತ್ತದೆ. ಇಂಥದ್ದನ್ನು ದೊಡ್ಡ ದೊಡ್ಡ ಕಂಪನಿಗಳು ಮಾತ್ರ ಕೈಗೆತ್ತಿಕೊಳ್ಳುವುದು ಸಾಧ್ಯ.

ಹಾಲಿ ಇರುವ ವೆಬ್‌ಸೈಟ್‌ನಲ್ಲಿ ಒಂದು ಭಾಗ ಪಡೆದುಕೊಂಡು, ಅಲ್ಲಿಂದಲೇ ವ್ಯಾಪಾರ ನಡೆಸುವುದು ಸುಲಭ. ಸಣ್ಣ ಉದ್ಯಮಿಗಳಿಗೆ ಸೂಕ್ತ. ಇಂಥದ್ದನ್ನು ರೂಪಿಸಲು ವೆಬ್‌ಸೈಟ್ ಡಿಸೈನರುಗಳೂ ಬೇಕಿಲ್ಲ. ಇಂಟರ್‌ನೆಟ್‌ನಲ್ಲಿ ಪರಿಣಿತ ಇದ್ದವರಾದರೆ ಸಾಕು. ಹಾಗೂ ಹೆಚ್ಚು ಮಾಹಿತಿ ಬೇಕೆಂದರೆ ಅದನ್ನು ಒದಗಿಸಬಲ್ಲ ವೆಬ್‌ಸೈಟ್ ಬಂದಿದೆ. ಬೇಕಾದರೆ ಅದಕ್ಕೆ ಭೇಟಿ ನೀಡಿ.

ಅಂಥ ಎರಡು ವಿಳಾಸಗಳು ಹೀಗಿವೆ

http.//store.yahoo.com

www.icat.com

ಈ ಸೈಟುಗಳಿಗೆ ಭೇಟಿ ನೀಡಿದರೆ ಆನ್‌ಲೈನ್ ಸ್ಟೋರ್‌ಗಳು ಹೇಗಿರುತ್ತವೆ ಎಂಬುದು ಖುದ್ದು ನಿಮಗೇ ತಿಳಿಯುತ್ತದೆ.

ಇಲ್ಲಿ ಭೇಟಿ ನೀಡಿದರೆ, ನಿಮ್ಮ ಉತ್ಪನ್ನಗಳನ್ನು ಹೇಗೆ ಮಾರಾಟ ಮಾಡಬಹುದೆಂಬ ವಿವರ ದೊರೆಯುತ್ತದೆ. ತಿಂಗಳಿಗೆ ನೂರು ಡಾಲರ್ ನೀಡಿದರೆ ಇಂಥ ಸ್ಟೋರ್‌ಗಳಲ್ಲಿ ನಿಮ್ಮದೇ ಆದ ಐವತ್ತು ಉತ್ಪನ್ನಗಳನ್ನು ಅಲ್ಲಿ ಮಾರಾಟಕ್ಕೆ ಇಡಬಹುದು. (ನೂರು ಡಾಲರ್ ಎಂದರೆ ಸುಮಾರು 450 ರೂಪಾಯಿ) ಅದೇ ನೀವು 300 ಡಾಲರ್ ನೀಡುವುದಾದರೆ ನಿಮ್ಮ ಸಾವಿರ ಉತ್ಪನ್ನಗಳನ್ನು ಮಾರಾಟಕ್ಕೆ ಇಡಬಹುದು.

ಇಂಥ ವ್ಯಾಪಾರಕ್ಕೆ ಮುಂದಾಗಲು ಕೊಂಚ ಆತ್ಮವಿಶ್ವಾಸ, ವ್ಯವಹಾರದ ಕುಶಲತೆ ಇರಬೇಕಾದ್ದು ಅಗತ್ಯ. ಈಗ ರೇಷ್ಮೆ ಸೀರೆಯ ವ್ಯಾಪಾರವನ್ನೇ ನೋಡಿ. ಮಾಮೂಲು ಅಂಗಡಿ ತೆರೆದು ಕುಳಿತುಕೊಂಡರೆ, ನಿಮ್ಮ ಊರಿನ, ಹೆಚ್ಚೆಂದರೆ ಆಸು ಪಾಸಿನ ಊರಿನ ಜನ ಬಂದು ಕೊಂಡುಕೊಳ್ಳಬಹುದು. ಅದಕ್ಕಾಗಿ ಸಾವಿರಾರು ಸೀರೆ ತಂದು ಇಟ್ಟುಕೊಳ್ಳಬೇಕಾಗುತ್ತದೆ. ವ್ಯಾಪಾರ ಆದರೆ ಆಯಿತು, ಇಲ್ಲವಾದರೆ ಇಲ್ಲ. ನೀವು ಹಾಕಿದ ಬಂಡವಾಳದ ಮೇಲೆ ಬಡ್ಡಿ, ಸ್ಥಳದ ಬಾಡಿಗೆ, ಅದರ ಅಲಂಕಾರಕ್ಕೆ ಖರ್ಚು, ಅದನ್ನು ನಿರ್ವಹಿಸುವ ಜನಕ್ಕೆ ಸಂಬಳ ಎಲ್ಲ ನೀಡಬೇಕು. ಇವೆಲ್ಲ ಅನಗತ್ಯ ಹೊರೆ ಆನ್‌ಲೈನ್ ಸ್ಟೋರ್‌ನಲ್ಲಿ ಇರುವುದಿಲ್ಲ. ಇಲ್ಲಿಗೆ ಕೇವಲ ನಿಮ್ಮ ಊರಿನವರಷ್ಟೇ ಅಲ್ಲ, ವಿಶ್ವದಾದ್ಯಂತ ಜನ ಭೇಟಿ ನೀಡಬಹುದು. ಅದೂ ಅವರವರ ಮನೆಗಳಲ್ಲಿಯೇ ಕುಳಿತು. ನೀವು ಹೆಚ್ಚು ರೇಷ್ಮೆ ಸೀರೆಗಳನ್ನು ಪ್ರಪಂಚದಾದ್ಯಂತ ಮನೆಯಲ್ಲಿಯೇ ಕುಳಿತು ಮಾರಬಹುದು. ಇದೇ ಇಲ್ಲಿನ ವಿಶೇಷತೆ.

ವಂಚಕರಿದ್ದಾರೆ ಇಲ್ಲೂ

ಡಾಟ್ ಕಾಮ್ ಅಥವಾ ಇಂಟರ್‌ನೆಟ್ ಟ್ರೇಡಿಂಗ್ ಅತ್ಯಾಧುನಿಕ, ಅಷ್ಟೇ ಸುಲಭ ವ್ಯವಹಾರದ ಕ್ರಮ. ಇಲ್ಲಿ ವಂಚಿಸುವುದು ಕೂಡ ಸುಲಭ. ಇಂಥ ವಂಚನೆ ತಡೆಯಲು ಮುಂದುವರಿದ ಅಮೇರಿಕಾದಲ್ಲಿ ಕ್ರಮ ಇದೆ. ಇಲ್ಲೂ ವಂಚನೆ ನಡೆಯದಂತೆ ತಡೆಯುವ ಬಗ್ಗೆ ಚಿಂತಿಸಲಾಗಿದೆ. ಆದರೆ ಆಧುನಿಕ ತಂತ್ರಜ್ಞಾನ ಬಳಸಿಕೊಂಡೇ ವಂಚಿಸಿದವರ ವಿರುದ್ಧ ಕ್ರಮ ಅಲ್ಲಿಯೂ ಸಾಧ್ಯವಾಗಿಲ್ಲ.

ಅಸ್ತಿತ್ವದಲ್ಲೇ ಇಲ್ಲದ ಕಂಪೆನಿ, ಯೋಜನೆಗಳನ್ನು ಪ್ರಚುರಪಡಿಸಿ ಬಂಡವಾಳ ಹೂಡಿಕೆಗೆ ಪ್ರಚೋದಿಸುವುದು, ಶೇರುಗಳ ಬಗ್ಗೆ ತಪ್ಪು ಮಾಹಿತಿ ವೆಬ್ ಸೈಟ್‌ಗಳಲ್ಲಿ ಮೂಡುವಂತೆ ಮಾಡಿ ಹಣ ಗಳಿಸುವುದು ಅಲ್ಲಿ ವರದಿಯಾಗಿದೆ. ಧರ್ಮದ ಹೆಸರಲ್ಲಿ ಹಣ ಸಂಗ್ರಹಿಸಿದ್ದೂ ಅಲ್ಲಿ ವರದಿಯಾಗಿದೆ. ಇದರ ಪಡೆಗೆ ಅಮೇರಿಕಾದ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಕಮೀಷನ್ 200 ಜನರ ದಳವನ್ನು ರಚಿಸಿದೆ. ಈ ದಳದ ಸದಸ್ಯರು ವೆಬ್‌ಸೈಟ್‌ಗಳನ್ನು ನೋಡುತ್ತ ನೋಡುತ್ತಾ ಅಲ್ಲಿ ಉದ್ಭವಿಸಬಹುದಾದ ವಂಚನೆ ಪ್ರಕರಣಗಳ ಮೇಲೆ ಕಣ್ಣಿಡುತ್ತಾರೆ. ಅವರಿಗೆ ಇ-ಮೇಲ್ ಮೂಲಕ ಸಾರ್ವಜನಿಕರಿಂದಲೂ ದೂರು, ಮಾಹಿತಿಗಳು ಬರುತ್ತವೆ.

ಭಾರತದಲ್ಲಿ ಈಗಿನ್ನೂ ಇ-ಕಾಮರ್ಸ್ ಬರುತ್ತಿದೆ. ಇಲ್ಲಿ ಇಂಟರ್‌ನೆಟ್ ಟ್ರೇಡಿಂಗ್‌ಗೆ ಅನುಮತಿ ನೀಡುವುದು ಜಿಯೋಜಿಟ್ ಸೆಕ್ಯುರಿಟೀಸ್ ಎಂಬ ಸಂಸ್ಥೆ. ಯಾವುದೇ ಕಂಪೆನಿ ಇಂಟರ್‌ನೆಟ್ ಟ್ರೇಡಿಂಗ್‌ನಲ್ಲಿ ತೊಡಗಬೇಕಾದರೆ, ಆ ಕಂಪೆನಿಯ ಅರ್ಹತೆಗಳೇನು? ಅದು ಭರವಸೆ ನೀಡುವ ಎಲ್ಲ ಅಂಶಗಳನ್ನು ಪೂರೈಸಬಲ್ಲರೇ? ಎಂಬುದನ್ನು ಪರಿಶೋಧಿಸಿದ ನಂತರವೇ ಅನುಮತಿ ನೀಡುವುದರಿಂದ ಇಲ್ಲಿ ಅಂಥ ವಂಚನೆ ಕಡಿಮೆ.

ಇಂಟರ್‌ನೆಟ್ ಟ್ರೇಡಿಂಗ್ ಒಮ್ಮೆ ಆರಂಭವಾದರೆ ವಿಶ್ವದ ಎಲ್ಲೆಡೆ ಗ್ರಾಹಕರು ಹುಟ್ಟಿಕೊಳ್ಳುತ್ತಾರೆ. ಪಶ್ಚಿಮದ ಯಾವುದೋ ರಾಷ್ಟ್ರದ ಕಂಪೆನಿಯೊಂದು ನಡೆಸುವ ವಂಚನೆಗೆ ಭಾರತೀಯ ಗುರಿಯಾಗಬಹುದು. ಹೀಗೆ ತೆಂಗಿನ ತೋಟದ ಯೋಜನೆಯೊಂದನ್ನು ಆರಂಭಿಸಿದ ಕಂಪೆನಿಯಲ್ಲಿ ಬಂಡವಾಳ ಹೂಡಿ ಹಣ ಕಳೆದುಕೊಂಡವರಲ್ಲಿ ಭಾರತೀಯರೂ ಇದ್ದಾರೆ. ಇಲ್ಲದ ಹೆಗ್ಗಳಿಕೆಗಳನ್ನು ಇಂಟರ್‌ನೆಟ್‌ನಲ್ಲಿ ಪ್ರಕಟಿಸಿದ ಈ ಕಂಪೆನಿ ಅಮೇರಿಕಾ ಮೂಲದ್ದು. ಅದೀಗ ಹಣ ಸಂಗ್ರಹಿಸಿ ಕಣ್ಮರೆಯಾಗಿದೆ. ಆದರೆ ಹಣ ಮರಳಿ ಕೊಡಿಸುವ ವ್ಯವಸ್ಥೆಯಂತೂ ಸದ್ಯಕ್ಕೆ ಇಲ್ಲ.

ಆಧುನಿಕ ತಂತ್ರಜ್ಞಾನ ಬಳಕೆ ಆದಂತೆ, ಅದನ್ನು ದುರುಪಯೋಗಪಡಿಸಿಕೊಳ್ಳುವವರ ಸಂಖ್ಯೆಯೂ ಹೆಚ್ಚುತ್ತಿದೆ. ವೆಬ್‌ಸೈಟ್‌ಗಳ ಮೇಲೆ ದಾಳಿ ಮಾಡಿ ಹಾಳುಗೆಡುವವರು, ಮಾಹಿತಿಗಳನ್ನು ಬೇಕಾದಂತೆ ತಿದ್ದಬಲ್ಲವರು, ವ್ಯಕ್ತಿಗಳ ಖಾಸಗಿ ವಿವರಗಳನ್ನು ಸಲೀಸಾಗಿ ಪಡೆಯಬಲ್ಲವರು ಹುಟ್ಟಿಕೊಂಡಿದ್ದಾರೆ. ಇದರ ಪರಿಣಾಮ ಎಂದರೆ ಇ-ಕಾಮರ್ಸ್‌ನಲ್ಲಿ ಗ್ರಾಹಕನಾದವನು ಸುಲಭವಾಗಿ ವಂಚನೆಗೆ ಈಡಾಗುವ ಸಾಧ್ಯತೆ ಹೆಚ್ಚು. ಅದೊಂದು ಅನಿವಾರ್ಯ ಪಿಡುಗು. ಎಲ್ಲೆಡೆ, ಎಲ್ಲ ಕಾಲಕ್ಕೆ ದುಷ್ಟರು ಇದ್ದೇ ಇರುತ್ತಾರೆ. ■

ಇಂಥ ಆನ್‌ಲೈನ್ ಸ್ಟೋರ್‌ಗಳಲ್ಲಿ ವಿಶೇಷ ಬಗೆಯ ಉತ್ಪನ್ನಗಳಿಗೆ, ಕರಕುಶಲ ವಸ್ತುಗಳಿಗೆ ಹೆಚ್ಚಿನ ಆದ್ಯತೆ. ಹಾಗಾಗಿ ಇಂಥ ಅಂಗಡಿಗಳಲ್ಲಿ ಬಿಕರಿಗೆ ಇಡುವ ವಸ್ತುಗಳು ವಿಶೇಷ ರೀತಿಯವು ಆಗಿರಬೇಕು. ಇತ್ತೀಚೆಗೆ ಗ್ರೀಟಿಂಗ್ ಕಾರ್ಡ್‌ಗಳನ್ನು ಕೂಡ ಇಂಥ ಆನ್‌ಲೈನ್ ಸ್ಟೋರ್‌ಗಳಲ್ಲಿ ಮಾರುವ ಪರಿಪಾಠ ಆರಂಭವಾಗಿರುವುದನ್ನು ಇಲ್ಲಿ ಗಮನಿಸಬೇಕು. ಭಾರತದಂಥ ದೇಶದಲ್ಲಿ ನಾನಾ ಬಗೆಯ ಕರಕುಶಲ ವಸ್ತುಗಳು, ಆಯಾ ಪ್ರಾದೇಶಿಕ ವಿಭಿನ್ನತೆ ಹಾಗೂ ಅಂಥ ಪ್ರದೇಶಗಳಲ್ಲಿ ಮಾತ್ರ ದೊರೆಯುವ ಉತ್ಪನ್ನಗಳು ಲಭ್ಯವಿರುತ್ತವೆ. ರಾಜ್ಯದ ಬೆಳಗಾವಿ ಜಿಲ್ಲೆಯ ಗೋಕಾಕ್‌ನಲ್ಲಿ ತಯಾರಾಗುವ ಕರದಂಟು ಬಗ್ಗೆಯೇ ಇತ್ತೀಚೆಗೆ ಡಿಸ್ಕವರಿ ಚಾನೆಲ್ ಕಾರ್ಯಕ್ರಮ ಸಿದ್ಧಪಡಿಸಿತ್ತು. ರಾಜ್ಯದ ದಕ್ಷಿಣ ಭಾಗದ ಜನಕ್ಕೇ ಈ ವಿಶೇಷ ತಿನಿಸು ಎಂಥದ್ದು ಎಂಬುದು ಅಷ್ಟಾಗಿ ಪರಿಚಯ ಇಲ್ಲ. ಆದರೆ ಡಿಸ್ಕವರಿ ಚಾನೆಲ್‌ನಲ್ಲಿ ಕಾರ್ಯಕ್ರಮ ಬಿತ್ತರವಾದ ಮೇಲೆ ಕರದಂಟಿಗೆ ವಿಶ್ವದ ನಾನಾ ಭಾಗಗಳಿಂದ ಕುತೂಹಲ ಮೂಡಿದೆ. ಇಂಥ ವಿಷಯ ಗಮನಿಸಿದಾಗ ವಾಣಿಜ್ಯ, ವ್ಯವಹಾರದ ಹೊಸ ಆಯಾಮ ಒಂದು ಡಾಟ್ ಕಾಮ್ ವ್ಯವಹಾರದಿಂದ ತೆರೆದುಕೊಂಡಂತಾಗಿದೆ ಎಂಬುದು ಖಚಿತ.

ಬದಲಾಗುವ ವ್ಯವಸ್ಥೆ :

ಇಂಥ ಡಾಟ್‌ಕಾಮ್ ವ್ಯವಹಾರ ಹೇಗೆ ನಮ್ಮ ಇದುವರೆಗಿನ ಜೀವನ ಶೈಲಿಯನ್ನೇ ಬದಲಿಸಬಹುದು ಎಂಬುದಕ್ಕೇ ಇಲ್ಲೊಂದು ಉದಾಹರಣೆ ನೋಡಿ. ಇದುವರೆಗೆ ನಾವು ಸುದ್ದಿ ಪತ್ರಿಕೆಗಳಲ್ಲಿ, ಏನು ಮುದ್ರಣವಾಗುತ್ತಿತ್ತೋ ಅದನ್ನಷ್ಟೇ ಓದಿ ಸುಮ್ಮನೆ ಆಗಬೇಕಾಗುತ್ತಿತ್ತು. ಇನ್ನು ಮುಂದೆ ಓದುಗರು ಯಾವುದೋ ಸಚಿವನ, ರಾಜಕೀಯ ನಾಯಕನ ಸಂದರ್ಶನ ತಾವೇ ನಡೆಸಬಹುದು. ತಮಗೆ ಸರಿ ಎನಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬಹುದು.

ಇಂಥದೊಂದು ವ್ಯವಸ್ಥೆಯನ್ನು 'ಇಂಡಿಯಾ ಟುಡೆ' ಪತ್ರಿಕೆ ಈಗಾಗಲೇ ಆರಂಭಿಸಿದೆ. ಇಲ್ಲಿನ ವೆಬ್‌ಸೈಟಿನಲ್ಲಿ ಓದುಗ ನಿಗದಿತ ದಿನದಂದು ಸೈಟಿಗೆ ಹಾಜರಾಗುವ ವ್ಯಕ್ತಿಯ ಜೊತೆ ನೇರವಾಗಿ ಸಂಭಾಷಣೆಗೆ ಇಳಿಯಬಹುದು. ತನ್ನ ಪ್ರಶ್ನೆಗಳನ್ನು ಮಂಡಿಸಿ ಉತ್ತರಗಳನ್ನು ಪಡೆಯಬಹುದು.

ವೆಬ್‌ಸೈಟ್‌ನಲ್ಲಿ ಪತ್ರಿಕೆಗಳು ಪ್ರಕಟ ಆಗಲು ಶುರುವಾದಾಗ, ದೂರದಲ್ಲಿರುವ ಅದರಲ್ಲೂ ವಿದೇಶಗಳಲ್ಲಿರುವ ಸ್ಥಳೀಯರಿಗೆ ಆಯಾ ದಿನವೇ ತಮ್ಮ ತಮ್ಮ ಭಾಷೆಯ ಪತ್ರಿಕೆಗಳನ್ನು ಓದುವ ಅವಕಾಶ ಸಿಕ್ಕಿತು. ಬೆಂಗಳೂರಿಂದ ಪ್ರಕಟವಾಗುವ ಕನ್ನಡ ದಿನ ಪತ್ರಿಕೆಗಳನ್ನು ಅದೇ ದಿನ'ಅಮೇರಿಕಾ ಅಥವಾ ಸಿಂಗಪುರದಲ್ಲಿ ಇರುವ ಕನ್ನಡಿಗನೊಬ್ಬ ಓದಬಹುದು. ಪೇಪರ್ ತಂದು ಮನೆಯೊಳಗೆ ರಾಶಿ ಹಾಕಬೇಕೆಂದಿಲ್ಲ. ಕಂಪ್ಯೂಟರ್‌ನಲ್ಲಿ ಅವತ್ತಿನ ಪೇಪರ್‌ನಲ್ಲಿ ತನಗೆ ಸೂಕ್ತ ಎನಿಸಿದ ಭಾಗ ಮಾತ್ರ ತೆರೆದು ಓದಬಹುದು. ಬೇಕು ಎನಿಸಿದರೆ ಸುದ್ದಿಯೊಂದನ್ನು ಅದರ ಬಣ್ಣದ ಚಿತ್ರದ ಸಮೇತ ಮುದ್ರಿಸಿಕೊಂಡು ತನ್ನಲ್ಲಿ ಇಟ್ಟುಕೊಳ್ಳಬಹುದು. ಇದು ಕೇವಲ ಸುದ್ದಿಯ ವಿಚಾರಕ್ಕೆ ಅಲ್ಲ. ಯಾವುದೇ ವಸ್ತುವಿನ ವಿವರಕ್ಕೂ ಇಂಥ ವೆಬ್‌ಸೈಟುಗಳಿಗೆ ಹೋಗಬಹುದು.

ಇತ್ತೀಚೆಗೆ ಕಾರುಗಳ ಕುರಿತಾದ ಒಂದು ವೆಬ್‌ಸೈಟೇ ತಯಾರಾಗಿ ನಿಂತಿದೆ.ತನಗೆ ಬೇಕಾದ ವಿಷಯದ ಬಗ್ಗೆ ಯಾವ್ಯಾವ ವೆಬ್‌ಸೈಟ್‌ಗಳಿವೆ ಎಂಬುದನ್ನು ತಿಳಿಸುವ ವಿಶೇಷ ಸವಲತ್ತು ಇಲ್ಲಿ ಇರುತ್ತದಾದ್ದರಿಂದ ಎಲ್ಲವನ್ನೂ ಬರೆದಿಟ್ಟುಕೊಳ್ಳಬೇಕು ಅಥವಾ ನೆನಪಲ್ಲಿ ಇಟ್ಟುಕೊಂಡು ಒದ್ದಾಡಬೇಕಾದ ಅಗತ್ಯವೂ ಇಲ್ಲ.

ಉದ್ಯೋಗ ಮಾಹಿತಿ

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಪ್ರಕಟಿಸಿದ ಯುವ ಡಾಟ್‌ಕಾಮ್ ಕೇವಲ ಉದ್ಯೋಗ ಮಾಹಿತಿಯ ಒಂದು ವೆಬ್‌ಸೈಟ್ ಮಾತ್ರ. ಇದರಿಂದ ಗ್ರಾಮೀಣ ಭಾಗದ ಯುವಕರು ತಮಗೆ ಬೇಕಾದ ಮಾಹಿತಿ ಪಡೆಯುವುದು, ಆ ಮೂಲಕ ಸೂಕ್ತ ಉದ್ಯೋಗ ಪಡೆಯುವುದು ಸುಲಭದ ಕೆಲಸ. ಕೆಲವು ಬಹುರಾಷ್ಟ್ರೀಯ ಕಂಪೆನಿಗಳು ಇಂಥ ವ್ಯವಸ್ಥೆಯ ಮೂಲಕವೇ ಸಂದರ್ಶನವನ್ನೂ ನಡೆಸಿ, ತಮಗೆ ಸೂಕ್ತವಾದ ಅಭ್ಯರ್ಥಿಯನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತವೆ. ಇದರ ಬಹುದೊಡ್ಡ ಅನುಕೂಲ ಎಂದರೆ ಉದ್ಯೋಗ ಬಯಸುವ ಅಭ್ಯರ್ಥಿ ತಾನಿರುವ ಊರಲ್ಲಿ, ತನ್ನ ಮನೆಯಲ್ಲಿಯೇ ಕುಳಿತು ಸಂದರ್ಶನಕ್ಕೆ ತನ್ನ ಕಂಪ್ಯೂಟರಿನಲ್ಲಿ ಉತ್ತರಿಸಬಹುದು. ಮತ್ತು ಸಂದರ್ಶನ ಮುಗಿಯುತ್ತಿದ್ದಂತೆ ಫಲಿತಾಂಶ ಕೂಡ ತಿಳಿದು ಬಿಡುತ್ತದೆ.

ಸರ್ಟಿಫಿಕೇಟುಗಳನ್ನು ಹೊತ್ತುಕೊಂಡು ದೂರದ ಪಟ್ಟಣಕ್ಕೆ



ಶೇರು ಬೆಲೆ ಏರಿದ ಸಂಭ್ರಮ

ಹೋಗಬೇಕಿಲ್ಲ. ಸಂದರ್ಶಕರು ಕರೆಯುವವರೆಗೆ ತಾಸುಗಟ್ಟಲೆ ಕಾಯಬೇಕಿಲ್ಲ. ಎಲ್ಲಕ್ಕಿಂತ ಮುಖ್ಯ ತನ್ನ ಸಂದರ್ಶನದ ಗತಿ ಏನಾಯಿತು ಎಂದು ತಿಂಗಳು, ವರ್ಷಗಟ್ಟಲೇ ಕಾಯುವ ಅಗತ್ಯವೂ ಇಲ್ಲ.

ಬಾಂಗ್ಲಾ ದೇಶದಂಥ ರಾಷ್ಟ್ರದಲ್ಲಿ ಕೂಡ ಗ್ರಾಮೀಣ ಬ್ಯಾಂಕ್ ನೆರವಿನಿಂದ ಪ್ರಮುಖ ಹಳ್ಳಿಗಳಿಗೂ ಕಂಪ್ಯೂಟರ್‌ಗಳು ಬಂದಿವೆ. ಇದರಲ್ಲಿಯೇ ಉದ್ಯೋಗ ಮಾಹಿತಿ ಪಡೆಯುವ ಯುವಕರು, ತಮ್ಮ ಹಳ್ಳಿಗಳಲ್ಲಿಯೇ ಕುಳಿತು ಸಂದರ್ಶನ ಎದುರಿಸಿ ಉದ್ಯೋಗ ಪಡೆಯುತ್ತಾ ಇದ್ದಾರೆ. ಇಂಥ ವ್ಯವಸ್ಥೆ ಭಾರತದಲ್ಲಿಯೇ ಬರುವ ದಿಶೆಯಲ್ಲಿ ಯುವ ಡಾಟ್‌ಕಾಮ್ ಮೊದಲ ಹೆಜ್ಜೆ ಎಂದರೂ ಅಡ್ಡಿ ಇಲ್ಲ.

ಈಗ ನಮ್ಮಲ್ಲಿ ಅತ್ಯಂತ ಜನಪ್ರಿಯ ಆಗಿರುವ ಇಂಥ ಉದ್ಯೋಗ ಮಾಹಿತಿಯ ವೆಬ್‌ಸೈಟ್ ಎಂದರೆ www.itspace.com ಇದು ಕೇವಲ ಮಾಹಿತಿ ತಂತ್ರಜ್ಞಾನ ಪರಿಣತರಿಗೆ ಮೀಸಲಾದ ವೆಬ್‌ಸೈಟ್.

ಸದ್ಯಕ್ಕಿದು ದೇಶದಲ್ಲಿರುವ ಮೂರುಲಕ್ಷ ಮಾಹಿತಿ ತಂತ್ರಜ್ಞಾನ ಪರಿಣತರಿಗೆ, ಪ್ರತಿವರ್ಷ ಉತ್ತೀರ್ಣರಾಗಿ ಬರುವ ಸುಮಾರು ಎಂಬತ್ತು ಸಾವಿರ ಪದವೀಧರರಿಗೆ ಉಪಯುಕ್ತ. ಇದರಲ್ಲಿನ ಇನ್ನೊಂದು ವಿಶೇಷತೆ ಎಂದರೆ ಉದ್ಯೋಗ ಕುರಿತಾದ ಮಾಹಿತಿ ಅಲ್ಲದೇ, ಸಮಸ್ಯೆಗಳಿಗೆ ಪರಿಹಾರ ಕೂಡ ಒದಗಿಸಲಾಗುತ್ತಿದೆ.

ವೇಗ, ಚುರುಕು

ಇಂಥ ವೆಬ್‌ಸೈಟುಗಳು ಗ್ರಾಹಕರಿಗೆ ಬೇಗ ಸಿಗುವಂತಾಗಬೇಕು. ಕಂಪ್ಯೂಟರ್ ತೆರೆದುಕೊಂಡು ಹುಡುಕುತ್ತಾ ಕಾಲ ಕಳೆಯುವಂತಾಗಬಾರದು. ಹೆಚ್ಚೆಂದರೆ ಮೂರು ಸಲ ಯತ್ನಿಸುವುದರೊಳಗೆ ವೆಬ್‌ಸೈಟ್ ತೆರೆದುಕೊಳ್ಳಬೇಕು. ಇಲ್ಲವಾದಲ್ಲಿ ಗ್ರಾಹಕನಿಗೆ ಅದರ ಬಗ್ಗೆ ಆಸಕ್ತಿ ಇಲ್ಲವಾಗುತ್ತದೆ. ಆತ ಅಥವಾ ಆಕೆ ಬೇರೊಂದು ಸುಲಭ ಲಭ್ಯ ಸೈಟ್ ಹುಡುಕಿಕೊಂಡು ಹೊರಟುಬಿಡುತ್ತಾರೆ. ಹೀಗಾಗಿಯೇ ಅತಿ ಸುಲಭ ಹಾಗೂ ಶೀಘ್ರವಾಗಿ ವೆಬ್‌ಸೈಟ್‌ಗೆ ತಲುಪುವಂತಾಗಲು ವ್ಯವಸ್ಥೆ ಮಾಡಲಾಗುತ್ತಿದೆ.

ಇದರ ಜೊತೆಗೇ ಮಾಹಿತಿಯನ್ನು ಆದಷ್ಟು ತಾಜಾ ಗೊಳಿಸುವುದೂ ಅಗತ್ಯ. ಸತ್ಯಂ ಆನ್‌ಲೈನ್‌ನ ಆರಂಭಿಸಿರುವ Khel.com ಎಂಬ ಸೈಟ್‌ನಲ್ಲಿ ಎರಡು ಲಕ್ಷ ಪುಟಗಳಷ್ಟು ಮಾಹಿತಿ ಒದಗಿಸಲಾಗಿದೆ. ಹಾಗೇ ಇದರ ಬಗ್ಗೆ ಪ್ರಚಾರಕ್ಕಾಗಿ ಕಳೆದ ಮೂರು ತಿಂಗಳಲ್ಲಿ ಮೂರೂವರೆ ಕೋಟಿ ರೂಪಾಯಿಗಳು ಹೆಚ್ಚು ಖರ್ಚು ಮಾಡಲಾಗಿದೆ.

ಲಾಭದ ಲೆಕ್ಕಾಚಾರ

ಈಗ ನಮ್ಮಲ್ಲಿ ವೆಬ್‌ಸೈಟ್ ಒದಗಿಸುವ ಎರಡು ಕಂಪೆನಿಗಳಿವೆ. ಒಂದು ಸತ್ಯಂ ಆನ್‌ಲೈನ್. ಮತ್ತೊಂದು ಇಂಡಿಯಾ ಇನ್‌ಫೋಲೈನ್. ಇದಲ್ಲದೇ ವೆಬ್‌ಸೈಟ್‌ಗೆ ರಹದಾರಿ ನೀಡುವ ವಿ.ಎಸ್.ಎನ್.ಎಲ್ ಸಂಪರ್ಕವೂ ಇದೆ. ಆದರೆ ಇದು ವೆಬ್‌ಸೈಟ್‌ಗಳನ್ನು ನಿರ್ಮಿಸುವುದಿಲ್ಲ.

ಈ ಕಂಪೆನಿಗಳ ವೆಬ್‌ಸೈಟ್ ಬಳಕೆಗೆ ತಾಸಿಗೆ ಇಷ್ಟೊಂದು ಹಣ ನಿಗದಿ ಮಾಡುತ್ತವೆ. ಸಾಮಾನ್ಯವಾಗಿ 25 ತಾಸು ಇಂಟರ್‌ನೆಟ್ ಬಳಕೆಗೆ ಸಾವಿರ ರೂಪಾಯಿ ತೆರಬೇಕು. ನೂರು ತಾಸಿಗೆ ಆರು ಸಾವಿರ ರೂಪಾಯಿ.

ಜನ ಹೆಚ್ಚು ಹೆಚ್ಚು ಕಾಲ ಇಂಟರ್‌ನೆಟ್ ಬಳಸಿದಷ್ಟು ಈ ಕಂಪೆನಿಗಳಿಗೆ ಲಾಭ. ಅದಕ್ಕಾಗಿ ಕಂಪೆನಿಗಳು ಇಂಟರ್‌ನೆಟ್ ಸರ್ವೀಸ್ ಪ್ರೊವೈಡರ್ ನಿಮ್ಮ ಕಂಪ್ಯೂಟರ್‌ಗೆ ಲಗತ್ತಿಸುತ್ತಿವೆ. ಹಣ ಮುಂಗಡವಾಗಿಯೇ ಪಡೆಯುತ್ತವೆ. ಹಣದ ಲೆಕ್ಕ ಚುಕ್ತಾ ಆದ ನಂತರ ತಾವಾಗಿಯೇ ಇಂಟರ್‌ನೆಟ್ ಸಂಪರ್ಕ ಕಡಿದು ಹೋಗುತ್ತದೆ.

ಇಂಥ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಲೆಂದೇ ಬೆಂಗಳೂರಿನಂಥ ನಗರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೈಬರ್‌ಕೆಫೆಗಳು ತಲೆ ಎತ್ತಿವೆ. ತಾಸುಗಳ ಲೆಕ್ಕದಲ್ಲಿ ಇದರ ಬಳಕೆಗೆ ಹಣ ತೆರಬೇಕಾಗುತ್ತದೆ.

ಮುಖ್ಯವಾಗಿ ಇಂಥ ಕೆಫೆಗಳಲ್ಲಿ ಇ - ಮೇಲ್ ಕಳಿಸುವ, ಬೇಕಾದ ಮಾಹಿತಿ ಪಡೆಯುವುದು ನಡೆಯುತ್ತದೆ. ಇದಕ್ಕೆ ಇಂಟರ್‌ನೆಟ್ ಸರ್ಫಿಂಗ್ ಎನ್ನುತ್ತಾರೆ.

ಮುಖ್ಯವಾಗಿ ತರುಣ, ತರುಣಿಯರನ್ನು ಇಂಥ ಕೆಫೆಗಳಿಗೆ ಸೆಳೆಯುವುದು 'ಇಂಟರ್‌ನೆಟ್ ಚ್ಯಾಟಿಂಗ್' ಹಾಗೂ ಇಂಟರ್‌ನೆಟ್‌ನಲ್ಲಿ ದೊರೆಯುವ ನಾನಾ ಬಗೆಯ ಗೇಮ್‌ಗಳು. ಇತ್ತೀಚೆಗೆ ಚ್ಯಾಟಿಂಗ್ ಅತ್ಯಂತ ಜನಪ್ರಿಯ.

ಬೆಂಗಳೂರಿನ ವ್ಯಕ್ತಿಯೊಬ್ಬ ಇನ್ನಾವುದೋ ಊರಿನ, ದೇಶದ ತನಗೆ ಪರಿಚಯವೇ ಇರದ ವ್ಯಕ್ತಿಯೊಂದಿಗೆ ತಾಸುಗಟ್ಟಲೇ ಹರಟುವ ಸೌಲಭ್ಯ ಇಲ್ಲಿ ಇರುತ್ತದೆ. ಇಂಥ ಚ್ಯಾಟಿಂಗ್ ರಾತ್ರಿ ಸರಿ ಹೊತ್ತಿನವರೆಗೂ ಸಾಗುವುದೂ ಉಂಟು.

ಡಾಟ್‌ಕಾಮ್‌ನ ಮೌಲ್ಯ:

ಒಂದೊಂದೂ ಇಂಥ ಡಾಟ್‌ಕಾಮ್ ಸೈಟುಗಳಿಗೆ ತಮ್ಮದೇ ಬೆಲೆ ಇದೆ. ಇದಕ್ಕೆ ಜನಪ್ರಿಯತೆ ಬಹು ಮುಖ್ಯ ಆಧಾರ.

ಇಲ್ಲಿ ಬೇರೆ ವ್ಯವಹಾರದಲ್ಲಿನ ಹಾಗೆ ಭಾರೀ ಹಣ ಹೂಡಿಕೆ. ಅದಕ್ಕೆ ತಕ್ಕವಾದ ಆಸ್ತಿ ಇರುವುದಿಲ್ಲ. ಒಂದು ಕೈಗಾರಿಕೆ ಆರಂಭಕ್ಕೆ ಜಮೀನು, ಯಂತ್ರ ಮುಂತಾದವುಗಳಲ್ಲಿ ಹಣ ಹೂಡಲಾಗುತ್ತದೆ. ಆ ಜಮೀನು ಮತ್ತು ಯಂತ್ರಗಳಿಗೆ ಕಾಲದಿಂದ ಕಾಲಕ್ಕೆ ಬೆಲೆ ಕಟ್ಟಬಹುದು. ಡಾಟ್‌ಕಾಮ್ ವ್ಯವಸ್ಥೆಯಲ್ಲಿ ಇಂಥದ್ದು ಸಾಧ್ಯವಾಗುವುದಿಲ್ಲ.

ಇಲ್ಲಿ ಹೂಡಿಕೆ ಏನಿದ್ದರೂ ಇಂಟರ್‌ನೆಟ್ ಸರ್ವೀಸ್ ಪ್ರೊವೈಡರ್ ಆಗಿ ಬಳಸುವ ಹಾರ್ಡ್‌ವೇರ್ ಹಾಗೂ ಸಾಫ್ಟ್‌ವೇರ್‌ಗಳ ಮೇಲೆ ಮಾತ್ರ. ಇಂಟರ್‌ನೆಟ್ ತಾಸುಗಳ ಮಾರಾಟದಿಂದ ಅವರಿಗೆ ಆದಾಯ ಬರಲಾರಂಭಿಸುತ್ತದೆ. ಇದನ್ನು ಆಧರಿಸಿಯೇ ಲೆಕ್ಕಾಚಾರ ನಡೆಯಬೇಕು. ಅದೂ ಕೂಡ ಇಲ್ಲಿ ನಡೆಯುವುದಿಲ್ಲ. ಜನ ಎಷ್ಟು ಆ ಸೈಟನ್ನು ಬಳಸುತ್ತಿದ್ದಾರೆ ಎಂಬುದೇ ಇಲ್ಲಿ ಬೆಲೆ ಕಟ್ಟುವ ಆಧಾರ.

ಉದಾಹರಣೆಗೆ ಸತ್ಯಂ ಬಗ್ಗೆಯೇ ನೋಡಿ. ಅದು ಇಂಟರ್‌ನೆಟ್ ಸರ್ವೀಸ್ ಒದಗಿಸುವುದರಿಂದ ಬರುವ ಹಣ ಮುಂದಿನ ಸೆಪ್ಟೆಂಬರ್‌ವರೆಗೆ ಸುಮಾರು 42.39 ಕೋಟಿ ರೂಪಾಯಿಗಳು. ಆದರೆ ಮುಂದೆಯೂ ಅದು ಜನಪ್ರಿಯವಾಗುತ್ತದೆ, ಕಂಪೆನಿಯ ಸೈಟುಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚುತ್ತಿದೆ, ಹಾಗಾಗಿ ಅದು ಮಾರಾಟ ಮಾಡಬಲ್ಲ ಇಂಟರ್‌ನೆಟ್ ತಾಸುಗಳೂ ಹೆಚ್ಚಾಗುತ್ತವೆ ಎನ್ನುವ ತರ್ಕದ ಮೇಲೆಯೇ ಸತ್ಯಂ ಕಂಪೆನಿಯ ಬೆಲೆ ಕಟ್ಟಲಾಗುತ್ತದೆ. ಹೀಗಾಗಿಯೇ ಅಮೇರಿಕಾದ ಅಂತಾರಾಷ್ಟ್ರೀಯ ಶೇರು ಮಾರುಕಟ್ಟೆ ನಾಸ್‌ಡಾಕ್‌ನಲ್ಲಿ ಅತ್ಯಂತ ಮೌಲ್ಯ ನೂರೈವತ್ತು ಕೋಟಿ ರೂಗಳಿಗೆ ಏರಿದೆ.

ಇದೊಂದು ಶೀಘ್ರವಾಗಿ ವೃದ್ಧಿಸುತ್ತಿರುವ ಮಾರುಕಟ್ಟೆ. ಸಣ್ಣದೊಂದು ಡಾಟ್‌ಕಾಂ ಕಂಪೆನಿಯ ಬೆಲೆಯೂ ಶತಕೋಟಿಗಳ ಲೆಕ್ಕದಲ್ಲಿ ಇರುತ್ತದೆ. ಹೀಗಾಗಿಯೇ ವೆಬ್‌ಸೈಟುಗಳ ಬೆಲೆಯಲ್ಲಿಯೂ ಶೀಘ್ರ ಏರುಪೇರು ಕಂಡು ಬರುತ್ತದೆ.

ಆರು ತಿಂಗಳ ಹಿಂದೆ ಆರಂಭವಾದ ಒಂದು ಡಾಟ್‌ಕಾಂ ಸೈಟಿನ ಬೆಲೆ ಮಾರುಕಟ್ಟೆಯಲ್ಲಿ ನೂರು ಕೋಟಿ ರೂಪಾಯಿಗಳಷ್ಟು ಇರುತ್ತದೆ. ಕೆಲವೊಮ್ಮೆ ಅದು ಯದ್ವಾತದ್ವ ಏರಲೂಬಹುದು ಅಥವಾ ಇಳಿಯಲೂಬಹುದು.

ಸಾಫ್ಟ್‌ವೇರ್ ಕಂಪೆನಿಯೊಂದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇರು ಬಿಡುಗಡೆ ಮಾಡಿದಾಗ, ಮುಂದೆ ಅದರ ಮೌಲ್ಯ ವೃದ್ಧಿಸಬಹುದೆಂಬ ಅಂದಾಜಿಂದಲೇ ಅವರ ಶೇರು ಬೆಲೆ ಯದ್ವಾತದ್ವ ಏರುತ್ತದೆ.

ಇಂಥದರಲ್ಲಿ ಹಣ ಹೂಡುವವರು ಬಹಳ ಎಚ್ಚರದಿಂದ ಇರಬೇಕಾಗುತ್ತದೆ. ಇದಕ್ಕೆ 'ವೆಂಚರ್ ಕ್ಯಾಪಿಟಲ್' ಎಂಬ ಹೊಸ ಹೆಸರು ಬಂದಿದೆ. ಸಾಮಾನ್ಯವಾಗಿ ಹತ್ತು ಡಾಟ್ ಕಾಂ ಸೈಟುಗಳು ಅಸ್ತಿತ್ವಗಳ ಬಂದರೆ, ಅವುಗಳಲ್ಲಿ ಒಂಬತ್ತು ಕೆಲವೇ ದಿನಗಳಲ್ಲಿ ಸಾಯುತ್ತವೆ. ಒಂದು ಮಾತ್ರ ಉಳಿದುಕೊಂಡು ಅತಿ ಹೆಚ್ಚು ಲಾಭ ಮಾಡುತ್ತದೆ. ಹಾಗಾಗಿ ಬಂಡವಾಳ ಹೂಡಿಕೆದಾರರು, ಒಂಬತ್ತರಲ್ಲಿ ತೊಡಗಿಸಿದ ಹಣ ಹೋದರೂ, ಹತ್ತನೆಯವರಲ್ಲಿ ತೊಡಗಿಸಿದ್ದು ಈ ನಷ್ಟ ಸರಿದೂಗಿಸಿ ಲಾಭ ತಂದುಕೊಡುವಂತೆ ವ್ಯವಸ್ಥೆ ಮಾಡಿಕೊಳ್ಳಲು ಜಾಣತನ ತೋರುತ್ತಾರೆ.

ಪೈಪೋಟಿಯಲ್ಲಿ ಉಳಿದುಕೊಂಡ ಕಂಪೆನಿ ಕಾಲಾನುಕ್ರಮದಲ್ಲಿ ಹೆಚ್ಚು ಹೆಚ್ಚು ಲಾಭ ಮಾಡುತ್ತಾ ಹೋಗುವುದು ಖಚಿತ. ಆದ್ದರಿಂದ ಹೀಗೆ ಗೆಲ್ಲುವ ಕುದುರೆ ಹುಡುಕಿ ಹಿಡಿದು ಅದರ ಮೇಲೆ ಸವಾರಿ ಮಾಡುವುದೇ ಇಂದಿನ ಶೇರು ಮಾರುಕಟ್ಟೆಯ ಜಾಣತನದ ವ್ಯವಹಾರ. ■

BISILA BADUKU KANNADA Monthly MAY 2000 RNI No. 67406 / 97 Regd. CPMG /KA /BGW-59 / 2000

ಜಿಲ್ಲಾ ಕೇಂದ್ರ ಹಾವೇರಿಯಲ್ಲಿ ನಿವೇಶನ ಹೊಂದುವ ನಿಮ್ಮ ಕನಸನ್ನು ನನಸಾಗಿಸಿಕೊಳ್ಳುವ ಅಪರೂಪದ ಅವಕಾಶ

VARADA SATELLITE TOWN
HAVERI

- ಲಕ್ಷಾಂತರ ಹಣವನ್ನು ಒಮ್ಮೆಲೆ ಹೂಡಬೇಕಿಲ್ಲ !
- ಅಗತ್ಯ ಸೌಲಭ್ಯಗಳ ಕೊರತೆಯಿಂದ ಕೊರಗಬೇಕಿಲ್ಲ !
- ಮನೆಯ ಭದ್ರ ಬುನಾದಿಗೆ ಸೂಕ್ತವಾದ ಗಟ್ಟಿ ಕೆಂಪು ಭೂಮಿ.

ವರದಾ ಸೆಟಲೈಟ್ ಟೌನ್ ವಿಶೇಷಗಳು

◆ರಾಷ್ಟ್ರೀಯ ಹೆದ್ದಾರಿಯಿಂದ ಕೇವಲ ಒಂದು ಫರ್ಲಾಂಗ್ ದೂರ.◆ಜಿಲ್ಲಾ ಕೇಂದ್ರವಾದ ನಂತರ ಹಾವೇರಿಯಲ್ಲಿ ನಿರ್ಮಾಣವಾಗುತ್ತಿರುವ ಸಕಲ ಸೌಲಭ್ಯಗಳನ್ನು ಹೊಂದಿದ ಮೊಟ್ಟ ಮೊದಲ ಸೆಟಲೈಟ್ ಟೌನ್. ◆ಕಾನೂನುಬದ್ಧವಾಗಿ ವಾಸಯೋಗ್ಯ ರೀತಿಯಲ್ಲಿ ಪರಿವರ್ತನೆಗೊಂಡು ಸಂಬಂಧಿಸಿದ ಎಲ್ಲಾ ಸರ್ಕಾರಿ ಇಲಾಖೆಗಳ ಮಂಜೂರಾತಿ ಪಡೆದು ನಿರ್ಮಾಣಗೊಳ್ಳಲಿರುವ ಮಾದರಿನಗರ. ◆ಸಾರ್ವಜನಿಕ ಉದ್ಯಾನವನ, ವ್ಯಾಪಾರಿ ಮಳಿಗೆಗಳು, ಆರೋಗ್ಯ ಕೇಂದ್ರ, ಶಿಕ್ಷಣ ಸಂಸ್ಥೆ, ಮನರಂಜನಾ ಕೇಂದ್ರ, ಆಟದ ಮೈದಾನ, ಸಾರಿಗೆ ವ್ಯವಸ್ಥೆ, ಸುರಕ್ಷತೆ ಎಲ್ಲವೂ ಇರುವ ಏಕೈಕ ಸ್ಥಳ. ◆ವಾಯುಮಾಲಿನ್ಯ, ಶಬ್ದಮಾಲಿನ್ಯದಿಂಧ ಮುಕ್ತವಾದ ಸುಂದರ ಪರಿಸರ; ಮನೆಮನೆಗೂ ಸಮೃದ್ಧ ನಳದ ನೀರಿನ ಸೌಕರ್ಯ; ತಾಂತ್ರಿಕ ಕೌಶಲ್ಯದಿಂದ ನಿರ್ಮಾಣಗೊಂಡ ವಿಶಾಲವಾದ ರಸ್ತೆಗಳು; ರಸ್ತೆ ಬದಿಯ ಬಾಕ್ಸ್ ಕಾಲುವೆ, ತಂಪು ಹವೆ ಸೂಸುವ ರಸ್ತೆ ಬದಿಯ ಸಾಲು ಮರಗಳು. ◆ಹತ್ತಿರದಲ್ಲೇ ನಿರ್ಮಾಣವಾಗಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ. ◆ಮಕ್ಕಳಿಂದ ವೃದ್ಧರವರೆಗೆ ಎಲ್ಲರಿಗೂ ಮನರಂಜನೆಗೆ ಅವಕಾಶ ಕಲ್ಪಿಸುವ ಫ್ಯಾಮಿಲಿ ಕ್ಲಬ್. ◆ಎಲ್ಲಕ್ಕಿಂತ ಹೆಚ್ಚಾಗಿ ಸುಲಭ ಕಂತುಗಳ ಮೂಲಕ ಕೇವಲ 50 ತಿಂಗಳಲ್ಲಿ ಪ್ರತಿಷ್ಠಿತ ನಿವೇಶನದ ಒಡೆಯರಾಗುವ ಅವಕಾಶ. ◆ಮನೆ ನಿರ್ಮಾಣಕ್ಕೆ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ.

ಕಂತಿನ ಯೋಜನೆಯಲ್ಲಿ ಹಣ ಪಾವತಿ ಮಾಡುವ ವಿವರ

ಪ್ಲಾಟಿನ ಅಳತೆ	30' x 40'	40' x 60'
ಒಟ್ಟು ಪ್ಲಾಟಿನ ಮೊತ್ತ	ರೂ. 60,000	ರೂ. 1,20,000
ಮಾಸಿಕ ಕಂತು, 50 ತಿಂಗಳು	ರೂ. 1,000	ರೂ. 2,000
ಪ್ರತಿ 5 ತಿಂಗಳಿಗೊಮ್ಮೆ ಪಾವತಿಸಬೇಕಾದ ಕಂತು [ಸೈಟ್ ಮೊತ್ತದ ಉಳಿದ ಹಣ]	ರೂ. 1,000	ರೂ. 2,000
ಅಭಿವೃದ್ಧಿ ಶುಲ್ಕ ಪ್ರತಿ ವರ್ಷಕ್ಕೆ [ನಾಲ್ಕುವರ್ಷದವರೆಗೆ]	ರೂ. 3,000	ರೂ. 5,000

ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಕಂತು ಕಟ್ಟಿದ ಸದಸ್ಯರಿಗೆ ಆಕರ್ಷಕ ಬಹುಮಾನ ಗೆಲ್ಲುವ ಸುವರ್ಣಾವಕಾಶ

ರಿಜಿಸ್ಟರ್ಡ್ ಆಫೀಸ್:

ಸೃಷ್ಟಿ ಡೆವಲಪರ್ಸ್ ಅಂಡ್ ಬಿಲ್ಡರ್ಸ್ ಪ್ರೈಲಿ

SHRUSTI

ಭಾವನೂರ ಬಿಲ್ಡಿಂಗ್, 7ನೇ ಕ್ರಾಸ್, 'ಎ' ಬ್ಲಾಕ್, ಬಸವೇಶ್ವರ ನಗರ, ಹಾವೇರಿ-581 110.

ದೂರವಾಣಿ : 08375-35245.